"ಭಾರತ ಸಂವಿಧಾನದ 205 (1)ನೇ ಅನುಚ್ಛೇದದ ಮೇರೆಗೆ 1997-98ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೆ ಕಂತು)ನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205 (1)ನೇ ಅನುಚ್ಛೇದದ ಮೇರೆಗೆ 1997-98ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೆ ಕಂತು)ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಗಿದೆ.

ಭಾರತದ ಸಂವಿಧಾನದ 205(1) (ಬಿ) ಅನುಚ್ಛೇದದ ಮೇರೆಗೆ 1987-88 ಹಾಗೂ 1988-89ನೇ ಆರ್ಥಿಕ ವರ್ಷಗಳಿಗೆ ಸಂಬಂಧಪಟ್ಟ ಹೆಚ್ಚುವರಿ ಅನುದಾನ ಅಭಿಯಾಚನೆಗಳನ್ನು ಮಂಡಿಸುವುದು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205 (1)(ಬಿ) ಅನುಚ್ಛೇದದ ಮೇರೆಗೆ 1987-88 ಹಾಗೂ 1988-89ನೇ ಆರ್ಥಿಕ ವರ್ಷಗಳಿಗೆ ಸಂಬಂಧಪಟ್ಟ ಹೆಚ್ಚುವರಿ ಅನುದಾನ ಅಭಿಯಾಚನೆಗಳನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಭಾರತ ಸಂವಿಧಾನದ 205(1) (ಬಿ) ಅನುಚ್ಛೇದದ ಮೇರೆಗೆ 1987-88 ಹಾಗೂ 1988-89ನೇ ಆರ್ಥಿಕ ವರ್ಷಗಳಿಗೆ ಸಂಬಂಧಪಟ್ಟ ಹೆಚ್ಚುವರಿ ಅನುದಾನ ಅಭಿಯಾಚನೆಗಳನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205(1) (ಬಿ) ಅನುಚ್ಛೇದದ ಮೇರೆಗೆ 1987-88 ಹಾಗೂ 1988-89ನೇ ಆರ್ಥಿಕ ವರ್ಷಗಳಿಗೆ ಸಂಬಂಧಪಟ್ಟ ಹೆಚ್ಚುವರಿ ಅನುದಾನ ಅಭಿಯಾಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಗಿದೆ.

ಬಿ) 1997-98 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

ಅಧ್ಯಕ್ಷರು : ಬಹಳ ಹೊತ್ತು ಮಾಡುವ ಹಾಗಿಲ್ಲ. ಏಕೆಂದರೆ, ಇವತ್ತು ಶುಕ್ರವಾರ ಬೇರೆ. ಮೆಂಬರ್ಸ್ ವಾಪಸ್ಸ್ ಹೋಗಬೇಕಾಗುತ್ತದೆ. ರಿಪ್ಲೈ ಇವತ್ತೇ ಮಾಡಿಸಬೇಕಾಗುತ್ತದೆ. ಸುಮಾರು ದಿವಸ ಎಳೆದಿದ್ದೇವೆ. ತಮ್ಮದು ಆದಮೇಲೆ ಕುಮಾರ್ ಬಂಗಾರಪ್ಪನವರು ಮಾತನಾಡುವವರಿದ್ದಾರೆ. ಬಿಜೆಪಿಯ ಇನ್ನೊಬ್ಬ ಸದಸ್ಯರು ಯಾರಿಗಾದರೂ ಅವಕಾಶವನ್ನು ಕೊಡಬೇಕಾಗುತ್ತದೆ. ಆಮೇಲೆ, ಶ್ರೀ ರೆಡ್ಡಿ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಎಲ್ಲರೂ ಸ್ವಲ್ಪ ಸ್ವಲ್ಪ ಹೊತ್ತು ಮಾತನಾಡುವವರಿದ್ದಾರೆ.

ಎಲ್ಲರದ್ದೂ ಆದಮೇಲೆ ಉತ್ತರ ಬೇರೆ ಮುಗಿಸಬೇಕಾಗುತ್ತದೆ. ಆದ್ದರಿಂದ, ಇಷ್ಟೊತ್ತಿಗಾಗಲೇ ಈ ಮೊದಲು ತಮ್ಮ ಪಕ್ಷಗಳಿಂದ ಮಾತನಾಡಿದ ಪ್ರತಿನಿಧಿಗಳಿಗೆ ಸಾಕಷ್ಟು ಸಮಯವನ್ನು ಕೊಟ್ಟಿದ್ದೇನೆ. ಆದ್ದರಿಂದ, ತಾವು ದಯಮಾಡಿ ಬೇಗ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ವಿತ್ತೀಯ ಕಾರ್ಯಕಲಾಪದಲ್ಲಿ ಮಿಸ್ಟೇಕ್ ಆಗಿದೆ. ಅದನ್ನು ಸರಿಪಡಿಸಬೇಕು.

ಅಧ್ಯಕ್ಷರು : ನೀವು ಮತ್ತು ಶ್ರೀನಿವಾಸ್, ಮುಳಬಾಗಿಲು ಇಬ್ಬರಿಗೆ ಮಾತನಾಡಲು ಕೊಡುತ್ತೇನೆ. ನಾವು ಹೆಚ್ಚು ಹೊತ್ತು ಕುಳಿತು ಕೊಳ್ಳಬೇಕಾಗುತ್ತದೆ. ನಿನ್ನೆ ನಾವು ಕಲಾಪವನ್ನು ನಡೆಸಲಾಗಲಿಲ್ಲ. ಆದ್ದರಿಂದ, 6 ಗಂಟೆವರೆಗೂ ಕುಳಿತುಕೊಳ್ಳುವುದಕ್ಕೆ ಎಲ್ಲರೂ ಸಹಕಾರ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ವಿತ್ತೀಯ ಕಲಾಪದ್ದು ಏನಿದೆ ಕೊನೆ ಸೆಂಟೆನ್ಸ್‌ನಲ್ಲಿ, 1987-98 ಹಾಗೂ 1988-89ನೇ ಆರ್ಥಿಕ ವರ್ಷಗಳಿಗೆ ಸಂಬಂಧಪಟ್ಟ ಹೆಚ್ಚುವರಿ ಅನುದಾನ..

ಅಧ್ಯಕ್ಷರು : ಕೇಳಿದೆ ನಾನು. ಆ ವರ್ಷಗಳಲ್ಲಿ ಅನುದಾನವಿಲ್ಲದೆ ಖರ್ಚು ಮಾಡಿದ್ದು. ರ್‍ಯಾಟಿಫಿಕೇಷನ್ ಆ ವರ್ಷಗಳದ್ದೇ.

ಶ್ರೀ ಸಿದ್ದರಾಮಯ್ಯ : ಜಿಲ್ಲಾ ಪಂಚಾಯಿತಿ ಅಧಿಕಾರಕ್ಕೆ ಬಂದ ಮೇಲೆ ಬಜೆಟ್‌ನಲ್ಲಿ ಅಪ್ರೂವ್ ಆಗಲಿಲ್ಲ.

ಶ್ರೀ ಸಿ.ಆರ್ ಸಗೀರ್ ಅಹ್ಮದ್ : ಶ್ರೀ ಕುಮಾರ್ ಬಂಗಾರಪ್ಪನವರು ಮಾತನಾಡಲಿ, ಅವರಾದ ಮೇಲೆ ನಾನು ಮಾತನಾಡುತ್ತೇನೆ.

MR. SPEAKER : It is a very good decision. ಈ ತರಹದ ಸ್ಪಿರಿಟ್ ಇರಬೇಕು. ಯಂಗ್‌ಸ್ಟರ್‌ಗಳಿಗೆ ಎನ್‌ಕರೇಜ್ ಮಾಡಬೇಕು. ಕುಮಾರ್ ತಾವು ಮಾತನಾಡಿ. ಅವರು ಸುಮ್ಮನಿದ್ದರೂ, ಇವರು ಸುಮ್ಮನಿರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ಬಿಟ್ಟುಕೊಟ್ಟರು. ಅವರು ಬಿಟ್ಟು ಕೊಡುವವರಲ್ಲ.

ಶ್ರೀ ಸಿ. ಎಸ್. ಸಗೀರ್ ಅಹಮದ್ : 4-5 ದಿನಗಳಿಂದ ಅವರು ನನ್ನನ್ನು ಕೇಳಿಕೊಂಡರು. ಆದ್ದರಿಂದ, ಅವರು ಮಾತನಾಡಲೆಂದು ಹೇಳಿದ್ದೇನೆ. ನನ್ನ ಅವಕಾಶವನ್ನು ಮಾತ್ರ ತಾವು ದಯಮಾಡಿ ತಪ್ಪಿಸಬಾರದು.

+ ಶ್ರೀ ಎಸ್ ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆ -ಯದಾಗಿ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟ ತಮಗೂ, ಶ್ರೀ ಸಗೀರ್ ಅಹಮದ್‌ರವರು ತಮ್ಮ ಸರದಿ ಬಂದಿದ್ದರೂ ನನಗೆ ಬಿಟ್ಟುಕೊಟ್ಟದ್ದಕ್ಕಾಗಿ ಅವರಿಗೂ ನನ್ನ ಅಭಿನಂದನೆಯನ್ನು ಸಲ್ಲಿಸುತ್ತಾ, ವಾರ್ತಾ ಇಲಾಖೆಯ ಬಗ್ಗೆ ಮುಖ್ಯವಾಗಿ ಚಿತ್ರೋದ್ಯಮದ ಬಗ್ಗೆ ಒಂದು ಸಣ್ಣ ಪೀಠಿಕೆಯನ್ನು

ಹೇಳಿಬಿಟ್ಟು, ನಂತರ ನನ್ನ ಬೇಡಿಕೆಗಳನ್ನು ಹಾಗೂ ಮನವಿಗಳನ್ನು ಸರ್ಕಾರದ ಮುಂದಿಡಲು ಇಷ್ಟಪಡುತ್ತೇನೆ.

ಮುಖ್ಯವಾಗಿ ನಮ್ಮ ಚಲನಚಿತ್ರೋದ್ಯಮ ಬಹಳ ಕಾಲದಿಂದ ನಮ್ಮ ಸಮಾಜದ ಮೇಲೆ ಒಳ್ಳೆಯ ಪರಿಣಾಮವನ್ನು ಬೀರುತ್ತಾ ಬಂದಿದ್ದರೂ ಕೂಡ, ಕೆಲವು ವರ್ಷಗಳಿಂದೀಚೆಗೆ ಚಲನಚಿತ್ರೋದ್ಯಮ ನಮ್ಮ ಸಮಾಜದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತಿದೆ ಎಂದು ರಾಜಕೀಯದವರು, ನಮ್ಮ ಹಿರಿಯ ಲೇಖಕರು ಮತ್ತು ಸಮಾಜದ ಮುಖ್ಯಸ್ಥರು ಎಲ್ಲರೂ ಚಲನಚಿತ್ರೋದ್ಯಮದ ಅಶ್ಲೀಲ ಇರಬಹುದು, ಹೊಡೆದಾಟ ಜಾಸ್ತಿಯಾಗಿರತಕ್ಕದ್ದರ ಬಗ್ಗೆ ಇರಬಹುದು, ಚಲನಚಿತ್ರೋದ್ಯಮದ ನಡೆಯುತ್ತಿರತಕ್ಕ ಚಲನಚಿತ್ರದ ಬಗ್ಗೆ, ನಮ್ಮ ನೃತ್ಯ ಪ್ರದರ್ಶನದ ಬಗ್ಗೆ ಇರಬಹುದು ಹೇಳುತ್ತಿದ್ದಾರೆ. ಇದರ ಬಗ್ಗೆ, 20 ವರ್ಷಗಳ ಮುಂಚೆ ನಮ್ಮ ಕನ್ನಡ ಚಲನಚಿತ್ರೋದ್ಯಮ ಬೇರೆ ಚಿತ್ರಗಳಿಗೆ ಬಹಳ ಕಾಂಪಿಟೇಟಿವ್ ಆಗಿ ಅಂದರೆ ಎಲ್ಲಾ ಚಿತ್ರಗಳಿಗೂ ನಾವು ಮುಂದಿದ್ದೇವೆಂದು ಹೇಳಿ, ರಾಷ್ಟ್ರೀಯ ಚಲನಚಿತ್ರದಲ್ಲಿ ನಾವು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದೇವೆ. ನಮ್ಮ ಚಿತ್ರಗಳು, ಕತೆಗಳನ್ನು ಬೇರೆ ಭಾಷೆಯ ಚಿತ್ರಗಳಲ್ಲಿ ಮಾಡುವಂತಹ ಪರಿಸ್ಥಿತಿ ಇತ್ತು. ಈಗ ಮುಖ್ಯವಾಗಿ ಬೇರೆ ಚಿತ್ರಗಳನ್ನು ಡಬ್ಬಿಂಗ್‌ಆಗಿ ಅಲ್ಲಿ ಹೋಗುತ್ತಿವೆಯೆಂದರೆ, ಆಕ್ಷನ್ ಪಿಕ್ಚರ್‌ಗಳು ಅಥವಾ ಹೊಡೆದಾಟದ ಪಿಕ್ಚರ್‌ಗಳು ಅಥವಾ ನಮ್ಮ ಚಿತ್ರರಂಗ ಇದಕ್ಕೆ ಮಾತ್ರ ಮೀಸಲಾಗಿದೆ, ಒಳ್ಳೆಯ ಚಿತ್ರಗಳನ್ನು ನಾವು ತಯಾರಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಈಗ ಬಂದಿದೆ. 2 ವರ್ಷಗಳಿಂದೀಚೆಗೆ ನಮಗೆ ಒಳ್ಳೆಯ ಚಿತ್ರಗಳು ಬರುವ ಕಾಲ ಬಂದಿದೆ.

(ಡಾ: ಎಂ.ಪಿ. ಕರ್ಕಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು).

ಅಂದರೆ, ಒಹಳ ಓಡಿರತಕ್ಕ ಚಿತ್ರಗಳ ಹೆಸರು ಹೇಳಬೇಕೆಂದರೆ, ಜನುಮದ ಜೋಡಿ, ಅಮೃತ ವರ್ಷಿಣಿ, ಅಮೆರಿಕಾ, ಈ ಚಿತ್ರವನ್ನು ಹೊರದೇಶದಲ್ಲಿ ತೆಗೆದಿದ್ದರೂ ಕೂಡ, ಇದೆಲ್ಲಾ ಬೇರೆ ಭಾಷೆಗಳಿಗೆ ನಾವು ಕೂಡ ಸಮಾನವಾಗಿ ಹೋರಾಟವನ್ನು ಮಾಡಿ ನಮ್ಮ ಚಿತ್ರಗಳನ್ನು ಉಳಿಸಿಕೊಳ್ಳಬಲ್ಲೆವು ಎನ್ನುವುದನ್ನು ತೋರಿಸುತ್ತದೆ. ಆದರೆ, ನಮಗೆ ಈ ಸ್ಥಿತಿ ಬರುವುದಕ್ಕೆ ಕಾರಣವೇನು? 1985-86ನೇ ಸಾಲಿನಲ್ಲಿ ನಮಗೆ ಈ ಸಬ್ಸಿಡಿ ಎಂದು ಒಂದು ಸ್ಕೀಂನ್ನು ನಮ್ಮ ಸರ್ಕಾರದವರು ಘೋಷಿಸಿದ್ದಾರೆ.

12.40 ಪಿ.ಎಂ

ಸಬ್ಸಿಡಿಯನ್ನು ಘೋಷಣೆ ಮಾಡಿದಾಗ ನಮಗೆ ಬಹಳ ಸಂತೋಷವಾಯಿತು. ಅಂದಕ್ಕೆ ಮುಂಚೆ 30-40 ಚಿತ್ರ ತೆಗೆಯುತ್ತಾ ಇದ್ದಂಥ ಚಿತ್ರರಂಗ ಈಗ ಹೆಚ್ಚುಕಡಿಮೆ 90-100 ಚಿತ್ರ ತೆಗೆಯುವ ಒಂದು ಕಾಲ ಬಂತು. ಇದರಲ್ಲಿ ಏನಾಯಿತು ಅಂದರೆ ಹಾಲು ಮಾರುವವನಿಂದ ಹಿಡಿದು ತರಕಾರಿ ಮಾರುವವರಿಂದ ಹಿಡಿದು ನಿರ್ಮಾಪಕ ಎಂದು ಬಹಳ ವರ್ಷಗಳಿಂದ ಏನು ಚಲನಚಿತ್ರರಂಗಕ್ಕೆ ದುಡಿದು ಹೋರಾಟ ಮಾಡಿಕೊಂಡು ಬಂದಿದ್ದ ಅವರನ್ನೆಲ್ಲಾ ಬದಿಗೊತ್ತಿ ಎಲ್ಲೋ ಅಲ್ಪಸ್ವಲ್ಪ ಇದ್ದವರು ಒಂದೇ ಸಾರಿಗೆ ಒಳ್ಳೊಳ್ಳೆ ಚಿತ್ರಗಳನ್ನು ಮಾಡುವುದಕ್ಕೆ ಬಂದರು. ಎಲ್ಲರೂ ಚಿತ್ರರಂಗದಲ್ಲಿ ನಾವೂ

ಕೂಡ ಭಾಗವಹಿಸಬಹುದು ಎಂದು ಬಂದಿದ್ದಕ್ಕೆ 1985-86ರಲ್ಲಿ ಸರ್ಕಾರ ತಂದ ಸಬ್ಸಿಡಿ ಸ್ಕೀಮೇ ಕಾರಣ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಇದೇನಾಯಿತು ಅಂದರೆ ನಮ್ಮ ಉದ್ಯಮ ಮುಖ್ಯವಾಗಿ ಮದ್ರಾಸಿನಲ್ಲಿ ಅಂದರೆ ಈಗ ಚೆನ್ನೈ ಎಂದು ಏನಾಗಿದೆ ಅಲ್ಲಿ ನಡೆಯುತ್ತಿತ್ತು. ಎಲ್ಲಾ ಕರ್ನಾಟಕ ಚಿತ್ರರಂಗದ ಬೇರು ಮರವಾಗಿ ಬಹಳ ಪುಷ್ಠಿಕರವಾಗಿ ಬೆಳೆದಿತ್ತು. ಇಲ್ಲಿ ಬಂದತಕ್ಷಣ ಏನಾಯಿತು ಅಂದರೆ ಇಲ್ಲಿ ಚಿತ್ರೀಕರಣ ಮಾಡಿದವರಿಗೆ, ಇಲ್ಲಿಯ ಘಟಕಗಳನ್ನು ಉಪಯೋಗ ಮಾಡಿದವರಿಗೆ ಮಾತ್ರ ಈ ಸಬ್ಸಿಡಿ ಸೌಲಭ್ಯ ದೊರೆಯುತ್ತದೆ, ಇಲ್ಲ ಅಂದರೆ ಈ ಸೌಲಭ್ಯ ದೊರೆಯುವುದಿಲ್ಲ ಎಂದು ಹೇಳಿದರು. ಆಗ ಏನು ಮಾಡಿದೆವು ನಾವು ಚಿತ್ರರಂಗದವರು ಅಲ್ಲಿ ಪುಷ್ಠಿಕರವಾಗಿ ಫಲ ಬರುತ್ತಿದ್ದಂಥ ಮರವನ್ನು ಕಡಿದುಕೊಂಡುಬಂದು ಇಲ್ಲಿ ನಾವು ನೆಟ್ಟೆವು. ಅಂದರೆ ಬೇರು ನಮಗೆಲ್ಲಾ ಹೆಚ್ಚುಕಡಿಮೆ ಚೆನ್ನೈನಲ್ಲೇ ಉಳಿದುಬಿಡ್ತು. ಈಗ ನಾವು ಹತ್ತು ವರ್ಷಗಳಿಂದ ಆ ಮರವನ್ನು ತಂದು ಇಲ್ಲಿ ನೆಟ್ಟಿದ್ದೇವೆ. ಅದು ಬೇರು ಬಿಡುವುದಕ್ಕೆ ಸ್ವಲ್ಪ ಕಾಲ ಬೇಕಾಗುತ್ತದೆ. ಅಂದರೆ ಒಂದೇ ಸಾರಿ ಮರ ಕಡಿದುಕೊಂಡುಬಂದ ತಕ್ಷಣ ನಮಗೆ ಹಣ್ಣುಗಳು ಬೇಕು, ಚಿತ್ರೋದ್ಯಮದಿಂದ ಸಮಾಜದ ಮೇಲ ಬಹಳ ಕೆಟ್ಟ ಪರಿಣಾಮವಾಗಿದೆ, ನಮಗೆ ಒಳ್ಳೆಯ ಚಿತ್ರಗಳು ಬರುತ್ತಾ ಇಲ್ಲ ಎಂದು ಹೇಳುವ ಪ್ರವೃತ್ತಿ ಏನಿದೆ ಅದು ಸರಿಯಲ್ಲ. ನಮಗೆ ಇನ್ನೂ ಸ್ವಲ್ಪ ಸಮಯ ಕೊಟ್ಟರೆ ಒಳ್ಳೆ ಚಿತ್ರಗಳು ಬರುತ್ತದೆ. ಈಗ ನಾಲ್ಕೈದು ವರ್ಷಗಳಿಂದ ಒಳ್ಳೆಯ ಚಿತ್ರಗಳು ಬರುತ್ತಾ ಇವೆ. ಅಮೆರಿಕಾ ಅಮೆರಿಕಾ ಚಿತ್ರಕ್ಕೆ ಈ ವರ್ಷದಲ್ಲಿ ರಾಷ್ಟ್ರಪ್ರಶಸ್ತಿಯನ್ನು ಪಡೆದಿದ್ದೇವೆ. ಅದೆಲ್ಲಾ ಈಗ ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಚಿತ್ರರಂಗ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದು ಸರ್ಕಾರ ಮತ್ತು ಹಿರಿಯರೆಲ್ಲಾ ಹೇಳುತ್ತಿದ್ದರೂ ಕೂಡ ಸರ್ಕಾರ ಕೂಡ ನಮಗೆ ಒಂದೆರಡು ಸಾರಿ ಈ ತರಹದ ಬೆಳವಣಿಗೆಯನ್ನು ನಮಗೆ ಕೊಟ್ಟಿದೆ. ಅಂದರೆ ಚಿತ್ರರಂಗ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ಸರ್ಕಾರಕ್ಕೆ ಗೊತ್ತಾದರೂ ವೀರಪ್ಪನ್ ಎಂಬ ಫಿಲಂಗೆ, ಅಂದರೆ ಅವನು ಯಾರು ಎಂದು ತಮಗೆ ಗೊತ್ತು, ಅದನ್ನು ನಾನು ಹೇಳುವ ಅಗತ್ಯ ಇಲ್ಲ, ಅಂಥ ಪಿಕ್ಚರ್‌ಗೆ ಏತಕ್ಕೆ ಪ್ರಶಸ್ತಿಯನ್ನು ಕೊಡಬೇಕಿತ್ತು? ಆ ತರಹ ಪಿಕ್ಚರ್‌ಗಳಿಗೆ ಕೊಡಬಾರದು. ಸಮಾಜಕ್ಕೆ ಯಾವುದು ಒಳ್ಳೆಯ ಪರಿಣಾಮವನ್ನು ಬೀರುತ್ತದೋ ಅಂಥ ಚಿತ್ರಗಳಿಗೆ ಮಾತ್ರ ಪ್ರಶಸ್ತಿಯನ್ನು ಕೊಡಬೇಕಿತ್ತೇ ಹೊರತು ಬೇರೆ ಆ ತರಹ ಪಿಕ್ಚರ್‌ಗೆ ಕೊಟ್ಟುಬಿಟ್ಟು ನೀವು, ಇಲ್ಲಿ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತಾ ಇದೆ, ಚಿತ್ರರಂಗ ಒಳ್ಳೆಯ ಪ್ರವೃತ್ತಿಯನ್ನು ಬೆಳೆಸುತ್ತಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ ಎಂದು ನನ್ನ ಭಾವನೆ. ಹಾಗೇ ಚಿತ್ರರಂಗವನ್ನು ನಾವು ಹೆಚ್ಚುಕಡಿಮೆ ರಾಜಕೀಯಕ್ಕೆ ಹತ್ತಿರ ತೆಗೆದುಕೊಂಡುಬಿಟ್ಟಿದ್ದೇವೆ. ಅಂದರೆ ಬಹಳಷ್ಟು ಜನ ಹೇಳುತ್ತಾರೆ, ಏನೂ ಕೆಲಸಕ್ಕೆ ಬಾರದೇ ಇದ್ದವನು ರಾಜಕೀಯಕ್ಕೆ ಬಂದ, ಏನೂ ಕೆಲಸಕ್ಕೆ ಬಾರದೇ ಇದ್ದವನು ಚಿತ್ರರಂಗಕ್ಕೆ ಹೋದ ಎಂದು. ಇದು ಅಲ್ಲ. ಏಕೆಂದರೆ ಚಿತ್ರರಂಗ ಒಂದು ಪ್ರೊಫೆಷನಲ್ ಟೆಕ್ನಿಕಲ್ ಕೋರ್ಸ್. ಈ ಚಿತ್ರರಂಗ ಬೇರೆ ಕಡೆ ಮಹಾರಾಷ್ಟ್ರ ಇರಬಹುದು, ತಮಿಳುನಾಡು ಇರಬಹುದು ಅಥವಾ ಆಂಧ್ರ ಇರಬಹುದು. ಅಲ್ಲಿ ಇದನ್ನು ಒಂದು ದೊಡ್ಡ ಡಿಪಾರ್ಟ್‌ಮೆಂಟ್, ಟೆಕ್ನಿಕಲ್ ಡಿಪಾರ್ಟ್‌ಮೆಂಟ್ ಎಂದು ಮಾಡಿದ್ದಾರೆ. ಅಂದರೆ ಇಲ್ಲೂ ಕೂಡ ನಮ್ಮ ಎಸ್.ಜೆ.ಪಿ. ಪಾಲಿಟೆಕ್ನಿಕ್‌ನಲ್ಲಿ ಬೇಕಾದಂಥ ಕೆಲವು ಕೋರ್ಸ್‌ಗಳನ್ನು ನಾವು

ಇಟ್ಟು ಕೊಂಡಿದ್ದೇವೆ. ಆದರೆ ಇದಕ್ಕೆ ಸೂಕ್ತವಾದ ಒಂದು ಇನ್‌ಸ್ಟಿಟ್ಯೂಷನ್ ಇಲ್ಲ. ತಮಿಳುನಾಡಿನಲ್ಲಿ ತಮಿಳುನಾಡು ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಎಂದು ಇದೆ. ಈ ಚಿತ್ರರಂಗದ ಬಗ್ಗೆ ತಿಳಿದುಕೊಳ್ಳುವುದಕ್ಕೆ ನಮ್ಮನ್ನು ಅಲ್ಲಿಗೆ ಸೇರಿಸಿದ್ದರು. ಎರಡು ವರ್ಷಗಳ ಕಾಲ ನಾವು ಅಲ್ಲಿ ಓದಿದ್ದೇವೆ. ಅಂದರೆ ಇದು ಟೆಕ್ನಿಕಲ್ ಕೋರ್ಸ್ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕೋರ್ಸ್ ತರಹ. ಅಲ್ಲೂ 20 ಸಬ್ಜೆಕ್ಟ್‌ಗಳಿವೆ. ಬೆಳಿಗ್ಗೆ ಎಂಟೂವರೆಯಿಂದ ಕ್ಲಾಸ್‌ಗಳು ಶುರುವಾದರೆ ಸಂಜೆ 5 ಗಂಟೆಯವರೆಗೂ ನಡೆಯುತ್ತವೆ. ನಿಮ್ಮ ಮಾತು ಹೇಗೆ ಆಡಬೇಕು, ನಿಮ್ಮ ನಡವಳಿಕೆ ಚಿತ್ರರಂಗದಲ್ಲಿ ಹೇಗಿರಬೇಕು, ಸ್ಟೈಲ್ಸ್ ಆಫ್ ಅಕ್ಟಿಂಗ್ ಹೇಗಿದೆ? ಪ್ರಪಂಚದಲ್ಲಿ ಯಾವಯಾವ ಸ್ಟೈಲ್ ಇದೆ? ರಿಯಲಿಸ್ಟಿಕ್ ಸ್ಟೈಲ್ ಮತ್ತು ಅನ್‌ರಿಯಲಿಸ್ಟಿಕ್ ಸ್ಟೈಲ್ ಇದೆ. ಹೆಚ್ಚುಕಡಿಮೆ ನಾವು ಮಾತನಾಡಬೇಕಾದರೆ ನಮ್ಮ ಜನಬಳಕೆ ಭಾಷೆಯಲ್ಲಿ ಬಹಳ ನ್ಯಾಚುರಲ್ಲಾಗಿ ಮಾಡಿದ್ದಾನೆ ಎಂದು ಹೇಳುತ್ತೇವೆ. ಇದು ಸಾಮಾನ್ಯವಾಗಿ ಯಾರಾದರೂ ಚಿತ್ರರಂಗದ ಬಗ್ಗೆ ತಿಳಿದವರು ಅಥವಾ ಸ್ವಲ್ಪ ದೊಡ್ಡ ಜನ ಹಿರಿಯರೆಲ್ಲಾ ಸೇರಿದಾಗ ಇದು ನ್ಯಾಚುರಲ್ ಅಲ್ಲಾರೀ ಇದು ರಿಯಾಲಿಸ್ಟಿಕ್ ಎಂದು ಹೇಳಬೇಕು ಎಂದು ಹೇಳುತ್ತಾರೆ. ಅಂದರೆ ಇದನ್ನು ತಿಳಿದುಕೊಳ್ಳಬೇಕು ಅಂದರೆ ನಮ್ಮ ಚಿತ್ರೋದ್ಯಮಕ್ಕೆ ಯಾರು ಬರುತ್ತಾರೋ ಅವರಿಗೆ ಒಂದು ತರಹದ ಎಜ್ಯುಕೇಷನ್ ಇರಬೇಕು ಅದರ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರಬೇಕು. ಅಂದರೆ ಇನ್‌ಸ್ಟಿಟ್ಯೂಷನ್ ಎಂದು ಇಲ್ಲಿ ನಾವು ಸ್ಥಾಪನೆ ಮಾಡಿದರೆ ಒಳ್ಳೆಯದು. ಈಗ ಮುಖ್ಯವಾಗಿ ಏನಾಗಿದೆ ಎಂದರೆ ನಮ್ಮ ಗ್ರಾಮೀಣ ಜನರಿಗೆ ಚಿತ್ರರಂಗದ ಗೀಳು, ಒಂದು ಹುಚ್ಚು ಬಹಳ ಇದೆ. ಅಂದರೆ ಚಿತ್ರರಂಗದಲ್ಲಿ ಬಂದು ಆಕ್ಟ್ ಮಾಡಬೇಕು, ಕ್ಯಾಮೆರಾ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡಬೇಕು, ಡೈರೆಕ್ಟರ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡಬೇಕು ಎಂದು ಗೀಳು ಇದೆ. ಏಕೆಂದರೆ ಸಿಟಿಗಳಲ್ಲಿರುವವರಿಗೆ ನಮಗೆ ಹೆಚ್ಚುಕಡಿಮೆ ಆಟ ಆಡುವುದಕ್ಕೆ ಅದಕ್ಕೆ ಇದಕ್ಕೆ ಒಂದು ಫೀಲ್ಡ್ ಸಿಗುತ್ತದೆ. ಆದರೆ ಗ್ರಾಮೀಣ ಜನರಿಗೆ ಎಂಟರ್‌ಟೈನ್‌ಮೆಂಟ್ ಎಂದು ಹೊತ್ತು ಕಳೆಯುವುದಕ್ಕೆ ಚಲನಚಿತ್ರಮಂದಿರ ಬಿಟ್ಟರೆ ಬೇರೆ ಯಾವುದೂ ಇಲ್ಲ. ನಮ್ಮ ಗ್ರಾಮೀಣ ಯುವಕರಿಗಂತೂ ಈಗೇನೂ ಅಲ್ಲಲ್ಲಿ ಅಲ್ಪಸ್ವಲ್ಪ ಮಾನ್ಯ ಮಂತ್ರಿಗಳಾದ ಸರ್‌ನಾಯಕ್ ಅವರು ಅಲ್ಲಲ್ಲಿ ಕ್ರೀಡೆಗೆ ಒತ್ತು ಕೊಟ್ಟಮೇಲೆ ಅಲ್ಲಲ್ಲಿ ಸ್ವಲ್ಪ ಎದ್ದುಬರುತ್ತಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೂ ಕೂಡ ಇನ್ನೂ ಆ ತರಹ ಬೆಳೆಯಬೇಕು ಎಂದರೆ ಹತ್ತು ಹಲವಾರು ವರ್ಷಗಳು ಬೇಕಾಗಬಹುದು. ಆದರೆ ನಮಗೆ ಒಂದು ಎಂಟರ್‌ಟೈನ್‌ಮೆಂಟ್ ಬೇಕು ಅಂದರೆ ಸಿನಿಮಾ ಮಾತ್ರ. ಸಿನಿಮಾ ಮಾತ್ರ ಮನರಂಜನೆಗೆ ಒಂದು ದಾರಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಮ್ಮ ಸಿನಿಮಾದ ಅಳಿವು ಉಳಿವು ಎಂದು ಒಂದು ಕಲದಲ್ಲಿ ಬಂತು. ಅಂದರೆ ನಮ್ಮ ಅಕ್ಕಿನೇನಿ ನಾಗೇಶ್ವರರಾವ್ ಅವರು ಒಂದು ಉದಾಹರಣೆಯನ್ನು ಹೇಳಿದರು. ಆದರೆ ಸಿನಿಮಾದವರು ಯಾವ ಕಾಲಕ್ಕೂ ಏನೇ ಮಾಡಿದರೂ ಯಾವುದೇ ಕಷ್ಟಕಾರ್ಪಣ್ಯ ಬಂದರೂ ಕೂಡ ನಾವು ಮಾತ್ರ ಮನುಷ್ಯ ಹೇಗೆ ಜೀವನ ಮಾಡುತ್ತಾನೋ ಎಷ್ಟು ಕಾಲ ಆಗುತ್ತದೆಯೋ ಅಷ್ಟು ಕಾಲದವರೆಗೆ ಸಿನಿಮಾ ಇದ್ದೇ ಇರುತ್ತೇವೆ ಎಂದು. ಅವರು ಉತ್ತರ ಏನು ಉತ್ತರ ಅಂದರೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ನಮ್ಮ ಹೆಣ್ಣುಮಕ್ಕಳನ್ನು ಬೇರೆಕಡೆಗೆ ಎಲ್ಲೂ ಕರೆದುಕೊಂಡು ಹೋಗುವುದಿಲ್ಲ. ಅಲ್ಪಸ್ವಲ್ಪ ಸಿಟಿ ಕಡೆ, ಪಟ್ಟಣದ ಕಡೆ ಕರೆದುಕೊಂಡು ಹೋದರೂ ಕೂಡ ಮುಖ್ಯವಾಗಿ ನಮ್ಮ

ಹೆಣ್ಣುಮಕ್ಕಳನ್ನು ಮನೆಯಲ್ಲಿ ಅಥವಾ ನಮ್ಮ ಜೊತೆಗೆ ಎಲ್ಲಾದರೂ ಕರೆದುಕೊಂಡುಹೋಗಿ ಬರತಕ್ಕ ಪ್ರವೃತ್ತಿ ಬಹಳ ವರ್ಷಗಳಿಂದ ಬೆಳೆಸಿಕೊಂಡು ಬಂದಿದ್ದೇವೆ. ಆದರೆ ನಾಗೇಶ್ವರರಾವ್ ಏನು ಹೇಳಿದರು ಅಂದರೆ ಎಷ್ಟು ವರ್ಷಗಳ ಕಾಲ ನಮ್ಮ ಹೆಣ್ಣುಮಕ್ಕಳು ಸೀರೆಗಳನ್ನು ಕೊಳ್ಳುತ್ತಾರೋ ಆ ಸೀರೆಯನ್ನು ಅವರು ಬೇರೆಯವರಿಗೆ ಅವರ ಅಕ್ಕಪಕ್ಕದ ಮನೆಯವರಿಗೆ ತೋರಿಸುವುದಕ್ಕೆ ಹೋಗಬೇಕು ಎಂದರೆ ಸಿನಿಮಾ ಒಂದೇ ದಾರಿ. ಸಿನಿಮಾಕ್ಕೆ ಅವರು ಹೋಗಲೇಬೇಕು. ಅವರು ಹೊಸ ಸೀರೆ ಕೊಂಡರು ಅಂದರೆ ಸಿನಿಮಾಕ್ಕೆ ಹೋಗಲ್ಲೇಬೇಕು. ಆಮೇಲೆ ಸಿನಿಮಾಕ್ಕೆ ಹೋಗಬೇಕಾದರೆ ಅವರ ಜೊತೆಗೆ ಇನ್ನೊಬ್ಬರು ಬರಲೇಬೇಕು. ಅವರು ಒಬ್ಬೊಬ್ಬರೇ ಎಲ್ಲೂ ಓಡಾಡುವುದಿಲ್ಲ. ಮಕ್ಕಳು ಬರಬೇಕು. ಇಲ್ಲ ಅಂದರೆ ಅವರ ಸಂಬಂಧಿಕರು ಬರಬೇಕು; ಇಲ್ಲ ಅಂದರೆ ಅವರ ಮನೆಯವರು ಬರಬೇಕು. ಹೀಗಾಗಿ ಚಿತ್ರರಂಗ ನಾವು ಯಾವುದೇ ಕಾಲಕ್ಕೂ ಯಾವುದೇ ಪ್ರಮಾಣದಲ್ಲೂ ಕಡಿಮೆಯಾಗುವುದಕ್ಕೆ ಸಾಧ್ಯವಿಲ್ಲ. ಇಂಥ ಒಂದು ಚಿತ್ರೋದ್ಯಮವನ್ನು ನಾವು ಸರ್ಕಾರದವರು ನಮ್ಮ ಆದಾಯವಾಗಿರಬಹುದು ಅಥವಾ ಸಮಾಜದ ಮೇಲೆ ಬೀಳತಕ್ಕ ಪರಿಣಾಮವಾಗಿರಬಹುದು ಇದನ್ನು ಬಹಳ ಒಂದು ಸೂಕ್ಷ್ಮವಾಗಿ ನಾವು ಪರಿಗಣಿಸಬೇಕಾಗುತ್ತದೆ. ಅಂದರೆ ಇದಕ್ಕೆ ಕೊಡಬೇಕಾದ ಫೆಸಿಲಿಟೀಸ್ ಇದಕ್ಕೆ ಕೊಡಬೇಕಾದಂಥ ಧನಸಹಾಯ, ಇದಕ್ಕೆ ಬೇಕಾದಂಥ ಇನ್‌ಫ್ರಾಸ್ಟ್ರಕ್ಚರ್ ಅದರ ಅಭಿವೃದ್ಧಿಯನ್ನು ಈಗ ಮಾಡಿದರೆ ಬಹಳ ಉತ್ತಮ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲದಿದ್ದರೆ ನಮ್ಮ ಕನ್ನಡ ಚಿತ್ರರಂಗ ಬೇರೆ ಚಿತ್ರರಂಗಗಳು ಅಂದರೆ ತಮಿಳು, ತೆಲುಗು, ಈಗ ಹತ್ತು ವರ್ಷಗಳಿಂದ ಬೆಳೆದಿರುವ ಮಲೆಯಾಳಂ.... ಮಲೆಯಾಳಮನ್ನು ಮುಂಚೆ ಯಾವ ಮಟ್ಟಕ್ಕೆ ನೋಡುತ್ತಿದ್ದರು ಎಂಬುದು ಎಲ್ಲರಿಗೂ ಹಿರಿಯರಿಗೆ ಗೊತ್ತಿದ್ದಂಥ ವಿಚಾರ. ಆದರೆ ಈಗ ಮಲೆಯಾಳಂ ಹೆಚ್ಚುಕಡಿಮೆ ಎಲ್ಲಾ ಭಾಷೆ ತಮಿಳು, ತೆಲುಗು ಮತ್ತು ಹಿಂದಿ ಜೊತೆ ಈಗ ತೂಗುತ್ತಿದೆ. ಕನ್ನಡ ಚಿತ್ರರಂಗವನ್ನು ಇದೇ ತರಹ ಬಿಟ್ಟುಬಿಟ್ಟರೆ ಹೆಚ್ಚುಕಡಿಮೆ ಪಂಜಾಬಿ ಬಂಗಾಳಿ ಬೇರೆ ಯಾವ ಚಿತ್ರಗಳು ನಡೆಯದೇ ಇರತಕ್ಕ ಪರಿಸ್ಥಿತಿ ಏನಿದೆ ಆ ಪರಿಸ್ಥಿತಿಗೆ ನಾವು ಹೋಗಿ ನಿಂತುಕೊಳ್ಳಬೇಕಾಗುತ್ತದೆ ಅದಕ್ಕೆ ನಾವು ಸೂಕ್ಷ್ಮವಾಗಿ ಒಂದು ನಿಲುವನ್ನು ಸರ್ಕಾರದವರು ಸಮಾಜದ ಹಿರಿಯರು ಎಲ್ಲರೂ ಸೇರಿ ತೆಗೆದುಕೊಳ್ಳಬೇಕು. ಇದಕ್ಕೆ ನಾನು ಎರಡು ಮೂರು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅಂದರೆ ಮುಖ್ಯವಾಗಿ ನಮಗೆ ಇನ್‌ಫ್ರಾಸ್ಟ್ರಕ್ಚರ್. ನಾವು ಸಿನಿಮಾ ಮಾಡಿದಮೇಲೆ ಮೊದಲು ಬರತಕ್ಕದ್ದು ಅಂದರೆ ಟೈಟಲ್‌ಕಾರ್ಡ್ಸ್. ಅಂದರೆ ಹೆಸರುಗಳು. ನಿರ್ಮಾಪಕರ ಹೆಸರು, ನಿರ್ದೇಶಕರ ಹೆಸರು ಈ ಟೈಟಲ್‌ಕಾರ್ಡ್ಸ್. ಆ ಫೆಸಿಲಿಟೀಸ್ ಕರ್ನಾಟಕದಲ್ಲಿಲ್ಲ. ಇದನ್ನು ಮಾಡಿಸಿಕೊಳ್ಳಬೇಕು ಅಂದರೆ ನಾವು ಮದ್ರಾಸಿಗೆ ಹೋಗಬೇಕು. ಅಲ್ಲಿ ನಮಗೆ ಕ್ಯೂ. ಮೊದಲು ತಮಿಳು, ಆಮೇಲೆ ತೆಲುಗು ಆಮೇಲೆ ಹಿಂದಿ, ಛಾನ್ಸ್ ಸಿಕ್ಕಿದರೆ ನಾವು. ಇಂಥ ಒಂದು ಪರಿಸ್ಥಿತಿ. ಇದು ನಮ್ಮ ನಿರ್ಮಾಪಕರಾಗಲೀ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅದು 60-70 ಲಕ್ಷ ರೂಪಾಯಿ ಖರ್ಚಾಗತಕ್ಕ ಒಂದು ಎಕ್ವಿಪ್‌ಮೆಂಟ್ಸ್. ನಾವು ಚಿತ್ರರಂಗದವರು ಹೆಚ್ಚುಕಡಿಮೆ ಇವಾಗ ಅಲ್ಪಸ್ವಲ್ಪ ಕಣ್ಣುಬಿಡುತ್ತಾ ಇರಬೇಕಾದರೆ ಈ ಒಂದು 'ಆಪ್ಟಿಕಲ್' ಎಂದು ಹೇಳುವಂಥ ಫೆಸಿಲಿಟಿ ಏನಿದೆ, ಅದನ್ನು ಸರ್ಕಾರ ನಮಗೆ ಒದಗಿಸಿ ಕೊಟ್ಟರೆ ಇದು ಬಹಳ ಹೆಲ್ಪ್ ಆಗುತ್ತದೆ. ಇಲ್ಲವೆಂದರೆ ಒಳ್ಳೆಯ ರೀತಿಯಲ್ಲಿ ಟೈಟಲ್‌ಕಾರ್ಡ್ಸ್ ಅನ್ನು ನಾವು ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಮೊದಲಿಗೆ ನಾವು ನೋಡುವುದು ಟೈಟಲ್ಸ್‌ನ್ನು ಅದೇ ನಮಗೆ ಚೆನ್ನಾಗಿ

ಕಾಣಿಸಲಿಲ್ಲ ಎಂದರೆ, ಇನ್ನು ಸಿನೆಮಾ ಕತೆ ಏನು ಚೆನ್ನಾಗಿರುತ್ತದೆ ಎಂದು ಹೇಳತಕ್ಕಂಥ ಕಾಲ ಬಂದುಬಿಟ್ಟಿದೆ. ಮುಖ್ಯವಾಗಿ ಈಗ ಬರುತ್ತಾ ಇರತಕ್ಕಂಥ ಚಿತ್ರಗಳಿಗೆ ಎಲ್ಲ ಸ್ಪೆಷಲ್ ಎಫೆಕ್ಟ್ಸ್ ಇರುತ್ತವೆ. ಟಿ.ವಿ.ಯಲ್ಲಿ ಮತ್ತು ಬೇರೆ ಭಾಷೆಗಳ ಚಿತ್ರಗಳಲ್ಲಿ ಸ್ಪೆಶಲ್ ಎಫೆಕ್ಟ್ಸ್ ಮಾಡಿ, ವರ್ಣರಂಜಿತವಾಗಿ ನಮ್ಮ ಕಲ್ಪನೆಗೂ ಕೂಡ ಇಲ್ಲದೇ ಇರತಕ್ಕಂಥಾದ್ದನ್ನು ಅವರು ತೋರಿಸುತ್ತಾ ಇರಬೇಕಾದರೆ, ನಾವು ಇನ್ನೂ ಕಬ್ಬನ್‌ಪಾರ್ಕಿನಲ್ಲೇ ಪಿಕ್ಚರ್ ಮಾಡಬೇಕು ಅಥವಾ ನಮ್ಮ ಹಲಗೆಗಳನ್ನು ಇಟ್ಟುಕೊಂಡೇ ಟೈಟಲ್ ಕಾರ್ಡ್ಸ್‌ನ್ನು ತೋರಿಸಬೇಕು ಎಂದು ಈ ತರಹ ನಮ್ಮ ಪರಿಸ್ಥಿತಿ ಇರುವಾಗ ಈ ಆಪ್ಟಿಕಲ್ ಇನ್‌ಸ್ಟ್ರುಮೆಂಟ್‌ನ್ನು ತಾವು ಮಾಡಿಕೊಟ್ಟರೆ ಇದರಿಂದ ತುಂಬ ಸಹಾಯವಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಹಾಗೆಯೇ ಕ್ಯಾಮರಾಗಳು. ನಮಗೆ ಇವತ್ತಿಗೂ ಕೂಡ ಒಳ್ಳೆಯ ಸೌಲಭ್ಯ ಇಲ್ಲ. ಈಗ ನಾಲ್ಕೈದು ವರ್ಷಗಳಿಂದ ಎರಡು-ಮೂರು ಕ್ಯಾಮರಾಗಳು ಇತ್ತೀಚೆಗೆ ಇಲ್ಲಿ ತಲೆಯೆತ್ತಿವೆ. ಮುಖ್ಯವಾಗಿ ನಮಗೆ ಈಗ ಸ್ಟಡಿಕ್ಯಾಮ್ ಎಂದು ಬರುತ್ತದೆ. ನಾವು ಎಲ್ಲಿ ಹೋದರೂ ಕೂಡ ನಿಮಗೆ ಸ್ಕ್ರೀನ್ ಮೇಲೆ ಯಾವುದೇ ತರಹದ ಜರ್ಕ್ ಗಿರ್ಕ್ ಏನೂ ಬರುವುದಿಲ್ಲ. ನೋಡುವವರಿಗೆ ಬಹಳ ಹಿತವಾಗಿರುತ್ತದೆ. ಇಂತಹ ಕ್ಯಾಮರಾಗಳನ್ನು ನಾವು ಮದ್ರಾಸಿನಿಂದ ತರಿಸಬೇಕು. ಈ ತರಹ ಅನುಕೂಲಗಳನ್ನು ನೀವು ನಮಗೆ ಕೊಡಬೇಕು. ಇಂತಹ ಕ್ಯಾಮರಾಗಳನ್ನು ಕೊಡುವಾಗ ಖಾಸಗಿ ಕಂಪನಿಗಳು ಹೇಗೆ ರೇಟನ್ನು ಹಾಕುತ್ತಾರೆ, ಅದೇರೀತಿ ರೇಟನ್ನು ನಮಗೆ ಹಾಕಿಕೊಟ್ಟರೂ ಸಾಕು. ಏಕೆಂದರೆ, ಈಗ ಆ ರೇಟನ್ನು ಅಲ್ಲಿ ಏನು ಕೊಡುತ್ತಿದ್ದೇವೆ ಅದನ್ನು ಇಲ್ಲಿ ಕೊಡುವುದಕ್ಕೆ ನಾವು ಹಿಂಜರಿಯುವುದಿಲ್ಲ. ಆದ್ದರಿಂದ ಈ ಇನ್ವೆಸ್ಟ್‌ಮೆಂಟ್ ಏನಿದೆ ಇದು ಯಾವುದೇ ಕಾಲಕ್ಕೂ ನಿಮಗೆ ಲಾಭದಾಯಕವಾಗಿಯೇ ಇರುತ್ತದೆಯೇ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆಯೇ ಹೊರತು, ಅದರಿಂದ ನಮಗೆ ಏನೇ ಕೊರತೆಯಾಗಲೀ, ಲುಕ್ಸಾನಾಗಲೀ ಆಗುವುದಿಲ್ಲ.

ಇನ್ನು, ಸ್ಟುಡಿಯೋ ಬಗ್ಗೆ ಹೇಳುವುದಾದರೆ, ಈಗ ನಮಗೆ ಕಂಠೀರವ ಸ್ಟುಡಿಯೋ, ದಿವಂಗತ ಕರಿಬಸವಯ್ಯನವರದ್ದು ಆಮೇಲೆ ಗುಬ್ಬಿ ವೀರಣ್ಣನವರು, ಈ ಹಿರಿಯರೆಲ್ಲರೂ ಸೇರಿ ಶುರುಮಾಡಿರತಕ್ಕಂಥ ಸ್ಟುಡಿಯೋ ಈಗ ಹೆಚ್ಚುಕಡಿಮೆ ಅದು ನಿಂತುಹೋಗಿ ಬಹಳ ಕೆಟ್ಟ ಸ್ಥಿತಿಯಲ್ಲಿದೆ ಎಂದು ಹೇಳುವುದಕ್ಕೆ ನನಗೆ ಬೇಜಾರಾಗುತ್ತದೆ. ಏಕೆಂದರೆ ಅಲ್ಲಿ ನಡೆಯುತ್ತಿರತಕ್ಕಂಥ ವ್ಯವಸ್ಥೆ ಸೂಕ್ತವಾಗಿಲ್ಲವೆಂದು ನಾನು ಹೇಳುತ್ತೇನೆ. ಅದನ್ನು ಯಾರಾದರೂ ಕರೆಕ್ಟ್ ಆಗಿ ನಡೆಸತಕ್ಕಂಥ ಸಂಸ್ಥೆಗೆ ಕೊಟ್ಟುಬಿಡಿ. ಇಲ್ಲವೆಂದರೆ ನೀವೇ ಅದನ್ನು ತೆಗೆದುಕೊಂಡು ಸರಿಯಾಗಿ ನಡೆಸಿ. ಏಕೆಂದರೆ, ಈಗ 95-96 ಮತ್ತು 96-97ನೇ ಸಾಲಿಗೆ ತಮಗೆ ಈಗಾಗಲೇ 9 ಶಿಫಾರಸ್ಸುಗಳನ್ನು ಸಮಿತಿ ಮಾಡಿದೆ. ಅದನ್ನು ಸ್ವಲ್ಪ ಅನುಷ್ಠಾನಕ್ಕೆ ತಂದುಬಿಟ್ಟರೆ ಬಹಳ ಒಳ್ಳೆಯದಾಗುತ್ತದೆ ಎಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇನ್ನು ದಿವಂಗತ ಬಾಲಕೃಷ್ಣ ಅವರು ಮಾಡಿರತಕ್ಕಂಥ ಅಭಿಮಾನ್ ಸ್ಟುಡಿಯೋ, ಅದರ ಸ್ಥಿತಿ ತಮಗೆಲ್ಲರಿಗೂ ಬಹಳ ಚೆನ್ನಾಗಿಯೇ ಗೊತ್ತಿದೆ. ಬಾಲಣ್ಣನವರು ತೀರಿಕೊಳ್ಳುವರೆಗೆ ತಮ್ಮ ಜೀವವನ್ನೇ ತೇಯ್ದು ಮಾಡಿದ್ದಂಥ ಆ ಸ್ಟುಡಿಯೋ ಹೆಚ್ಚುಕಡಿಮೆ ಅದು ನೆಲಸಮ ಆಗಿಹೋಗಿದೆ. ಅದರ ಸಾಲ ಇದೆ, ಬಡ್ಡಿ ಇದೆ, ಸರ್ಕಾರ ಕೂಡ ಆ ಸಾಲಕ್ಕೆ ಭಡ್ಡಿಯನ್ನು ಮನ್ನಾ ಮಾಡುತ್ತೇವೆ, ನೀವು ಬೇಸಿಕ್ ಪ್ರಿನ್ಸಿಪಲ್ ಮಾತ್ರ ಕಟ್ಟಿ ಎಂದು ಹೇಳಿರತಕ್ಕಂಥ ಸುದ್ಧಿಯನ್ನು ನಾನು ಕೇಳಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಸಾರ ಮಂತ್ರಿ) : ಬಾಲಕೃಷ್ಣ ಅವರ ಅಭಿಮಾನ್ ಸ್ಟುಡಿಯೋ ಯಾವುದಿದೆ, ಅವರು ಸಾಯುವ ಕಾಲದಲ್ಲೇ ನಾನು ಮತ್ತು ಅಂದಿನ ಮುಖ್ಯಮಂತ್ರಿಗಳಾಗಿದ್ದಂಥ, ಮಾನ್ಯ ದೇವೇಗೌಡರು ಹೋಗಿ ಭೇಟಿ ಮಾಡಿದ್ದ ಸಂದರ್ಭದಲ್ಲಿ, ಅವರು ಕೇಳಿದ್ದು ಏನೆಂದರೆ ಈ ಒಂದು ಜಮೀನಿನ ಮೇಲೆ ನಾನು ಸಾಲ ತೆಗೆದುಕೊಂಡಿದ್ದೇನೆ, ಈ ಸಾಲ ಮತ್ತು ಬಡ್ಡಿಯನ್ನು ತಾವು ದಯವಿಟ್ಟು ಬಿಟ್ಟುಕೊಡಿ ಎಂದು ಹೇಳಿದರು. ಆ ಸಂದರ್ಭದಲ್ಲಿ ನಾವು ಒಂದು ಆಶ್ವಾಸನೆಯನ್ನು ಕೊಟ್ಟಿದ್ದೆವು. ಸಾಲ 5 ಲಕ್ಷ, ಅದರ ಮೇಲೆ ಆದಂಥ ಬಡ್ಡಿ 12 ಲಕ್ಷ, ಒಟ್ಟಾರೆ 17 ಲಕ್ಷ ರೂಪಾಯಿಗಳನ್ನು ಸಂಪೂರ್ಣವಾಗಿ ಮನ್ನಾ ಮಾಡಿದ್ದೇವೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ತಾವು ಮನ್ನಾ ಮಾಡಿದ್ದೀರಿ ಎಂದರೆ ಅವರ ಅಭಿಮಾನ ಸ್ಟುಡಿಯೋ ಒಂದು ಮೆಟ್ಟಲು ಏರಿದಹಾಗೆ. ಆದರೆ ಅಲ್ಲಿಂದ ಹಲವಾರು ಮೆಟ್ಟಲುಗಳು ಇದ್ದಾವೆ. ಏಕೆಂದರೆ ಆ ಸ್ಟುಡಿಯೋಗೆ ಸುತ್ತಮುತ್ತಲೂ ಅಷ್ಟೊಂದು ಜಾಗ ಇದ್ದರೂ ಕೂಡ, ಯಾವುದೇ ರೀತಿಯ ಅಭಿವೃದ್ಧಿಯಾಗಿಲ್ಲ. ಬಾಲಣ್ಣನವರು ತೀರಿಕೊಂಡಿದ್ದ ದಿನವೇ ಅಲ್ಲಿದ್ದ ಎಲ್ಲಾ ಕಾರ್ಮಿಕರು ಎಲ್ಲರೂ ಬಂದುಬಿಟ್ಟು ತಮಗೂ ಕೂಡ ಅವರು ವಿನಂತಿಯನ್ನು ಮಾಡಿಕೊಂಡಿದ್ದಾರೆ. ನಮ್ಮನ್ನು ಕಂಠೀರವ ಸ್ಟುಡಿಯೋ-ಗವರ್ನಮೆಂಟ್ ಜತೆಗೆ ಸೇರಿಸಿಕೊಂಡು ಬಿಡಿ ಎಂದು ಹೇಳಿದ್ದಾರೆ. ಅದನ್ನು ಮಾಡಲಿಕ್ಕೆ ತಮಗೆ ಸ್ವಲ್ಪ ಕಾನೂನುಬದ್ಧವಾದ ತೊಂದರೆ ಇರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಆದರೂ ಕೂಡ ನಮಗೆ ಇರುವುದು ಎರಡು ಸ್ಟುಡಿಯೋಗಳು. ಅದನ್ನೂ ನಾವು ಸರಿಯಾಗಿ ಉಳಿಸಿಕೊಳ್ಳಲಿಲ್ಲ ಎಂದರೆ, ಬೇರೆ ಒಂದು ಹೊಸ ಸವಲತ್ತುಗಳು ಬರುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು, ಇದಕ್ಕೆ ಪೂರಕವಾಗಿ ನೀವು ಕೊಟ್ಟಿರತಕ್ಕಂಥ ಮುನ್ನೂರು ಎಕರೆ ಜಮೀನು ಏನಿದೆ, ಅದನ್ನು ಅಭಿವೃದ್ಧಿ ಕಾರ್ಯಕ್ರಮಕ್ಕೆ ಉಪಯೋಗಿಸಿಕೊಳ್ಳುವಂಥಾದ್ದು. ಅಂದರೆ ಅಂದರೆ ಇದು ಹೆಸರುಘಟ್ಟ ಏರಿಯಾದಲ್ಲಿ ಈ ಮುನ್ನೂರು ಎಕರೆ ಜಾಗವನ್ನು ಕೊಟ್ಟಿದ್ದೀರಿ. ಅದು ಒಂದೇ ಒಂದು ಪ್ಲೇನ್ ಜಾಗದಲ್ಲಿ ಮುನ್ನೂರು ಎಕರೆ ಇದೆ. ನಾನು ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗ 15 ಕೋಟಿ ರೂಪಾಯಿ ಹಾಕಿ ನಮ್ಮ ತಮಿಳುನಾಡು ಸರ್ಕಾರದವರು ಸ್ಟುಡಿಯೋವನ್ನು ಅಭಿವೃದ್ಧಿಮಾಡಿದ್ದಾರೆ. ಅದನ್ನು ಮಾಡಿದಾಗ ಇದೇ ತರಹ ಒಂದು ಪ್ಲೇನ್ ಜಾಗದಲ್ಲಿ ಅವರು ಮಾಡಿದ್ದಾರೆ. ಇವಾಗ ಅದು ಎಲ್ಲಿಯವರೆಗೆ ಬಂದಿದೆ ಎಂದರೆ, ಅಲ್ಲಿ ಮೊದಲು ಎರಡು-ಮೂರು, ಆರು ತಿಂಗಳು ಶೂಟಿಂಗ್ ಎರ್‍ರಾಬಿರ್‍ರಿ ನಡೆಯಿತು. ಈಗ ಅಲ್ಲಿ ಶೂಟಿಂಗ್‌ಗಳು ನಡೆಯುವುದು ಕಡಿಮೆಯಾಗಿ ಬಿಟ್ಟಿದೆ. ಯಾತಕ್ಕೋಸ್ಕರ ಕಡಿಮೆಯಾಗಿದೆ ಎಂದರೆ, ಅದು ಚೆನ್ನಾಗಿಲ್ಲ ಎಂದು ಅಲ್ಲ. ಅವರು ಕಟ್ಟಿರತಕ್ಕಂಥಾದ್ದು ಎಲ್ಲವೂ ಬಹಳ ಚೆನ್ನಾಗಿಯೇ ಇದೆ. ಆದರೆ ನಾವು ಯಾವುದೇ ತರಹದ ಒಂದು ಶೂಟಿಂಗ್‌ನ್ನು ಮಾಡಿದರೂ ಕೂಡ, ಆ ಬಿಲ್ಡಿಂಗ್‌ಗಳೇ ಬರುತ್ತದೆ. ಅಲ್ಲಿ ಒಂದೇ ನೆಲದಮೇಲೆ ಮಾಡಿರುವುದರಿಂದ, ಅಲ್ಲಿ ಅಭಿವೃದ್ಧಿ ಕಾರ್ಯಕ್ರಮ, ನೀವು ಯಾವಕಡೆಯಲ್ಲಿ ಇಟ್ಟರೂ ಕೂಡ, ಏನೋ ಕಲರ್ ಅದು ಇದು ಬದಲಾವಣೆ ಮಾಡಬಹುದು ಅಷ್ಟೇ ಹೊರತು, ಬೇರೆ ಯಾವ ತರಹದ ಅಭಿವೃದ್ಧಿಯನ್ನು ಮಾಡುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ತಮ್ಮ ಮುಂದೆ ಏನು ಸಮಿತಿ ಇದೆ, ಅದರ ಅಭಿಪ್ರಾಯವನ್ನು ಪಡೆದುಕೊಳ್ಳಬಹುದು.

ಏಕೆಂದರೆ ನಮಗೆ ಮುಖ್ಯವಾಗಿ, ಚಲನಚಿತ್ರೋದ್ಯಮಕ್ಕೆ ಬೇಕಾಗಿರುವುದು ಏನೆಂದರೆ, ನಮಗೆ ಕಾಡು ಬೇಕು, ಹಳ್ಳಿಬೇಕು ರೋಡುಗಳೂ ಬೇಕು. ನಾನು ಒಂದು ಉದಾಹರಣೆಯನ್ನು ಹೇಳತ್ತೇನೆ. ನಮಗೆ ಬೆಂಗಳೂರು ನಗರದಲ್ಲಿ ಶೂಟಿಂಗ್ ಮಾಡಬೇಕು ಎಂದರೆ ಟ್ರಾಫಿಕ್ ತೊಂದರೆ ಬಹಳವಾಗಿ ಇದೆ. ಕಾರನ್ನೇ ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ, ಇನ್ನು ಶೂಟಿಂಗ್ ಮಾಡುವುದು ಖಂಡಿತ ಅಸಾಧ್ಯ. ಏಕೆಂದರೆ ಶೂಟಿಂಗ್ ಅಂದಾಕ್ಷಣ ಜನ ಸೇರುತ್ತಾರೆ, ಜನರು ಸೇರಿದರೆ ತಕ್ಷಣ ಟ್ರಾಫಿಕ್ ಜಾಮ್ ಆಗುತ್ತದೆ. ಆದ್ದರಿಂದ ಈ ತರಹ ರೋಡುಗಳನ್ನು ನಾವು ಅಲ್ಲಿ ಮಾಡಬಹುದು. ಇದನ್ನು ಮಾಡಬೇಕು ಎಂದರೆ ನಮಗೆ ಸೂಕ್ತವಾದಂಥ ಏರಿಯಾ ಬೇಕು. ಒಂದೇ ಜಾಗದಲ್ಲಿ ಎಲ್ಲಾ ಕಟ್ಟಿಬಿಟ್ಟರೆ, ನಮಗೆ ಕಾಡೂ ಮಾಡಬೇಕು, ಹಳ್ಳಿಯನ್ನೂ ಮಾಡಬೇಕು ಎಂದರೆ, ಅಥವಾ ಪೊಲೀಸ್ ಸ್ಟೇಷನ್ ಮಾಡಬೇಕು ಈ ತರಹ ನಮ್ಮ ಸಮಾಜದಲ್ಲಿ ಏನೇನು ನಡೆಯುತ್ತದೆ ಅದೇ ರಿಪ್ಲಿಕಾವನ್ನು ಅಲ್ಲಿ ಮಾಡಬೇಕು ಎಂದರೆ, ಒಂದೇ ತರಹದ ಪ್ಲೇನ್ ಜಾಗದಲ್ಲಿ ಮಾಡುವುದಕ್ಕೆ ಅದು ಸಾಧ್ಯವಾಗದೇ ಇರಬಹುದು. ಅಂದರೆ-ಈವಾಗ ಒಂದು ವಾಟರ್‌ಫಾಲ್ಸ್ ಬೇಕು, ಅಥವಾ ಒಂದು ಘಾಟ್ ಸೆಕ್ಷನ್ ಬೇಕು ಎಂದರೆ ನೀವು ಮತ್ತೊಂದು ಜಾಗವನ್ನು ಮಾಡುತ್ತೀರಾ. ಆದರೆ ಹಾಗೆ ಮಾಡಿದಾಗ ಇದೆಲ್ಲಿ ಕೈತಪ್ಪಿಹೋಗುತ್ತದೋ ಎನ್ನುವ ಒಂದು ಹೆದರಿಕೆ ಇರುತ್ತದೆ. ಹಾಗಾಗಿ ಅದನ್ನು ಯಾರೂ ಪ್ರಪೋಸ್ ಮಾಡುವುದಕ್ಕೇ ಹೋಗುತ್ತಿಲ್ಲ. ಆದರೆ ನಾನು ಇವತ್ತು ಅದನ್ನು ಪ್ರಪೋಸ್ ಮಾಡುತ್ತೇನೆ. ಏಕೆಂದರೆ, ನಮಗೆ ಬೇಕಾಗಿರುವುದನ್ನು ಕೇಳುವುದು ಮುಖ್ಯ ಹೊರತು, ನಮಗೆ ಏನು ಕೊಟ್ಟಿದ್ದಾರೆ ಅದರಲ್ಲೇ ಅಡ್ಜಸ್ಟ್ ಮಾಡಿಕೊಂಡು ಹೋಗುತ್ತೇವೆ ಎಂದರೆ, ಮತ್ತೆ ನಮ್ಮ ಚಿತ್ರರಂಗ ಹತ್ತು ವರ್ಷದ ಹಿಂದೆ ಏನು ಪರಿಸ್ಥಿತಿ ಇತ್ತೋ, ಮತ್ತೆ ಅದೇ ಪರಿಸ್ಥಿತಿಗೆ ನಾವು ಹೋಗಬೇಕಾಗುತ್ತದೆ. ಏಕೆಂದರೆ ಅಭಿವೃದ್ಧಿ ಎಂದಮೇಲೆ ಅದು ಚೆನ್ನಾಗಿಯೇ ಅಭಿವೃದ್ಧಿಯಾಗಬೇಕು. ಇಷ್ಟು ಮಾತನ್ನು ಹೇಳಿ ಇನ್ನು, ನಮಗೆ ಟೆಕ್ನಿಕಲೀ, ಬಹಳಷ್ಟು ಕಡೆಗೆ ಕೇಳಿಬರುತ್ತಿರುವ ತೊಂದರೆ ಎಂದರೆ, ಸೌಂಡ್, ಸೌಂಡ್ ಇದು ನಮಗೆ ಕೇಳುವುದಕ್ಕೆ ಹಿತವಾಗಿರಬೇಕು ಎಂದು ನಾವು ಹೇಳುತ್ತೇವೆ. ಕೇಳುವುದಕ್ಕೆ ಹಿತ ಇಲ್ಲವೆಂದರೆ ಆ ಟಾಕೀಸ್‌ನಲ್ಲಿ ಶಬ್ಧ ಚೆನ್ನಾಗಿಲ್ಲ. ಯಾರು ಆ ಟಾಕೀಸ್‌ನಲ್ಲಿ ಕುಳಿತುಕೊಳ್ಳುತ್ತಾರೆ ಎಂದು ಹೇಳುತ್ತೇವೆ. ಡಾಲ್‌ಬಿನ್ ಸಿಸ್ಟಮ್ ಎಂದು ಬಂದಿದೆ, ಸ್ಟೀರಿಯೋ ಸಿಸ್ಟಮ್ ಬಂದಿದೆ, ಫೋರ್ ಟ್ರಾಕ್, ಸೆವೆನ್ ಟ್ರಾಕ್ ಇದೆಲ್ಲಾ ಬಂದು ಮನುಷ್ಯನಿಗೆ ಬಹಳ ಹಿತವಾಗಿ ಅನ್ನಿಸಬೇಕು ಅಂತಹ ಒಂದು ಬೆಳವಣಿಗೆಯಾಗಿದೆ. ಅವನು ಕೊಡುವಂಥ ಒಂದು ಹದಿನೈದು-ಇಪ್ಪತ್ತು ರೂಪಾಯಿಯಲ್ಲಿ ಅವನು ಒಂದು-ಎರಡು-ಎರಡೂವರೆ ಗಂಟೆಕಾಲ ಚಿತ್ರಮಂದಿರದಲ್ಲಿ ಕುಳಿತುಕೊಂಡಿದ್ದಾಗ ತನ್ನನ್ನು ತಾನು ಮರೆಯಬೇಕು. ಇಲ್ಲಿ ನಮಗೆ 70 ಎಂ.ಎಂ. ಫೋರ್‌ಟ್ರಾಕ್ ಫೆಸಿಲಿಟಿ ಇಲ್ಲ. ಈಗ ಪ್ರಸಾದ್ ಸ್ಟುಡಿಯೋಸ್ ಅವರು ಮಾಡುತ್ತಿದ್ದಾರೆ. ನಮ್ಮ ಚಾಮುಂಡೇಶ್ವರಿ ಸ್ಟುಡಿಯೋದವರು ಮಾಡುತ್ತಿದ್ದಾರೆ. ತಾವು ಏನಾದರೂ ಈ ಕಡೆಗೆ ಸ್ವಲ್ಪ ಗಮನ ಹರಿಸಿದರೆ, ಅವರಿಗೆ ಅಂದರೆ ಚಿತ್ರೋದ್ಯಮಕ್ಕೆ ಸೌಲಭ್ಯ ಸಿಗುತ್ತದೆ. ಅವರ ಮೂಲಕವಾದರೂ ಕೊನೆಯಪಕ್ಷ ನಾವು ಮಾಡಬಹುದು. ಏಕೆಂದರೆ ನಾವು ಸ್ಟುಡಿಯೋ ಕಟ್ಟಿ, ಅಲ್ಲಿ ರೆಕಾರ್ಡಿಂಗ್ ಸ್ಟುಡಿಯೋ ಮಾಡಿ, ಎಂದು ಹೇಳುವುದು ಒಂದು ಕಡೆಗೆ ಇದ್ದರೂ ಕೂಡ ಇರುವ ಸೌಲಭ್ಯದಲ್ಲಿ ನಾವು ಯಾವ ತರಹ ಉಪಯೋಗ ಮಾಡಿಕೊಳ್ಳಬಹುದು ಎಂದು ಇದನ್ನು ತಾವು ಸ್ವಲ್ಪ ಒತ್ತು ಕೊಟ್ಟರೆ ಒಳ್ಳೆಯದು. ಸಂಕೇತ್ ಸ್ಟುಡಿಯೋ ಇದೆ. ಅವನ್ನೆಲ್ಲಾ ಒಂದು ಕಡೆಗೆ ಸೇರಿಸಿದರೆ

ಅವುಗಳಿಂದ ಅನುಕೂಲ ಪಡೆದುಕೊಳ್ಳಬಹುದು. ಇನ್ನು ಫೈನಾನ್ಸ್ ಕಾರ್ಪೋರೇಷನ್‌ಗಳ ಬಗ್ಗೆ ಹೇಳಬೇಕೆಂದರೆ, ನಮ್ಮ ಚಿತ್ರರಂಗದ ಬಹಳಷ್ಟು ಜನ ಕೈಸುಟ್ಟುಕೊಂಡಿದ್ದಾರೆ. ಅದೇರೀತಿ ಕೆಲವರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡಿದ್ದಾರೆ. ಚಿತ್ರ ನಿರ್ಮಿಸುವುದು ಇದು ಹೆಚ್ಚು ಕಡಿಮೆ ಒಂದು ರೀತಿಯಲ್ಲಿ ಗ್ಯಾಂಬ್ಲಿಂಗ್ ಇದ್ದಹಾಗೆ. ಇದರ ಬಗ್ಗೆ ಬೇರೆ ಅಭಿಪ್ರಾಯ ಇಲ್ಲ. ಹೇಗೆ ಒಬ್ಬ ಕೆ.ಎಸ್‌ಎಫ್.ಸಿ ಅಥವಾ ಕೆ.ಎಸ್‌ಎಸ್.ಐ.ಡಿ.ಸಿ ಯಿಂದ ಸಾಲ ತೆಗೆದುಕೊಂಡು ಒಂದು ಫ್ಯಾಕ್ಟರಿ ಹಾಕಿ ಒಂದು ಪ್ರಾಡಕ್ಟನ್ನು ತಯಾರಿಸಿ ಅದನ್ನು ಮಾರುಕಟ್ಟೆಗೆ ಬಿಡುತ್ತಾನೆ. ಒಳ್ಳೆಯ ಗುಣಮಟ್ಟ ಇದ್ದರೆ ಬೇಡಿಕೆ ಬರುತ್ತದೆ, ಮಾರಾಟವಾಗುತ್ತದೆ ಮತ್ತು ಆತನ ಏಳಿಗೆಯಾಗುತ್ತದೆ. ಅದೇ ರೀತಿಯಲ್ಲಿ ಈ ಚಿತ್ರೋದ್ಯಮವನ್ನು ಒಂದು ಇಂಡಸ್ಟ್ರೀ ಎಂದು ಕನ್ಸಿಡರ್ ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ.

ತಮಗೆ ಈಗಾಗಲೇ ತಿಳಿದಿರುವ ಹಾಗೆ ನಮ್ಮ ನಿರ್ಮಾಪಕರಾದ ಚಿದಂಬರಶೆಟ್ಟಿಯವರು ಕೊಲೆಯಾದ ಪ್ರಕರಣ ಗೊತ್ತಿರುವಂಥದ್ದು, ಇದು ಏಕೆ ಆಯಿತು, ಸಾಲ ಮಾಡಿ ಪಿಕ್ಚರ್‌ನ್ನು ತೆಗೆದು ಅದು ಇವತ್ತು ರಿಲೀಸ್ ಆಗುತ್ತದೆ, ನಾಳೆ ರಿಲೀಸ್ ಆಗುತ್ತಿದೆ ದುಡ್ಡನ್ನು ನಾಳೆ ಕೊಡುತ್ತೇವೆ, ನಾಡಿದ್ದು ಕೊಡುತ್ತೇವೆ ಎಂದು ಹೀಗೆ ದಿನಗಳನ್ನು ದೂಡಿಕೊಂಡು ಬರುತ್ತಿರುವ ಸಂದರ್ಭದಲ್ಲಿ ಇಂತಹ ಒಬ್ಬ ಒಳ್ಳೆಯ ನಿರ್ಮಾಪಕ ಈ ಗುಂಡಾ, ಭೂಗತದೊರೆಗಳ ಕೈಯಲ್ಲಿ ಸಿಲುಕಿ ಕೊಲೆಯಾದಂತಹ ಪ್ರಕರಣ ತಮಗೆಲ್ಲರಿಗೂ ಗೊತ್ತಿದೆ. ಅಂದರೆ ಇದು ಈ ರೀತಿ ಏಕೆ ನಡೆಯುತ್ತಿದೆ ಎಂದರೆ ನಮಗೆ ಫೈನಾನ್ಸ್ ಎಲ್ಲೂ ದೊರಕುವುದಿಲ್ಲ, ಚೆನ್ನಾಗಿರುವ ನಿರ್ಮಾಪಕರು ಚೆನ್ನಾಗಿ ಮಾಡುತ್ತಿರುತ್ತಾರೆ, ಚೆನ್ನಾಗಿಲ್ಲದಂಥ ನಿರ್ಮಾಪಕರು ಒಬ್ಬರಿಬ್ಬರ ಹತ್ತಿರ ಕೈ ಸಾಲ ಬೇಡುತ್ತಾರೆ, ಕೈ ಚಾಚಿ ಏನೋ ಚಿತ್ರವನ್ನು ತೆಗೆಯೋಣ ಎಂದು, ಏಕೆಂದರೆ ನಮಗೆ ಬೇರೆ ಕಸಬುಗೊತ್ತಿಲ್ಲದ ಕಾರಣ ಈ ರೀತಿ ಮಾಡಬೇಕಾಗುತ್ತದೆ. ನಾನು ಕೂಡ ಈ ಹಿಂದೆ ಎರಡು ಚಿತ್ರಗಳಲ್ಲಿ ಈ ರೀತಿಯಾದಂತಹ ಒಂದು ಹೊಡೆತವನ್ನು ಕೂಡ ಅನುಭವಿಸಿದ್ದೇನೆ. ಈಗ ನಮಗೆ ಒಳ್ಳೆಯ ನಿರ್ಮಾಪಕರು, ಕಲಾವಿದರು, ಹಾಗೂ ಪ್ರೇಕ್ಷಕರೂ ಕೂಡ ಒಳ್ಳೆಯ ಕನ್ನಡ ಚಿತ್ರವನ್ನು ಪ್ರೋತ್ಸಾಹಿಸುತ್ತಿರುವುದರಿಂದ ಒಳ್ಳೆಯ ಕಾಲವಿರುವುದರಿಂದ ಈಗ ಕನ್ನಡ ಚಿತ್ರಗಳು ನಡೆಯುತ್ತಿರುವುದರಿಂದ ತಾವು ಈಗ ಫೈನಾನ್ಸ್ ಕೊಟ್ಟರೆ ನಾವು ಹೇಗಾದರೂ ಮಾಡಿ ಮುಂದೆ ಬರಬಹುದು. ಈ ರೀತಿಯ ಕೊಲೆ ಪ್ರಕರಣಗಳಿಗೆ ಅವರು ಸಿಲುಕಿ ನರಳತಕ್ಕಂಥ ಒಂದು ಪರಿಸ್ಥಿತಿ ಇದೆ. ಆದ್ದರಿಂದ ತಾವು ಬೇರೆಯವರಿಗೆ ಕೈಗಾರಿಕೋದ್ಯಮಿಗಳಿಗೆ ಯಾವ ರೀತಿಯ ಸಾಲವನ್ನು ಕೊಡುತ್ತೀರೋ ಅದೇ ಪಾಲಿಸಿಯನ್ನು ನಮಗೆ ಕೂಡ ಅನುಸರಿಸಿ ಕೊಡಿ ಬೇಕಾದರೆ ತಾವು ಸುಮಾರು 15-30 ದಿನ ಮುಂಚಿತವಾಗಿ ಸೆಕ್ಯೂರಿಟಿ ಮಾಡಿಕೊಳ್ಳಿ. ಏಕೆಂದರೆ ಹೇಗಿದ್ದರೂ ಮಾರ್ಟ್‌ಗೇಜ್ ಮಾಡಿಕೊಳ್ಳಲೇಬೇಕಾಗುತ್ತದೆ. ಕೊಡುವುದು ಕೊಡಲೇ ಬೇಕಾಗಿರುವುದರಿಂದ ಎಲ್ಲರಿಗೂ ಒಂದೇ ರೀತಿ ಕ್ರಮವಿರುವುದರಿಂದ ಅಲ್ಲಿ ಖಾಲಿ ಷೀಟ್‌ನಲ್ಲಿ ಸೈನ್ ಮಾಡುವ ಬದಲು ಇಲ್ಲಿ ನಿಮ್ಮ ಕಾನೂನುಬದ್ಧವಾಗಿರುವ ಸೌಲಭ್ಯಗಳನ್ನು ಮಾಡಿಕೊಟ್ಟರೆ ನಮಗೆ ಈ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಷೂಟಿಂಗ್ ಫೀಸ್ ನೀವು 5 ಸಾವಿರದಿಂದ 10 ಸಾವಿರದವರೆಗೆ ತಾವು ಫಿಕ್ಸ್ ಮಾಡಿದ್ದೀರಿ, ಏಕೆಂದರೆ ನಾವು ಚಿತ್ರರಂಗದವರು ನಾವು ಮಾಡುವುದೇ 50,60 ಸಾವಿರ ರೂ...

ಶ್ರೀ ಹೆಚ್ ಶಿವಪ್ಪ : ಛೇರ್ಮನ್ನರೆ, ಚಿತ್ರರಂಗದಲ್ಲಿ ಬಹಳ ಜನ ಕೈಸುಟ್ಟುಕೊಂಡಿರುವವರು ಎಂದು ಮಾತನಾಡುತ್ತಾ ಹೇಳಿದಿರಿ, ಚಿತ್ರರಂಗದಲ್ಲಿ ಬಹಳ ಜನ ಕೈ ಸುಟ್ಟಿಕೊಂಡಿರುವುದಾದರೆ ಇದಕ್ಕೆ ಮೂಲಭೂತವಾದ ಕಾರಣಗಳು ಏನು? ಏಕೆಂದರೆ ಸುಮಾರು ಜನ ಚಿತ್ರರಂಗಕ್ಕೆ ಬರಬೇಕು, ಈ ಚಿತ್ರ ನಿರ್ಮಾಣ ಮಾಡಬೇಕೆನ್ನುವ, ಅಪೇಕ್ಷೆಯಿಂದ ಬಂದವರು ವಾಪಸ್ ಹೋಗಿದ್ದಾರೆ ಈ ರೀತಿ ಫೆಲ್ಯೂರ್ಸ್‌ಗೆ ಬೆಸಿಕ್ ಕಾರಣಗಳು ಏನು?

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಶಿವಪ್ಪನವರು ಹೇಳಿದಹಾಗೆ ಇದಕ್ಕೆ ಕಾರಣ ಏನೆಂದರೆ ಇಂಡಸ್ಟ್ರೀಸ್‌ನಲ್ಲಿ ಏನು ರೀಸನ್ ಇರುತ್ತದೆಯೋ ಅದೇ ಕೂಡ ಇಲ್ಲಿರುವುದು. ಉದಾಹರಣೆಗೆ ಹೇಳುವುದಾದರೆ ಫ್ಯಾಕ್ಟರಿಯಲ್ಲಿ ಒಂದು ಕಾರಣ ನೋಡಿರಬಹುದು ಅಂದರೆ ಮಾರ್ಕೆಟ್‌ನಲ್ಲಿ ನಿಮ್ಮ ಫ್ಯಾಕ್ಟರಿಯ ಪ್ರಾಡೆಕ್ಟ್ ಮಾರಾಟವಾಗುವುದಿಲ್ಲ ಎಂದು ಗೊತ್ತಾದ ತಕ್ಷಣ ನಿಮ್ಮ ಫ್ಯಾಕ್ಟರಿ ಹೇಗೆ ಬಿದ್ದು ಹೋಗುತ್ತದೋ ಅದೇ ರೀತಿಯಲ್ಲಿ ಈ ಚಿತ್ರರಂಗ..... ಆದಕಾರಣ ಒಂದೊಂದು ಚಿತ್ರ ಕೂಡ ಒಂದು ಫ್ಯಾಕ್ಟರಿ ಇದ್ದಹಾಗೆ. ಸ್ಮಾಲ್‌ಸ್ಕೇಲ್‌ಇಂಡಸ್ಟ್ರೀಸ್‌ನಲ್ಲಿ ಹೇಗೆ 10-15 ಜನರನ್ನು ಇಟ್ಟುಕೊಂಡು ಒಂದು ಪ್ರಾಡೆಕ್ಟ್ ತಂದು ಹೇಗೆ ಮಾಡುತ್ತೀರೋ ಹಾಗೆಯೇ ಇಲ್ಲಿಯೂ ಕೂಡ ಸುಮಾರು 70-80 ಜನರನ್ನು ಹಾಕಿಕೊಂಡು 4-5-6ತಿಂಗಳಲ್ಲಿ ಒಂದು ಎಫರ್ಟ್ ಮಾಡಿ ಒಂದು ಪ್ರಾಡೆಕ್ಟ್ ಕೊಡುತ್ತೇವೆ. ಇಲ್ಲಿ ಕೆಲವು ಸಾರಿ ಏನಾಗುತ್ತದೆಂದರೆ ಮಳೆಯಿಂದಾಗಲಿ, ಬೇರೆ ಚಿತ್ರಗಳ ಪ್ರಭಾವದಿಂದಾಗಲಿ, ಚಿತ್ರ ಚೆನ್ನಾಗಿಲ್ಲದಿರಬಹುದು, ಅಂದರೆ ನಿಮ್ಮ ಪ್ರಾಡೆಕ್ಟ್ ರೀತಿಯಲ್ಲಿ ಇನ್ನೊಂದು ಸ್ವಲ್ಪ ಹೆಚ್ಚು ಕಡಿಮೆ ಅದೇ ರೀತಿಯಲ್ಲಿರುವ ಪ್ರಾಡೆಕ್ಟ್ ಸ್ವಲ್ಪ ಕ್ವಾಲಿಟಿ ಕೊಟ್ಟರೆ ಗ್ಯಾರಂಟಿ ನಮಗೆ ಹಣ ಬರುತ್ತದೆ, ಈಗ ಏನಾಗಿದೆ ಕ್ವಾಲಿಟಿ ಚೆನ್ನಾಗಿ ಕೊಟ್ಟರೂ ಕೂಡ ಗ್ಯಾರಂಟಿ ಹಣ ಎಂದರೆ ನೀವೇನು ಸಬ್ಸಿಡಿ ರೂಪದಲ್ಲಿ ಕೊಡುತ್ತಿರುವ 4 ಲಕ್ಷ ರೂ.ಗಳು. ಅದೊಂದೇ ನಮಗೆ ದಾರಿ.

ಶ್ರೀ ಹೆಚ್. ಶಿವಪ್ಪ : ಛೇರ್ಮನ್‌ರೆ, ಇಲ್ಲಿ ಮುಖ್ಯವಾಗಿರುವುದು ಪೈಪೋಟಿ, ಹೇಗೆಂದರೆ ನಿರ್ಮಾಪಕ ಮತ್ತು ನಿರ್ಮಾಪಕರಲ್ಲಿ, ಹೀರೋ-ಹೀರೋಗಳಲ್ಲಿ ಈ ರೀತಿಯಾದ ಅನಾರೋಗ್ಯಕರವಾದಂಥ ಒಂದು ಪೈಪೋಟಿಯಿಂದ ಇವರನ್ನು ಅವರು ತುಳಿಯಬೇಕು, ಅವರನ್ನು ಮತ್ತೊಬ್ಬರು ತುಳಿಯಬೇಕು ಎನ್ನುವ ಒಂದು ಅನಾರೋಗ್ಯಕರವಾದ ಪೈಪೋಟಿಯಿಂದ ಕೂಡ ಇದು ವಿಫಲವಾಗುತ್ತಿದೆ ಎಂದು ನನಗೆ ತಿಳಿದು ಬಂದಿದೆ. ಏಕೆಂದರೆ ತಾವು ಅನುಭವವಿರುವವರು, ಚಿತ್ರರಂಗದಲ್ಲಿ ಪಾತ್ರ ಮಾಡಿ, ನಿಮ್ಮನ್ನು ನೀವೇ ತೊಡಗಿಸಿಕೊಂಡಿರುವವರು, ಇವು ಏನಾದರೂ ಮೂಲಭೂತವಾಗಿ ಕಾರಣ ಆಗಿವೆಯೇ? ಇಲ್ಲಿ ಪ್ರಾಡೆಕ್ಟ್ ಕೊಡುವುದು, ಕ್ವಾಲಿಟೀರುವ ಚಿತ್ರ ಕೊಡುವುದು ಅದು ಒಂದು ಮುಖ.

ಶ್ರೀ ಎಂ. ಶ್ರೀನಿವಾಸ್ : ಈಗ ರಾಜಕಾರಣದಲ್ಲಿ ಒಬ್ಬರನ್ನು ಎಳೆದು ಮತ್ತೊಬ್ಬರು ಮುಂದೆ ಬರಬೇಕಲ್ವೇ?

ಶ್ರೀ ಹೆಚ್. ಶಿವಪ್ಪ : ತಾವು ಮೇಲೆ ಬರುವುದಕ್ಕಾಗಿ ಮತ್ತೊಬ್ಬರನ್ನು ತುಳಿಯುವುದು ಒಂದು ಕಾರಣವೇ ಅಥವಾ ಹಣಕಾಸಿನ ಕಾರಣವೇ?

(ಗೊಂದಲ)

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಛೇರ್ಮನ್‌ರೆ, ಕೆಲವು ಸಾರಿ ಪ್ರೊಫೆಷನಲ್ ರೈವಲ್‌ರೀ ಕೂಡ ಇರುತ್ತದೆ. ಇದು ಈ ಫೀಲ್ಡ್‌ನಲ್ಲಿ ಇರುವುದಿಲ್ಲ, ಮತ್ತೊಂದರಲ್ಲಿ ಇರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಅದು ಎಲ್ಲಾ ಫೀಲ್ಡ್‌ಗಳಲ್ಲಿ ಇರುತ್ತದೆ. ಆದರೆ ಈಗ ಚಿತ್ರರಂಗ ಸ್ವಲ್ಪ ಒಗ್ಗಟ್ಟಾಗಿ ಇದೆ. ಬೇರೆ ಫೀಲ್ಡ್‌ಗಳಲ್ಲಿ ಇರುವಂತಹ ಪ್ರೊಫೆಷನ್ ರೈವಲ್‌ರಿ ಇಲ್ಲಿ ಇಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ನಮ್ಮ ಹಿರಿಯ ಕಲಾವಿಧರಾದ ಡಾ|| ರಾಜ್‌ಕುಮಾರ್‌ರವರ ನೇತೃತ್ವದಲ್ಲಿ ಸ್ವಲ್ಪ ನೀತಿ, ನಿಯಮ ಇದೆ ಇದು ಬೇರೆ ಫೀಲ್ಡ್‌ಗೆ ಕಂಪೇರ್ ಮಾಡಿದರೆ ಇಲ್ಲಿ ಸ್ವಲ್ಪ ಒಗ್ಗಟ್ಟಾಗಿ ಇದೆ. ಏಕೆಂದರೆ ರಾಜ್‌ಕುಮಾರ್‌ರವರ ಮಾರ್ಗದರ್ಶನದಂತೆ ನಾವೂ ಕೂಡ ನಡೆಯಬೇಕು ಎನ್ನುವಂತಹ ಒಂದು ಪ್ರಯತ್ನ ನಮ್ಮ ಕಿರಿಯ ಕಲಾವಿದರಲ್ಲಿ ಹಾಗೂ ಸಹ ಕಲಾವಿದರಲ್ಲಿ ನಡೆಯುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಾನು ಈಗಾಗಲೇ ಹೇಳಿದಾಗೆ ಷೂಟಿಂಗ್ ಫೀಸ್ 5000 ರಿಂದ 10,000 ರೂ.ಗಳಿಗೆ ರೈಸ್ ಮಾಡಿದ್ದಾರೆ. ಎರಡು ದಿನದ ಷೂಟಿಂಗ್ ಫೀ 10,000 ಎಂದು ನಿಗಧಿ ಮಾಡಿದ್ದಾರೆ ಎರಡುದಿನಗಳಿಗಿಂತ ಜಾಸ್ತಿ ಆದರೆ 20,000 ಸಾವಿರ ಎಂದು ಹೇಳುತ್ತಾರೆ, ಅಂದರೆ ಒಂದು ದಿನಕ್ಕೆ 500 ರೂ. ಎಕ್ಸ್ಟ್ರಾ ಆಗುತ್ತಾ ಹೋಗುತ್ತದೆ, ಏಕೆಂದರೆ ಕನ್ನಡ ಚಿತ್ರರಂಗದವರು 50 ಲಕ್ಷ 60.ಲಕ್ಷಗಳಲ್ಲಿ ಚಿತ್ರವನ್ನು ತಯಾರು ಮಾಡಬೇಕಾಗಿರುವಂತಹ ಪರಿಸ್ಥಿತಿಯಲ್ಲಿ ಈ ಫೀಸ್‌ನ್ನು ಭರಿಸುವ ಶಕ್ತಿಯಿದ್ದರೆ, ಆದರೆ ನಮ್ಮ ದೂರದರ್ಶನದಲ್ಲಿ ಕನ್ನಡ ಧಾರವಾಹಿಗಳನ್ನು ಚಿತ್ರಿಸುವ ನಿರ್ಮಾಪಕರಿಗೆ ಇದರಿಂದ ಬಹಳ ತೊಂದರೆಯಾಗಿದೆ. ಇದಕ್ಕಾಗಿ ಇವರಿಗೆ ಬೇರೆ ರೀತಿಯಲ್ಲಿ ಒಂದು ಕಾನೂನು ಮಾಡುವುದು ಉತ್ತಮ, ಏಕೆಂದರೆ ಕನ್ನಡ ಧಾರವಾಹಿಗಳನ್ನು ಚಿತ್ರಿಸುವ ನಿರ್ಮಾಪಕರು ಕೇವಲ 30-40 ಸಾವಿರ ರೂ.ಗಳ ಒಂದು ಬಜೆಟ್‌ನಲ್ಲಿ ಚಿತ್ರೀಕರಿಸುವಾಗ ಅಲ್ಲಿ ಒಂದು ದಿನದ ಅಡ್ವಾನ್ಸ್ ಹಣ ಕೊಡುವುದಕ್ಕಾಗುವುದಿಲ್ಲ, ಆದ್ದರಿಂದ ತಾವು ಈ ವಿಷಯವನ್ನು ಸ್ವಲ್ಪ ರೆಕ್ಟಿಫೈ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ ಉತ್ತಮ ಚಿತ್ರಗಳಿಗೆ ಮಾತ್ರ 4 ಲಕ್ಷ ರೂ.ಗಳ ಸಬ್ಸಿಡಿ ಕೊಡುತ್ತೇವೆ ಎಂದಿದ್ದಾರೆ. ಅಂದರೆ ಅವರು ಏನು ಹೇಳುತ್ತಾರೆಂದರೆ ಉತ್ತಮ ಚಿತ್ರಗಳಿಗೆ ಮಾತ್ರ 4 ಲಕ್ಷ ರೂ.ಗಳ ಸಬ್ಸಿಡಿ ಕೊಡುತ್ತೇವೆ; ಬೇರೆ ಎಲ್ಲಾ ಚಿತ್ರಗಳಿಗೆ ಕೊಡುವುದಿಲ್ಲ. ಅಂದರೆ ಉತ್ತಮ ಚಿತ್ರವೆಂದರೆ ಯಾವುದು ಹೇಗೆ ಅದನ್ನು ನಿರ್ಧರಿಸುತ್ತೀರಿ? ಇದಕ್ಕೆ ತಮ್ಮ ಅಳತೆಗೋಲು ಏನು? ಇದಕ್ಕೆ ತಾವೇನು ಹೇಳುತ್ತಿರೆಂದರೆ ಒಂದು ಸಮಿತಿ ಮಾಡ್ತೇವೆ, ಆ ಸಮಿತಿಯು ಉತ್ತಮ ಚಿತ್ರವನ್ನು ಆರಿಸುತ್ತದೆಯೋ ಆ ಚಿತ್ರಕ್ಕೆ 15 ಲಕ್ಷ ರೂ.ಗಳನ್ನು ಕೊಡುತ್ತೇವೆ ಎಂದು ನಮ್ಮ ಪ್ರಕಾರ ಇದು ಮಾಡುವುದು ತಪ್ಪು ಎನ್ನುವ ಭಾವನೆ, ಏಕೆಂದರೆ ಉತ್ತಮ ಚಿತ್ರ ಎಂದು ನಿರ್ಧರಿಸುವುದಕ್ಕೆ ಸೆನ್ಸಾರ್ ಬೋರ್ಡ್ ಇದೆ. ಆ ಬೋರ್ಡ್ ಇದು ಎ, ಯು, ಯು ಎ ಎಂದು ಸರ್ಟಿಫಿಕೇಟ್ ನೀಡಿ, ಇದು ಉತ್ತಮ ಚಿತ್ರ ಹೌದು ಅಲ್ಲವೋ ಎಂದು ನಿರ್ಧರಿಸುವುದು ಸೆನ್ಸಾರ್ ಬೋರ್ಡ್ ಆಫ್ ಇಂಡಿಯದವರು ಮಾಡುತ್ತಾರೆ. ಇದಕ್ಕಾಗಿ ತಾವು ಮತ್ತೊಂದು ಸಮಿತಿ ಮಾಡಿ ಉತ್ತಮ ಚಿತ್ರ ಯಾವುದೂ ಎಂದು ಹೇಳತಕ್ಕಂಥದ್ದು ತಪ್ಪಾಗುತ್ತಿದೆ. ಮತ್ತೊಂದು ಅಂಶ ಏನೆಂದರೆ ಈಗ ನಡೆಯುವುದೇ ಉತ್ತಮ ಚಿತ್ರ, ಏಕೆಂದರೆ ಜನಗಳಿಗೆ ಯಾವುದು ಇಷ್ಟವಾಗಿರುತ್ತದೆಯೋ ಅದು ಉತ್ತಮ ಚಿತ್ರ ಎಂದು ಹೇಳತಕ್ಕಂಥ ಒಂದು ವಾದ ಕೂಡ ಇದೆ. ನಾವು

ನೂರುದಿನ, 25 ವಾರ ಸಂಪೂರ್ಣವಾಗಿ ಮಾಡಿದ್ದೇವೆ ನಮಗೆ ಸಬ್ಸಿಡಿ ಕೊಡಿ ಒಂದು ಕೇಳುತ್ತಾರೆ. ಆದರೆ ನೀವು ಇನ್ನೂ ಬಿಡುಗಡೆಯಾಗದಿರುವ ಚಿತ್ರಕ್ಕೆ, ಕಲಾತ್ಮಕ ಚಿತ್ರಕ್ಕೆ ಒಳ್ಳೆಯ ಚಿತ್ರವೆಂದು ಸಬ್ಸಿಡಿ ಕೊಡುತ್ತೀರಿ, ಕಾರಣ ಅದರಲ್ಲಿ ಒಂದು ಒಳ್ಳೆಯ ಮಾರಲ್ ಇದೆ ಎನ್ನುತ್ತೀರಿ, ನಿಮ್ಮ ಪ್ರಕಾರ ಅದರಲ್ಲಿ ಮಾರೆಲ್ ಇದೆ ಆದರೆ ಅದನ್ನು ನೋಡಿರುವವರ ಸಂಖ್ಯೆ ಎಷ್ಟು? ರಿಲೀಸ್ ಆಗಿ ಚಿತ್ರ ಚೆನ್ನಾಗಿ ಓಡಿದರೆ ಮಾತ್ರ ಅದರಲ್ಲಿರತಕ್ಕಂಥ ಮಾರೆಲ್ ಜನಗಳಿಗೆ ತಲುಪುತ್ತಿದೆಯೇ ಹೊರತು, ರಿಲೀಸ್ ಆಗದೇ ಡಬ್ಬಿಯಲ್ಲಿ ಕುಳಿತಿರುವ ಚಿತ್ರಕ್ಕೆ ನೀವು ಮಾರೆಲ್ ಕೊಟ್ಟರೆ ಅಥವಾ ಅವಾರ್ಡ್ ಕೊಟ್ಟರೆ ಉತ್ತಮ ಚಿತ್ರವೆಂದು ಪರಿಗಣಿಸಿದರೆ ಅದು ಯಾವ ರೀತಿಯಲ್ಲಿ ಜನಗಳಿಗೆ ತಲುಪುತ್ತದೆ? ಆದ್ದರಿಂದ ತಮ್ಮ ಸ್ಟೇಟ್‌ಮೆಂಟ್‌ನ್ನು ಇನ್ನೊಂದು ಸಾರಿ ಪರಿಶೀಲಿಸಿ ಏಕೆಂದರೆ ತಾವು ಎಲ್ಲಾ ಇಲ್ಲಿ ಹಿರಿಯರು ಹಾಗೂ ಚಿತ್ರರಂಗದಲ್ಲಿರತಕ್ಕಂಥ ಹಿರಿಯರನ್ನು ಎಲ್ಲರನ್ನೂ ಸೇರಿಸಿಕೊಂಡು, ತಾವು ಇದಕ್ಕೆ ಸೂಕ್ತವಾಗಿ ಪರಿಹಾರ ನೀಡಬೇಕೆಂದು ಹೇಳುತ್ತೇನೆ. ಏಕೆಂದರೆ ತಾವು ಈಗಾಗಲೇ ಉತ್ತಮ ಚಿತ್ರಗಳಿಗೆ ಅವಾರ್ಡ್‌ನ್ನು ಕೊಡುತ್ತಿದ್ದೀರಿ, ಅದರಲ್ಲಿ ಕ್ಯಾಟಗರಿ ವೈಸ್‌ನಲ್ಲಿ ನಿರ್ದೇಶಕರು, ಉತ್ತಮ ನಿರ್ದೇಶಕ, ಉತ್ತಮ ಸಂಗೀತ ನಿರ್ದೇಶಕ, ಉತ್ತಮ ಚಿತ್ರ, ಉತ್ತಮ ನಟ, ಉತ್ತಮ ನಟಿ, ಎಲ್ಲಾ ರೀತಿಯ ಅವಾರ್ಡ್ಸ್ ಕೂಡ ಕೊಡುತ್ತೀರಿ. ಇದಾದಮೇಲೆ ಈ ರೀತಿ ಕೊಟ್ಟಿರತಕ್ಕಂಥ ಚಿತ್ರವನ್ನು ಉತ್ತಮ ಚಿತ್ರವೆಂದು ಪರಿಗಣಿಸಿ ನೀವು ಕೊಡುತ್ತಿರುವ 50 ಲಕ್ಷ 1 ಲಕ್ಷ ರೂ.ಗಳನ್ನು ಇದನ್ನು ಬೇಕಾದರೆ ಡಬಲ್ ಮಾಡಿ ಕೊಡಿ. ಕೆಲವರಿಗೆ ರಾಜ್ಯ ಪ್ರಶಸ್ತಿ ಕೊಡುತ್ತೀರಿ ಅಂಥವರಿಗೆ ಒಂದು ಸೈಟ್ ಕೊಡುತ್ತೀದ್ದಿರಿ, ನಿಜವಾಗಲೂ ಕೂಡ ಒಂದು ಒಳ್ಳೆಯ ಕಾರ್ಯ. ಇದಕ್ಕೆ ಬೇಕಾದರೆ ಇನ್ನೊಂದು, ಮತ್ತೊಂದು ಸೌಲಭ್ಯಗಳನ್ನು ಮಾಡಿ, ಆದರೆ ಸಧ್ಯಕ್ಕೆ ಕೊಡುತ್ತಿರುವ 4 ಲಕ್ಷ ರೂ. ಸೌಲಭ್ಯ ಇನ್ನೂ ಸ್ವಲ್ಪ ಕಾಲ ಈ ವ್ಯವಸ್ಥೆ ಮುಂದುವರಿಯಬೇಕು. ಇದು ಯಾವ ರೀತಿ ಎಂದರೆ ಪ್ರಸ್ತುತ ಇರತಕ್ಕಂಥ ರಿಸರ್‌ವೇಷನ್ ಕ್ಯಾಟಗರಿ ಇದ್ದ ಹಾಗೆ. ಇದರಿಂದಾಗಿ ನಾವೆಲ್ಲರೂ ಹೇಗೆ ಒಟ್ಟಿಗೆ ಬರುತ್ತೇವೆಯೋ ಅದೇ ರೀತಿಯಲ್ಲಿ ಚಿತ್ರರಂಗಕ್ಕೂ ಕೂಡ ಈ 4 ಲಕ್ಷ ರೂ.ಗಳ ಸೌಲಭ್ಯ ಮೀಸಲಾಗಿರಬೇಕು.

1.10 ಪಿ.ಎಂ

ಹಾಗಾಗಿ, ಇದನ್ನು ಯಾವುದೇ ಕಾರಣಕ್ಕೂ ಮುಟ್ಟಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ವಾಲ್‌ಪೋಸ್ಟರುಗಳ ಬಗ್ಗೆ ಹೇಳುವುದಾದರೆ, ಮುಖ್ಯವಾಗಿ ಕಂಡಕಂಡ ಕಡೆ ಒಂದೊಂದು ಥೂ, ಚೀ ಎನ್ನುವುದು ಈ ವಾಲ್ ಪೋಸ್ಟರುಗಳು. ಈ ವಾಲ್‌ಪೋಸ್ಟರುಗಳು ನಮಗೆ ಬಹಳ ಪ್ರಭಾವವನ್ನು ಬೀರುವುದಕ್ಕೋಸ್ಕರ ಒಂದು ಷೀಟಿನಿಂದ ಹಿಡಿದು ಹನ್ನೆರಡು ಷೀಟಿನವರೆಗೂ ನಾವು ವಾಲ್ ಪೋಸ್ಟ್‌ರುಗಳನ್ನು ಹಾಕುತ್ತೇವೆ. ಅದನ್ನು ನೋಡಿಕೊಂಡು ಜನ, ಚಿತ್ರ ಚೆನ್ನಾಗಿದೆಯೋ ಇಲ್ಲವೋ ಎಂದು ಹೇಳಿ ಡಿಸೈಡ್ ಮಾಡುತ್ತಾರೆ. ಚಿತ್ರ ಅಶ್ಲೀಲವಾಗಿದೆಯೋ, ಆಕ್ಷನ್ ಫಿಲಮೋ ಎಂದು ಡಿಸೈಡ್ ಮಾಡುತ್ತಾರೆ. ಅಂದರೆ, ಈ ಪೋಸ್ಟರುಗಳ ಪ್ರಭಾವ ಯಾವತರಹ ಇರಬಹುದು. ಈ ಪೋಸ್ಟರುಗಳನ್ನು ಮಾಡಬೇಕಾದರೆ, ಕಂಡಕಂಡ ಕಡೆ ಹಚ್ಚುತ್ತಾರೆ. ಕಂಡಕಂಡ ಕಡೆ ಹಚ್ಚಿದ ತಕ್ಷಣ, ಅದರ ಮೇಲೆ ಮತ್ತೊಬ್ಬರು ಹಚ್ಚುತ್ತಾರೆ. ಇದಾದ ಮೇಲೆ, ರಾಜಕೀಯವಾಗಿರತಕ್ಕ ಪೋಸ್ಟರುಗಳೂ ಅದರ ಮೇಲೆ ಬೀಳುತ್ತವೆ. ಇದಾದ ತಕ್ಷಣ ನಮ್ಮ ಕಮರ್ಷಿಯಲ್ ಸ್ಟ್ರೀಟ್ ಮತ್ತು ಬ್ರಿಗೇಡ್ ರೋಡಿನಲ್ಲಿರತಕ್ಕ

ಅಂಗಡಿಗಳವರ ಪೋಸ್ಟರುಗಳು ಬೀಳುತ್ತವೆ. ಅಂದರೆ ಇದು ಹೋದ ಹೋದಲ್ಲಿ, ಎಲ್ಲಾ ಕಡೆಗೂ, ಅದು ಬೆಂಗಳೂರು ಇರಬಹುದು ಅಥವಾ ಕರ್ನಾಟಕ ರಾಜ್ಯದ ಎಲ್ಲೇ ಇರಬಹುದು. ಎಲ್ಲಾ ಕಡೆಗೂ, ಗಬ್ ಮಾಡುವಂಥ ಪ್ರವೃತ್ತಿ ಬೆಳೆದಿದೆ. ಇದಕ್ಕೆ ತಾವು ನಿರ್ದಿಷ್ಟವಾಗಿ ಇಂತಹ ಜಾಗ ಎಂದು ಫಿಕ್ಸ್ ಮಾಡಿ. ಇದು ಕಾರ್ಪೊರೇಷನ್‌ನವರು ಮತ್ತು ತಾವು ಕುಳಿತುಕೊಂಡು ಡಿಸೈಡ್ ಮಾಡತಕ್ಕ ವಿಷಯ. ಇದನ್ನು ತಾವುಗಳು ಡಿಸೈಡ್ ಮಾಡಬೇಕು. ಈಗ ನಾವು ಕಮರ್ಷಿಯಲ್ ಹೋರ್ಡಿಂಗ್ಸ್‌ಗೆ ಜಾಗ ಕೊಟ್ಟಿದ್ದೇವೆ, ಅಲ್ಲಿಂದ ನೀವು ವಸೂಲಿ ಮಾಡುತ್ತೀರಿ. ಹಾಗೆ ಇದಕ್ಕೂ ಕೂಡ ಮಾಡಿ. ಏಕೆ ಕಂಡಕಂಡ ಕಡೆ ಹಚ್ಚಬೇಕು. ಈ ರೀತಿ ಹಚ್ಚುವುದು ಬೇಡ. ನೀವು ಅವರಿಗೆ ನಿರ್ದಿಷ್ಟವಾದ ಜಾಗವನ್ನೇ ಕೊಡಿ. ಅದಕ್ಕೆ ಒಂದು ಸರಿಯಾಗಿ ಬಾಕ್ಸ್ ತರಹ ಮಾಡಿ, ಅದರಿಂದ ಹೊರಗಡೆ ಬಂದರೆ ಫೈನ್ ಹಾಕುತ್ತೇವೆಂದು ಮಾಡಿ. ಈಗ ಎಲೆಕ್ಷನ್ ಕಮೀಷನರ್ ಪೋಸ್ಟ್ ಹಾಕುವ ಬಗ್ಗೆ ಒಂದು ಕಾನೂನು ತಂದರು. ಇದರಲ್ಲಿ ಯಾರಾದರೂ ಒಬ್ಬರು ಪರ್ಮಿಷನ್ ಇಲ್ಲದೇ ಪೋಸ್ಟರ್ ಹಚ್ಚಿದರೇ? ಯಾರೂ ಹಚ್ಚಲಿಲ್ಲ ಅಂದರೆ ಭಯ. ಎಲೆಕ್ಷನ್ ಕಮೀಷನರ್‌ರವರು ನಮ್ಮ ಸೀಟನ್ನು ಸಸ್ಪೆಂಡ್ ಮಾಡುತ್ತಾರೆಂಬ ಭಯಾ ಹಾಗಾಗಿ ಇದನ್ನೂ ಕೂಡ ಮಾಡಿ. ಅಲ್ಲಿ "ಪ್ರಕಟಣೆ" ಎಂದು ಹಾಕಿ. ಪ್ರಕಟಣೆ ಎಂದು ಹಾಕಿ, ಅವರಿಗೆ ಸೂಕ್ತವಾದ ಕಾನೂನನ್ನು ಮಾಡಿ. ಈ ರೀತಿ ಮಾಡಿದರೆ, ಯಾರು ಪೋಸ್ಟರ್ ಹಾಕುತ್ತಾನೋ ಅಥವಾ ಯಾರು ಡಿಸ್ಟ್ರಿಬ್ಯೂಟರ್ ಇರುತ್ತಾನೋ ಅಥವಾ ಯಾರು ಪ್ರೊಡ್ಯೂಸರ್ ಇರುತ್ತಾನೋ ಅವರಿಗೆ ಒಂದು ನೋಟೀಸ್ ಕಳುಹಿಸಿ. ಏಕೆ ಪೋಸ್ಟರುಗಳು ಕಂಡಕಂಡ ಕಡೆ ಬರುತ್ತವೆ ನೋಡೋಣ. ಈ ರೀತಿ ಮಾಡಿದರೆ, ಪೋಸ್ಟರುಗಳು ಬರುವುದಿಲ್ಲ. ಅವರಿಗೆ ಕರೆಕ್ಟಾದ ಜಾಗವನ್ನು ಕೊಟ್ಟು, ಕರೆಕ್ಟಾದ ಕಾನೂನು ಮಾಡಿದರೆ, ಕಮರ್ಷಿಯಲ್‌ನವರಾಗಲೀ ಅಥವಾ ಚಲನಚಿತ್ರದವರಾಗಲೀ ಅಥವಾ ಬೇರೆ ಯಾರೇ ಪೊಲಿಟಿಕಲ್‌ನವರಾಗಲೀ ಒಂದು ಪೋಸ್ಟರ್ ಹಚ್ಚುವುದಿಲ್ಲ. ಈ ಪೋಸ್ಟರ್ ವಿಷಯ ಮಾತನಾಡಬೇಕಾದರೆ, ರಾಜಕೀಯವಾಗಿಯೂ ಕೂಡ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಎಲ್ಲರ ಫೋಟೋಗಳೂ ಹೆಚ್ಚುಕಡಿಮೆ ರೋಡಿನಲ್ಲಿ ಮತ್ತು ಅಲ್ಲಿ, ಇಲ್ಲಿ ಇರುತ್ತವೆ. ಇದು ಬೇಡ. ನೀವು ಕರೆಕ್ಟಾಗಿ ಮಾಡಿ. ಇದು ಚಿತ್ರರಂಗದ ಜಾಗ, ಇದು ಪೊಲಿಟಿಕಲ್ ಜಾಗ. ಎಲೆಕ್ಷನ್ ಬಂದಾಗ ನಾವು ಈ ಜಾಗಗಳನ್ನು ಗುರುತು ಮಾಡಿದ್ದೇವೆ. ಇಲ್ಲಿ ಪರ್ಮಿಷನ್ ತೆಗೆದುಕೊಂಡರೆ ನಾವು ಹಚ್ಚಬಹುದು, ಇಲ್ಲಿ ಪರ್ಮಿಷನ್ ತೆಗೆದುಕೊಂಡರೆ ಬರೆಯಬಹುದು ಎಂಬುದು ಇರಬೇಕು. ಈಗ ಎಲ್ಲೆಲ್ಲೋ ದೊಡ್ಡ ದೊಡ್ಡ ಗವರ್ನಮೆಂಟ್ ಬಿಲ್ಡಿಂಗ್‌ಗಳಲ್ಲಿ ಪೇಯಿಂಟ್ ಮಾಡಿರುತ್ತಾರೆ. ಅದರ ಮೇಲೆ ದೊಡ್ಡ ದೊಡ್ಡ ಪೋಸ್ಟರ್ ಹಚ್ಚುತ್ತಾರೆ. ಮಳೆ ಬಂದರೆ, ಅರ್ಧಂಭರ್ದ ಹರಿದುಹೋಗಿರುತ್ತದೆ, ಅರ್ಧಂಭರ್ದ ನಿಂತಿರುತ್ತದೆ. ಇದನ್ನು ತಾವು ತೀಕ್ಷ್ಣವಾಗಿ ನೋಡಿದರೆ, ತಾವು ಬೆಂಗಳೂರು ಸಿಟಿಯನ್ನು ಏನು ಬ್ಯೂಟಿಫೈ ಮಾಡಬೇಕೆಂದು ತಿಳಿದುಕೊಂಡಿದ್ದೀರೋ ಅದನ್ನು ನಮ್ಮ ಚಿತ್ರರಂಗದಿಂದಲೂ ಮಾಡುವುದಕ್ಕೆ ಸಾಧ್ಯವಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇದರ ಮೇಲೆ ತಾವು ಬಹಳ ಗಮನ ಕೊಟ್ಟರೆ ಉತ್ತಮ ಎಂದು ಹೇಳುವುದಕ್ಕೆ ನಾನು ಆಸೆ ಪಡುತ್ತೇನೆ. ಇನ್ನು ಲೊಕೇಷನ್ ಬಗ್ಗೆ ಮುಖ್ಯವಾಗಿ ಸ್ಟ್ರೆಸ್ ಮಾಡಿ ಹೇಳಬೇಕಾಗುತ್ತದೆ. ಕರ್ನಾಟಕದಲ್ಲಿ ಷೂಟಿಂಗ್ ಮಾಡಿದರೆ ಸಬ್ಸಿಡಿ ಕೊಡುತ್ತೇವೆಂಬುದು ನಿಮ್ಮದು ಇದೆ. ಈಗ ಕರ್ನಾಟಕದಲ್ಲಿ 25 ಪರ್ಸೆಂಟ್ ನಾವು ಎಲ್ಲಿ ಬೇಕಾದರೂ ಮಾಡಬಹುದು ಎಂದು ಹೇಳಿದ್ದಾರೆ. ನಾವು ಕರ್ನಾಟಕದಲ್ಲೇ ಷೂಟಿಂಗ್ ಮಾಡಬೇಕೆಂದರೆ,

ಉದಾಹರಣೆಗೆ ಕೊಡಚಾದ್ರಿ ಎಂಬ ಜಾಗದಲ್ಲಿ ನಾವು ಷೂಟಿಂಗ್ ಮಾಡಬೇಕು. ಕೊಡಚಾದ್ರಿಯಲ್ಲಿ ಷೂಟಿಂಗ್ ಮಾಡಬೇಕೆಂದರೆ, ನಾವು ಲಿಮಿಟೆಡ್ ಫಂಡ್ ಸುಮಾರು 50-60 ಲಕ್ಷ ರೂಪಾಯಿಗಳಲ್ಲಿ ಷೂಟಿಂಗ್ ಮಾಡುತ್ತೇವೆ. ಈಗ ಅಲ್ಲಿ ಹೋಗಿ ಮಾಡಬೇಕೆಂದರೆ, ಸುಮಾರು 60 ರಿಂದ 70 ಜನ ಚಿತ್ರರಂಗದವರು ಅಲ್ಲಿ ಹೋಗಿ ಉಳಿದುಕೊಳ್ಳಬೇಕಾಗುತ್ತದೆ. ಉಳಿದುಕೊಳ್ಳಬೇಕಾದರೆ ಅಲ್ಲಿ ಫೆಸಿಲಿಟೀಸ್ ಎಲ್ಲಿದೆ? ಇರುವುದಿಲ್ಲ. ಹಾಗಾಗಿ ನಾವು ಸುಮಾರು 60-70 ಕಿಲೋಮೀಟರ್ ಶಿವಮೊಗ್ಗಕ್ಕೆ ಬರಬೇಕು ಇಲ್ಲದೇಹೋದರೆ ಸಾಗರಕ್ಕೆ ಹೋಗಬೇಕು. ಅಥವಾ ಮತ್ತೊಂದು ಕಡೆಗೆ ಉಳಿದುಕೊಳ್ಳುವ ಜಾಗದಲ್ಲಿ ಹೋಗಬೇಕಾಗುತ್ತದೆ. ಪ್ರವಾಸೋದ್ಯಮ ಕೆಟಗರಿಯಲ್ಲಿ ಇದೇನು ಬರುತ್ತದೆ, ತಾವು ಮತ್ತು ಟೂರಿಸಂ ಡಿಪಾರ್ಟ್‌ಮೆಂಟ್‌ನವರು ಸ್ವಲ್ಪ ಕುಳಿತು ಆಲೋಚನೆ ಮಾಡಿದರೆ, ಇದನ್ನು ಮಾಡುವುದಕ್ಕೆ ಸಾಧ್ಯವೆಂದು ಹೇಳುವುದಕ್ಕೆ ಇಷ್ಟಪಡುತ್ತೇವೆ. ಅಂದರೆ, ಒಳ್ಳೆಯ ಗೆಸ್ಟ್ ಹೌಸ್‌ಗಳನ್ನು, ರೂಮುಗಳನ್ನು ಕಟ್ಟಿಸಿದ್ದೀರಿ. ಈಗ ಅಲ್ಲಲ್ಲೇ ಬಹಳಷ್ಟು ಬಂದಿವೆ. ನಿಜವಾಗಿಯೂ ಮುಂಚೆ ಕೊಡಚಾದ್ರಿಗೆ ಹೋಗಬೇಕೆಂದರೆ, ರೋಡುಗಳೇ ಇರಲಿಲ್ಲ. ಈಗ ಕೊಡಚಾದ್ರಿಗೆ ಹೋಗಬೇಕೆಂದರೆ ರೋಡೆಲ್ಲಾ ಆಗಿದೆ. ಹಾಗೆಯೇ ಜೋಗ್‌ಫಾಲ್ಸ್‌ನಲ್ಲಿ ಹೇಳಬೇಕಾದರೆ, ನಾವು ಜೋಗನ್ನು 10-18 ವರ್ಷದಿಂದ ನೋಡುತ್ತಲೇ ಇದ್ದೇವೆ. ಅಲ್ಲಿ ಏನು ಚೇಂಜೆಸ್ ನೋಡಿದ್ದೇವೆ ಹೇಳಿ. ಅಲ್ಲಿ ಒಂದು ಸಾರಿ ನೀರು ಇರುತ್ತದೆ, ಒಂದು ಸಾರಿ ನೀರು ಇರುವುದಿಲ್ಲ. ಇಷ್ಟು ಬಿಟ್ಟರೆ ಅದೇ ಬಿಲ್ಡಿಂಗ್ ಅದೇ ವ್ಯವಸ್ಥೆ ಇದೆ. ಚಿತ್ರರಂಗದವರು ಹೋಗಿ, ಅದನ್ನೇ ತೆಗೆಯಬೇಕಾಗಿದೆ. ಇನ್ನು ಕೆಳಗಡೆ ಹೋಗಬೇಕೆಂದರೆ, ಮಳೆಗಾಲದಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಮಗೆ ಫೆಸಿಲಿಟೀಸ್ ಇಲ್ಲ. ಅಲ್ಲಿಗೆ ಏನಾದರೊಂದು ಪ್ಲಾನ್ ಮಾಡಿ. I am just giving the example of jog falls. There are so many such falls, Where you can give the facilities to go and work. For tourism also, I am giving examples. ರೋಪ್‌ವೇ ಮಾಡಿ ಅಥವಾ ಏನಾದರೊಂದು ಬ್ಯೂಟಿಫಿಕೇಷನ್ ಮಾಡಿ. ನಾವೇನು ಕರ್ನಾಟಕದಲ್ಲೇ ಷೂಟಿಂಗ್ ಮಾಡಿ, ಕರ್ನಾಟಕದ ಪ್ರಚಾರವನ್ನು ಬೇರೆ ಕಡೆ ಕೊಡಬೇಕೆಂದಿದ್ದೇವೆ, ಅದನ್ನು ಮಾಡುವುದಕ್ಕೆ ಲೊಕೇಷನ್ ಕೊಡತಕ್ಕ ಫೆಸಿಲಿಟೀಸ್ ಬಗ್ಗೆ ತಾವು ಸ್ವಲ್ಪ ಸ್ಟ್ರೆಸ್ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಖ್ಯವಾಗಿ ಹೊಸ ಬೆಳವಣಿಗೆ ಏನೆಂದರೆ ಟ್ಯಾಕ್ಸ್. ಚಿತ್ರರಂಗಕ್ಕೆ ಸರ್ಕಾರದಿಂದ 100 ಪರ್ಸೆಂಟ್ ಟ್ಯಾಕ್ಸ್ ಫ್ರೀ ಬಂದಿದೆ. ಅದಕ್ಕಾಗಿ ನಮ್ಮ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ. ಯಾವ ರಾಜ್ಯದಲ್ಲೂ ಈ ಕೆಲಸ ಮಾಡಿರಲಿಲ್ಲ. ಮೊದಲಬಾರಿಗೆ ನಮ್ಮ ರಾಜ್ಯದಲ್ಲಿ 100 ಪರ್ಸೆಂಟ್ ನಮ್ಮ ಎಲ್ಲಾ ಚಲನಚಿತ್ರಗಳಿಗೆ ಫ್ರೀಯಾಗಿ ಕೊಟ್ಟಿರುತ್ತಾರೆ. ಈಗ ಹೊಸ ಪ್ರೆಷರ್ ಏನೆಂದರೆ, ಬೇರೆ ಭಾಷೆಯವರೂ ಕರ್ನಾಟಕದಲ್ಲಿ ನಮಗೂ ಫ್ರೀ ಮಾಡಿ ಎಂದು ಕೇಳುತ್ತಿದ್ದಾರೆ. ಇದನ್ನು ಏತಕ್ಕೋಸ್ಕರ ಮಾಡಬೇಕು? ನಮಗೆ ಟ್ಯಾಕ್ಸ್ ಫ್ರೀ ಕೊಟ್ಟಿದ್ದಾರೆಂದರೆ, ಅವರಿಗೆ ಟ್ಯಾಕ್ಸ್ ಏನೂ ಜಾಸ್ತಿ ಮಾಡಿಲ್ಲ. ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ಟ್ಯಾಕ್ಸ್ ಏನಿದೆ, ಅದನ್ನೇ ಕೊಡುತ್ತಿದ್ದಾರೆ. ನಾವು ಚಿತ್ರೋದ್ಯಮವನ್ನು ಇಂಪ್ರೂವ್ ಮಾಡಬೇಕೆಂದು ಹೇಳಿ, ಟ್ಯಾಕ್ಸ್ ಫ್ರೀ ಕೊಟ್ಟರೆ, ಇದು ನಮಗೆ ಸುದ್ದಿ ಅಷ್ಟೆ. ತಮಗೆ ಇದರಲ್ಲಿ ಯಾವ ತರಹ ಪ್ರೆಷರ್ ಬಂದಿದೆಯೋ ಗೊತ್ತಿಲ್ಲ. ತಮಿಳುನಾಡು ಸರ್ಕಾರದಿಂದ, ಆಂಧ್ರಸರ್ಕಾರದಿಂದ ತಮಗೆ ಪ್ರೆಷರ್ ಬಂದಿದೆ, ಈ ತರಹ ಟ್ಯಾಕ್ಸನ್ನು ಕಡಿಮೆ ಮಾಡಬೇಕೆಂದು. ತಾವು ಯಾವುದೇ ಕಾರಣಕ್ಕೂ ಆ ಮಾತಿಗೆ ಬಗ್ಗಬೇಡಿ. ಈಗ ತಾವು ಕೊಟ್ಟಿರುವುದು, ಕನ್ನಡ ಚಿತ್ರರಂಗ

ಮತ್ತು ಚಿತ್ರೋದ್ಯಮದ ಬಗ್ಗೆ ಇರತಕ್ಕ ಪ್ರೀತಿ, ಕಾಳಜಿಗೋಸ್ಕರ ಹಾಗೂ ಕನ್ನಡ ಚಿತ್ರೋದ್ಯಮ ಉಳಿಯಬೇಕು ಮತ್ತು ಚೆನ್ನಾಗಿ ಬೆಳೆಯಬೇಕೆಂದು ಕೊಟ್ಟಿದ್ದೀರಿ. ಆದ್ದರಿಂದ, ಯಾವುದೇ ಕಾರಣಕ್ಕೂ ಈ ವಿಚಾರದಲ್ಲಿ ತಮ್ಮ ನಿಲುವನ್ನು ಬದಲಾಯಿಸಬೇಡಿ. ಈಗೇನು ಅವರಿಗೆ ಟ್ಯಾಕ್ಸ್ ಹಾಕುತ್ತಿದ್ದೀರಿ, ಆ ಟ್ಯಾಕ್ಸನ್ನು ಹಾಗೆಯೇ ಮುಂದುವರಿಸಬೇಕು. ನಮಗೆ ಕೊಡುತ್ತಿರತಕ್ಕಂಥ ಟ್ಯಾಕ್ಸ್ ರಿಬೇಟ್ ಏನಿದೆ, ಅದು ಇದೇ ತರಹ ಮುಂದುವರಿಯಬೇಕು. ನೀವು ಯಾವುದಾದರೂ ಕಾರಣಕ್ಕೆ ಕಡಿಮೆಮಾಡಿದರೆ, ಈಗ ಏನು ನಮ್ಮ ಕನ್ನಡ ಚಿತ್ರೋದ್ಯಮ ಒಂದು ಸೆಕೆಂಡ್‌ಲೆಗ್‌ನಲ್ಲಿ ಏನು ಬೆಳೆಯುತ್ತಾ ಇದೆ, ಅದು ಮತ್ತೆ ಅಲ್ಲಿಗೇ ನಿಂತು ಹೋಗುತ್ತದೆ. ತಾವು ಇದರ ಬಗ್ಗೆ ಮನಸ್ಸಿಟ್ಟುಕೊಂಡು ಯಾವುದೇ ಪ್ರೆಷರ್‌ಗೆ ಬಗ್ಗಬಾರದೆಂದು ಹೇಳುವುದಕ್ಕೆ ಇಷ್ಟಪಡುತ್ತೇವೆ. ಇನ್ನು ಚಿತ್ರೋದ್ಯಮಕ್ಕೆ ನೀವು ಸಬ್ಸಿಡಿ ಕೊಡುತ್ತಾ ಇದ್ದೀರಿ. ಬಹಳಷ್ಟು ಪ್ರೋತ್ಸಾಹವನ್ನು ಮಾಡುತ್ತಿದ್ದೇವೆಂದು ನೀವು ಅಲ್ಲಲ್ಲಿ ಹೇಳುತ್ತಾ ಇದ್ದೀರಿ. ನಮಗೆ 2 ಪರ್ಸೆಂಟ್ ಟರ್ನ್ ಓವರ್ ಟ್ಯಾಕ್ಸ್ ಎಂದು ಹಾಕುತ್ತಾರೆ. ಅಂದರೆ ಬಹಳಷ್ಟು ಯೂನಿಟ್‌ಗಳ ಮೇಲೆ, ಚಿತ್ರ ಘಟಕಗಳ ಮೇಲೆ. ಅದನ್ನು ಸ್ವಲ್ಪ ಕಡಿಮೆ ಮಾಡುವ ಮನಸ್ಸು ಮಾಡಿದರೆ ಬಹಳ ಒಳ್ಳೆಯದಾಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅನೇಕ ಥಿಯೇಟರ್ ಓನರ್ಸ್ ಸರ್ಕಾರಕ್ಕೆ ರೆಪ್ರೆಸೆಂಟ್ ಮಾಡುತ್ತಿದ್ದಾರೆ, ಪ್ರೆಷರೈಸ್ ಮಾಡುತ್ತಾ ಇದ್ದಾರೆ. ಅವರಿಗೂ ಕೂಡ, ತಾವೇನು ಇವತ್ತು ಕನ್ನಡ ಚಿತ್ರಗಳಿಗೆ ತಾವು ರಿಯಾಯಿತಿ ಕೊಟ್ಟಿದ್ದೀರಿ, ಅದೇರೀತಿ ಕೊಡಬೇಕೆಂಬ ಪ್ರೆಷರ್ ಬೆಳೆಯುತ್ತಾ ಇದೆಯಂತೆ. ಒಂದುವೇಳೆ ತಾವು ಪುನಃ ಮಾಡಿದರೆ, ಇವರೆಲ್ಲರಿಗೂ ತೊಂದರೆಯಾಗುತ್ತದೆ ಎಂಬ ಭಾವನೆ ಬಂದಿದೆ. ಅದಕ್ಕೆ ದಯವಿಟ್ಟು ಈಗೇನು ತಮ್ಮ ನಿಲುವು ಇದೆ, ಆ ನಿಲುವನ್ನು ಮುಂದುವರಿಸಿ ಎಂಬುದು ಅವರೆಲ್ಲರ ಬೇಡಿಕೆ ಇದೆ. ತಮ್ಮಲ್ಲೂ ಕೂಡ ರೆಪ್ರೆಸೆಂಟೇಷನ್ ತೆಗೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಾಗಿದೆ.

(ಅಧ್ಯಕ್ಷರು ಶ್ರೀ ರಮೇಶ್‌ಕುಮಾರ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ. ಸಿ. ನಾಣಯ್ಯ : ಕನ್ನಡ ಚಲನಚಿತ್ರಕ್ಕೋಸ್ಕರ ಶೇಕಡ 100ರಷ್ಟು ರಿಯಾಯಿತಿ ಮಾಡಿರುವಂಥಾದ್ದು ತಮಗೆ ಗೊತ್ತಿದೆ. ನಿಮ್ಮ ಉದ್ಯಮದಿಂದ ಇದಕ್ಕೆ ಬೇಡಿಕೆ ಬರಲಿಲ್ಲ. ನಾವು ಶೇಕಡ 50ರಷ್ಟು ಕೊಡುತ್ತಾ ಇದ್ದೆವು. ಉತ್ತಮ ಗುಣಮಟ್ಟದ ಚಿತ್ರಗಳಿಗೆ ಮಾತ್ರ ನಾವು ಅದನ್ನು ಹುಡುಕಿ, ಶೇಕಡ 100 ರಷ್ಟು ವಿನಾಯಿತಿ ಕೊಡತಕ್ಕ ಕಾಲ ಇತ್ತು. ಒಂದು ವರ್ಷಕ್ಕೆ 5-6 ಚಿತ್ರಗಳಿಗೆ ಶೇಕಡ 100ರಷ್ಟು ರಿಯಾಯಿತಿಯನ್ನು ಕೊಡುತ್ತಿದ್ದೆವು. ನಾನು ಇದನ್ನು ಮನಗಂಡು ಈ ಚಿತ್ರೋದ್ಯಮಕ್ಕೆ ಶೇಕಡ 100ರಷ್ಟು ರಿಯಾಯಿತಿ ಕೊಡಬೇಕೆಂದು ಮುಖ್ಯಮಂತ್ರಿಗಳನ್ನು ಹಾಗೂ ಹಣಕಾಸಿನ ಸಚಿವರನ್ನು ಭೇಟಿ ಮಾಡಿ 100ರಷ್ಟು ರಿಯಾಯಿತಿಯನ್ನು ಕೊಡಲಾಯಿತು. ಆದರೆ, ಈ ಟ್ಯಾಕ್ಸ್ ಸಿಸ್ಟಂ ಎಂಬ ಪದ್ಧತಿ ಯಾವುದಿತ್ತು, ಅದನ್ನು ಸ್ವಲ್ಪ ಮಟ್ಟಿಗೆ ಪರಿಷ್ಕರಣೆ ಮಾಡುವ ಸಂದರ್ಭದಲ್ಲಿ, ಪರಭಾಷೆ ಚಿತ್ರಗಳಿಗೆ ಅವರು ಸಲ್ಲಿಸತಕ್ಕ ಟ್ಯಾಕ್ಸ್ ಸ್ಟ್ರಕ್ಚರ್ ಏನಿತ್ತು, ಅದು ಬಹಳ ಮಟ್ಟಿಗೆ ಜಾಸ್ತಿಯಾಯಿತು. 16-17 ರೂಪಾಯಿ ಇದ್ದ ಟಿಕೆಟ್ ಈ ಟ್ಯಾಕ್ಸ್ ಸ್ಟ್ರಕ್ಚರನ್ನು ಪರಿಷ್ಕರಣೆ ಮಾಡಿದ್ದರಿಂದ, ಪರಭಾಷೆ ಚಿತ್ರಗಳಿಗೆ ಅನು ಕೆಲವು ಸಂದರ್ಭದಲ್ಲಿ 27-28-30 ರೂಪಾಯಿಗಳಿಗೂ ಹೋಯಿತು. ಅಂತಹ ಸಂದರ್ಭದಲ್ಲಿ

ಕನ್ನಡ ಚಲನಚಿತ್ರ ಮಂಡಳಿ ಅಧ್ಯಕ್ಷರಾದಿಯಾಗಿ ಎಲ್ಲರೂ ಬಂದು ನಮ್ಮನ್ನು ಭೇಟಿ ಮಾಡಿದ್ದಾರೆ. ಪರಭಾಷೆ ಚಿತ್ರದವರು ಬರುವುದಕ್ಕೆ ಮುಂಚೆ ನಮ್ಮ ಕನ್ನಡ ಚಲನಚಿತ್ರ ಮಂಡಳಿಯಲ್ಲಿರತಕ್ಕ ಎಲ್ಲರೂ, ಅದರಲ್ಲಿರತಕ್ಕ ನಿರ್ಮಾಪಕರು, ನಿರ್ದೇಶಕರು, ನಟರು, ನಟಿಯರು ಎಲ್ಲರೂ ಬಂದು ತಾವು ಇದರ ಬಗ್ಗೆ ಗಮನಹರಿಸಬೇಕೆಂದು ಹೇಳಿದ್ದಾರೆ. ಮತ್ತು ನಮ್ಮ ಹಣಕಾಸಿನ ಸಚಿವರ ಜೊತೆ ಚರ್ಚೆಯನ್ನೂ ಮಾಡಿದ್ದಾರೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ಇದರ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಬಹಳಷ್ಟು ಕಾಲದಿಂದಲೂ ನಡೆದುಕೊಂಡು ಬರುತ್ತಿದ್ದರೂ ಕೂಡ ನಷ್ಟದಲ್ಲಿಯೇ ಇದೆ. ಈ ಸಂಸ್ಥೆಗೆ ತಾವು ಮೊದಲು 52 ಲಕ್ಷ ರೂಪಾಯಿಗಳನ್ನು ಕೊಟ್ಟು ಸಾಲವಾಗಿ ಅದಕ್ಕೆ ಬಡ್ಡಿ ಸೇರಿ ಈಗ ಒಂದು ಕೋಟಿ 25 ಲಕ್ಷ ರೂಪಾಯಿ ಆಗಿದೆ. ಅದಕ್ಕೆ ತಾವು ಏನಾದರೂ ಒಂದು ರೀತಿಯ ಕ್ರಮ ತೆಗೆದುಕೊಂಡು ಅನುಕೂಲ ಮಾಡಿಕೊಡಬೇಕು. ಏಕೆಂದರೆ ಸರ್ಕಾರ ಅಲ್ಲಿ ಏನೂ ಅಭಿವೃದ್ಧಿ ಕೆಲಸಗಳು ಮಾಡಿಲ್ಲ. ಕ್ಯಾಮರಾ ಇರಬಹುದು, ಸ್ಟುಡಿಯೋ ಇರಬಹುದು, ನಮಗೆ ಏನು ಸೌಲಭ್ಯಗಳು ಬೇಕೋ ಆ ಎಲ್ಲಾ ಸೌಲಭ್ಯಗಳನ್ನು ಈ ಒಂದು ನಿಗಮಕ್ಕೆ ಕೊಟ್ಟರೆ ಈಗ ತಾವು ಏನು ನಷ್ಟವನ್ನು ತೋರಿಸುತ್ತಿದ್ದೀರಿ ಅದನ್ನೆಲ್ಲಾ ಬದಿಗೊತ್ತಬಹುದು. ಈ ನಿಗಮಕ್ಕೆ ಯಾವುದೇ ಒಂದು ಸ್ಥಳ ಎಂದು ಇಲ್ಲ. ಈ ಒಂದು ನಿಗಮ ಪುಟ್ಟಣ ಚಿತ್ರಮಂದಿರದ ಒಂದು ಕೊಠಡಿಯಲ್ಲಿ ನಡೆಯುತ್ತಿದೆ. ಮೊದಲು ಈ ನಿಗಮಕ್ಕೆ ಮಿಲ್ಲರ್ಸ್ ರಸ್ತೆಯಲ್ಲಿ ಒಂದು ಜಾಗವನ್ನು ಕೊಟ್ಟಿದ್ದಿರಿ. ಅದನ್ನು ಈಗ ಬೇರೆ ಒಂದು ಉದ್ದೇಶಕ್ಕೆ ಆ ಜಾಗವನ್ನು ಕೊಟ್ಟಿದ್ದಾರೆ. ಈಗ ಶಂಕರನಾಗ್ ಚಿತ್ರಮಂದಿರ ಇದೆ. ಅದನ್ನು ಅದಕ್ಕೆ ವಹಿಸಿ ಕೊಡಿ. ಆಗ ಅದಕ್ಕೆ ಒಂದು ಆದಾಯ ಬರುತ್ತದೆ. ಅದೇ ರೀತಿ ಪುಟ್ಟಣ್ಣ ಚಿತ್ರಮಂದಿರ. ಇವುಗಳನ್ನು ಈ ನಿಗಮಕ್ಕೆ ವಹಿಸಿಕೊಟ್ಟರೆ ಆಗ ಒಂದು ಆದಾಯ ಬರುತ್ತದೆ. ಆಗ ಈ ನಿಗಮ ಸರಿಯಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ಘಟಕಕ್ಕೆ ಅವರು ಬಹಳಷ್ಟು ಸೌಲಭ್ಯಗಳನ್ನು ಮಾಡಬೇಕೆಂದು ಇದ್ದರೂ ಕೂಡ ಈ ನಿಗಮದ ಅಧ್ಯಕ್ಷ ಆರ್.ಬಿ. ಹರೀಶ್ ಅವರಿಂದ ಒಂದು ವರದಿನ್ನೂ ಸಹ ತರಿಸಿದ್ದೇವೆ. ತಮಗೂ ಸಹ ಈ ವರದಿಯ ಪ್ರತಿಯನ್ನು ಅವರು ಕೊಟ್ಟಿರಬಹುದು. ಏನೇನು ಸೌಲಭ್ಯ ಬೇಕು, ಏನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದು ಇದರಲ್ಲಿ ಇದೆ, ಅವರಿಗೆ ಮಾಡಬೇಕೆನ್ನುವ ಪ್ರಾಮಾಣಿಕ ಮನಸ್ಸು ಇದೆ. ಆ ವರದಿಯಪ್ರತಿಯನ್ನು ಬೇಕಾದರೆ ತಮಗೆ ತಲುಪಿಸುತ್ತೇನೆ. ಅವರು ಪಡುತ್ತಿರುವ ಕಷ್ಟಗಳು, ಅವರು ಸಾಲದಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿರುವ ಎಲ್ಲಾ ವಿಚಾರಗಳನ್ನು ಈ ವರದಿಯಲ್ಲಿ ಬರೆದಿದ್ದಾರೆ. ಈಗ ತಾವು ಏನು ಚಿತ್ರನಗರಿ ಎಂದು ಮಾಡುತ್ತಿದ್ದೀರಿ, ಅದನ್ನು ಕೂಡ ಇದರಲ್ಲಿ ಬರೆದಿದ್ದಾರೆ. ಈಗ ಒಂದು ಹೊಸ ಸುದ್ದಿ ಏನೆಂದರೆ ತಾವು ಏನು 336 ಎಕರೆ ಜಮೀನನ್ನು ಅಭಿವೃದ್ಧಿ ಮಾಡಲು ಕೊಟ್ಟಿದ್ದೀರಿ ಅದನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ವಶಪಡಿಸಿಕೊಳ್ಳುವ ಸೂಚನೆ ಇದೆ ಎನ್ನುವ ಸೂಚನೆ. ಅದನ್ನು ತಾವು ಚೆಕ್ ಮಾಡಿದರೆ ಒಳ್ಳೆಯದು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, 300 ಎಕರೆ ಜಮೀನು ಏನು ಇದೆ ಒಂದು ಚಿತ್ರನಗರ ಸ್ಥಾಪನೆ ಮಾಡಬೇಕೆಂದು ಹೇಳಿ ಆ ಜಮೀನಿನಲ್ಲಿ ಸರ್ಕಾರ ಮತ್ತು ಚಿತ್ರೋದ್ಯಮದವರು

ಎಲ್ಲರೂ ಸೇರಿ ತೀರ್ಮಾನ ಮಾಡಬೇಕು ಎಂಬ ಒಂದು ಕಾರ್ಯಕ್ರಮ ಇತ್ತು. ಅದರಲ್ಲಿ 10 ಎಕರೆ ಜಮೀನನ್ನು ಶ್ರೀಮತಿ ಪ್ರತಿಮಾಬೇಡಿ ಎನ್ನುವವರಿಗೆ ನೃತ್ಯಗ್ರಾಮಕೋಸ್ಕರ ಕೊಟ್ಟಿದ್ದೆವು. ಅದರಲ್ಲಿ 10 ಎಕರೆ ಜಮೀನನ್ನು ಪ್ರಸಾದ್ ಸ್ಟುಡಿಯೋ ಎನ್ನತಕ್ಕಂಥಾದ್ದಕ್ಕೆ ಕೊಟ್ಟಿದ್ದೇವೆ. ನಾನು ಹೋಗಿ ಅದನ್ನೆಲ್ಲಾ ನೋಡಿ ಬಂದು ಆದ ಮೇಲೆ ಎಲ್ಲಾ ಜನರಿಗೂ ಆ ಒಂದು ಜಮೀನಿನ ಮೇಲೆ ಕಣ್ಣು. ನಾನು ಅಧಿಕಾರಕ್ಕೆ ಬಂದ ಮೇಲೆ ನನಗೆ ಒಂದು 10 ಎಕರೆ ಜಮೀನು ಕೊಡಿ ಎಂದು ಬಹಳ ಜನರು ಬಂದರು. ಆ ಜಾಗ ಬೆಂಗಳೂರಿನಿಂದ 26 ಕಿಲೋಮೀಟರ್ ದೂರದಲ್ಲಿದೆ. ನಾನು ಇದನ್ನೆಲ್ಲಾ ನೋಡಿ ಆದಮೇಲೆ ಈ ಬೆಂಗಳೂರು ನಗರ ಬಹಳ ಬೃಹದಾಕಾರವಾಗಿ ಬೆಳೆಯುತ್ತಿದೆ, ಬೆಂಗಳೂರು ನಗರದಲ್ಲಿರತಕ್ಕಂಥ 60ಲಕ್ಷ ಜನರಿಗೆ ಕೆಲವು ವರ್ಷಗಳು ಹೋದಮೇಲೆ ಅವರು ಸೇವನೆ ಮಾಡಲಿಕ್ಕೆ ಬೇಕಾದಂತಹ ಆಮ್ಲಜನಕ ಸಿಗುವುದಿಲ್ಲ ಎಂದು ಹೇಳಿ ನಾನು ಯೋಚನೆ ಮಾಡಿದ್ದು ನಿಜ, ಅದನ್ನು ಮಿನಿ ಫಾರೆಸ್ಟ್ ಮಾಡಿ ಸಂಪೂರ್ಣವಾಗಿರತಕ್ಕಂಥ ಒಂದು ಲಂಗ್ ಸ್ಪೇಸ್ ಆಗಿ ಬೆಂಗಳೂರು ನಗರಕ್ಕೆ ನಾವು ಅದನ್ನು ಕಾಯ್ದಿರಿಸಬೇಕೆಂದು ಚಿಂತನೆ ಮಾಡಿರತಕ್ಕಂಥಾದ್ದು ನಿಜ. ಇವತ್ತೂ ನನಗೆ ಆ ಚಿಂತನೆ ಇದೆ. I must convert the same into a Mini-Forest. ಅಂದರೆ ಬೆಂಗಳೂರು ನಗರಕ್ಕೆ ಒಂದು ಲಂಗ್ ಸ್ಪೇಸ್ ಆಗಿ ಉಳಿದುಕೊಳ್ಳಬೇಕೆಂದು ಎನ್ನುವ ನನ್ನ ಚಿಂತನೆಯಲ್ಲಿ ನಾನು ಆ ಕಾಲದಲ್ಲಿ ಹೇಳಿದ್ದೇನೆ. ಇದರ ಬಗ್ಗೆ ಕಾರ್ಯಕ್ರಮ ಏನೂ ಆಗಲಿಲ್ಲ. ಆದರೆ ತಾವು ದಯವಿಟ್ಟು ಒಂದನ್ನು ಹೇಳಿ, ಸರ್ಕಾರ ತಮಗೆ ಬೇಕಾದಷ್ಟು ರಿಯಾಯಿತಿಗಳನ್ನು ಕೊಟ್ಟು, 1985ನೇ ಇಸವಿಯಿಂದ ಶುರುವಾಗಿ ಇದುವರೆವಿಗೂ ಸುಮಾರು 26 ಕೋಟಿ ರೂಪಾಯಿಗಳಿಗಿಂತ ಹೆಚ್ಚುಸಬ್ಸಿಡಿಯನ್ನು ಕೊಟ್ಟಿದ್ದೇವೆ. ಶೇಕಡ 50ರಷ್ಟು ಇದ್ದ ಮನರಂಜನಾ ತೆರಿಗೆಯನ್ನು ಶೇಕಡ 100ರಷ್ಟು ಮಾಡಿ ಕೊಟ್ಟಿದ್ದೇವೆ. ಒಂದು ವರ್ಷಕ್ಕೆ 34 ಕೋಟಿ ರೂಪಾಯಿಗಳ ಮನರಂಜನಾ ತೆರಿಗೆ ರಿಯಾಯಿತಿಯನ್ನು ಕೊಡುತ್ತಿದ್ದೇವೆ. ಅದರ ಜೊತೆಗೆ ಪುನಃ ನೀವು ಸಬ್ಸಿಡಿ ಬೇಕು ಎಂದು ಕೇಳುತ್ತಿದ್ದೀರಿ. ಚಿತ್ರನಗರಿ ಎಂದು ಮಾಡಬೇಕು ಎಂದು ಕೇಳುತ್ತಾ ಇರತಕ್ಕಂಥಾದ್ದು, ಮತ್ತು ಈ ಒಂದು ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇಷ್ಟೆಲ್ಲಾ ಆದರೂ ಕೂಡ ಈ ಕನ್ನಡ ಚಿತ್ರೋಧ್ಯಮದಲ್ಲಿ ತೊಡಗಿರತಕ್ಕಂಥ ನಿರ್ಮಾಪಕರು, ನಿರ್ದೇಶಕರು, ಬಾಕಿ ಇರತಕ್ಕಂಥ ಎಲ್ಲರೂ ನಿಮ್ಮ ಕೊಡುಗೆ ಈ ಚಲನಚಿತ್ರವನ್ನು ಬೆಳೆಸುವುದಕ್ಕೆ ವಿಸ್ತರಿಸುವುದಕ್ಕೆ ಏನು? ನಾವು ಚಲಸಚಿತ್ರ ಪ್ರಶಸ್ತಿ ಎಂದು ಒಂದು ವರ್ಷಕ್ಕೆ ಒಮ್ಮೆ ಮಾಡುತ್ತೇವೆ, ಉತ್ತಮ ಚಲನಚಿತ್ರದ ನಿರ್ದೇಶಕರು ಮತ್ತು ನಿರ್ಮಾಪಕರಿಗೆ, ಒಂದು ವರ್ಷಕ್ಕೆ 22 ಲಕ್ಷ ರೂಪಾಯಿಗಳನ್ನು ಸರ್ಕಾರದ ವತಿಯಿಂದ ಪೂರ್ತಿ ಖರ್ಚುಮಾಡುತ್ತೇವೆ 34 ಕೋಟಿ ರೂಪಾಯಿ ರಿಯಾಯಿತಿ ಕೊಟ್ಟಿದ್ದೇವೆ. ಇದರ ಮೇಲೆ ಈಗ ಸಬ್ಸಿಡಿ ಎಂದು ಹೇಳುತ್ತಾ ಇರತಕ್ಕಂಥಾದ್ದು ನಿಜ, ಒಂದು ತೀರ್ಮಾನಕ್ಕೆ ಬಂದಿದ್ದೇನೆ. ನೀವು ಹೇಳುತ್ತಾ ಇರತಕ್ಕಂಥ ವಿಚಾರದಲ್ಲಿ ನಮ್ಮ ವಿಚಾರದಲ್ಲಿ ಸರ್ಕಾರದ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ಬಹಳ ದೂರದ ಅಂತರ ಇದೆ. ಇಷ್ಟೆಲ್ಲಾ ಮಾಡಿ ಆದ ಮೇಲೂ ಕೂಡ ನಿಮ್ಮ ಒಂದು ಕೊಡುಗೆ ಈ ಚಿತ್ರೋದ್ಯಮಕ್ಕೆ ನಾನು ಕಳೆದ ಎರಡೂವರೆ ವರ್ಷಗಳಿಂದ ನೋಡುತ್ತಿದ್ದೇನೆ. ನಿಮ್ಮ ಕೊಡುಗೆ ಏನು? 60 ವರ್ಷದ ಹುಟ್ಟು ಹಬ್ಬವನ್ನು ಮಾಡಬೇಕು ಎಂದು ನೀವೆಲ್ಲಾ ತೀರ್ಮಾನ ಮಾಡಿದಿರಿ. ನಮ್ಮ ಕನ್ನಡ ಚಿತ್ರರಂಗ ಬಂದು 60 ವರ್ಷ ಆಯಿತು. ಅದಕ್ಕೆ ಒಂದು ಹುಟ್ಟು ಹಬ್ಬ ಆಚರಣೆ ಮಾಡಬೇಕೆಂದು ಹೇಳುತ್ತಾ ಇರತಕ್ಕಂಥಾದ್ದು. ಅದನ್ನು ಆಚರಣೆ ಮಾಡುವುದಕ್ಕೆ ಒಂದು ಸಮಿತಿ ರಚನೆ ಮಾಡಿದರು.

ಅಲ್ಲಿ ಸರ್ಕಾರದ ವತಿಯಿಂದ ನೀವು ಏನು ಕೊಡುತ್ತೀರಿ ಎಂದು ಕೇಳಿದರು. ಎಲ್ಲಾ ಸರ್ಕಾರದ ವತಿಯಿಂದ ಕೊಡಬೇಕೆಂದು ಹೇಳಿದಾಗ ನಿಮ್ಮ ಕೊಡುಗೆ ಏನು ಎಂಬುದನ್ನು ಸ್ವಲ್ಪ ದಯವಿಟ್ಟು ಹೇಳುತ್ತೀರಾ?

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಬಹಳ ಸೂಕ್ತವಾದ ಪ್ರಶ್ನೆ. ಏಕೆಂದರೆ ಇಷ್ಟು ವರ್ಷ ಇಲ್ಲಿ ಕುಳಿತುಕೊಂಡು ಯಾರು ಬೇಕಾದರೂ ಪ್ರಶ್ನೆ ಕೇಳಬಹುದು, ಆದರೆ ಅಲ್ಲಿಂದ ಈ ರೀತಿಯ ಪ್ರಶ್ನೆ ಬಂದಿರಲಿಲ್ಲ ಅದಕ್ಕೆ ನಾನು ಒಂದು ಸೂಕ್ತವಾದ ಉತ್ತರ ಕೊಡುತ್ತೇನೆ. ಈ ಕೊಡುಗೆ ಏನೆಂದರೆ ಲಾ ಅಂಡ್ ಆರ್ಡರ್. ನೀವು ಏನು 3 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೂ ಕೆಲಸ ಇಲ್ಲದೆ ಅಲೆಯುತ್ತಾ ಇರುತ್ತಾನೆ ಒಬ್ಬ ಯುವಕ, ಯುವತಿ ಮನರಂಜನೆಗೋಸ್ಕರ, ತಮಗೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇಲ್ಲದೇ ಇರುವ ರೀತಿಯಲ್ಲಿ ಮಾಡುತ್ತಾ ಇರುವುದೇ ಈ ಮನರಂಜನೆ. ನೀವು ನಮಗೆ ಯಾವ ತರಹದ ಸೌಲಭ್ಯ ಕೊಟ್ಟಿಲ್ಲ. ನಮ್ಮಲ್ಲಿ ಯುವಕ, ಯುವತಿಯರು ಆಟ ಆಡುವುದಕ್ಕೆ ಮೈದಾನ ಇಲ್ಲ ನಮ್ಮಲ್ಲಿ ಗ್ರಂಥಾಲಯಗಳು ಇಲ್ಲ. ನಮ್ಮ ಸಮಾಜದ ಯುವಕರು, ಯುವತಿಯರು ಸಮಾಜದ ಎಲ್ಲಾ ವರ್ಗದವರು ತೊಂದರೆ ಇಲ್ಲದೆ ಚಿತ್ರನೋಡಿ ಬರುತ್ತಿರುವಂತೆ ಮಾಡುತ್ತಿರುವುದೇ ಈ ಚಿತ್ರೋದ್ಯಮ. ಚಿತ್ರೋದ್ಯಮ ಇಲ್ಲ ಅಂದರೆ ನಾವು ಎಲ್ಲಾ ರಸ್ತೆ ಮೇಲೆ ಇರುತ್ತಿದ್ದೆವು.

ಅಧ್ಯಕ್ಷರು : ಯಾವ ಯುವಕರು ರಸ್ತೆ ಮೇಲೆ ಬಂದು ಹಸಿವಿನ ಬಗ್ಗೆ ನಿರುದ್ಯೋಗದ ಬಗ್ಗೆ, ಈ ದೇಶದಲ್ಲಿ ಆಗುತ್ತಿರುವಂತಹ ಅನ್ಯಾಯದ ಬಗ್ಗೆ ಹೋರಾಟ ಮಾಡಬೇಕಾಗಿತ್ತೋ ಅವರೆಲ್ಲಾ ಹೋಗಿ ಥಿಯೇಟರ್‌ಗಳಲ್ಲಿ ಕುಳಿತುಬಿಟ್ಟಿದ್ದಾರೆ, ಹಾಗಾಗಿ ರಸ್ತೆಗಳೆಲ್ಲಾ ಖಾಲಿ ಆಗಿವೆ. ಹೋರಾಟಗಳು ಇಲ್ಲ. ನಾನು ಹೋದ ಸಭೆಗಳಲ್ಲಿ ಹೇಳುವುದೇ ಇದು. ಯುವಕರು ಸಿಟ್ಟನ್ನು ಸಂಪೂರ್ಣ ಸ್ಥಗಿತಗೊಳಿಸಿ ಅವರನ್ನೆಲ್ಲಾ ಕೂಡ ನಿರ್ವೀರ್ಯರನ್ನಾಗಿ ಮಾಡಿರತಕ್ಕಂಥಾದ್ದು.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನೀವು ಹೇಳುತ್ತಾ ಇರತಕ್ಕಂಥಾದ್ದು ಯಾವುದೋ ಒಂದು ವರ್ಗದ ಬಗ್ಗೆ ಇರಬಹುದು. ಸಾಮಾನ್ಯವಾಗಿ ಬೆಳಗ್ಗೆಯಿಂದ ಕಾಲೇಜಿಗೆ ಹೋಗಿ ಬಂದು ಮನೆಯಲ್ಲಿ ಕಾಲ ಕಳೆಯುವುದಕ್ಕೆ ಆಗದೇ ಮನರಂಜನೆ ಬೇಕೆಂದಾಗ ಕೊಡುತ್ತಿರುವುದೇ ಈ ಚಲನಚಿತ್ರೋದ್ಯಮ. ಅಂದರೆ ನೀವು ಹೇಳುವ ರೀತಿಯಲ್ಲಿ ಗಲಾಟೆಗಳನ್ನೇ ಮಾಡಿಕೊಂಡು......

ಅಧ್ಯಕ್ಷರು : ಹೋರಾಟ, ಗಲಾಟೆ ಅಲ್ಲ.

ಶ್ರೀ ಕುಮಾರ್ ಬಂಗಾರಪ್ಪ : ಅದೇ ನೀವು ಹೇಳುತ್ತಿರುವ ಹೋರಾಟ ಮಾಡಬೇಕು ಅಂದರೆ ಸಾಧನೆ ಮಾಡಬೇಕು ಅಂದರೆ ಅದಕ್ಕೆ ನಮ್ಮ ಹಿರಿಯರು....

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಇದಕ್ಕೆಲ್ಲಾ ನಿರುದ್ಯೋಗವೇ ಕಾರಣ. ಆ ಯುವಕರಿಗೆ ನಾವು ದೂರ ಇಟ್ಟಿರುತ್ತೇವೆಯಲ್ಲಾ ಮೀಸಲಾತಿಯಲ್ಲಿ, ಅದಕ್ಕೆ ನಾನು ಹೇಳಿದೆ ಮೊನ್ನೆ ಕ್ಲಾರಿಫಿಕೇಷನ್ ಕೇಳುತ್ತಾ, ಇವತ್ತು ಯುವಕರು ಯಾರು ಕೆಲಸದಲ್ಲಿ ಇರಬೇಕೋ ಅವರನ್ನು ದೂರ ಇಟ್ಟು, ಯಾರು ಕೆಲಸ ಮಾಡುವುದಕ್ಕೆ ಅಭಿರುಚಿಇಲ್ಲ ಅಥವಾ ಸಹಿಸಿಕೊಳ್ಳಬಲ್ಲರೋ ಅವರನ್ನು ನಾವು ಕರೆದುಕೊಂಡು

ಬಂದು ಕೆಲಸ ಮಾಡಿ ಎಂದು ಹೇಳುವಂತಹ ಸ್ಥಿತಿ, ಕೆಲಸ ಮಾಡುವಂತಹವರಿಗೆ ನೀವು ಒಳಗಿರು ಎಂದು ಹೇಳುವಂತಹ ಸ್ಥಿತಿ ಇದೆ. ಈ ಒಂದು ವಿಪರ್ಯಾಸದಿಂದ ಆ ಒಂದು ಹೋರಾಟ ಅಶ್ಲೀಲತೆ, ಇವೆಲ್ಲಾ ಉದ್ಭವವಾಗುವುದಕ್ಕೆ ಕಾರಣ ಆಗಿದೆ.

ಅಧ್ಯಕ್ಷರು : ಚರ್ಚೆ ಆಗುವಾಗ ಮಧ್ಯೆ ಪ್ರವೇಶಿಸಿ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈಗಾಗಲೇ ಎಲ್ಲರೂ ಮಾತನಾಡುವಾಗ ನಾನೇ ಜಾಸ್ತಿ ಮಾತನಾಡಿದ್ದೇನೆ ಎನ್ನುವ ಭಾವನೆ ಇದೆ. ಸಮಕಾಲಿನ ಸಮಯದಲ್ಲಿರತಕ್ಕಂಥ ಅನ್ಯಾಯಗಳ ವಿರುದ್ಧ ಸಿಡಿದೇಳಬೇಕಾಗಿರತಕ್ಕಂಥವರು ಯುವಕರು. ಅವರು ಈ ರೀತಿ ಮಾಡಬೇಕಾದರೆ ಅದಕ್ಕೆ ಪೂರಕವಾದಂತಹ ಒಂದು ವಾತಾವರಣ ಇರಬೇಕಾಗುತ್ತದೆ. ಇಲ್ಲಿ ಅವರು ಆ ಧೋರಣೆಯನ್ನು ತೆಗೆದುಕೊಳ್ಳಲಾರದಂತಹ ಸ್ಥಿತಿಗೆ ತಲುಪುವುದಕ್ಕೆ ಇವತ್ತು ನಮ್ಮ ಸಾಂಸ್ಕೃತಿಕ ಮಾಧ್ಯಮಗಳು ಇವತ್ತಿನ ದಿವಸ ಅವರ ಜೊತೆಗೆ ಸಹಕರಿಸುತ್ತಿವೆ. ಚೈನಾದೇಶದಲ್ಲಿ ಇಡೀ ಬದಲಾವಣೆಯನ್ನು ಸಾಂಸ್ಕೃತಿಕ ಚಳುವಳಿಯ ಮುಖಾಂತರವೇ ತಂದಿದ್ದು. ನಮ್ಮಲ್ಲಿ ಏನಾಗಿದೆ ಅಂದರೆ ಅದು ಬೇರೆ ದಿಕ್ಕಿನಲ್ಲಿ ಹೊರಟಿದೆ ಎನ್ನತಕ್ಕಂಥ ವ್ಯಥೆಯನ್ನು ನಾನು ಹೇಳುತ್ತಿದ್ದೇನೆ. ನಾನು ಯಾರ ಮೇಲೂ ಆರೋಪಣೆ ಮಾಡುತ್ತಿಲ್ಲ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಹೇಳುವ ತರಹ ಎಲ್ಲಾ ಟಿ.ವಿ. ಚಾನಲ್ ಮತ್ತು ಸ್ಯಾಟಲೈಟ್ ಚಾನಲ್‌ಗಳನ್ನು ಬ್ಯಾನ್ ಮಾಡಬೇಕೆಂದು ಹೇಳುತ್ತಿದ್ದೀರಿ.

ಅಧ್ಯಕ್ಷರು : ಬ್ಯಾನ್ ಮಾಡಬೇಕೆಂದು ನಾನು ಹೇಳುತ್ತಿಲ್ಲ. ನಾನು ನಿಮಗೆ ನೇರವಾದ ಒಂದು ಪ್ರಶ್ನೆ ಕೇಳುತ್ತೇನೆ. ಒಬ್ಬ,8 ಮತ್ತು9ನೇ ತರಗತಿಯಲ್ಲಿ ಓದುತ್ತಿರುವ ಹುಡುಗನಿಗೆ ಲಾಲಾಲಜಪತರಾಯ್, ಭಗತ್‌ಸಿಂಗ್, ಸುಖದೇವ್, ರಾಜಗುರು, ಮತ್ತು ಮೈಕೆಲ್‌ಜಾಕ್ಸನ್ ಹಾಗು ರಜನಿಕಾಂತ್ ಮತ್ತು ವಿಷ್ಣುವರ್ಧನ್ ಇವರೆಲ್ಲರ ಫೋಟೋಗಳನ್ನು ಇಟ್ಟು, ಇವರೆಲ್ಲರೂ ಯಾರ್‍ಯಾರು ಎಂದು ಕೇಳಿದರೆ, ಚಲನಚಿತ್ರದಲ್ಲಿ ಇರುವವರನ್ನು ಬಿಟ್ಟು ಅವರು ಯಾವ ಕಾರಣಕ್ಕೂ ಕೂಡ ಭಗತ್‌ಸಿಂಗ್, ಲಾಲಾಲಜಪತರಾಯ್, ಸುಖದೇವ್, ರಾಜಗುರು ಇವರನ್ನು ಐಡೆಂಟಿಫೈ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈ ದೇಶಕ್ಕಾಗಿ ಪ್ರಾಣ ತ್ಯಾಗಮಾಡಿದಂಥ ಈ ವ್ಯಕ್ತಿಗಳ ಗುರುತನ್ನು ಇಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲ. ಈಗ ಚಲನಚಿತ್ರಗಳ ಕಡೆಗೆ ಹೆಚ್ಚಿನ ಗಮನವನ್ನು ಕೊಡುತ್ತಿದ್ದಾರೆ, ತಂದೆ-ತಾಯಿಯಂದಿರು ಇರುವುದರಿಂದ ನಾವು ಬಂದಿದ್ದು, ಈ ದೇಶಕ್ಕೆ ಸ್ವಾತಂತ್ರ ತಂದುಕೊಟ್ಟ ಹೋರಾಟಮಾಡಿರುವವರು ತಂದೆ-ತಾಯಿಗಿಂಥ ಹೆಚ್ಚು ಅಲ್ಲವೇ, ಇದರ ಬಗ್ಗೆ ತಿಳುವಳಿಕೆ ಬೇಡ ಎಂದರೆ......

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನೀವು ಹೇಳಿದ ಮಾತಿಗೆ ಒಂದು ಮಾತನ್ನು ಹೇಳುತ್ತೇನೆ, ಅಂದರೆ ಈಗ ಚಲನಚಿತ್ರಗಳು ಒಂದು ವಾರ ಅಥವಾ ಎರಡು ವಾರಗಳು ಪ್ರದರ್ಶನಗೊಳ್ಳಬಹುದು, ಆದರೆ ಗಾಂಧಿ ಚಿತ್ರ ಇವತ್ತು ಪ್ರಪಂಚದ ಎಲ್ಲಾ ಭಾಗದಲ್ಲಿ ಪ್ರದರ್ಶನಗೊಂಡು, ಇವತ್ತು ಏಕೆ ಹೆಸರು ಮಾಡಿತು. ಗಾಂಧಿ ಚಿತ್ರವನ್ನು ಸ್ಕೂಲ್ ಮಕ್ಕಳಿಂದ ಹಿಡಿದು ಹಿರಿಯರು ಮತ್ತು ಎಲ್ಲರೂ ಅಂದರೆ ಒಟ್ಟಾರೆ ಎಲ್ಲರೂ ನೋಡಿದ್ದೇವೆ, ಒಂದು ಸಲ, ಹತ್ತು ಹತ್ತು ಸಲ ನಾವೆಲ್ಲಾ ನೋಡಿದ್ದೇವಲ್ಲ,

ಶ್ರೀ ಆರ್. ಶ್ರೀನಿವಾಸ್ : ಅದಕ್ಕೆ ಅಂಥ ಚಿತ್ರಗಳನ್ನು ಮಾತ್ರ ಪ್ರದರ್ಶನ ಮಾಡಿ, ಈಗ ಇರತಕ್ಕಂಥ ಚಿತ್ರ ಏನು ಇದೆ, ಇದನ್ನು ಅನೇಕ ಯುವಕರು ನೋಡುತ್ತಿರುವುದರಿಂದ, ಇವತ್ತು ಕಳ್ಳತನಗಳು, ದರೋಡೆಗಳು, ರೌಡಿಯಿಸಂ ಈ ರೀತಿ ಎಲ್ಲಾ ನಿಮ್ಮ ಚಿತ್ರಗಳನ್ನು ನೋಡಿ ಅನೇಕ ಜನ ಯುವಕರೆಲ್ಲಾ ಕೆಡುತ್ತಿದ್ದಾರೆ, ಮತ್ತು ಯುವತಿಯವರು ಕೆಡತಕ್ಕಂಥ ಪರಿಸ್ಥಿತಿ....

ಶ್ರೀ ಜಿ. ಚಂದ್ರಣ್ಣ : ಅವರ ಚಿತ್ರಗಳು ಯುವ ಜನಾಂಗದ ಮೇಲೆ ದುಷ್ಪರಿಣಾಮ ಬೀರಿಲ್ಲ, ಈಗಿನ ಚಿತ್ರೋದ್ಯಮಗಳ ಬಗ್ಗೆ ಹೇಳಬೇಕಾದರೆ ಒಳ್ಳೆಯದನ್ನು ಬಿಟ್ಟು ಬಿಡುತ್ತಾರೆ, ಕೆಟ್ಟದನ್ನು ಮಾತ್ರ ಆರಿಸಿಕೊಳ್ಳುತ್ತಾರೆ.

ಶ್ರೀ ಜಿ. ಬಿ. ಶಿವಕುಮಾರ್ : ಕುಮಾರ ಬಂಗಾರಪ್ಪರವರೇ, ಕೆಲವರು ನಿರೀಕ್ಷಿಸಿ ಬರೆಯುತ್ತಾರಲ್ಲಾ ಅವರಿಗೆ ಸ್ವಲ್ಪ ಹಳೆಯ ಸಾಹಿತ್ಯವನ್ನು ನೋಡಿ ಎಂದು ಹೇಳಿ; ಕೆಲವು ಸಾಹಿತ್ಯಗಳ ಸಂಗೀತವನ್ನು ಕೇಳಿದರೆ ಆ ಟೇಪರಿಕಾರ್ಡ್‌ನ್ನು ಒದೆಯುವಷ್ಟು ಮನಸ್ಸು ಬರುತ್ತದೆ. ಅದರಲ್ಲಿ ಡಬಲ್ ಮೀನಿಂಗ್, ತ್ರಿಬಲ್ ಮೀನಿಂಗ್ ಏನೇನು ಮೀನಿಂಗ್, ಅಂದರೆ "ಒತ್ತಿನೋಡು, ಮುಟ್ಟಿನೋಡು, ಅದುಮಿನೋಡು", ಈ ರೀತಿಯಾಗಿ ಇರುತ್ತದೆ. ಮಂಡ್ಯಕ್ಕೆ ಬಂದು ನಮ್ಮ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಎಷ್ಟು ನಿರ್ದಾಕ್ಷಿಣ್ಯವಾಗಿ, ನಿರ್ಭಯವಾಗಿ ನಮ್ಮ ಅಧ್ಯಕ್ಷರನ್ನು ಮಾತನಾಡಿದರು, ನಮ್ಮ ಹುಡುಗರು ಅದನ್ನು ಕಟ್ಟುಹಾಕಿಸಿ ಇಟ್ಟಿದ್ದಾರೆ. ಅವೆಲ್ಲಾ ನೋಡಿ ಕೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಇಲ್ಲ, ಅದನ್ನು ಎನ್‌ಕರೇಜ್ ಮಾಡುತ್ತೇನೆ...

(ಗೊಂದಲ)

ಅಧ್ಯಕ್ಷರು : ಸನ್ಮಾನ್ಯ ಕುಮಾರ ಬಂಗಾರಪ್ಪನವರು, ಹೊಸದಾಗಿ ಬಂದಿರತಕ್ಕಂಥ ಸದಸ್ಯರು, ಬಹಳ ಶಿಸ್ತಿನಿಂದ ನಡೆದುಕೊಳ್ಳತಕ್ಕಂಥ ಸದಸ್ಯರು, ಅವರು ಮಾತನಾಡುವುದಕ್ಕೆ ಇಡೀ ಸದನ ಪ್ರೋತ್ಸಾಹಿಸಬೇಕು, ಯಾರೂ ಅವರ ಮಾತನ್ನು ತಡೆಯಬೇಕೆಂದಲ್ಲ, ಚರ್ಚೆಯ ಮಧ್ಯದಲ್ಲಿ ಇಂಟರ್‌ಫಿಯರೆನ್ಸ್ ಇರುತ್ತದೆ. ತಾವು ನಿರುತ್ಸಾಹ ಆಗಬೇಕಾಗಿಲ್ಲ, ತಾವು ಮಾತನಾಡಿ. ಸುರೇಶ್ ಕುಮಾರ್ ಏನು ಹೇಳುತ್ತಾರೆ ಕೇಳೋಣ. ಶ್ರೀನಿವಾಸ್‌ರವರೇ ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ, ಈ ಟಿ.ವಿ., ಅಥವಾ ಸಿನಿಮಾ ಇರಬಹುದು, ಇವತ್ತು ಮನೆಗಳಲ್ಲಿ ಏನಾಗಿದೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ : 2ನೇ ಕ್ಲಾಸ್ ಅಥವಾ 3ನೇ ಕ್ಲಾಸ್ ಮಗುವಿಗೆ ಶಾಲೆಯಲ್ಲಿ 'straight' spelling ಕೇಳಿದರು, ಆ ಮಗು 'straight' ಎಂದು ಹೇಳಿತು. ಮೇಡಂಗೆ ಬಹಳ ಸಂತೋಷ ಆಯಿತು. She asked 'What is the meaning of straight?' ಆ ಮಗು ಹೇಳಿತು 'Without soda' ಎಂದು ಇದು ಪರಿಸ್ಥಿತಿ.

ಶ್ರೀ ಆರ್. ಶ್ರೀನಿವಾಸ : ಸನ್ಮಾನ್ಯ ಅಧ್ಯಕ್ಷರೆ, ಚಲನಚಿತ್ರ ಉದ್ಯಮಿಗಳು ಯಾವರೀತಿ ಎಂದರೆ, ತಾವೆಲ್ಲಾ ಕೂಡ ಬಹಳ ಹಿಂದಿನ ಒಂದು ಪೌರಾಣಿಕ ಚಿತ್ರಗಳನ್ನು ನೋಡಿದಾಗ ಅದರ ಭಕ್ತಿ,

ಸಾಹಿತ್ಯಗಳಿಂದ ಅನೇಕ ವಿಧವಾದಂಥ ಒಂದು ಸನ್ಮಾರ್ಗವಾದ ರೀತಿಯಲ್ಲಿ ಹೋಗುವುದನ್ನು ನಾವೆಲ್ಲಾ ಕಲಿಯುತ್ತಿದ್ದೆವು ಎನ್ನುವುದು ತಮಗೆಲ್ಲಾ ಗೊತ್ತಿದೆ. ಈಗಿನ ಚಿತ್ರೋದ್ಯಮಿಗಳಲ್ಲಿ ಯುವಕ, ಯುವತಿಯರ ಒಂದು ಪ್ರೇರಣೆ ಮತ್ತು ನಟನೆ ನೋಡಿದಾಗ, ಅನೇಕ ಜನ ಯುವಕರೆಲ್ಲರೂ ಕೆಡುತ್ತಿದ್ದಾರೆ. ಆದ್ದರಿಂದ ತಮ್ಮ ಮುಖಾಂತರ ಮಾನ್ಯ ಕುಮಾರ್ ಬಂಗಾರಪ್ಪನವರಲ್ಲಿ ಕೇಳಿಕೊಳ್ಳುವುದೇನೆಂದರೆ ಆ ಚಿತ್ರವನ್ನು ನೋಡಿದಾಗ ಒಂದು ಪ್ರಜ್ಞಾವಂತ ರೀತಿಯಾದ ಪರಿಸ್ಥಿತಿ ಉದ್ಭವಿಸಬೇಕೇ ಹೊರತು ಕೆಟ್ಟ ಒಂದು ವಾತಾವರಣವನ್ನು ಮಾಡತಕ್ಕಂಥದ್ದಕ್ಕೆ ಉತ್ತೇಜನ ಕೊಡಬಾರದೆಂಬುದನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಎರಡು ಮುಖಗಳನ್ನು ಹೇಳಬೇಕಾಗುತ್ತದೆ, ಈಗ ನಮ್ಮ ಮೇಲೆ ಆಕ್ರಮಣ ಮಾಡಿದಾಗ ನಾವು ನಮ್ಮ ರಕ್ಷಣೆ ಮಾಡಿಕೊಳ್ಳುವುದಕ್ಕೆ ನಾವು ಹೋರಾಟ ಮಾಡಬಾರದೇ? ಆ ಕಲೆಯನ್ನು ಮಕ್ಕಳಿಗೆ ಕಲಿಸಬಾರದೇ, ಕರಾಟೆಯೇ ಬೇಡ, ಅಲ್ಲಿ ಹೋರಾಟ ಮಾಡುತ್ತೇವೆ, ಅವರನ್ನು ಹೊಡೆಯುತ್ತೇವೆ, ಇವರನ್ನು ಹೊಡೆಯುತ್ತೇವೆ ಎನ್ನುವುದಾದರೆ ನಮ್ಮ ಮೇಲೆ ಆಕ್ರಮಣ ಮಾಡಿದಾಗ ನಾವು ರಕ್ಷಣೆ ಮಾಡಿಕೊಳ್ಳುವುದಕ್ಕೆ ಆ ಒಂದು ಕಲೆಯನ್ನು ಕಲಿಯಲೇ ಬೇಕು. ಆದ್ದರಿಂದ ಯಾವರೀತಿ ನಾವು ಅದನ್ನು ಸ್ವೀಕಾರ ಮಾಡುತ್ತೇವೆ, ಅದರ ಮೇಲೆ ಅವಲಂಬನೆಯಾಗುತ್ತದೆ, ನೀವು ಏಕೆ ಅದನ್ನು ಒಂದೇ ದೃಷ್ಟಿಯಿಂದ ನೋಡುತ್ತೀರಿ, ಕರಿಕ್ಯುಲಂನಲ್ಲಿ ಈ ಸೆಕ್ಸ್ ಬಗ್ಗೆ ಎಜ್ಯುಕೇಷನ್ ಕೊಡಬೇಕೆಂದು ಒಂದು ವಾದ ಇದೆ, ಅದನ್ನು ತಪ್ಪು ಎಂದು ಏಕೆ ಹೇಳುತ್ತೀರಿ, ಪೂರಕವಾಗಿ ಅದನ್ನು ಮಾಡಿದರೆ ತಪ್ಪು ಏನು ಇದೆ? ವಿಷಯ ತಿಳಿದುಕೊಂಡರೆ ತಪ್ಪು ಏನಿದೆ? ಇದರಿಂದಲೇ ಮಾತ್ರ ದುಷ್ಪರಿಣಾಮ ಆಗುತ್ತದೆ, ಮಕ್ಕಳ ಮನಸ್ಸು ಕೆಟ್ಟು ಹೋಗುತ್ತದೆ, ಇದರಿಂದ ಯುವಕ ಯುವತಿಯರೆಲ್ಲರೂ ಹಾಳಾಗಿ ಹೋಗುತ್ತಾರೆಂದು ಅದನ್ನು ಏಕೆ ನೀವು ನಿಂದನೆ ಮಾಡಬೇಕು? ನಮಗೆ ಅರ್ಥಮಾಡಿಕೊಳ್ಳತಕ್ಕಂಥ ಶಕ್ತಿ ಇಲ್ಲವೇ? ಅದು ಕಲೆ, ನಮ್ಮ ನಮ್ಮ ವಯಸ್ಸಿನ ಮೇಲೆ, ನಮ್ಮ ಶಕ್ತಿಯ ಮೇಲೆ ಆಧಾರವಾಗುತ್ತದೆ, ನನಗೆ ಬೇಕು....

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಶಿವಪ್ಪನವರಿಗೆ 60 ವರ್ಷವಾದರೂ ಕೂಡ 25 ವರ್ಷದ ರಸಿಕತನವನ್ನು ತೋರಿಸಿಕೊಳ್ಳುತ್ತಿದ್ದಾರೆ.

ಶ್ರೀ ಹೆಚ್ ಶಿವಪ್ಪ : ಇಲ್ಲಿ ಇದರ ಇನ್ನೊಂದು ಮುಖವನ್ನು ತೋರಿಸಿಕೊಡುತ್ತಾರೆ, ಇದನ್ನು ಸಾಹಿತ್ಯದ ಮತ್ತು ಕಾದಂಬರಿ ಮುಖೇನ ತೋರಿಸಿಕೊಡುತ್ತಾರೆ, ಅದನ್ನು ತಿಳಿದುಕೊಳ್ಳುವುದು ನಮಗೆ ಬಿಟ್ಟಿದ್ದುದು, ಅದನ್ನು ಜನರಲೈಜೇಷನ್ ಮಾಡಿ, ಇದು ಆಗಲೇಬಾರದು, ಈ ಸೆಕ್ಸ್ ಬಗ್ಗೆ ಮಾತನಾಡಲೇ ಬಾರದು, ಕರಾಟೆ ಬಗ್ಗೆ ಮಾತನಾಡಲೇ ಬಾರದು, ಹೊಡೆದಾಟದ ಬಗ್ಗೆ ಮಾತನಾಡಲೇ ಬಾರದು. this is the unfair prohibition, unfair advocacy.

ಅಧ್ಯಕ್ಷರು : ಇಲ್ಲ, ನೀವು ಏಕೆ......

ಶ್ರೀ ಹೆಚ್. ಶಿವಪ್ಪ : ಏಕೆಂದರೆ ತಾವು ಎಲ್ಲಿಗೆ ಹೋದರೂ ತಾವು ಇದನ್ನು ಹೇಳುತ್ತಿದ್ದೀರಿ, ಇನ್ನೊಂದು ಮುಖವನ್ನು ದಯವಿಟ್ಟು ವಿಚಾರ ಮಾಡಿ.

ಅಧ್ಯಕ್ಷರು : ಒಳ್ಳೆಯದನ್ನು ಬೇಡ ಎಂದು ಯಾರೂ ಹೇಳುವುದಿಲ್ಲ.

ಶ್ರೀ ಹೆಚ್. ಶಿವಪ್ಪ : ಒಳ್ಳೆಯದು, ಕೆಟ್ಟದ್ದನ್ನು ಆರಿಸಿಕೊಳ್ಳುವುದು ನಮಗೆ ಬಿಟ್ಟಿದ್ದು.

ಅಧ್ಯಕ್ಷರು : ಮಾನ್ಯ ಶಿವಪ್ಪನವರೇ, ಅಡೊಲಸೆಂಟ್ ಏಜ್ ಇರುತ್ತದೆಯಲ್ಲಾ.

ಶ್ರೀ ಹೆಚ್. ಶಿವಪ್ಪ : ಅಲ್ಲ ಸ್ವಾಮಿ, ನಾನು ಕುಡಿಯುವುದಿಲ್ಲ, ಒಂದು ವಿಚಾರ ಈಗ ಬಹುತೇಕ ಜನ ಕುಡಿಯುತ್ತಾರೆ, ಆದರೆ ನಾನು ಕುಡಿಯುವುದಿಲ್ಲ ನನಗೆ ಅದು ಸರಿಯಲ್ಲವೆಂದು ನಾನು ಆರಿಸಿಕೊಂಡಿದ್ದೇನೆ, ಅದು ಒಳ್ಳೆಯದಲ್ಲ ಎಂದು ಅದೆಲ್ಲಾ ಇಂಡಿವಿಜ್ಯುಅಲ್ ಹ್ಯಾಬಿಟ್ಸ್.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಶಾಸಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ಮತ್ತು ಅಧ್ಯಕ್ಷರ ಒಟ್ಟು ಅಭಿಪ್ರಾಯ ಏನೆಂದರೆ, ಸಾಂಸ್ಕೃತಿಕವಾಗಿ ಆ ಘಟನೆಗೆ ಸಂಬಂಧಿಸಿದಂಥ ಚಿತ್ರಣಕ್ಕೆ ಬೇಕಾದಷ್ಟು ಕ್ರೌರ್ಯ, ಅದಕ್ಕೆ ಬೇಕಾಗಿರುವಷ್ಟು ತೋರಿಸಿದರೆ ಪರವಾಗಿಲ್ಲ, ಆದರೆ ಅದನ್ನು ಮೀರಿ ನಿಂತಂಥ ಅಶ್ಲೀಲತೆಯನ್ನು ತಂದರೆ, ಚಿಕ್ಕ ಮಕ್ಕಳ ಮನಸ್ಸಿನ ಮೇಲೆ ಏನು ಪರಿಣಾಮ ಆಗಬಹುದು? ಇಂಪ್ರೆಷನ್‌ಬಲ್ ಏಜ್ ಅದು, ಆ ಒಂದು ಪರಿಸ್ಥಿತಿ, ಈಗ ತಾವು ಆಗಲೇ ಪ್ರಾಜ್ಞರು ಆಗಿರುವುದರಿಂದ ಯಾವುದು, ಒಳ್ಳೆಯದು, ಯಾವುದು ಕೆಟ್ಟದ್ದು ಎನ್ನತಕ್ಕಂಥದ್ದನ್ನು ತಾವು ನಿರ್ಧರಿಸಬಹುದು. ಆಗ ಅಂಥ ಒಂದು....

ಅಧ್ಯಕ್ಷರು : ಇವರಿಗೆ ಬಾಲ್ಯಾವಸ್ಥೆ ಅಡೊಲಸೆಂಟ್ ಏಜ್ ಇರಲೇ ಇಲ್ಲ. ಸ್ಟ್ರೈಟ್ ಹೀಗೆ.

ಶ್ರೀ ಹೆಚ್. ಶಿವಪ್ಪ : ಇಲ್ಲ, ಇಲ್ಲ, ಆಯ್ಕೆ ಮಾಡಿ ತೋರಿಸಿ, ಅದನ್ನು ಪ್ರಾಹಿಬಿಟ್ ಮಾಡುವುದು ಬೇಡ ಎಂದು ಹೇಳುತ್ತಿಲ್ಲ. ಈಗ ಮಕ್ಕಳಿಗೆ ಎಂಥ ಎಜ್ಯುಕೇಷನ್ ಬೇಕು, ಅದನ್ನು ತೋರಿಸಿ, ಪ್ರದರ್ಶನ ಮಾಡಿ, ಈಗ ಟಿ.ವಿಯಲ್ಲಿಯೇ ಬರಬಾರದು ಎಂದರೆ ನಮಗೆ ಬೇಕು ನಾವು 11-00 ಗಂಟೆಗೆ ನಾವು ಅಂಥ ಚಿತ್ರವನ್ನು ನೋಡಬೇಕು, ಅಲ್ಲಿ ಮಕ್ಕಳನ್ನು ಏಕೆ ಬಿಡುತ್ತೀರಿ? ಅಧ್ಯಕ್ಷರೆ, ನಾವು ವಾಸ್ತವಿಕವಾಗಿ ಮಾತನಾಡಿದರೆ ಅದು ಜನರಿಗೆ ಕಹಿ ಆಗಬಹುದು, ಯಾವಾಗಲೂ truth is bitter ಇವತ್ತು ಯಾರು ಅದನ್ನು ಧೈರ್ಯದಿಂದ ಮಾತನಾಡುವುದಕ್ಕೆ ಹಿಂದು ಮುಂದು ನೋಡುತ್ತಾರೆ, ಬಹಳ ಜನ ಹಿಪೋಕ್ರಾಟ್ಸ್ ಆಗುತ್ತಿದ್ದೇವೆ. ಅದನ್ನು ಬಿಡಬೇಕು, ನಮ್ಮ ಮುಖ್ಯಮಂತ್ರಿಯವರು ಹೇಳಿದಂತೆ ಧೈರ್ಯವಾಗಿ ಹೇಳುವಂತಹ ಒಂದು ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು, ಏಕೆ ಸುಮ್ಮನೆ ಹೇಳಬೇಕು, ಎಲ್ಲರೂ ಮಾಡುವುದು ಅದೇ ಆದರೆ ಇಲ್ಲಿ ಮಾತ್ರ ಹಾಗೆ ಮಾಡುವುದಿಲ್ಲ, ಅದು ಸರಿಯಲ್ಲ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಒಂದು ಮಾತನ್ನು ಹೇಳುತ್ತೇನೆ, ನಾವು ಭಾತ್‌ರೂಮಿನಲ್ಲಿ ಬೆತ್ತಲೆ ಇರುತ್ತೇವೆಂದು ಎಲ್ಲಾ ಕಡೆ ಬೆತ್ತಲೆಯಾಗಿ ಅಡ್ಡಾಡುವುದಕ್ಕೆ ಆಗುತ್ತದೆಯೆ?

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ನನಗೂ ಗೊತ್ತು, ನಾನು ಹೆಂಡತಿಯನ್ನು ಕಟ್ಟಿಕೊಂಡಿದ್ದೇನೆ ಎಂದು ಬೀದಿಯಲ್ಲಿ ಸಂಸಾರ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಸ್ವಲ್ಪ ನಾರ್ಮ್ಸ್ ಇದೆ. ಅದು, ನನಗೆ ಗೊತ್ತಿದೆ.

SRI M. MALLIKARJUNA KHARGE : How he is closed ಎಂಬುದು ಈಗ ನನಗೆ ಗೊತ್ತಾಯಿತು.

ಶ್ರೀ ಹೆಚ್. ಶಿವಪ್ಪ : ಅದು ನಮಗೆ ಗೊತ್ತಿದೆ, ಸಂಸಾರ ಮಾಡುವುದು ಬೀದಿಯಲ್ಲಿ ಅಲ್ಲ...

MR. SPEAKER : Please, please. Allow the Member to speak.

ಶ್ರೀ ಬಿ. ಬಿ. ಶಿವಪ್ಪ : ಆ ಶಿವಪ್ಪನವರು ಕಲೆ ಎಂದು ಹೇಳಿದರು, ಕಲೆ ಕಲೆಯಾಗಿಯೆ ಇರಬೇಕು, ಆದರೆ "ಕ"ಗೆ ಕೊಂಬು ಕೊಟ್ಟರೆ ಕೊಲೆಯಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಶಿವಪ್ಪನವರಿಗೆ ನೀವೇನು ನೋಡಿದರೆ ಏನೂ ತಪ್ಪಿಲ್ಲವೆಂದು ಹೇಳುತ್ತೀರಿ. ಆಟೋ ಶಂಕರ್ ಜತೆ ಎಲ್ಲರಿಗೂ ಗೊತ್ತಿದೆ ಎಂದು ಕೊಂಡಿದ್ದೇನೆ. ಮದ್ರಾಸ್‌ನಲ್ಲಿ ಆಟೋ ಶಂಕರ್ ಕೇಸ್, ಅಂದರೆ ಆತ ಮರ್ಡರ್ ಮತ್ತು ರೇಪ್ ಎಲ್ಲಾ ಮಾಡಿದ, ಅದು ಕೋರ್ಟ್‌ನಲ್ಲಿ ವಿಚಾರಣೆಗೆ ಬಂತು, ಆಗ ಅವರು ಏಕೆ ಮಾಡಿದೆ ಎಂದು ಕೇಳಿದರು ಅವನು ಕ್ಲಿಯರ್‌ಆಗಿ ಹೇಳಿದ್ದಾನೆ, ಏನೆಂದರೆ ನಾನು ಇಂಥ ಸಿನಿಮಾ ನೋಡಿ ಅದನ್ನು ಮಾದರಿಯನ್ನಾಗಿ ಮಾಡಿಕೊಂಡು, ನಾನೂ ಕೂಡ ರೇಪ್ ಮಾಡಬೇಕೆಂದು ಹೋಗಿ ಮಾಡಿದೆ, ಮತ್ತು ಕೊಲೆಯನ್ನು ಮಾಡಿದೆ ಎಂದು ಹೇಳಿದಾಗ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ it has come down heavily. ಈ ರೀತಿ ಮಾಡುವುದು ತಪ್ಪು, ಇದರ ಬಗ್ಗೆ ಕಾನೂನು ಅಗತ್ಯವಾಗಿ ಮಾಡಬೇಕು, ಮಕ್ಕಳ ಮನಸ್ಸಿನ ಮೇಲೆ ಪರಿಣಾಮಕಾರಿಯಾಗಿ ಆಗತಕ್ಕಂಥ ಕ್ರೌರ್ಯ ಮತ್ತು ಅಶ್ಲೀಲತೆಗಳನ್ನು ಮಾಡಬಾರದು ಎನ್ನತಕ್ಕಂಥದ್ದನ್ನು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಕೊಟ್ಟಿದ್ದಾರೆ. ಆಟೋ ಶಂಕರ್ ಕೇಸ್‌ನಲ್ಲಿ, ಆ ಜಡ್ಜ್‌ಮೆಂಟ್‌ನ್ನು ಕಳುಹಿಸಿಕೊಡುತ್ತೇನೆ. ತಾವು ದಯವಿಟ್ಟು ನೋಡಿ, ಆದ್ದರಿಂದ ಸಿನಿಮಾ ರಂಗದಲ್ಲಿ ಇದನ್ನು ಮಾಡಬಾರದು ಎಂಬುದನ್ನು ಸುಪ್ರೀಂ ಕೋರ್ಟ್ ರೂಲಿಂಗ್ ಕೊಟ್ಟಿದೆ. ಸುಪ್ರೀಂ ಕೋರ್ಟ್ ರೂಲಿಂಗ್ ಕೊಟ್ಟರೆ ಅದು ಕಾನೂನು ಆಗುತ್ತದೆಂಬ ಮಾತನ್ನು ತಮಗೆ ಹೇಳುತ್ತೇನೆ.

MR. SPEAKER : Madam, that is not the issue.

SRI H. SHIVAPPA : That is not the issue. ಒನ್‌ಪಾರ್ಟಿ ಒನ್ ಪ್ರಿಸಿಡೆಂಟ್, ಬೈಡಿಂಗ್ ಇಲ್ಲಿ ಇವೆಲ್ಲಾ ಬೇಡ. ಈ ಸ್ಥಿಟಿಕ್‌ಸೆನ್ಸ್‌ಅನ್ನು ಡೆವಲಪ್ ಮಾಡಿಕೊಳ್ಳೋಣ, ಯಾವುದಾದರೂ ಸರಿ;

ಅಧ್ಯಕ್ಷರು : ಮಾಡೋಣ.

1.40 ಪಿ. ಎಂ.

ಅಧ್ಯಕ್ಷರು : ಸಿನಿಮಾ ಕ್ಷೇತ್ರದಲ್ಲಿ ಹಣ ತೊಡಗಿಸಿರುವ ಬಗ್ಗೆ ಒಂದು ಸಮೀಕ್ಷೆ ಮಾಡಿದರೆ ಎಲ್ಲಿಂದ ಹಣ ಬರುತ್ತದೆಂದು ಗೊತ್ತಾಗುತ್ತದೆ. ಈ ಹಣವನ್ನು ಪ್ರೊಡ್ಯೂಸರ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್ ಹಾಕಿದ್ದಾರೆಂದು ಬಹಳ ಜನ ತಿಳಿದುಕೊಂಡಿದ್ದಾರೆ. ಆದರೆ, ಈ ಎಲ್ಲಾ ಹಣವು ಅತ್ಯಂತ ಕೆಳ ವರ್ಗದ ಜನರಿಂದ ಚಾಲನೆಯಾಗಿ ಬಂದಿರತಕ್ಕಂಥ ಹಣ. ಸಿನಿಮಾ ಕ್ಷೇತ್ರದಲ್ಲಿರತಕ್ಕಂಥ ಹಣ, ಲಾಸ್ಟ್ ನಯೇ ಪೈಸೆಯವರೆಗೂ ಥಿಯೇಟರ್ ಓನರ್‌ದ್ದು ಅಲ್ಲ; ಆ್ಯಕ್ಟರ್‌ದ್ದೂ ಅಲ್ಲ, ಡಿಸ್ಟ್ರಿಬ್ಯೂಟರ್ಸ್‌ದ್ದೂ ಅಲ್ಲ,

ಪ್ರೊಡ್ಯೂಸರ್ಸ್‌ದೂ ಅಲ್ಲ. ಈ ಎಲ್ಲಾ ಹಣವನ್ನು ಕೊಟ್ಟಿರತಕ್ಕಂಥವರು ಅತ್ಯಂತ ಕೆಳ ವರ್ಗದ ಜನ. ಅವರಿಂದ ಹಣ ತೆಗೆದುಕೊಂಡು ಅವರಿಗೆ ಕೊಡುತ್ತಿರತಕ್ಕಂಥಾದ್ದು ಏನ ಎನ್ನತಕ್ಕಂಥಾದ್ದು ಅಷ್ಟೇ ನಮ್ಮ ಕಾಳಜಿ. ಮತ್ತೇನೂ ಅಲ್ಲ. ಉಳಿದದ್ದನ್ನು ಚರ್ಚೆ ಮೂಲಕ ತಾವು ಮಾತನಾಡಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಚಿತ್ರ ರಂಗವು ಬಹಳ ಕೆಟ್ಟ ಪರಿಣಾಮವನ್ನು ಬೀರಿದೆಯೆಂದು ಮಾನ್ಯ ಹಿರಿಯ ಸದಸ್ಯರುಗಳು ಹೇಳಿದ್ದಾರೆ. ಸಿನಿಮಾದ ಕಡೆಯಲ್ಲಿ ನಾವು ತೋರಿಸುವುದೇನು? ನ್ಯಾಯ ಉಳಿಯಬೇಕು, ಧರ್ಮ ಉಳಿಯಬೇಕು, ಅನ್ಯಾಯ ಯಾರಿಗೂ ಆಗಬಾರದು, ಕೆಟ್ಟದ್ದನ್ನು ಮಾಡಿದವರಿಗೆ ಕೆಟ್ಟದ್ದಾಗುತ್ತದೆ, ಒಳ್ಳೆಯದನ್ನು ಮಾಡಿದರೆ ಮಾತ್ರ ಒಳ್ಳೆಯದಾಗುತ್ತದೆ ಎನ್ನತಕ್ಕಂಥ ಮಾರಲ್ ಅನ್ನು ನಾವು ತೋರಿಸುತ್ತೇವೆ. ಆ ವಿಷಯವನ್ನು ಮಾನ್ಯ ಸದಸ್ಯರುಗಳು ಪರಿಗಣಿಸಬೇಕು. ಕಲಾತ್ಮಕ ಚಿತ್ರ ಆಗಿರಬಹುದು, ಕರ್ಮಷಿಯಲ್ ಚಿತ್ರ ಆಗಿರಬಹುದು, ಸಮಾಜದಲ್ಲಿ ಯಾರೇ ತಪ್ಪು ಮಾಡಿದರೂ ಅವರನ್ನು ಪೋಲೀಸಿನವರು ಕರೆದುಕೊಂಡು ಹೋಗುವುದನ್ನು ಚಿತ್ರದ ಕೊನೆಯಲ್ಲಿ ತೋರಿಸುತ್ತೇವೆ. ಕಡೆಗೆ ಅವನನ್ನು ಜೈಲಿಗೆ ಹಾಕಿ ಹತ್ತು ವರ್ಷಗಳ ನಂತರ ಏನಾಗುತ್ತದೆಂದು ಸಿನಿಮಾದಲ್ಲಿ ತೋರಿಸುತ್ತೇವೆ. ಮೂರು ಗಂಟೆ ನಡೆಯತಕ್ಕಂಥ ಸಿನಿಮಾದಲ್ಲಿ ತೋರಿಸುವ ಪ್ಲಾನ್‌ಗಳನ್ನು ನೋಡಿಕೊಂಡು ಕ್ರೈಮ್ ಜಾಸ್ತಿಯಾಗುತ್ತವೆಂದು ಅವರ ಅಭಿಪ್ರಾಯವೇ? ನಾವೆಲ್ಲಾ ಚಿತ್ರ ರಂಗವನ್ನು ಬಿಟ್ಟು ಮನೆಯಲ್ಲೇ ಕುಳಿತುಕೊಳ್ಳಬೇಕೆನ್ನುವ ರೀತಿಯಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಇನ್ನೊಂದು ವಿಷಯವನ್ನು ಸದನದ ಗಮನಕ್ಕೆ ತರುವುದೇನೆಂದರೆ, ಚಲನಚಿತ್ರವನ್ನು ನೋಡಿ ಎಷ್ಟೋ ಜನ ಕುಡಿಯುವುದನ್ನು ಬಿಟ್ಟಿದ್ದಾರೆ. 'ಜೀವನ ಚೈತ್ರ' ಸಿನಿಮಾವನ್ನು ನೋಡಿದಂಥ ಮಹಿಳೆಯರೇ ಕೆಲವು ಕಡೆ ಒಗ್ಗಟ್ಟಾಗಿ ಸಾರಾಯಿ ಮಾರಾಟದ ಬಗ್ಗೆ ಮಾಡತಕ್ಕಂಥ ಆಕ್ಷನ್ ಅನ್ನು ತಡೆದು ನಿಲ್ಲಿಸಿದ್ದು ಮಾನ್ಯ ಸದಸ್ಯರುಗಳಿಗೆ ಗೊತ್ತಿಲ್ಲವೇ? ಅದೇ ರೀತಿ ನ್ಯಾಷನಲ್ ಲೀಡರ್ಸ್ ಬಗ್ಗೆ ಮಾಡಿರುವ ಚಿತ್ರಗಳೂ ಬಹಳ ಇವೆ. ಇವೆಲ್ಲಾ ಸರಿಯಾಗಿ ಬರಬೇಕಾದರೆ ಸೆನ್ಸಾರ್ ಬೋರ್ಡ್‌ನ್ನು ಕರೆಕ್ಟ್ ಆಗಿ ಇಟ್ಟುಕೊಳ್ಳಬೇಕು. Censor Board is the main thing where it will say it is good and it is not. ಸೆನ್ಸಾರ್ ಬೋರ್ಡ್‌ನಲ್ಲಿ ಕೆಲವು ಸೀನ್‌ಗಳನ್ನು ಮತ್ತು ಡೈಲಾಗ್ಸ್‌ನ್ನು ಕಟ್‌ಮಾಡಿರುತ್ತಾರೆ. ಮತ್ತೆ ಅಡ್ಜಸ್ಟ್ ಮಾಡಿಕೊಂಡು ಅದೇ ಸೀನುಗಳನ್ನು ಮತ್ತು ಡೈಲಾಗ್ಸ್‌ನ್ನು ತೋರಿಸುತ್ತಾರೆ. ಅದು ಏಕೆ ಆ ತರಹ ಆಗುವುದಕ್ಕೆ ಬಿಡುತ್ತಾರೆ? ಸೆನ್ಸಾರ್ ಬೋರ್ಡ್‌ನಲ್ಲಿರತಕ್ಕಂಥ ಎಲ್ಲಾ ಮೆಂಬರ್ಸ್ ಸರಿಯಾಗಿ ಕುಳಿತುಕೊಂಡು ಫಸ್ಟ್ ಒಪೀನಿಯನ್, ಸೆಕೆಂಡ್ ಒಪೀನಿಯನ್ ಎಂದು ಸ್ಟ್ರಿಕ್ಟ್ ಆಗಿ ಮಾಡಲಿ. ಇಲ್ಲಿರುವ ಸೆನ್ಸಾರ್ ಬೋರ್ಡ್‌ನಲ್ಲಿ ಒಪ್ಪಿಗೆ ಸಿಗದೇ ಇದ್ದರೆ ಬಾಂಬೆ ಅಥವಾ ದೆಹಲಿಯಲ್ಲಿರುವ ಸೆನ್ಸಾರ್ ಬೋರ್ಡ್‌ನಿಂದ ಪರ್ಮಿಷನ್ ತೆಗೆದುಕೊಂಡು ಬರುತ್ತಿದ್ದಾರೆ. ಏಕೆ ಆ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ? ಸೆನ್ಸಾರ್ ಬೋರ್ಡ್ ಅಂದರೆ ಅದು ಯಾವುದೇ ಸೆನ್ಸಾರ್ ಬೋರ್ಡ್ ಆಗಿದ್ದರೂ ಅದಕ್ಕೆ ಬೆಲೆ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಅದು ಸರಿಯಾದ ವಿಷಯ

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಒಂದು ಕಾನೂನನ್ನು ಮಾಡಿದ ಮೇಲೆ ಅದಕ್ಕಿಂಥ ಮೇಲೆ ಫಸ್ಟ್ ರಿಲೀಫ್, ಸೆಕೆಂಡ್ ರಿಲೀಫ್, ಥರ್ಡ್ ರಿಲೀಫ್ ಎಂದು ಏಕೆ ಇಡಲಾಗಿದೆ? ಒಂದು ಕಡೆ ತಪ್ಪು

ಎಂದು ನಿರ್ಣಯವಾದ ಮೇಲೆ ಅದು ಎಲ್ಲಾ ಕಡೆಯು ತಪ್ಪಾಗಿಯೇ ಇರಬೇಕು. ಏಕೆಂದರೆ, ಎಲ್ಲಾ ಸೆನ್ಸಾರ್ ಬೋರ್ಡ್‌ನಲ್ಲಿ ಸಮಾಜದ ಎಲ್ಲಾ ವರ್ಗದ ಜನರು ಇರುತ್ತದೆ, ಮಹಿಳೆಯರು ಇರುತ್ತಾರೆ, ಮೆಡಿಕಲ್ ಬೋರ್ಡ್‌ನಿಂದ ಇರುತ್ತಾರೆ, ಇವರುಗಳೆಲ್ಲಾ ಸಿನಿಮಾವನ್ನು ನೋಡಿ ಇಂತಹ ಸೀನ್ ಅಥವಾ ಡೈಲಾಗ್ ತಪ್ಪು ಎಂದು ಹೇಳುವ ಅಥಾರಿಟಿ ಇರುವಾಗ, ಚಿತ್ರ ರಂಗದ ಮೂಲಕ ಈ ರೀತಿ ಇನ್‌ಫ್ಲ್ಯೂಯೆನ್ಸ್ ಆಗುತ್ತದೆ, ಆ ತರಹ ಇನ್‌ಫ್ಲ್ಯೂಯೆನ್ಸ್ ಆಗುತ್ತದೆಂದು ಏಕೆ ಹೇಳಬೇಕು? You have the law in your hand. You cut it. ಮಾನ್ಯ ಹಿರಿಯ ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿರುವುದಕ್ಕೆ ಇದನ್ನು ನಾನು ಪೂರಕವಾಗಿ ಹೇಳಿರುತ್ತೇನೆ. ಇನ್ನು ಫಿಲ್ಮ್‌ಫೀಲ್ಡ್‌ನ್ನು ಇಂಡಸ್ಟ್ರೀಯಾಗಿ ಪರಿಗಣಿಸಬೇಕೆಂದು ಸರ್ಕಾರದಲ್ಲಿ ಬೇಡಿಕೆಯನ್ನು ನಾವು ಸಲ್ಲಿಸಿದ್ದೇವೆ. ಆಮೇಲೆ, ಚಿತ್ರರಂಗದ ಕಲಾವಿದರು ಮತ್ತು ಸಹ ಕಲಾವಿದರುಗಳು ಪಾತ್ರಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಹೊಟ್ಟೆಗೆ ಏಟು ಬೀಳುತ್ತವೆ, ದೇಹದ ನಾನಾ ಭಾಗಗಳಿಗೆ ಏಟು ಬೀಳುತ್ತಿರುತ್ತವೆ. ಇಂಥಾ ಏಟುಗಳು ಬಿದ್ದು ಕಲಾವಿದರುಗಳಿಗೆ ತೊಂದರೆಯಾದಂಥ ಸಂದರ್ಭದಲ್ಲಿ ಸಹಾಯ ಸಿಗುವುದಕ್ಕೆ ಇನ್‌ಶೂರೆನ್ಸ್ ಸ್ಕೀಮ್ ಮಾಡಬೇಕೆಂದೂ ಸಹ ಬೇಡಿಕೆಯನ್ನು ಇಟ್ಟಿದ್ದೇವೆ. ಚಿತ್ರ ರಂಗದಲ್ಲಿ ಆಗುವ ಅನಾಹುತಗಳಿಗೆ ತಾವೇ ಏನಾದರೂ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಆದುದರಿಂದ, ತಮ್ಮ ಕಾಲದಲ್ಲಾದರೂ ಚಿತ್ರರಂಗದ ಕಲಾವಿದರುಗಳಿಗೆ ಜೀವನದಲ್ಲಿ ಅನಾಹುತ ಸಂಭವಿಸಿದರೆ ಅನುಕೂಲ ಸಿಗುವ ಸಲುವಾಗಿ ಇನ್‌ಶೂರೆನ್ಸ್ ಸ್ಕೀಮ್‌ನ್ನು ಜಾರಿಗೊಳಿಸಬೇಕು ಹಾಗೂ ಚಿತ್ರ ರಂಗದ ಕಲಾವಿದರುಗಳಿಗೆ ಅನಾರೋಗ್ಯ ಸಂಭವಿಸಿದಾಗ ಸಹಾಯ ಮಾಡುವುದಕ್ಕಾಗಿ ಒಂದು ಮೆಡಿಕಲ್ ಫೆಸಿಲಿಟೀಸ್ ಕೊಡಬೇಕೆಂದೂ ಸಹ ನಾನು ಕೇಳುತ್ತೇನೆ. ಆಮೇಲೆ, ಶೂಟಿಂಗ್ ನಡೆಸುವಂಥ ಸಂದರ್ಭದಲ್ಲಿ ಹತ್ತಿರ ಇರತಕ್ಕಂಥ ಪೋಲೀಸ್ ಠಾಣೆಯಿಂದ ರಕ್ಷಣೆ ಒದಗಿಸಬೇಕೆಂದು ಕೇಳಿಕೊಳ್ಳಲಾಗುತ್ತದೆ, ಆದರೆ ಕೆಲವು ಸಂದರ್ಭಗಳಲ್ಲಿ ಅದೇ ಜಾಗದಲ್ಲಿ ಬೇರೆ ಪ್ರೋಗ್ರಾಮ್‌ಗಳು ಇದ್ದಂಥ ಸಂದರ್ಭದಲ್ಲಿ ಪೋಲೀಸ್ ಬಂದೋಬಸ್ತ್ ಸಿಗದೆ ಶೂಟಿಂಗ್ ಮಾಡಲು ಬಹಳ ಕಷ್ಟವಾಗುತ್ತಿದೆ. ಅದಕ್ಕಾಗಿ ಒಂದು ಪೋಲೀಸ್ ಸ್ಪೆಷಲ್ ಎನ್‌ಫೋರ್ಸ್‌ಮೆಂಟನ್ನೇ ಮಾಡಿದರೆ ಒಳ್ಳೆಯದಾಗುತ್ತದೆ. ಈ ಪೋಲೀಸ್ ಸ್ಪೆಷಲ್ ಎನ್‌ಫೋರ್ಸ್‌ಮೆಂಟ್‌ನವರು ಶೂಟಿಂಗ್ ಸಮಯದಲ್ಲಿ ಪ್ರೊಟೆಕ್ಷನ್ ಕೊಡುವುದರ ಜೊತೆಗೆ ಆಡಿಯೋ ಕ್ಯಾಸೆಟ್ ಫೈರೆಸಿ ಮತ್ತು ವಿಡಿಯೋ ಕ್ಯಾಸೆಟ್ ಫೈರೆಸಿಯನ್ನೂ ತಡೆಯಬಹುದು. ಆಮೇಲೆ, ನಮ್ಮ ಆರ್ಟಿಸ್ಟ್ ಅಸೋಸಿಯೇಷನ್ ಬಗ್ಗೆ ಹೇಳುವುದಾದರೆ, ನಮ್ಮ ಡಾ॥ ರಾಜ್‌ಕುಮಾರ್ ಅವರ ನೇತೃತ್ವದಲ್ಲಿ ಒಂದು ಆರ್ಟಿಸ್ಟ್ ಅಸೋಸಿಯೇಷನ್ ಮಾಡಿಕೊಂಡಿದ್ದೇವೆ. ಈ ಅಸೋಸಿಯೇಷನ್ ಮುಖಾಂತರ ಮ್ಯೂಸಿಕಲ್ ನೈಟ್ಸ್ ಮಾಡಿ ಹಣವನ್ನು ಸಂಗ್ರಹಣೆ ಮಾಡಿ ಧನ ಸಹಾಯವನ್ನು ಮಾಡಿದ್ದೇವೆ. ಆಂಧ್ರ ಪ್ರದೇಶದಲ್ಲಿ ಚಂಡಮಾರುತದಿಂದ ತೊಂದರೆಗೆ ಒಳಗಾದವರಿಗೆ ಒಂದು ಕೋಟಿ ರೂಪಾಯಿ ಹಣವನ್ನು ಕಲೆಕ್ಟ್ ಮಾಡಿ ನಮ್ಮ ಈ ಸದನದ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರ ಅಧ್ಯಕ್ಷತೆಯ ಮೂಲಕ ಕೊಟ್ಟಿದ್ದೇವೆ. ಇದೇ ರೀತಿ ಮನಸ್ಸು ಮಾಡಿದರೆ ಹಣವನ್ನು ಸಂಗ್ರಹಣೆ ಮಾಡಿ ಸಮಾಜದಲ್ಲಿ ತೊಂದರೆ ಇರುವವರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಮಗೆಲ್ಲಾ ಗೊತ್ತಿರುವ ಹಾಗೆ ಪೋಲೀಸ್ ಡಿಪಾರ್ಟ್‌ಮೆಂಟಿಗೆ ಒಂದು ಸ್ಟೇಡಿಯಂ ಕಟ್ಟಲು ಹಣ ಸಹಾಯವನ್ನು ಮಾಡಿದ್ದೇವೆ. ಎಲ್ಲೆಲ್ಲಿ ಮ್ಯೂಸಿಕಲ್ ನೈಟ್ಸ್ ಮಾಡಿದ್ದೇವೆಯೋ ಅಲ್ಲೆಲ್ಲಾ 20 ಲಕ್ಷ 30

ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಕೊಟ್ಟಿದ್ದೇವೆ. ಮಾಡಬೇಕೆಂದು ಮನಸ್ಸು ಮಾಡಿದರೆ ಚಿತ್ರರಂಗಕ್ಕೆ ಯಾವುದೂ ಸಾಧ್ಯವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆಮೇಲೆ, ಸಿನಿಮಾಗಳಿಗೆ, ಟ್ಯಾಕ್ಸ್‌ನ್ನು ಎಕ್ಸೆಂಷನ್ ಮಾಡಿರುವುದರಿಂದ ಸರ್ಕಾರಕ್ಕೆ ಲಾಸ್ ಆಗಿದೆ ಎಂಬ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ, ಅದನ್ನು ಲಾಸ್ ಎಂದು ಪರಿಗಣಿಸದೆ ಕನ್ನಡ ಚಿತ್ರ ರಂಗಕ್ಕೆ ಕೊಡುತ್ತಿರುವ ಪ್ರೋತ್ಸಾಹ ಎಂದು ತಿಳಿದುಕೊಳ್ಳಬೇಕು. ಕಲೆಯು, ಮನುಷ್ಯ ಯಾವಾಗ ಹುಟ್ಟಿ ಬಂದಿದ್ದಾನೋ ಅಲ್ಲಿಂದ ಇದೆ, ಹಾಗೂ ಮನುಷ್ಯ ಎಲ್ಲಿಯವರೆಗೆ ಇರುತ್ತಾನೋ ಅಲ್ಲಿಯವರೆಗೂ ಈ ಕಲೆ ಇರುತ್ತದೆ. ಆದ್ದರಿಂದ, ಇದಕ್ಕೆ ಕೊಟ್ಟಿರುವ ಸಹಾಯ ಧನ ಲಾಸ್ ಎಂದು ಯಾವಾಗಲೂ ಹೇಳುತ್ತಿದ್ದರೆ ಕೊನೆಗೆ ಈ ನಮ್ಮ ಕಲೆಯೇ ಲಾಸ್ ಆಗಿಬಿಡುತ್ತದೆ. ಮತ್ತು ಅದು ಇಲ್ಲದೇ ಇದ್ದ ಹಾಗೆ ಆಗಲೂಬಹುದು. ಇನ್ನು ನಮ್ಮ ಆರ್ಟಿಸ್ಟ್ ಅಸೋಸಿಯೇಷನ್‌ಗೆ ಜಾಗ ಕೊಡುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಆ ಬಗ್ಗೆ ಎಲ್ಲಿ ಜಾಗ ಕೊಡಲಾಗುತ್ತದೆಂದು ಎನ್ನುವ ಬಗ್ಗೆ ಇನ್ನೊಂದು ತಿಂಗಳಲ್ಲಿ ಹೇಳಲಾಗುತ್ತದೆಂದು ಸಂಬಂಧಪಟ್ಟ ಮಂತ್ರಿಯವರು ಹೇಳಿದ್ದರು. ಆದರೆ, ಪ್ರಪೋಸಲ್ ಮಾಡಿದ ಜಾಗವನ್ನು ಸುಪ್ರೀಮ್ ಕೋರ್ಟ್‌ನ ಆದೇಶದ ಪ್ರಕಾರ ಕೊಡುವುದಕ್ಕಾಗುವುದಿಲ್ಲವೆಂದು ತಿಳಿದು ಬಂದಿದೆ. ಸುಪ್ರೀಮ್ ಕೋರ್ಟ್‌ನ ವರ್ಡಿಕ್ಟ್‌ನ್ನು ಬದಿಗಿಟ್ಟು ಅದೇ ಜಾಗವನ್ನು ಅಲಾಟ್ ಮಾಡಿಕೊಡುವ ಬಗ್ಗೆ ಒಂದು ರೆಪ್ರೆಸೆಂಟೇಷನ್ ಅನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡಲಾಗಿತ್ತು.

ಅಧ್ಯಕ್ಷರು : ತಾವು ಅದನ್ನು ಕೊಟ್ಟಿದ್ದಿರಿ, ಮತ್ತು ಆಂಧ್ರ ಪ್ರದೇಶದಲ್ಲಿ ಚಂಡಮಾರುತ ಸಂಭವಿಸಿದಾಗ ಹಣ ಸಂಗ್ರಹಿಸಿದಂಥ ಸಂದರ್ಭದಲ್ಲಿ ಡಾ॥ ರಾಜ್‌ಕುಮಾರ್ ಅವರೂ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದರು, ಇದರ ಬಗ್ಗೆ ನಾನು ಅವರಿಗೂ ಮಾತು ಕೊಟ್ಟಿದ್ದೇನೆ, ಜೊತೆಗೆ ಮಾನ್ಯ ಮಂತ್ರಿಯವರ ಜೊತೆ ಮಾತನಾಡಿದ್ದೇನೆ, ಮುಂದಿನ ವಾರ ಯಾವಾಗಲಾದರೂ ಮಾನ್ಯ ಅನಂತ್‌ನಾಗ್ ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಸಂಬಂಧಪಟ್ಟ ಮಂತ್ರಿಯವರೊಡನೆ ಮಾತನಾಡೋಣ. ಆಗ ಆರ್ಟಿಸ್ಟ್ ಅಸೋಷಿಯೇಷನ್‌ನ ಪ್ರತಿನಿಧಿಗಳನ್ನೂ ಕರೆಸಿಕೊಂಡು ಮಾತುಕತೆ ಮಾಡೋಣ. ಇದರ ಬಗ್ಗೆ ನಾನು ಕಮಿಟ್ ಮಾಡಿಕೊಂಡಿರುವುದರಿಂದ ನಾನು ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಜಾಗವನ್ನು ಬಹಳ ದೂರ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲವಾದ್ದರಿಂದ ಈಗಾಗಲೇ ಪ್ರಪೋಸಲ್ ಮಾಡಿರತಕ್ಕಂಥ ಜಾಗವನ್ನೇ ಅಲಾಟ್ ಮಾಡಬೇಕೆಂಬ ಯೋಚನೆ ತಮಗೆ ಇದೆಯಾ ಎಂದು ಕೇಳುತ್ತೇನೆ. ಏಕೆಂದರೆ ಮುಂಚೆ ಸುಪ್ರೀಂಕೋರ್ಟ್‌ನವರು ಒಂದು ತೀರ್ಪನ್ನು ಕೊಟ್ಟಿದ್ದರೂ ಕೂಡ 2-3 ಇನ್ಸಿಡೆಂಟ್ಸ್‌ಗಳಲ್ಲಿ ಲೆಜಿಸ್ಲೇಟರ್‌ಗಳೆಲ್ಲರೂ ಕೂಡ ಸೇರಿ ಒಮ್ಮತದಿಂದ ಒಂದು ಮಾಡಬಹುದು. ಏಕೆಂದರೆ ನಾವು ಯಾವುದೇ ಫಂಕ್ಷನ್ ಮಾಡಿದರೂ ಕೂಡ ಡಾ॥ ರಾಜ್‌ಕುಮಾರ್‌ರವರನ್ನು ಬರಮಾಡಿಕೊಂಡಿದ್ದೇವೆ. ಅವರಿಗೆ ರಾಷ್ಟ್ರದ ಎಲ್ಲಾ ಉನ್ನತ ಪ್ರಶಸ್ತಿಗಳೂ ಅವರಿಗೆ ತಲುಪಿವೆ. ಅವರ ನೇತೃತ್ವದಲ್ಲಿ ನಡೆಯುತ್ತಾ ಇರತಕ್ಕಂಥ ಈ ಒಂದು ಸಂಸ್ಥೆ ಏನಿದೆ, ಅವರು ಈ ಕಾರ್ಯಕ್ಕಾಗಿ ಬಾಗಿಲಿನಿಂದ ಬಾಗಿಲಿಗೆ ಅಲೆಯುವುದು, ಒಂದು ಲೆಟರ್ ಹಿಡಿದುಕೊಂಡು ಮತ್ತೊಬ್ಬರು ಓಡಾಡಿದರೂ ಕೂಡ

ರಾಜ್‌ಕುಮಾರ್‌ರವರು ಓಡಾಡಿದ ಲೆಕ್ಕವೇ. ಹಾಗಾಗಿ ಯಾವುದೇ ಕಾರಣಕ್ಕೆ ಅದನ್ನು ಹಿಡಿದು ಇಟ್ಟುಕೊಳ್ಳದೆ, ನಾವೆಲ್ಲರೂ ಸೇರಿ ಮನಸ್ಸು ಮಾಡಿದರೆ ಅದು ಸಾಧ್ಯವಾದೀತು. ಯಾಕೆಂದರೆ ಡಾ|| ರಾಜ್ ಕುಮಾರ್‌ರವರು ಕಳೆದ 35 ವರ್ಷಗಳಿಂದ ರಾಜ್ಯದ ಎಲ್ಲರ ಮನಸ್ಸಿನಲ್ಲಿ, ಹೃದಯದಲ್ಲಿ ಕುಳಿತಿದ್ದಾರೆ. ಅವರ ಹೆಸರಿನಲ್ಲಿ ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ ಏನು ನಡೆಯುತ್ತಾ ಇದೆ, ಅವರಿಗೆ ಅದೇ ಸೈಟ್‌ನ್ನು ಕೊಡುವ ಬಗ್ಗೆ ನಾವೆಲ್ಲರೂ ಸೇರಿ ಪ್ರಯತ್ನಪಟ್ಟು ಮಾಡಿಕೊಡೋಣ ಎಂದು ಹೇಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೂ, ಎಲ್ಲಾ ಹಿರಿಯ ಶಾಸಕರಿಗೂ ಮಾನ್ಯ ವಿರೋಧಪಕ್ಷದವರಿಗೂ, ನಮ್ಮ ವಿರೋಧ ಪಕ್ಷದ ನಾಯಕರಿಗೂ, ನನ್ನ ಹೃದಯ ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಮೂರು ಘಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1.53 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಮೂರು ಘಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು ಛೇರ್ಮನ್‌ರಾದ (ಶ್ರೀ ಜಿ.ಎಸ್ ಶಿವನಂಜಪ್ಪನವರು) ಪೀಠವನ್ನಲಂಕರಿಸಿದ್ದರು)

+ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಸನ್ಮಾನ್ಯ ಛೇರ್ಮನ್‌ರವರೇ, ಸರ್ಕಾರ ಮಂಡಿಸಿದ ಬೇಡಿಕೆಗಳಲ್ಲಿನ ಕೆಲವು ಪ್ರಮುಖ ವಿಚಾರಗಳ ಬಗ್ಗೆ ಮಾತ್ರ ನಾನು ಹೇಳುವುದಕ್ಕೆ ಇಚ್ಛೆಸುತ್ತೇನೆ. ಮೊದಲನೆಯದಾಗಿ, ಪ್ರವಾಸೋದ್ಯಮಕ್ಕೆ ಈ ಸರ್ಕಾರ ಎಷ್ಟು ಗಮನ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲವೆಂದು ಹೇಳಬೇಕಾಗಿದೆ. ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ನಮ್ಮ ರಾಜ್ಯದಲ್ಲಿರುವಷ್ಟು ಅವಕಾಶಗಳು ಬೇರೆಲ್ಲಿಯೂ ಇರುವುದಕ್ಕೆ ಸಾಧ್ಯವಿಲ್ಲ. ರಾಜ್ಯದಲ್ಲಿ ಹಲವಾರು ಪುರಾತನ ಕೋಟೆಗಳು, ಪ್ರದೇಶಗಳು ಮತ್ತು ಆಕರ್ಷಣೀಯ ಕರಾವಳಿ ಪ್ರದೇಶಗಳಿವೆ. ಕೊಡಗಿನಿಂದ ಹಿಡಿದು ಉತ್ತರ ಕನ್ನಡದ ಕರಾವಳಿ ಪ್ರದೇಶಗಳವರೆಗೆ ಪ್ರವಾಸಿ ಕೇಂದ್ರಗಳನ್ನಾಗಿ ಮಾಡುವುದಕ್ಕೆ ಎಲ್ಲಾ ಅವಕಾಶಗಳು ಇಲ್ಲಿವೆ. ಇವೊತ್ತು ಪುರಾತನ ಕೋಟೆಗಳು ಶಿಥಿಲಗೊಳ್ಳುತ್ತಿದ್ದು ಹಾಳಾಗುತ್ತಿರುವುದರಿಂದ ಅವುಗಳನ್ನು ರಕ್ಷಿಸಿ ಮತ್ತಷ್ಟು ಆಕರ್ಷಣೀಯ ಮಾಡುವ ಕಡೆಗೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿದೆ. ಮುಖ್ಯವಾಗಿ ಇಂತಹ ಪುರಾತನ ಕೋಟೆಗಳನ್ನು ರಕ್ಷಿಸಿ ಉಳಿಸಿಕೊಳ್ಳುವುದರ ಜೊತಗೆ ಅದರ ಆಸುಪಾಸುಗಳಲ್ಲಿ ಒಳ್ಳೆಯ ಉದ್ಯಾನವನ ನಿರ್ಮಿಸಿ ಬೆಳೆಸುವಂತಾದ್ದು ಮತ್ತು ಇಲ್ಲಿಗೆ ಬರುವ ಪ್ರವಾಸಿಗರಿಗೆ ಉಳಿದುಕೊಳ್ಳಲು ಅತಿಥಿ ಗೃಹಗಳನ್ನು ಹಾಗೂ ಪ್ರವಾಸಿ ತಾಣ ತಲುಪಲು ರಸ್ತೆ ವ್ಯವಸ್ಥೆ ಮಾಡಿದಾಗ ಮಾತ್ರ ಪ್ರವಾಸಿ ಕೇಂದ್ರಗಳು ಜನರನ್ನು ಆಕರ್ಷಿಸಲು ಸಾಧ್ಯವಾಗುತ್ತದೆ. ಕೊಡಗಿನಿಂದ ಹೊರಟು ಉತ್ತರ ಕನ್ನಡದವರೆಗೆ ನಾವು ರಸ್ತೆಯಲ್ಲಿ ಹೊರಟಾಗ ಹಲವಾರು ಅತ್ಯಂತ ರಮಣೀಯ, ಸುಂದರ ತಾಣಗಳು ನಮಗೆ ಕಾಣಸಿಗುತ್ತವೆ. ತಮಗೆಲ್ಲರಿಗೂ ಗೊತ್ತಿರುವಂತೆ ನಮ್ಮ ಜಿಲ್ಲೆಯಲ್ಲಿ ಬಹಳ ಮುಖ್ಯವಾದ ಪವಿತ್ರ ಕ್ಷೇತ್ರಗಳಾದ ಕೊಲ್ಲೂರು, ಕಟೀಲು, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ ಇದ್ದು ಅದರೊಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ರಮಣೀಯ ಕರಾವಳಿ ಪ್ರದೇಶಗಳನ್ನು ನಮ್ಮ ದೇಶದ ಯಾವುದೇ ಮೂಲೆಗೆ

ಹೋದರೂ ಬೇರೆಲ್ಲಿಯೂ ಕಾಣಲು ಸಾಧ್ಯವಿಲ್ಲ. ಮರವಂತೆ, ಇದೊಂದು ಆಕರ್ಷಣೀಯ ಜಾಗ, ಬೀಚ್ ಆಗಿದ್ದು, ಮಲ್ಪೆ, ಪಣಂಬೂರು, ಉಳ್ಳಾಲದ ಹತ್ತಿರವೂ ಬೀಚ್‌ಗಳಿವೆ. ಇದರ ಕಡೆ ಸರ್ಕಾರ ಗಮನ ಕೊಟ್ಟು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಮಾತ್ರ ಇಂತಹ ಪ್ರದೇಶಗಳು ಪ್ರವಾಸಿಗರನ್ನು ಆಕರ್ಷಿಸಲು ಸಾಧ್ಯವಾಗುತ್ತದೆ. ನಾವೆಲ್ಲಾ ಸಮಿತಿ ವತಿಯಿಂದ ಪ್ರವಾಸ ಹೋದಾಗ ಜೈಪುರ, ಆಗ್ರಾ, ವಾರಣಾಸಿ, ಕುಲು-ಮನಾಲಿ ಇರಬಹುದು, ಇಂತಹ ಪ್ರದೇಶಗಳಿಗೆ ಹೋದಾಗ ಅಲ್ಲಿ ಹೆಚ್ಚಾಗಿ ಪರಕೀಯರೇ ಇರುತ್ತಾರೆ.

ಆ ಪ್ರವಾಸಿ ಕೇಂದ್ರವನ್ನು ನೋಡಿ ಸಂತೋಷ ಪಡಲು ಅವರು ಬಂದಿರುತ್ತಾರೆ. ಆದ್ದರಿಂದ ನಾವು ಯಾವುದೇ ಒಂದು ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಿದಾಗ ಅಲ್ಲಿಗೆ ಹೊರದೇಶದವರು ಬರುವುದರ ಮೂಲಕ ನಮ್ಮ ರಾಜ್ಯಕ್ಕೆ ಆದಾಯ ಬರುತ್ತದೆ. ಇದರ ಜೊತೆಗೆ ಹಲವಾರು ಯುವಕರಿಗೆ ಉದ್ಯೋಗವನ್ನು ಒದಗಿಸಲು ಸಾಧ್ಯವಾಗುತ್ತದೆ. ಪ್ರವಾಸಿ ಕೇಂದ್ರಗಳಲ್ಲಿ ಎ,ಬಿ,ಸಿ ಎಂದು ತಾವು ವಿಭಾಗ ಮಾಡಿದ್ದೀರಿ. ಅದರ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ. ಆದರೆ ನಮ್ಮ ರಾಜ್ಯದ ಹಲವರು ಇಂಥ ಭಾಗಗಳನ್ನು ಗುರುತಿಸಿ ಅದರ ಸಮಗ್ರ ಅಭಿವೃದ್ಧಿ ಮಾಡಲು ಹಣವನ್ನು ಒದಗಿಸಬೇಕು. ಕೊಡಗು, ಉತ್ತರ ಕನ್ನಡವನ್ನು ಸಂಪೂರ್ಣವಾಗಿ ಪ್ರವಾಸಿಕೇಂದ್ರವನ್ನಾಗಿ ಮಾಡಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ನರಹರಿ ಬೆಟ್ಟವೆಂದು ಇದೆ. ಪಾಂಡವರು ಅಲ್ಲಿ ಬಂದು ಸೇರಿದ್ದಂಥ ಜಾಗ. ಅಲ್ಲಿ ಶಂಕ, ಚಕ್ರ, ಗದಾ, ಪದ್ಮ ಎನ್ನತಕ್ಕ ಪುಣ್ಯ ತೀರ್ಥ ಕೆರೆಗಳಿವೆ. ಈ ಸಲ ಅದರ ಜೀರ್ಣೋದ್ಧಾರವಾಗಿದೆ. ಅದು ದೊಡ್ಡ ಬೆಟ್ಟದಲ್ಲಿದೆ. ಅದರ ಆಸುಪಾಸಿನಲ್ಲಿ ಕಾಡು ಇದೆ. ಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದುಹೋಗುತ್ತದೆ. ಸನಿಹದಲ್ಲೇ ನೇತ್ರಾವತಿ ನದಿ ಇದೆ. ಇಂಥ ಪ್ರದೇಶವನ್ನು ಅಭಿವೃದ್ಧಿಪಡಿಸಿದಾಗ ಎಷ್ಟೋ ಪ್ರವಾಸಿಗರನ್ನು ಆಕರ್ಷಿಸಲು ಸಾಧ್ಯವಾಗುತ್ತದೆ. ಇಲ್ಲಿ ವಸತಿಗೃಹ, ದೊಡ್ಡ ಉದ್ಯಾನವನ, ಸ್ವಲ್ಪಮಟ್ಟಿಗೆ ಕಾಡು ಬೆಳೆಸುವುದರ ಮೂಲಕ, ಪ್ರಾಣಿಗಳನ್ನು ಇಡುವ ಮೂಲಕ ಅಲ್ಲಿಗೆ ಜನರು ದೊಡ್ಡ ಸಂಖ್ಯೆಯಲ್ಲಿ ಬರಲು ಸಾಧ್ಯವಾಗುತ್ತದೆ. ಆದ್ದರಿಂದ ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡವನ್ನು ಸಂಪೂರ್ಣವಾಗಿ ಪ್ರವಾಸಿಕೇಂದ್ರವನ್ನಾಗಿ ಅಭಿವೃದ್ಧಿ ಮಾಡಬೇಕು ಆ ಮೂಲಕ ಎಷ್ಟೋ ಜನರಿಗೆ ಉದ್ಯೋಗವನ್ನು ಕೊಡಲು ಸಾಧ್ಯವಾಗುತ್ತದೆ ಮತ್ತು ಹೆಚ್ಚು ಪ್ರವಾಸಿಗರೂ ಸಹ ಬರುತ್ತಾರೆ. ನಮ್ಮ ಜಿಲ್ಲೆಯಲ್ಲಿರುವ ದೊಡ್ಡ ಅರಣ್ಯ ಪ್ರದೇಶದ ಬಗ್ಗೆ ತಮಗೆಲ್ಲ ಗೊತ್ತಿದೆ. ಅಲ್ಲಿ ಈಗ ದೊಡ್ಡ ದೊಡ್ಡ ಉದ್ದಿಮೆಗಳು ಬರುತ್ತಿರುವ ಕಾರಣ ಆ ಅರಣ್ಯ ಪ್ರದೇಶವೆಲ್ಲಾ ನಾಶವಾಗುತ್ತಿದೆ. ಇದರಿಂದ ಪ್ರಕೃತಿಯ ಸಮತೋಲನ ಕೆಡುತ್ತಿದೆ. ಈ ವರ್ಷ ನಮ್ಮ ಜಿಲ್ಲೆ ಮಳೆಯಲ್ಲಿ ವ್ಯತ್ಯಾಸವನ್ನು ಕಂಡಿದೆ. ಪ್ರತಿ ಜೂನ್ ತಿಂಗಳ ಮೊದಲ ವಾರದಲ್ಲಿ ಬರಬೇಕಿದ್ದ ಮಳೆ ಈ ಬಾರಿ ಜೂನ್ ಅಂತ್ಯಕ್ಕೆ ಪ್ರಾರಂಭಗೊಂಡು ಇಲ್ಲಿಯವರೆಗೆ ಮಳೆ ನಿಂತಿಲ್ಲ. ಈ ರೀತಿ ಪ್ರಕೃತಿಯ ಅಸಮತೋಲನದಿಂದಾಗಿ ನಮ್ಮ ಜಿಲ್ಲೆಯಲ್ಲಿ ವ್ಯತ್ಯಾಸವಾಗತಕ್ಕದ್ದನ್ನು ಕಾಣುತ್ತಿದ್ದೇವೆ. ಆದ್ದರಿಂದ ದೊಡ್ಡ ದೊಡ್ಡ ಉದ್ದಿಮೆಗಳನ್ನು ಮಾಡುವುದರ ಬದಲಾಗಿ ಪ್ರವಾಸಿಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಿದಾಗ ಖಂಡಿತವಾಗಿ ಸುಂದರವಾದ ರಾಜ್ಯವನ್ನಾಗಿ ಮಾಡಲು ಸಾಧ್ಯವಾಗುತ್ತದೆ. ಸರ್ಕಾರ ಈ ಕಡೆ ಗಮನಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಕಲೆ ಸಂಸ್ಕೃತಿಯ ಬಗ್ಗೆ ಮಾತನಾಡುವುದಾದರೆ, ಸರ್ಕಾರ ಇಂದು ಕಲೆಗಳಿಗೆ ಕೊಡುತ್ತಿರುವ ಪ್ರೋತ್ಸಾಹವೇನೂ

ಸಾಕಾಗುವುದಿಲ್ಲ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಕೋಳಿ ಜೂಜು, ಕಂಬಳ, ಯಕ್ಷಗಾನ ಈ ಮೂರು ಅತ್ಯಂತ ಪುರಾತನವಾದ ಕಲೆಗಳು. ರೈತರು ವ್ಯವಸಾಯ ಮಾಡಿ ಸಮಯಸಿಕ್ಕಿದಂಥ ಸಂದರ್ಭದಲ್ಲಿ, ಹಬ್ಬ ಹರಿದಿನಗಳಲ್ಲಿ, ಉತ್ಸವಗಳ ಸಂದರ್ಭದಲ್ಲಿ ಕೋಳಿಜೂಜಿನ ವ್ಯವಸ್ಥೆ ಪುರಾತನ ಕಾಲದಿಂದ ನಡೆದುಕೊಂಡು ಬಂದಿದೆ. ಆದರೆ ಇದನ್ನು ಇಂದು ಕೇವಲ ಶರಾಬು ವ್ಯಾಪಾರ ಮಾಡುವ ಅಂಗಡಿಗಳ ಮುಂದೆ ಮಾಡುತ್ತಿದ್ದಾರೆ. ಹಿಂದೆ ಒಂದು ಒಳ್ಳೆಯ ಉದ್ದೇಶದಿಂದ ಕೋಳಿ ಜೂಜು ನಡೆಯುತ್ತಿತ್ತು. ಹಬ್ಬ ಹರಿದಿನಗಳ ಸಂದರ್ಭದಲ್ಲಿ ಕೋಳಿ ಜೂಜು ಮಾಡಲು ಸರ್ಕಾರ ಅವಕಾಶ ಮಾಡಿಕೊಡಬೇಕಾಗಿದೆ. ಕಂಬಳ ಅತ್ಯಂತ ಜನಪ್ರಿಯವಾದ ಕ್ರೀಡೆ. ಹಿಂದೆ ಈಗ ಇರುವಂತೆ ಸಿನಿಮಾ ಮುಂತಾದ ಮನೋರಂಜನೆಗಳು ಇರಲಿಲ್ಲ. ರೈತರಿಗೆ ಸಮಯ ಸಿಕ್ಕಿದಾಗ ಕಂಬಳ, ಅಂದರೆ ಕೋಣಗಳನ್ನು ಸಾಕಿ ಓಡಿಸತಕ್ಕ ಸ್ಪರ್ಧೆ ಮಾಡುತ್ತಿದ್ದರು. ಆದರೆ ಇದು ಕೋಣಗಳನ್ನೇ ಸಾಕುವುದು ದುಬಾರಿಯಾಗಿದೆ. ಸಾಮಾನ್ಯ ರೈತನಿಗೆ ಕೋಣಗಳನ್ನು ಸಾಕಲು ಆಗುವುದಿಲ್ಲ. ಯಾರು ಬೊಂಬಾಯಿಗೆ ಹೋಗಿ ವ್ಯಾಪಾರ ವಹಿವಾಟು ಮಾಡಿಕೊಂಡು ಆರ್ಥಿಕವಾಗಿ ಅನುಕೂಲಸ್ಥರಾಗಿದ್ದಾರೆ. ಅಂಥವರು ಮಾತ್ರ ಕೋಣಗಳನ್ನು ಸಾಕಿ ಓಡಿಸುವಂಥ ವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ನಡೆಯುತ್ತಿದೆ. ಸರ್ಕಾರ ಈ ಕಂಬಳ ಕ್ರೀಡೆಗೆ ಬೇಕಾದ ಪ್ರೋತ್ಸಾಹವನ್ನು ಕೊಡುತ್ತಿಲ್ಲ. 1980ರಿಂದ ಕಂಬಳದ ಸಮಿತಿಯವರು ರಾಜ್ಯದ ಕೆಲವು ಮಂತ್ರಿಗಳನ್ನು, ಶಾಸಕರನ್ನು ಕರೆದು ಮನವಿಕೊಟ್ಟು ಈ ಕ್ರೀಡೆಗೆ ಬೇಕಾಗಿರುವ ಕ್ರಿಡಾಂಗಣವನ್ನು ಮಾಡಿಕೊಡಬೇಕು, ಸರ್ಕಾರದಿಂದ ಸಹಾಯಧನವನ್ನು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಅದರ ಬಗ್ಗೆ ಸಂಬಂಧಪಟ್ಟ ಸಚಿವರು ಭರವಸೆಯನ್ನು ಕೊಟ್ಟಿದ್ದರೂ ಸಹ ಇವತ್ತಿನವರೆಗೆ ಆ ಕೆಲಸವಾಗಿಲ್ಲ. ಕಂಬಳ ಅತ್ಯಂತ ಜನಾಕರ್ಷಣೀಯವಾದುದು. ಸರ್ಕಾರ ಇದರ ಬಗ್ಗೆ ಗಮನಕೊಟ್ಟು ನಮ್ಮ ಜಿಲ್ಲೆಯಲ್ಲಿರುವ ಈ ಕಲೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಪ್ರೋತ್ಸಾಹ ಕೊಡಬೇಕಾಗಿದೆ, ಅದಕ್ಕೆ ಬೇಕಾಗಿರುವ ಕ್ರೀಡಾಂಗಣದ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಕೋಣಗಳ ಹಿಂದೆ ಓಡುವ ವ್ಯಕ್ತಿಗಳು ಸುಮಾರು20 ವರ್ಷಗಳಿಂದ35 ವರ್ಷದ ವಯೋಮಾನದವರು. ಆದರೆ ಯಾವುದೇ ರೀತಿಯಾದ ನಿವೃತ್ತಿವೇತನವಿಲ್ಲ. ಇಪ್ಪತ್ತು, ಅಥವಾ ಹದಿನೈದು ವರ್ಷಗಳ ಓಡುವಿಕೆಯ ನಂತರ ವಯಸ್ಸಿನ ತೊಂದರೆಯಿಂದ ಓಡಲು ಆಗುವುದಿಲ್ಲ. ಆದ್ದರಿಂದ ಅಂಥವರಿಗೆ ಮಾಶನವನ್ನು, ಗೌರವಧನವನ್ನು ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕು.

ಇನ್ನು ಯಕ್ಷಗಾನಬಯಲಾಟದ ಬಗ್ಗೆ ಹೇಳುವುದಾದರೆ, ನಮ್ಮ ಹಳ್ಳಿಗೆ ಹೋದಾಗ ಅಲ್ಲಿರುವ ಹಿರಿಯರು ಯಾರಿದ್ದಾರೆ, ಅವರ ಹತ್ತಿರ ನಮ್ಮ ದೇಶದ ಚರಿತ್ರೆ, ಮಹಾಭಾರತ, ರಾಮಾಯಣ ಮುಂತಾದ ಬಗ್ಗೆ ಕೇಳಿದಾಗ ಹಲವಾರು ಕಥೆಗಳನ್ನು ಅವರು ಪ್ರಸ್ತಾಪ ಮಾಡುತ್ತಾರೆ. ಅವರಿಗೆ ವಿದ್ಯಾಭ್ಯಾಸವಿಲ್ಲ. ಅವರು ಓದಿ ಅದನ್ನು ತಿಳಿದುಕೊಂಡಿಲ್ಲ. ಆದರೆ ಯಕ್ಷಗಾನವನ್ನು ನೋಡಿಕೊಂಡು ಮಹಾಭಾರತ, ರಾಮಾಯಣದ ಬಗ್ಗೆ ಹೇಳುವಂತಿರಬೇಕಾದರೆ ಆ ಯಕ್ಷಗಾನ ಎಷ್ಟು ಜನಪ್ರಿಯವಾಗಿದೆಯೆಂಬುದನ್ನು ತಾವು ತಿಳಿದುಕೊಳ್ಳಬೇಕಾಗಿದೆ. ಸರ್ಕಾರ ಇದಕ್ಕೆ ನೀಡುತ್ತಿರುವ ಪ್ರೋತ್ಸಾಹ ಏನೇನೂ ಸಾಕಾಗುವುದಿಲ್ಲ. ನಮ್ಮ ಶಾಸಕರ ಮಿತ್ರರಾದ ಕುಂಬ್ಳೆ ಸುಂದರ್‌ರಾವ್‌ರವರು ಆ ಕ್ಷೇತ್ರದಲ್ಲಿ ಕೆಲಸ ಮಾಡಿ ಪ್ರಸಿದ್ಧ ಯಕ್ಷಗಾನಪಟುವಾಗಿ ಇಲ್ಲಿ ಬಂದಿದ್ದಾರೆ. ಅವರು ನಮ್ಮ ಪಕ್ಷದ

ಶಾಸಕರಾಗಿ ಗೆದ್ದುಬಂದಿದ್ದಾರೆ. ಅವರು ಕೆಲಸ ಮಾಡಿದಂಥ ಆ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಹೋರಾಟ ಮಾಡಿದಾಗ ಸರ್ಕಾರ ಸಹ ಸರಿಯಾದ ಗಮನಕೊಡುತ್ತಿಲ್ಲ. ಬೆಂಗಳೂರಿನಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶವನ್ನು ಕೊಡದಿರುವ ಸಂದರ್ಭದಲ್ಲಿ ಸರ್ಕಾರಕ್ಕೆ ಇದರ ಬಗ್ಗೆ ಇರತಕ್ಕ ಕಳಕಳಿಯೇನು ಎಂಬುದು ಗೊತ್ತಾಗುತ್ತದೆ. ಕಲೆ ಸಂಸ್ಕೃತಿ ಸಚಿವರು ಇದರ ಬಗ್ಗೆ ಎಷ್ಟು ಗಮನಕೊಟ್ಟಿದ್ದಾರೆ? ಇಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಕೊಟ್ಟರೆ ಅಲ್ಲಿರುವ ಕುರ್ಚಿಗಳನ್ನು ಹಾಳುಮಾಡುತ್ತಾರೆ, ಗಲೀಜು ಮಾಡುತ್ತಾರೆಂದು ಉತ್ತರ ಕೊಟ್ಟಿದ್ದಾರೆ. ಇದು ಸರಿಯಾದುದಲ್ಲ ಮತ್ತು ಸರ್ಕಾರಕ್ಕೆ ಒಳ್ಳೆಯದೂ ಅಲ್ಲ. ಇವತ್ತು ಕಲೆಗಳಿಗೆ ಪ್ರೋತ್ಸಾಹ ಕೊಡಬೇಕಾದರೆ ಆ ಕಲಾಕ್ಷೇತ್ರವನ್ನು ಇವರಿಗೂ ಸಹ ಬಾಡಿಗೆ ಮೂಲಕ ಕೊಡುವುದು ಉಚಿತ. ಈ ರೀತಿ ಕೊಡದಿದ್ದರೆ ಬಹುಶಃ ಇದನ್ನು ಯಾವುದೇ ಪ್ರದರ್ಶನಗಳಿಗೆ ಕೊಡುವುದಿಲ್ಲವೆಂದು ಬೋರ್ಡ್ ಹಾಕುವುದು ಒಳ್ಳೆಯದು. ಇದು ಕೇವಲ ನೋಡಲು ಮಾತ್ರ ಇದೆ ಉಪಯೋಗ ಮಾಡಲು ಇಲ್ಲವೆಂದು ಬೋರ್ಡ್‌ನ್ನು ಹಾಕಿದರೆ ಒಳ್ಳೆಯದು. ಇದರ ಬಗ್ಗೆ ಹಲವಾರುಬಾರಿ ಪ್ರಸ್ತಾಪ ಮಾಡಿದರು ಸಹ ಕ್ರಮತೆಗೆದುಕೊಂಡಿಲ್ಲ.

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರುಕ್ಮಯ್ಯಪೂಜಾರಿರವರು ಯಕ್ಷಗಾನದ ಬಗ್ಗೆ ಮತ್ತು ಪ್ರವಾಸೋದ್ಯಮದ ಬಗ್ಗೆ ಮಾತನಾಡುತ್ತಿದ್ದಾರೆ. ಈಗ ಸಂಬಂಧಪಟ್ಟ ಮಂತ್ರಿಯವರು ಇಲ್ಲಿ ಇಲ್ಲವೆಂದರೆ ನಮಗೆ ಬಹಳ ನೋವಾಗುತ್ತದೆ. ಬೇರೆ ಸಚಿವರುಗಳು ಇಲ್ಲಿ ಇರಬಹುದು. ಆದರೆ ಆ ಇಲಾಖೆಗೆ ಸಂಬಂಧಪಟ್ಟ ವಿಚಾರವಿದ್ದಾಗ ಆ ಸಚಿವರು ಇದ್ದಿದ್ದರೆ ಬಹುಶಃ ಸದಸ್ಯರು ಕೊಡುವ ಸಲಹೆಗಳನ್ನು ಸ್ವೀಕಾರ ಮಾಡಲು ಅನುಕೂಲವಾಗುತ್ತದೆ. ಏಕೆಂದರೆ ನಾವೇನು ಇಲ್ಲಿ ಹೇಳುತ್ತೇವೆ, ಅದು ಅರಣ್ಯರೋದನವಾಗಬಾರದು.

ಮಾನ್ಯ ಸದಸ್ಯರು : ಹಿರಿಯ ಸಚಿವರಿದ್ದಾರೆ. ಅವರು ಬರೆದುಕೊಳ್ಳುತ್ತಾರೆ.

(ಗೊಂದಲ)

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳೆಂದರೆ ಅವರ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ ಇರುವುದಿಲ್ಲ. ಯಾರು ಸಚಿವರು ಇಲ್ಲಿರುತ್ತಾರೋ ಅವರು ಸರ್ಕಾರ. ಮಾನ್ಯ ಸದಸ್ಯರೇನು ಹೇಳುತ್ತಾರೋ ಅದನ್ನು ಹೇಳಲಿ, ನಾವು ಬರೆದುಕೊಂಡು ಮಂತ್ರಿಗಳ ಗಮನಕ್ಕೆ ತರುತ್ತೇವೆ. ಅವರೇ ಬರಬೇಕು, ಇವರೇ ಬರಬೇಕೆಂದೇನಿಲ್ಲ.

ಛೇರ್ಮನ್ : ಸಂಬಂಧಪಟ್ಟ ಸಚಿವರನ್ನು ಸ್ವಲ್ಪ ಕರೆಸಿಬಿಡಿ.

ಶ್ರೀ ಹೆಚ್. ಡಿ. ಬಸವರಾಜ್ : ಸದಸ್ಯರು ಅಧ್ಯಯನ ಮಾಡಿಕೊಂಡು ಬಂದಿರುತ್ತಾರೆ. ಸಂಬಂಧಪಟ್ಟ ಸಚಿವರು ಇದ್ದರೆಂದರೆ ಅವರಿಂದ ಮಾಹಿತಿ ಪಡೆಯಬಹುದು, ಸದಸ್ಯರ ಸಲಹೆಗಳು ಉಪಯೋಗವಾಗಬೇಕು.

ಶ್ರೀ ಐ. ಎಂ. ಜಯರಾಮ್‌ಶೆಟ್ಟಿ : ಯಕ್ಷಗಾನದ ಬಗ್ಗೆ ರವೀಂದ್ರಕಲಾ ಕ್ಷೇತ್ರದಲ್ಲಿ ಬಹಳ ಕೆಳಮಟ್ಟದಲ್ಲಿ ಟೀಕೆ ಮಾಡಿದ್ದಾರೆ. ಗ್ರಾಮೀಣ ಪ್ರದೇಶದವರು ನೋಡುವ ಯಕ್ಷಗಾನವನ್ನು ಅವರು ಉಗುಳುತ್ತಾರೆ, ಸಭಾಂಗಣವನ್ನು ಹಾಳು ಮಾಡುತ್ತಾರೆಂದು ತುಂಬಾ ಕೆಳಮಟ್ಟದಲ್ಲಿ ಟೀಕೆ ಮಾಡಿ

ಅವರಿಗೆ ಸಭಾಂಗಣವನ್ನೇ ಕೊಡಬಾರದೆಂದು ಏನು ಹೇಳಿದ್ದಾರೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರೆ ನಮಗೆ ಸಮಾಧಾನವಾಗುತ್ತದೆ. ಏಕೆಂದರೆ ಇನ್ನು ಮುಂದೆ ಇಲ್ಲಿ ಯಕ್ಷಗಾನ ಮಾಡಲು ಅವಕಾಶವಿದೆಯೋ ಇಲ್ಲವೋ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿದರೆ ನಮಗೆ ಸಂತೋಷವಾಗುತ್ತದೆ.

ಶ್ರೀ ಕುಂಬ್ಳೆ ಸುಂದರರಾವ್ : ಸನ್ಮಾನ್ಯ ಉಪಾಧ್ಯಕ್ಷರೆ, ಒಂದು ಸಣ್ಣ ಸ್ಪಷ್ಟೀಕರಣವನ್ನು ಕೊಡುವುದು ನನ್ನ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಮೊನ್ನೆ ನಾನು ಯಕ್ಷಗಾನದ ಬಗ್ಗೆ, ಪ್ರವಾಸೋದ್ಯಮದ ಬಗ್ಗೆ ಮಾತನಾಡಿದಾಗ ರವೀಂದ್ರ ಕಲಾಕ್ಷೇತ್ರವನ್ನು ಕೊಡದೆ ಇದ್ದುದ್ದಕ್ಕೆ ತೀವ್ರ ಆಕ್ಷೇಪವನ್ನು ಮಾಡಿದೆ, ಎರಡು ದಿನ ಬಿಟ್ಟು ಸಂಸ್ಕೃತ ಸಚಿವೆಯರು ನಮ್ಮ ದಕ್ಷಿಣ ಕನ್ನಡದ 4 ಜನ ಶಾಸಕರನ್ನು ಮತ್ತು ನನ್ನನ್ನೂ ಸಹ ಕರೆದು ವಿಮರ್ಶೆ ಮಾಡಿ, ರವೀಂದ್ರ ಕಲಾ ಕ್ಷೇತ್ರವನ್ನು ಯಕ್ಷಗಾನಕ್ಕೆ ಕೊಡುವುದು ಎಂದು ತೀರ್ಮಾನವಾಗಿದೆ. ಆದ್ದರಿಂದ ರುಕ್ಮಯ್ಯ ಪೂಜಾರಿಯವರು ಆ ವಿಷಯವನ್ನು ಪ್ರಸ್ತಾಪ ಮಾಡದೆ ಮುಂದೆ ಹೋಗುವುದು ಒಳ್ಳೆಯದು ಎಂದದು ನಾನು ಭಾವಿಸುತ್ತೇನೆ. ಇದರ ಅರ್ಥ ಏನು ಎಂದರೆ ಯಕ್ಷಗಾನವನ್ನು ಉದ್ಧಾರಮಾಡಿದರು, ನಮಗೇನು ಕೊಡಬೇಕು ಅದೆಲ್ಲವನ್ನೂ ಕೊಟ್ಟರು ಎಂದು ಅಲ್ಲ. ಯಕ್ಷಗಾನಕ್ಕೆ ಸಂಬಂಧಪಟ್ಟ ಸಾವಿರ ಸಮಸ್ಯೆಗಳು ಹಾಗೆ ಉಳಿದಿವೆ. ಕಲಾವಿದರ ನಿವೃತ್ತಿ ವೇತನ ಇರಬಹುದು. ಯಕ್ಷಗಾನದ ಅಕಾಡಮಿ ಇರಬಹುದು. ಈ ಎಲ್ಲಾ ಸಮಸ್ಯೆಗಳಿಗೆ ಉತ್ತರ ಸಿಗಲಿಲ್ಲ. ರವೀಂದ್ರ ಕಲಾಕ್ಷೇತ್ರದ ಮಟ್ಟಿಗೆ ಮಾತ್ರ ಔದಾರ್ಯ ತೋರಿಸಿದ್ದಾರೆ. ಉಳಿದುದ್ದಕ್ಕೆ ಅವರ ಲಕ್ಷ್ಯವನ್ನು ಆಕರ್ಷಿಸುವುದಕ್ಕೆ, ಅವರ ಔದಾರ್ಯವನ್ನು ಪಡೆಯಲಿಕ್ಕೆ ಮಾನ್ಯ ಪೂಜಾರಿಯವರು ಉಳಿದ ಬೇಕಾದಷ್ಟು ವಿಷಯಗಳನ್ನು ಬಳಸಿಕೊಳ್ಳಬಹುದು, ಈ ಒಂದು ಅಂಶವನ್ನು ಬಿಟ್ಟು ಎಂದು ಹೇಳುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೆ, ಇದರಿಂದ ನನಗೆ ಸ್ವಲ್ಪ ಸಂತೋಷವಾಗುತ್ತದೆ ಏಕೆಂದರೆ ನನಗೂ ಕೂಡ ಯಕ್ಷಗಾನದ ಬಗ್ಗೆ ಒಳ್ಳೆಯ ಅಭಿಮಾನ ಇದೆ, ನಾನು ಯಕ್ಷಗಾನದಲ್ಲಿ ವೇಷಹಾಕಿಕೊಂಡು ಸ್ವಲ್ಪ ಕುಣಿದು-ಕುಪ್ಪಳಿಸಿದ ಅನುಭವ ಇದೆ. ಆ ದೃಷ್ಟಿಯಿಂದ ಈ ರವೀಂದ್ರ ಕಲಾಕ್ಷೇತ್ರವನ್ನು ಯಕ್ಷಗಾನಕ್ಕಾಗಿ ಕೊಟ್ಟಿದ್ದಕ್ಕೆ ನಾನೂ ಕೂಡ ವೈಯಕ್ತಿಕವಾಗಿ ಸಚಿವೆಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇನ್ನೊಂದು ಪ್ರಾಮುಖ್ಯವಾಗಿರತಕ್ಕದ್ದು ತಮಗೆಲ್ಲಾ ಗೊತ್ತಿರುವ ವಿಷಯ ಎಂದರೆ ಸಾಧಾರಣವಾಗಿ 10 ರಿಂದ 15ರ ಪ್ರಾಯದಿಂದ ಹಿಡಿದು 60 ರಿಂದ 70ರ ಪ್ರಾಯದವರು ಈ ಯಕ್ಷಗಾನದ ಕಲಾವಿದರಾಗಿ ಕೆಲಸಮಾಡುತ್ತಿದ್ದಾರೆ. ಅವರು ರಾತ್ರಿ ಪೂರ್ತಿ ನಿದ್ದೆಗೆಟ್ಟು ಅದರಲ್ಲಿ ಭಾಗವಹಿಸಬೇಕಾಗುತ್ತದೆ. ಆದರೆ ಈವತ್ತು ಅದರಿಂದ ಬರುವ ಸಂಭಾವನೆ ಬಹಳ ಕಡಿಮೆ ಇರುವುದರಿಂದ ಅವರ ಜೀವನಕ್ಕೆ ಸಾಕಾಗುವುದಿಲ್ಲ. ಅದರ ಆದಾಯ ಕಡಿಮೆ ಬರುವುದರಿಂದ ಕಲಾವಿದರಿಗೆ ಬೇಕಾದಷ್ಟು ಸಂಭಾವನೆಯನ್ನು ಕೊಡಲು ಆಗುವುದಿಲ್ಲ. ಅಂಥ ಕಲಾವಿದರ ಬಗ್ಗೆ ನಾವು ಗೌರವ ಕೊಡುವುದರ ಜೊತೆಗೆ ಗೌರವಧನವನ್ನು ಕೊಡಬೇಕು, ಕೊನೆ ಪಕ್ಷ ಒಬ್ಬ ಕಲಾವಿದನಿಗೆ ನಿವೃತ್ತಿ ವೇತನವೆಂದು 1000 ರೂ. ಗೌರವಧನವನ್ನು ಕೊಡುವ ಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕೆಂದು ಈ ಸದನದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಮತ್ತೆ ಯಾರು ಮೇಳವನ್ನು ನಡೆಸುತ್ತಾರೆ, ಇವತ್ತು ಆರ್ಥಿಕವಾಗಿ ಯಾರು ಅನುಕೂಲವಾಗಿದ್ದಾರೆ, ನಮ್ಮ ಜಿಲ್ಲೆಯಲ್ಲಿ ಧರ್ಮಸ್ಥಳ ಮೇಳ ಮತ್ತು ಕಟೀಲ್

ಮೇಳ ಇವುಗಳು ಅತ್ಯಂತ ಜನಪ್ರಿಯವಾದ ಮೇಳಗಳು ಮತ್ತು ಆರ್ಥಿಕವಾಗಿ ಸಾಧಾರಣವಾಗಿ ಅನುಕೂಲವಾಗಿವೆ ಆದರೆ ಸಾಮಾನ್ಯವಾಗಿ ಮೇಳಗಳಿಗೆ ಆರ್ಥಿಕ ತೊಂದರೆಗಳು ಇರುವುದರಿಂದ ಅವರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅಂಥ ಮೇಳಗಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಗೌರವಧನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇನ್ನು ಕಂದಾಯ ಇಲಾಖೆ ಬಗ್ಗೆ ಮಾತನಾಡುವುದಾದರೆ, ಕಂದಾಯ ಇಲಾಖೆ ಎಂದರೆ ರಾಜ್ಯಕ್ಕೆ ಹೃದಯ ಇದ್ದಹಾಗೆ, ಒಬ್ಬ ಮನುಷ್ಯನಿಗೆ ಹೃದಯ ಎಷ್ಟು ಪ್ರಾಮುಖ್ಯವೊ ಅಷ್ಟೇ ರಾಜ್ಯಕ್ಕೆ ಕಂದಾಯ ಇಲಾಖೆ ಅವಶ್ಯಕ. ನಾವು ಹುಟ್ಟಿನಿಂದ ಸಾಯುವವರೆಗೆ ಒಂದಿಲ್ಲ ಒಂದು ವಿಷಯದಲ್ಲಿ ಕಂದಾಯ ಇಲಾಖೆಯನ್ನು ಸಂಪರ್ಕ ಮಾಡಲೇಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತು ಕಂದಾಯ ಇಲಾಖೆ ಅತ್ಯಂತ ಸಮರ್ಪಕವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಆದರೆ ಈ ಕಂದಾಯ ಇಲಾಖೆಯಲ್ಲಿ ಆಗುವಷ್ಟು ಅನ್ಯಾಯ ಬೇರೆ ಯಾವ ಇಲಾಖೆಯಲ್ಲಿ ಆಗುವುದಿಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿಯೇನಲ್ಲ. ಇವತ್ತು ಒಂದು ಅರ್ಜಿಯನ್ನು ಕೊಟ್ಟರೆ, ಒಂದು ಮನವಿಯನ್ನು ಕೊಟ್ಟರೆ, ಕೆಲವು ಕೆಲಸಗಳು ಒಂದು ದಿವಸದಲ್ಲಿ ಆಗಬಹುದು, ಎರಡು ದಿವಸದಲ್ಲಿ ಆಗಬಹುದು ಅಥವಾ ಮೂರು ದಿವಸವಾಗಬಹುದು ಇಲ್ಲವೇ ಹೆಚ್ಚು ಎಂದರೆ ಒಂದು ವಾರದಲ್ಲಿ ಅದಕ್ಕೆ ಬೇಕಾದ ಉತ್ತರವನ್ನು, ಅಥವಾ ವ್ಯವಸ್ಥೆಯನ್ನು ಮಾಡಬಹುದು. ಆದರೆ ಇಲ್ಲಿ ಒಂದು ತಿಂಗಳು, ಎರಡು, ಮೂರು ತಿಂಗಳಾದರೂ ಕೂಡ ಕೊಟ್ಟಂತಹ ಅರ್ಜಿಗೆ ಸರಿಯಾದ ಉತ್ತರ ಇಲ್ಲ. ನಾನು ಈ ಸಂದರ್ಭದಲ್ಲಿ ಇಷ್ಟು ಹೇಳಲು ಇಚ್ಛೆಪಡುತ್ತೇನೆ, ಒಳ್ಳೆಯ ಸಚಿವರು ಈ ಇಲಾಖೆಯಲ್ಲಿದ್ದಾರೆ ಅವರು ತಕ್ಷಣ ಈ ಎಲ್ಲಾ ಕಂದಾಯ ಇಲಾಖೆಗಳ ಆಫೀಸ್‌ಗಳಿಗೆ ಹೋಗಿ ಬಂದಂತಹ ಅರ್ಜಿಗಳಿಗೆ, ಮನವಿಗಳಿಗೆ ಕಡೆ ಪಕ್ಷ ಒಂದು 10 ದಿನಗಳ ಒಳಗಾದರೂ ಬೇಕಾದ ಉತ್ತರ ಕೊಡುವಂತಹ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ವಿಳಂಬ ಮಾಡುವುದು ಈ ಕಂದಾಯ ಇಲಾಖೆಗೆ ಅಭ್ಯಾಸವಾಗಿಬಿಟ್ಟಿದೆ. ಎಷ್ಟು ಅಭ್ಯಾಸವಾಗಿ ಬಿಟ್ಟಿದೆ ಎಂದರೆ ನನಗೆ ಒಬ್ಬ ಆಪ್ತ ಸಹಾಯಕನನ್ನು ಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಕೇಳಿದ್ದೇನೆ, ನನಗೆ ಇಂತಹ ಒಬ್ಬನನ್ನು ಆಪ್ತ ಸಹಾಯಕರನ್ನಾಗಿ ಕೊಡಬೇಕೆಂದು ಹೇಳಿದ್ದರೆ ನಿಮ್ಮ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಆ ಕೇಸ್ ವರ್ಕರ್ ಒಂದೂವರೆ ತಿಂಗಳಿಂದ ಹಾಗೆಯೇ ಇಟ್ಟುಕೊಂಡಿದ್ದಾರೆ. ಅದು ಅಭ್ಯಾಸ ಬಲ. ಜಿಲ್ಲಾಧಿಕಾರಿಗಳ ತಪ್ಪು ಅಲ್ಲ ಇದು. ಅವರು ತತ್‌ಕ್ಷಣ ಮಾಡಿ ಕಳುಹಿಸುವುದು ಎಂದು ಹೇಳಿ ಬರೆದು ಕೊಟ್ಟರೆ, ಆ ಫೈಲ್ ಮುಂದೆ ಹೋಗುವುದೇ ಇಲ್ಲ. ಇದೊಂದು ಕೆಟ್ಟ ಅಭ್ಯಾಸ, ಚಾಳಿ ಆ ಒಂದು ಇಲಾಖೆಗೆ ಬಂದಿದೆ. ಮಾನ್ಯ ಮಂತ್ರಿಗಳು ಅದನ್ನು ಹೇಗೆ ಚುರುಕುಗೊಳಿಸುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಬಹಳ ಕಠಿಣ ಪರಿಸ್ಥಿತಿ ಇದೆ ಅದನ್ನು ಮತ್ತೆ ಚಾಲನೆ ಮಾಡಬೇಕು. ಈ ಯುಗದಲ್ಲಿ ಸ್ವಾತಂತ್ರ್ಯ ಬಂದು 50ನೇ ವರ್ಷದಲ್ಲಿ ಈ ರೀತಿ ಆಗುತ್ತಿದೆಯಾದರೆ ಗ್ರಾಮೀಣ ಸಾಮಾನ್ಯ ರೈತರಿಗೆ ಈ ಇಲಾಖೆಯಿಂದ ಹೇಗೆ ನ್ಯಾಯ ಸಿಗುತ್ತದೆ ಎಂದು ನನಗೆ ಗೊತ್ತಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೆ, ಆರ್‌ಟಿಸಿ ಬಗ್ಗೆ ಹೇಳಬೇಕಾದರೆ ಇವತ್ತು ಆರ್‌ಟಿಸಿಗೆ ಅರ್ಜಿ ಕೊಟ್ಟರೆ ಬಹುಶಃ ಒಂದು ದಿವಸದಲ್ಲಿ ಕೊಡಬಹುದು. ಆದರೆ ಅದಕ್ಕೂ ಕೂಪ

15 ದಿನಗಳಿಂದ ಒಂದು ತಿಂಗಳು ತೆಗೆದುಕೊಳ್ಳುತ್ತಾರೆ. ಮತ್ತೆ ಖಾತೆ ಬದಲಾವಣೆಗೆ ಒಂದು ತಿಂಗಳ ಅವಧಿ ಇದೆ ಅದಕ್ಕೆ 2 ಅಥವಾ 3 ತಿಂಗಳು ತೆಗೆದುಕೊಳ್ಳುತ್ತಾರೆ. ಕಂದಾಯ ಇಲಾಖೆಯ ಬಗ್ಗೆ ನಾನು ಪ್ರಾರಂಭದಲ್ಲಿ ಹೇಳಿದಹಾಗೆ ಅತ್ಯಂತ ಪ್ರಾಮುಖ್ಯವಾದ ಇಲಾಖೆ. ರಾಜ್ಯಕ್ಕೆ ಹೃದಯವಿದ್ದ ಹಾಗೆ. ಎಲ್ಲಾ ಒಳ್ಳೆಯದ್ದು ಕೆಟ್ಟದ್ದು ಆಗುವುದು ಕಂದಾಯ ಇಲಾಖೆಯ ಮೇಲೆ, ಇವತ್ತು ಪೋಲಿಸ್ ಸ್ಟೇಷನ್‌ನಲ್ಲಿ ಕಂದಾಯಕ್ಕೆ ಸಂಬಂಧಪಟ್ಟ ಕಂಪ್ಲೇಂಟ್ ಇದ್ದರೆ ಅದು ಗಡಿ ಘರ್ಷಣೆ, ಆಸ್ತಿ ಬಗ್ಗೆ ವಿವಾದ ಇರಬಹುದು, ಈ ರೀತಿಯ ವಿವಾದಗಳು ಸ್ಟೇಷನ್‌ದಲ್ಲಿ ಹಾಗೆ ಇವೆ. ಆದ್ದರಿಂದ ಇದಕ್ಕೆ ಪೂರ್ತಿ ಗಮನ ಕೊಟ್ಟು ಇದಕ್ಕೆ ಕಾಯಕಲ್ಪ ಕೊಟ್ಟು ಜನರಿಗೆ ತೊಂದರೆಯಾಗದ ರೀತಿಯಲ್ಲಿ, ಸಮಾಧಾನವಾದ ರೀತಿಯಲ್ಲಿ ಕೆಲಸಮಾಡುವ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಇನ್ನು ಈ ಗ್ರಾಮ ಕರ್ಣಿಕರ ಬಗ್ಗೆ ಹೇಳುವುದಾದರೆ, ಗ್ರಾಮ ಕರ್ಣಿಕರು ಗ್ರಾಮದಲ್ಲಿಯೇ ಇರಬೇಕು ಎಂದು ಸರ್ಕಾರದ ನಿಯಮ ಇದೆ. ಆದರೆ ಹೆಚ್ಚಿನ ಗ್ರಾಮ ಕರ್ಣಿಕರು ಅಲ್ಲಿ ಇರುವುದಿಲ್ಲ. ಬೇರೆ ಕಡೆ ಮನೆ ಮಾಡಿಕೊಂಡು ವಾರಕ್ಕೆ ಎರಡು ದಿನ ಹೋಗುವ ಸಂಪ್ರದಾಯ ಇದೆ. ಇದನ್ನು ಸಂಪೂರ್ಣ ತಪ್ಪಿಸಿ ಪ್ರತಿ ದಿನ ಗ್ರಾಮ ಕರ್ಣಿಕರು ಅದೇ ಗ್ರಾಮದಲ್ಲಿ ಸಿಗುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು. ಅಲ್ಲದೆ ಎಲ್ಲಾ ಗ್ರಾಮ ಕರ್ಣಿಕರ ಹುದ್ದೆಗಳನ್ನು ಭರ್ತಿ ಮಾಡಬೇಕು. ಇವತ್ತು ಒಂದು ಸಣ್ಣ ಕೆಲಸ ಆಗಬೇಕಾದರೆ ಈ ಎಲ್ಲ ನಿಯೋಜನೆಯಿಂದ ತುಂಬಾ ದೂರ ನಡೆದುಕೊಂಡು ಹೋಗಬೇಕಾಗುತ್ತದೆ. ಅದರಿಂದ ತುಂಬಾಕಷ್ಟ ಮಾತ್ರವಲ್ಲ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಗ್ರಾಮದಲ್ಲಿ ಗ್ರಾಮಕರ್ಣಿಕರು ಇರುವ ರೀತಿಯಲ್ಲಿ ಮಾಡಬೇಕು ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಗಮನಕೊಡಬೇಕೆಂದು ಹೇಳುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಉಪಾಧ್ಯಕ್ಷರೆ, ಈ ಆರ್‌ಟಿಸಿ ಬರೆಯುವ ಬಗ್ಗೆ ಗ್ರಾಮ ಲೆಕ್ಕಿಗರಿಗೆ ಸರ್ಕಾರ ಅಧಿಕಾರವನ್ನು ಕೊಟ್ಟಿದೆ. ಆದರೆ ಅದೇ ಸರ್ವೇ ನಂಬರ್, ಅದೇ ಜಮೀನು ಇದ್ದಕ್ಕೆ ಇದ್ದಹಾಗೆ ರಾತ್ರೋ ರಾತ್ರಿ ವ್ಯತ್ಯಾಸವಾಗುತ್ತದೆ. ಖಾತೆ ಬದಲಾವಣೆಯಾಗುತ್ತವೆ. ಆ ಮೇಲೆ ಮೂಲ ಖಾತೆದಾರ ಅವನು ತಾಲ್ಲೂಕು ಕೋರ್ಟ್, ಎಸಿ ಕೋರ್ಟ್, ಡಿಸಿ ಕೋರ್ಟ್ ಈ ರೀತಿ ತಿರುಗಾಡಬೇಕಾಗುತ್ತದೆ. ಅನೇಕ ವರ್ಷಗಳು ಅಲೆದ ಮೇಲೆ ತಮ್ಮ ಜಮೀನು ಖಾತೆಯನ್ನು ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿ ಅಕ್ರಮವಾಗಿ ಯಾರದೊ ಜಮೀನು ಖಾತೆಯನ್ನು ಯಾರಿಗೊ ಬರೆದುಕೊಡುವ ಪದ್ಧತಿ ಏನು ಇದೆ ವಿಲೇಜ್ ಅಕೌಂಟೆಂಟ್‌ರಲ್ಲಿ ಇದು ಎಸಿ ಕೋರ್ಟ್, ಜಿಲ್ಲಾಧಿಕಾರಿಗಳ ಕೋರ್ಟ್‌ಗೆ ಹೋದ ಮೇಲೆ ಅಕ್ರಮವಾಗಿ ಇದನ್ನು ಬದಲಾವಣೆ ಮಾಡಲಾಗಿದೆ ಎಂದು ತಿಳಿದು ಬಂದಮೇಲೆ ಅಂಥ ಸಂದರ್ಭದಲ್ಲಿ ಯಾರು ಆ ರೀತಿ ಮಾಡಿದ್ದಾರೆ ಅವರ ಮೇಲೆ ಉಗ್ರ ಕ್ರಮಕೈಗೊಳ್ಳಲು ಏನಾದರೂ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಹೀಗೆ ಮಾಡದೇ ಹೋದರೆ ಆಕ್ರಮಗಳನ್ನು ತಡೆಯಲು ಸಾಧ್ಯವಾಗುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಈ ಅಕ್ರಮ ಭೂಮಿಯ ಸಕ್ರಮೀಕರಣ ಕಾನೂನಿನಲ್ಲಿ ಇವತ್ತು ಏನು ಆಗುತ್ತಿದೆ ಎಂದರೆ....

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಉಪಾಧ್ಯಕ್ಷರೆ, ಪೂಜಾರಿಯವರು ಹೇಳಿರುವುದು ಸತ್ಯಕ್ಕೆ ದೂರವಾದದ್ದು ಎಂದು ನಾನು ಹೇಳುವುದಿಲ್ಲ. ನಮ್ಮ ವಿಲೇಜ್ ಅಕೌಂಟೆಂಟ್‌ಗಳು ಹಳ್ಳಿಯಲ್ಲಿ ಇರುವುದಿಲ್ಲ ಎಂಬ ಅಂಶ ನಮ್ಮ ಗಮನಕ್ಕೂ ಬಂದಿದೆ. ಏಕಪ್ಪ ನೀವು ಇರುವುದಿಲ್ಲ ಎಂದು ಕೇಳಿದರೆ, ಏನು ಮಾಡುವುದು ಸ್ವಾಮಿ ನಮಗೆ ಅಲ್ಲಿ ಇರಲು ಜಾಗ ಇಲ್ಲ, ನಮ್ಮ ಧಪ್ತರ್ ಇಡಲು ಕಬೋರ್ಡ್ ಇಲ್ಲ. ನಾವು ಎಲ್ಲವನ್ನೂ ಎಲ್ಲಿ ಇಡುವುದು ಎಂದು ಕೇಳುತ್ತಾರೆ. ಈಗ ರೀಸೆಂಟಾಗಿ ಒಂದು ವಾರದಲ್ಲಿ 3 ದಿವಸ ಕಡ್ಡಾಯವಾಗಿ ಅವರು ತಮ್ಮ ಹೆಡ್‌ಕ್ವಾಟರ್ಸ್‌ನ ಇರಬೇಕೆಂದು ಸೂಚನೆ ಕಳುಹಿಸಿದ್ದೇವೆ. ಮತ್ತು ಗ್ರಾಮಪಂಚಾಯಿತಿಯಲ್ಲಿ ಕಡ್ಡಾಯವಾಗಿ ಒಂದು ರೂಂ ಕೊಡಬೇಕೆಂದು ಆರ್‌ಡಿಪಿಆರ್ ಇಲಾಖೆಯಿಂದ ಒಂದು ಸುತ್ತೋಲೆಯನ್ನು ಕಳುಹಿಸಿದ್ದೇವೆ. ಈಗ ಆದ್ದದ್ದು ಆಗಿ ಹೋಯಿತು, ಇನ್ನು ಮುಂದೆ ಮಾತ್ರ ಕಡ್ಡಾಯವಾಗಿ ವಿಲೇಜ್ ಅಕೌಂಟೆಂಟ್ ಹಳ್ಳಿಯಲ್ಲಿ ಇದ್ದೇ ಇರುತ್ತಾರೆ. ಅವನು ಇರಲಿಲ್ಲ ಎಂದರೆ ಕಾನೂನು ಪ್ರಕಾರ ಏನು ಕ್ರಮತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇನೆ. ಇನ್ನು ವಿಲೇಜ್ ಅಕೌಂಟೆಂಟ್ ಆಫೀಸ್ ಫರ್ನಿಚರ್‌ಗಾಗಿ ಇಷ್ಟು ವರ್ಷ ಏನೂ ಹಣವನ್ನು ಕೊಟ್ಟಿರಲಿಲ್ಲ, ನಮ್ಮ ಸರ್ಕಾರ ಬಂದಮೇಲೆ ಪ್ರತಿವರ್ಷ ಒಂದು ಕೋಟಿ ರೂ.ಗಳನ್ನು ಟೇಬಲ್, ಕುರ್ಚಿ, ಕಬೋರ್ಡ್ ಜಮಖಾನೆ ಸಲುವಾಗಿ ರಿಲೀಸ್ ಮಾಡುತ್ತಿದ್ದೇವೆ. ಹೋದವರ್ಷವೂ ಮಾಡಿದ್ದೇವೆ. ಈ ವರ್ಷವೂ ರಿಲೀಸ್ ಮಾಡುತ್ತೇವೆ.

ಶ್ರೀ ಎ. ರುಕ್ಮಯ್ಯ ಪುಜಾರಿ : ಮಾನ್ಯ ಉಪಾಧ್ಯಕ್ಷರೆ, ಈ ಅಕ್ರಮ ಸಕ್ರಮ ಸಕ್ರಮೀಕರಣ ಮಾಡುವ ಕಾನೂನಿನ ಬಗ್ಗೆ ಹೇಳುವುದಾದರೆ, ಇವತ್ತು ಸರ್ಕಾರಿ ಜಮೀನು ಮಾತ್ರ ಈ ಕಾನೂನಿಗೆ ಒಳಪಡುತ್ತದೆ. ಆದರೆ ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಖುಮಕಿ ಜಮೀನು ಇದೆ, ನಮ್ಮ ಜಿಲ್ಲೆಯಲ್ಲಿ ಈ ಕಾನೂನಿನ ಅಡಿಯಲ್ಲಿ ಸರ್ಕಾರಿ ಭೂಮಿಗೂ ಅರ್ಜಿಕೊಟ್ಟಿದ್ದಾರೆ. ಖಾಸಗಿ ಜಮೀನಿಗೂ ಅರ್ಜಿ ಕೊಟ್ಟಿದ್ದಾರೆ. ಆದರೆ ಈ ಖುಮಕಿ ಜಮೀನು ಈ ಕಾನೂನಿನಲ್ಲಿ ಬರುವುದಿಲ್ಲ ಎಂದು ತಮ್ಮ ಅಧಿಕಾರಿಗಳಿಗೆ ಗೊತ್ತಿದೆ. ಆದರೂ ಅದನ್ನು ಹೋಗಿ ಅಳತೆ ಮಾಡುತ್ತಾರೆ. ಕೇವಲ ಒಂದು ಸಾರಿ ಮಾಡುವುದಿಲ್ಲ, ಗ್ರಾಮ ಕರ್ಣಿಕರು ಅಳತೆಮಾಡುವುದು, ರೆವಿನ್ಯೂ ಅಧಿಕಾರಿಗಳು ಅಳತೆ ಮಾಡುವುದು, ಸರ್ವೇಯರ್ ಅಳತೆ ಮಾಡುವುದು ಹೀಗೆ 3-4 ಸಾರಿ ಅಳತೆ ಮಾಡುತ್ತಾರೆ.

3.40 ಪಿ.ಎಂ.

ಈ ರೀತಿ ಏಕೆ ಮೋಸ ಮಾಡುವುದು ಕೇವಲ ಸರ್ಕಾರಿ ಲ್ಯಾಂಡ್ ಆದರೆ ಅಕ್ರಮ ಸಕ್ರಮ ಒಳಗೆ ಬರುತ್ತದೆ. ಈ ಖುಮಕಿ ಲ್ಯಾಂಡ್ ಬಾರದಿದ್ದರೂ ಕೂಡ ಮೂರು ನಾಲ್ಕು ಸಾರಿ ಅಳತೆ ಮಾಡಿ ಹೆರ‍್ಯಾಸ್‌ಮೆಂಟ್ ಏಕೆ ಮಾಡುತ್ತಿದ್ದಾರೆ. ಆದಕಾರಣ ಅದರ ಬಗ್ಗೆ ಸರ್ಕಾರ ಗಮನಕೊಡಬೇಕು. ಇನ್ನು ಈ ಖುಮಕಿ ಲ್ಯಾಂಡ್ ಎಷ್ಟೋ ಹಾಗೆ ಇದೆ ಅದರ ಬಗ್ಗೆ ಕೂಡ ಸರ್ಕಾರದವರು ಅದರ ಬಗ್ಗೆ ತೀರ್ಮಾನ ಮಾಡಲಿಲ್ಲ. ಇವೊತ್ತು ಬಹಳಷ್ಟು ಬಡ ಕುಟುಂಬದವರು ಈ ಖುಮಕಿ ಲ್ಯಾಂಡ್‌ನಲ್ಲಿ ವ್ಯವಸಾಯವನ್ನು ಮಾಡಿಕೊಂಡಿದ್ದಾರೆ ಹಾಗೂ ಕೆಲವು ಬಡವರು ಈ ಖುಮಕಿ ಲ್ಯಾಂಡಿನಲ್ಲಿ ಮನೆಯನ್ನು ಕಟ್ಟಿಕೊಂಡು ವಾಸಮಾಡಿಕೊಂಡಿದ್ದಾರೆ ಅವರಿಗೆ ಕೂಡ ಈ ಕಾನೂನು ಲಾಗೂ ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಮಂತ್ರಿಗಳು ಇವೊತ್ತು ಖುಮಕಿ ಲ್ಯಾಂಡ್ ತಿದ್ದುಪಡಿ ಬಗ್ಗೆ ಬಿಲ್ಲನ್ನು ಮಂಡನೆ ಮಾಡುತ್ತೇನೆಂದು ಹೇಳಿದ್ದರು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಹೌದು ಸದನದಲ್ಲಿ ನಾನು ತಿದ್ದುಪಡಿಯನ್ನು ಮಂಡಿಸುತ್ತೇನೆ ಎಂದು ಹೇಳಿದ್ದೆ. ಆದರೆ ಖುಮಕಿ ಒಂದೇ ಅಲ್ಲ ಖುಮಕಿ, ಕಾಣೆ, ಬಾಣೆ, ಸೊಪ್ಪಿನಬೆಟ್ಟ, ಕಾಫಿ ಇನ್ನೂ ಇತರೆ ಯಾವುದೇ ಸರ್ಕಾರಿ ಲ್ಯಾಂಡ್ ಇರಬಹುದು, ಹಿಂದೆ ಅವುಗಳಿಗೆ ಬೇರೆ ಬೇರೆ ಹೆಸರನ್ನು ಕೊಟ್ಟಿದ್ದಾರೆ, ಆದರೆ ಜಮೀನು ಒಂದೇ, ಎಲ್ಲಾ ಸರ್ಕಾರಿ ಜಮೀನ, ನಾವು ಹಿಂದಿನಿಂದ ಅವುಗಳಿಗೆ ಏನೇನೋ ಹೆಸರನ್ನು ಕೊಟ್ಟುಕೊಂಡು ಬಂದಿದ್ದೇವೆ. ಆದ್ದರಿಂದ ಖುಮಕಿ ಜಮೀನು ಒಂದೇ ಅಲ್ಲ ಈ ಎಲ್ಲಾ ಲ್ಯಾಂಡನ್ನು ರೆಗ್ಯುಲರೈಸ್ ಮಾಡಬೇಕು, ಅದರಿಂದ ಬಡವರಿಗೆ ರೈತರಿಗೆ ಅನುಕೂಲ ಮಾಡಬೇಕೆಂದು ಕಾನೂನನ್ನು ತರುತ್ತಿದ್ದೇವೆ. ಆದರೆ ಇನ್ನು ಅದು ನಮ್ಮ ಕಾನೂನು ಇಲಾಖೆಯಿಂದ ರೆಡಿ ಆಗಿಲ್ಲ. ಆದಕಾರಣ ತರಲಿಲ್ಲ. ಆದರೆ ಇದೇ ಅಧಿವೇಶನದಲ್ಲಿ ಮುಂದಿನ ವಾರದಲ್ಲಿ ಅದನ್ನು ನೂರಕ್ಕೆ ನೂರರಷ್ಟು ಇಂಟ್ರಡ್ಯೂಸ್ ಮಾಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಇನ್ನು ಪ್ರಕೃತಿ ವಿಕೋಪದ ಬಗ್ಗೆ ಹೇಳಬೇಕಾದರೆ ಕೃಷಿ ಬೆಳೆ ನಾಶವಾದರೆ ಒಂದು ಹೆಕ್ಟೇರ್‌ಗೆ ಐನೂರು ರೂಪಾಯಿಗಳನ್ನು ಹಾಗೂ ಒಂದು ಎಕರೆಗೆ ಇನ್ನೂರು ರೂಪಾಯಿಗಳನ್ನು ಪರಿಹಾರವೆಂದು ನೀಡುತ್ತಾರೆ. ಆದರೆ ಇದು ಏನೇನೂ ಸಾಲದು. ಇದನ್ನು ಕೊನೆಯಪಕ್ಷ ಎರಡು ಸಾವಿರ ರೂಪಾಯಿಗಾದರೂ ಏರಿಸಬೇಕು. ಇವೊತ್ತು ನಾವೆಲ್ಲಾ ರೈತನ ಬಗ್ಗೆ ಬಹಳ ಮಾತನಾಡುತ್ತೇವೆ, ರೈತರು ದೇಶದ ಬೆನ್ನೆಲುಬು ಎಂದು ಹೇಳುತ್ತೇವೆ ಆದರೆ ನಮ್ಮ ರೈತರು ಬೆಳೆಯುವಂಥ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಅವನಿಗೆ ತೊಂದರೆಯಾದಾಗ ಅವನಿಗೆ ಕೊಡುವಂಥ ಪರಿಹಾರವನ್ನು ಸರಿಯಾದ ರೀತಿಯಲ್ಲಿ ಕೊಡುತ್ತಿಲ್ಲ. ಆದ್ದರಿಂದ ಅದನ್ನು ಕಡೇ ಪಕ್ಷ ಹೆಕ್ಟೇರ್‌ಗೆ ಎರಡು ಸಾವಿರ ರೂಪಾಯಿಗಳನ್ನು ಕೊಡುವ ರೀತಿಯಲ್ಲಿ ಸರ್ಕಾರ ಅಲೋಚನೆ ಮಾಡಿ ಅವರಿಗೆ ಕೊಡಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ಈ ಗ್ರಾಮ ಸಹಾಯಕರ ಬಗ್ಗೆ ಹೇಳುವುದಾದರೆ, ತಮಗೆ ಗೊತ್ತಿರುವ ಹಾಗೆ ಕೆಲವು ಇಲಾಖೆಗಳಲ್ಲಿ ಸರ್ಕಾರ ಐದು ವರ್ಷ, ಹತ್ತು ವರ್ಷ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುವಂಥ ನೌಕರರನ್ನು ಖಾಯಂ ಮಾಡಿದ್ದಾರೆ. ಅದೇ ರೀತಿ ಕಂದಾಯ ಇಲಾಖೆಯಲ್ಲಿ ಸುಮಾರು ಹದಿನೆಂಟು ಇಪ್ಪತ್ತು, ವರ್ಷಗಳಿಂದ ಈ ಗ್ರಾಮ ಸಹಾಯಕರೆಂದು ಕೆಲಸ ನಿರ್ವಹಿಸುತ್ತಿರುವವರು ಯಾರು ಇದ್ದಾರೆ ಅವರ ಬಗ್ಗೆ ಕೂಡ ಸ್ವಲ್ಪ ಕರುಣೆ ತೋರಿ ಅವರನ್ನು ಕೂಡ ಪರ್ಮನೆಂಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಇವೊತ್ತು ರಸ್ತೆಗಳ ಬಗ್ಗೆ ಹೇಳಬೇಕಾದರೆ, ಅದು ಲೋಕೋಪಯೋಗಿ ಇಲಾಖೆಯ ರಸ್ತೆ ಇರಬಹುದು, ಜಿಲ್ಲಾಪಂಚಾಯತ್ ರಸ್ತೆ ಇರಬಹುದು ಅಥವಾ ಇನ್ನುಳಿದ ರಸ್ತೆಗಳು ಇರಬಹುದು, ನಮ್ಮ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳ ರಸ್ತೆಗಳಿಗೆ ಸರ್ಕಾರ ಸಮಾನವಾಗಿ ಹಣವನ್ನು ಕೊಡುತ್ತಿದೆ. ಆದರೆ ನಮ್ಮ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಈ ಜಿಲ್ಲೆಗಳಲ್ಲಿ ಜಾಸ್ತಿ ಮಳೆ ಬರುವ ಕಾರಣದಿಂದ ನೀವು ಕೊಡುತ್ತಿರುವ ಹಣ ಏನೇನೂ ಸಾಲದು. ಅಲ್ಲಿ ಇನ್ನೂ ಹೆಚ್ಚು

ಕೊಡಬೇಕು ಹಿಂದೆ ನಾವೆಲ್ಲಾ ಸಣ್ಣವರು ಇರುವಾಗ ರಸ್ತೆಗಳಿಗೆ ಜೆಲ್ಲಿ ಹಾಕುವಾಗ, ಡಾಂಬರೀಕರಣ ಮಾಡುವಾಗ ಒಂದು ಕಿ.ಮೀ.ಗೆ ಇಂತಿಷ್ಟು ಘನ ಮೀಟರ್, ಇಂತಿಷ್ಟು ಘನ ಅಡಿ ಜೆಲ್ಲಿ ಹಾಕಬೇಕು ಎಂದು ಇತ್ತು. ಜೆಲ್ಲಿ ರಾಶಿ ಹಾಕಿ ಅಳತೆ ಮಾಡಿ ಅದನ್ನು ಸ್ಪ್ರೆಡ್ ಮಾಡುತ್ತಿದ್ದರು. ಆದರೆ ಈಗ ಲಾರಿ ತಂದು ಅಲ್ಲೇ ಡಂಪ್ ಮಾಡಿ ಅಲ್ಲೇ ಸ್ಪ್ರೆಡ್ ಮಾಡುತ್ತಾರೆ. ಆದರಿಂದ ಅದರ ಗುಣಮಟ್ಟ ಕೂಡ ಕಡಿಮೆಯಾಗುತ್ತದೆ. ಈ ದೃಷ್ಟಿಯಿಂದ ಹಾಗೂ ವಾಹನ ಸಂಚಾರ ಜಾಸ್ತಿ ಇರುವುದರಿಂದ ಹಾಗೂ ನಮ್ಮ ಕಡೆ ಮಳೆ ಕೂಡ ಜಾಸ್ತಿ ಇರುವುದರಿಂದ ಅದಕ್ಕೆ ಸರಿಯಾದ ರೀತಿಯಲ್ಲಿ ವೈಜ್ಞಾನಿಕವಾದ ರೀತಿಯಲ್ಲಿ ಜೆಲ್ಲಿ ಹಾಕಿ ಡಾಂಬರ್ ಮಾಡುವಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮತ್ತು ನಮ್ಮ ಜಿಲ್ಲೆಗೆ ಹಾಗೂ ಮಲೆನಾಡು ಪ್ರದೇಶದ ಜಿಲ್ಲೆಗೆ ಜಾಸ್ತಿ ಹಣವನ್ನು ಕೊಡಬೇಕು. ನಮ್ಮ ಕಡೆ ಹಾಕಿರುವ ಡಾಂಬರ್ ಏನು ಇದೆ ಅದು ಒಂದು ವರ್ಷದಲ್ಲಿ ಹಾಳಾಗುತ್ತಿದೆ, ಏಕೆಂದರೆ ಅಲ್ಲಿ ಡ್ರೈನೇಜ್ ಇಲ್ಲ ಮತ್ತು ಜಾಸ್ತಿ ಮಳೆಯಿಂದ ರಸ್ತೆಗಳು ಹಾಳಾಗುತ್ತಿವೆ. ಆದರೆ ಬಯಲು ಸೀಮೆಯಲ್ಲಿ ಈ ಅವಕಾಶ ಇಲ್ಲ. ಅಂತಹ ಸಂದರ್ಭ ಇರುವುದರಿಂದ ಈ ನಮ್ಮ ಜಿಲ್ಲೆಗಳಿಗೆ ನೀವು ಅದರ ಬಗ್ಗೆ ಯೋಚನೆ ಮಾಡಿಕೊಂಡು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಣವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇನ್ನು ಈ ಕಟ್ಟಡಗಳ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರಿ ಕಟ್ಟಡ ಮತ್ತು ಖಾಸಗಿ ಕಟ್ಟಡಗಳು ಒಂದೇ ತರಹದ್ದು ಮತ್ತು ಒಂದೇ ತರಹ ಎಸ್ಟಿಮೇಟ್. ಒಂದೇ ರೀತಿಯಲ್ಲಿ ಕಟ್ಟುವಂಥ ಎಸ್ಟಿಮೇಟ್ ಆದರೂ ಕೂಡ ಒಂದು ಖಾಸಗಿ ಕಟ್ಟಡ, ಒಂದು ಸರ್ಕಾರಿ ಕಟ್ಟಡ ಎರಡಕ್ಕೂ ಎಷ್ಟು ವ್ಯತ್ಯಾಸ ಇದೆ. ಖಾಸಗಿ ಕಟ್ಟಡ ಎಷ್ಟು ಚೆನ್ನಾಗಿ, ಎಷ್ಟು ಸುಂದರವಾಗಿ ಕಟ್ಟುತ್ತಾರೆ. ಅಷ್ಟೇ ಹಣದಲ್ಲಿ ಸರ್ಕಾರಿ ಕಟ್ಟಡ ಕಟ್ಟಿದರೂ ಒಂದೇ ಮಳೆಯಲ್ಲಿ ಸೋರತಕ್ಕಂಥ ಕಟ್ಟಡ ಏಕೆ ಆಗುತ್ತದೆ. ಹೀಗಾಗುವುದಕ್ಕೆ ಕಾರಣವೇನು? ಸರ್ಕಾರ ಇದರ ಬಗ್ಗೆ ಕೂಡ ಗಮನ ಕೊಟ್ಟು ಈ ರೀತಿ ಆಗದ ಹಾಗೆ ಆಲೋಚನೆ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಕಥೆಗಳಲ್ಲಿ ನಾವು ಆಶ್ರಯ ಮನೆಗಳು, ಅಂಬೇಡ್ಕರ್ ಮನೆಗಳನ್ನು ಹಾಗೂ ಇಂದಿರಾ ಆವಾಜ್ ಯೋಜನೆಯ ಮನೆಗಳನ್ನು ಹಂಚಿದ್ದೇವೆ. ಆದರೆ ಅದಕ್ಕೆ ಸರಿಯಾಗಿ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ನಮ್ಮ ಹಳ್ಳಿಗಳಲ್ಲಿ ಬಡವರು ಯಾರು ಇದ್ದಾರೆ ಅವರು ಫೈನಾನ್ಸ್‌ದಿಂದ, ಚಿನ್ನವನ್ನು ಅಡವಿಟ್ಟು ಹಣವನ್ನು ಪಡೆದು ಮನೆಯನ್ನು ಕಟ್ಟುತ್ತಾರೆ. ಆದರೆ ಈ ರೀತಿ ಮನೆ ಕಟ್ಟಿಸಿದವರು ತಿರುಗಿ ಹಣವನ್ನು ಸಂದಾಯ ಮಾಡಬೇಕಾದರೆ ಸರ್ಕಾರದಿಂದ ಅವರಿಗೆ ಬರಬೇಕಾದಂಥ ಹಣ ಸರಿಯಾಗಿ ಬರುತ್ತಿಲ್ಲ. ಇದರಿಂದ ಎಷ್ಟೋ ಬಡ ಕುಟುಂಬಗಳಿಗೆ ತೊಂದರೆಯಾಗುತ್ತಿದೆ. ಆ ದೃಷ್ಟಿಯಿಂದ ಅವರಿಗೆ ಬಿಡುಗಡೆ ಮಾಡುವ ಹಣವನ್ನು ತಕ್ಷಣ ಬಿಡುಗಡೆ ಮಾಡಿ ಅವರಿಗೆ ತೊಂದರೆ ಆಗದ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಇವೊತ್ತು ನಾವು ಅವರಿಗೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅದು ಸಾಲದು ಅದನ್ನು ಕನಿಷ್ಠಪಕ್ಷ ಮೂವತ್ತು ಸಾವಿರ ರೂಪಾಯಿಯಾದರು ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ಈ ನಲ್ಲಿ ನೀರಿನ ಯೋಜನೆಯ ಬಗ್ಗೆ ಹೇಳುವುದಾದರೆ ಇದು ಸಾರ್ವಜನಿಕ ನಲ್ಲಿ ನೀರು ಯೋಜನೆ. ಆದರೆ ಕೆಲವು ಪಂಚಾಯತ್‌ಗಳಲ್ಲಿ ಕೆಲವು ಮನೆಗಳಿಗೆ ನಲ್ಲಿ ನೀರಿನ ಕನೆಕ್ಷನ್ ಕೊಡುತ್ತಿದ್ದಾರೆ. ಅವರು ನೀರಿನ ದುರುಪಯೋಗ ಪಡಿಸುತ್ತಿದ್ದಾರೆ. ಈ ಸಲ ವಿದ್ಯುಚ್ಛಕ್ತಿ ಕೊರತೆಯಿಂದಾಗಿ ಹೆಚ್ಚಿನ ಕಡೆಗಳಲ್ಲಿ ಈ ನಲ್ಲಿ ನೀರಿನ ಯೋಜನೆ ವಿಫಲವಾಗಿದೆ. ಸಮಯಕ್ಕೆ ಸರಿಯಾಗಿ ನೀರು ಸಿಗಲಿಲ್ಲ. ಯಾರು ಮನೆಗಳಿಗೆ ನೀರಿನ ಕನೆಕ್ಷನ್ ತೆಗೆದುಕೊಂಡಿದ್ದಾರೆ ಅವರು ನೀರನ್ನು ತಮ್ಮ ತೋಟಗಳಿಗೆ ಬಿಡತಕ್ಕಂಥ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇದರಿಂದ ಸಾರ್ವಜನಿಕರು ನೀರು ಸಿಗದೆ ತುಂಬಾ ತೊಂದರೆಗೊಳಗಾಗಿದ್ದಾರೆ. ಈ ದೃಷ್ಟಿಯಿಂದ ಸಾರ್ವಜನಿಕ ನಲ್ಲಿ ನೀರಿನ ಯೋಜನೆಯ ಕನೆಕ್ಷನ್‌ನ್ನು ಖಾಸಗಿ ವ್ಯಕ್ತಿಗಳ ಮನೆಗೆ ಕೊಡದ ರೀತಿಯಲ್ಲಿ ಗಮನಕೊಡಬೇಕು. ಆಗ ಮಾತ್ರ ಈ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬಹುದೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ನಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರದೇಶಗಳಿಗೆ ಗಂಗಾ ಕಲ್ಯಾಣ ಯೋಜನೆಯನ್ನು ಕೊಡುತ್ತಿದ್ದೇವೆ. ಆದರೆ ಕೆಲವು ಕಡೆಗಳಲ್ಲಿ ಕರೆಂಟಿನ ವ್ಯವಸ್ಥೆ ಇಲ್ಲ. ಅಲ್ಲಿ ಲೈನ್ ಕೂಡ ಹೋಗಿರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಲೈನ್‌ಗೆ ಲೈನ್ ಮಿನಿಮಮ್ ಕಟ್ಟಬೇಕಾಗುತ್ತದೆ. ಲೈನ್‌ಮಿನಿಮಮ್ ಕಟ್ಟ ಬೇಕಾದರೆ ಪಂಚಾಯತ್‌ದಿಂದ ಕೊಡಬೇಕಾಗುತ್ತದೆ. ಆದರೆ ಪಂಚಾಯತ್‌ಗಳಲ್ಲಿ ಅವರಿಗೆ ಕಟ್ಟಲಿಕ್ಕೆ ಅಷ್ಟು ಹಣ ಇಲ್ಲ. ಅಂತಹ ಸಂದರ್ಭದಲ್ಲಿ ಈ ಯೋಜನೆ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಆ ದೃಷ್ಟಿಯಿಂದ ಈ ಹಣ ಕೂಡ ಸರ್ಕಾರದವರು ತುಂಬಬೇಕು ಮತ್ತು ಇದರ ಮೆಂಟೆನೆನ್ಸ್ ಕೂಡ ಸರ್ಕಾರದವರೇ ಮಾಡಬೇಕು. ಆ ರೀತಿ ಮಾಡಿದರೆ ಮಾತ್ರ ಈ ಯೋಜನೆ ಯಶಸ್ವಿಯಾಗಬಹುದು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ನಾವು ಜಿಲ್ಲಾಪಂಚಾಯತ್‌ರಾಜ್ ಬಗ್ಗೆ ಮಾತನಾಡುತ್ತೇವೆ, ಬಹಳ ಒಳ್ಳೆಯ ವ್ಯವಸ್ಥೆ ಇದೆ ಇದರಲ್ಲಿ ಎಲ್ಲಾವರ್ಗದವರಿಗೆ ಪ್ರಾತಿನಿಧ್ಯ ಸಿಗುತ್ತದೆ ಎಂದು ಮಾತನಾಡುತ್ತೇವೆ. ಆದರೆ ಅವರ ಆರ್ಥಿಕ ವ್ಯವಸ್ಥೆಯ ಬಗ್ಗೆ ನಾವು ಗಮನಕೊಡಲಿಲ್ಲ. ಇವೊತ್ತು ಕೃಷಿ ಮಾಡುವಂಥ ವ್ಯಕ್ತಿಗೆ ಯಾರು ಇದ್ದಾರೆ. ಅವರು ತುಂಬಾ ಜನರಿಂದ ಆರಿಸಿ ಬಂದಿದ್ದಾರೆ. ಆದರೆ ಅವರು ಇವೊತ್ತು ಒಂದು ಪ್ರದೇಶದಿಂದ ಇನ್ನೊಂದು ಜಾಗಕ್ಕೆ ಹೋಗಬೇಕಾದರೆ ಹಣದ ಅವಶ್ಯಕತೆ ಇದೆ. ಆದರೆ ಖರ್ಚು ಮಾಡುವಂಥ ತಾಕತ್ತು ಅವರಿಗೆ ಇಲ್ಲ. ಅವರಿಗೆ ಗೌರವಧನ ಇಲ್ಲ. ಆದರೆ ಅವರನ್ನು ಈಗ ನಾವು ಯಾವ ಉದ್ದೇಶಕ್ಕಾಗಿ ಆಯ್ಕೆ ಮಾಡಿದ್ದೇವೆ. ಆ ಉದ್ದೇಶ ಸಫಲ ಆಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಂತಹ ಸದಸ್ಯರಿಗೆ ಗೌರವ ಧನ ಕೊಡುವಂಥ ಒಂದು ಸಮಸ್ಯೆ ಏನು ಇದೆ ಅದನ್ನು ಪರಿಹಾರ ಮಾಡಲು ಸರ್ಕಾರ ವ್ಯವಸ್ಥೆ ಮಾಡಬೇಕು. ಹಿಂದೆ ಬಹುಶಃ ನಮ್ಮ ಸಚಿವರು ಮೈಸೂರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅದರಲ್ಲಿ ನಗರದ ಆಡಳಿತ ತರಬೇತಿ ಸಂಸ್ಥೆಯಲ್ಲಿ ಇರುವ ಅಬ್ದುಲ್ ನಜೀರ್‌ಸಾಬ್ ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು. ಅವರು ಜಿಲ್ಲಾ ಪಂಚಾಯತ್ ಸದಸ್ಯರಿಗೆ ಈಗ ನೀಡುತ್ತಿರುವ ಮಾಸಿಕ ಗೌರವ ಧನ 500 ರೂ. ಇದೆ ಅದನ್ನು ಸಾವಿರಕ್ಕೆ ಜಾಸ್ತಿಮಾಡುತ್ತೇವೆ, ಹಾಗೆ ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಗೌರವಧನ ಕ್ರಮವಾಗಿ ಸಾವಿರ ಮತ್ತು ಏಳನೂರ ಐವತ್ತು, ಪಂಚಾಯತ್ ಸದಸ್ಯರ ಗೌರವಧನವನ್ನು ಮಾಸಿಕ

ಇನ್ನೂರು ಐವತ್ತು ಮತ್ತು ಐನೂರು ರೂಪಾಯಿಗಳನ್ನು ಹೆಚ್ಚಿಸುವುದರ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದರು. ಅದರ ಬಗ್ಗೆ ಏನು ಎಂದು ಉತ್ತರ ಕೊಡಬೇಕು. ಮತ್ತು ಈ ಬಗ್ಗೆ ಗಮನಕೊಟ್ಟು ಸದಸ್ಯರಿಗೆ ಒಂದು ಗೌರವಧನವನ್ನ ಮಾಡಿ ಕೊಡಬೇಕು. ಇಲ್ಲದಿದ್ದರೆ ಪಂಚಾಯತ್‌ರಾಜ್ ವ್ಯವಸ್ಥೆ ಖಂಡಿತವಾಗಿ ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಗ್ರಾಮಸಭೆಗಳಿಗೆ ಅತ್ಯಂತ ಹೆಚ್ಚಿನ ಮಹತ್ವ ಇದೆ. ಆದರೆ ನಮ್ಮ ನಿರೀಕ್ಷೆಗೆ ತಕ್ಕಂತೆ ಎಲ್ಲಿಯೂ ಕೂಡ ಗ್ರಾಮಸಭೆಗಳು ನಡೆಯುತ್ತಿಲ್ಲ. ಗ್ರಾಮಸ್ಥರ ಹಾಜರಾತಿ ಕಡಿಮೆ ಮತ್ತು ಯಾವುದೇ ಅಧಿಕಾರಿಗಳು ಗ್ರಾಮಸಭೆಗಳಿಗೆ ಹೋಗುತ್ತಿಲ್ಲ. ಆ ದೃಷ್ಟಿಯಿಂದ ಜನಗಳನ್ನು ಆಕರ್ಷಣೆ ಮಾಡಬೇಕಾದರೆ ಎಲ್ಲಾ ಇಲಾಖೆಯ ಅಧಿಕಾರಿಗಳು ಬಂದರೆ ಮಾತ್ರ ಗ್ರಾಮಸ್ಥರು ಬರಲಿಕ್ಕೆ ಸಾಧ್ಯವಾಗುತ್ತದೆ. ಆದಕಾರಣ ಎಲ್ಲಾ ಇಲಾಖೆಯ ಅಧಿಕಾರಿಗಳು ಎಲ್ಲಾ ಗ್ರಾಮಸಭೆಗಳಲ್ಲಿ ಭಾಗವಹಿಸುವಂತೆ ಸರ್ಕಾರ ಸೂಚನೆ ಕೊಡಬೇಕು. ಆಗ ಗ್ರಾಮ ಸಭೆಗಳು ಯಶಸ್ವಿಯಾಗುತ್ತವೆಂದು ಹೇಳಿ ಇಷ್ಟನ್ನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಆರ್. ಶ್ರೀನಿವಾಸ್ (ಮುಳುಬಾಗಿಲು) : ಮಾನ್ಯ ಅಧ್ಯಕ್ಷರೆ, ತಾವು ನನಗೆ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಕಂದಾಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚರ್ಚೆಯನ್ನು ಮಾಡಲು ಪ್ರಾರಂಭಿಸುತ್ತೇನೆ. ಕಂದಾಯ ಇಲಾಖೆಯ ಬಗ್ಗೆ ಸತತವಾಗಿ ನನ್ನ ಸಹಪಾಠಿಗಳು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಎಂದೂ ಕಾಣದಂಥ ಒಂದು ಅಭಿವೃದ್ಧಿ ಹಾಗೂ ಪ್ರಗತಿಯನ್ನು ಸಾಧಿಸಿದೆ. ಇದಕ್ಕೆ ಅನೇಕ ನಿದರ್ಶನಗಳು ಇವೆ. ಅದು ಬಗರ್‌ಹುಕುಂ ಸಾಗುವಳಿ ಇರಬಹುದು, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಇರಬಹುದು ಅಥವಾ ನಿವೇಶನ ಇರಬಹುದು. ಅಥವಾ ಭೂಮಾಪಕ ಕಛೇರಿಗಳು ಇರಬಹುದು. ಈ ಒಂದು ಭೂಮಾಪಕರ ಕಛೇರಿಗಳ ಬಗ್ಗೆ ಹೇಳುವುದಾದರೆ ಹಿಂದೆ ರೈತರು ಬಹಳ ಕಷ್ಟವನ್ನು ಅನುಭವಿಸುತ್ತಿದ್ದರು. ಬಹುಶಃ ಒಂದು ನಕ್ಷೆಯನ್ನು ತೆಗೆದುಕೊಳ್ಳಬೇಕಾದರೆ ಒಂದು ಜಿಲ್ಲಾ ಕೇಂದ್ರಕ್ಕೆ ಬಂದು ಸತತವಾಗಿ ಓಡಾಡಿ ಹಣವನ್ನು ಖರ್ಚು ಮಾಡಿ ಆ ಒಂದು ನಕ್ಷೆಯನ್ನು ತೆಗೆದುಕೊಳ್ಳಲು ಬಹಳ ಕಷ್ಟವನ್ನು ಅನುಭವಿಸುತ್ತಿದ್ದುದು ನಾವೆಲ್ಲಾ ನೋಡಿದ್ದೇವೆ. ಆದರೆ ನಮ್ಮ ಸರ್ಕಾರ ಬಂದ ನಂತರ, ನಮ್ಮ ಕಂದಾಯ ಮಂತ್ರಿಗಳು ಬಂದ ನಂತರ ಅದನ್ನು ಸುಧಾರಣೆ ಮಾಡಿದ್ದಾರೆ, ಏಕೆಂದರೆ ನಮ್ಮ ಕಂದಾಯ ಸಚಿವರು ಬಡ ಕುಟುಂಬದಿಂದ ಬಂದಿರತಕ್ಕಂಥವರು ಅವರಿಗೆ ರೈತರ ಸಮಸ್ಯೆಯ ಬಗ್ಗೆ ಚೆನ್ನಾಗಿ ಅರಿವು ಇರುವುದರಿಂದ ಅದರ ಬಗ್ಗೆ ಸುಧಾರಣೆ ಮಾಡಿದ್ದಾರೆ ಅದೊಂದು ಸರ್ಕಾರದ ಸಾಧನೆಯಾಗಿದೆ. ಇನ್ನು ಸಾಗುವಳಿ ಚೀಟಿ ವಿತರಣೆ ಬಗ್ಗೆ ನಾವು ಹೇಳುವುದಾದರೆ ಸುಮಾರು 1991ರಲ್ಲಿ ಇದು ಅನುಷ್ಠಾನಕ್ಕೆ ಬಂದಿದ್ದರೂ ಕೂಡ, ನಾಲ್ಕು ವರ್ಷವಾದರೂ ಕೂಡ ಶೇಕಡಾ 25 ಭಾಗ ಕೂಡ ವಿತರಣೆಯಾಗಿರಲಿಲ್ಲ. ಆದರೆ ನಮ್ಮ ಸರ್ಕಾರ ಎರಡು ವರ್ಷದ ಅವಧಿಯಲ್ಲಿ ಶೇಕಡಾ 60 ಭಾಗ ಸಾಗುವಳಿ ಚೀಟಿಯನ್ನು ವಿತರಣೆ ಮಾಡಿ ಲಕ್ಷಾಂತರ ಜನರಿಗೆ ಭೂ ಮಾಲೀಕೆಯನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿರುವ ಕೀರ್ತಿ ನಮ್ಮ ಸರ್ಕಾರದ್ದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿಯಲ್ಲಿ ನಾವು ಇನ್ನೂ ಸ್ವಲ್ಪ ಮಾರ್ಪಾಡು ಮಾಡತಕ್ಕಂಥ

ವ್ಯವಸ್ಥೆ ಎಂದರೆ ಸ್ಮಶಾನಗಳಲ್ಲಿ ಅಕ್ರಮವಾಗಿ ಸಾಗುವಳಿ ಮಾಡತಕ್ಕಂಥ ವ್ಯವಸ್ಥೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮತ್ತು ಕಂದಾಯ ಸಚಿವರಿಗೆ ತಿಳಿಸುವುದೇನೆಂದರೆ ಈಗ ಬಹಳ ಜನ ಅದರಲ್ಲಿಯೂ ಪ್ರತ್ಯೇಕವಾಗಿ ಬಡ ಜನ ಏನು ಸರ್ಕಾರ ಮೀಸಲಾತಿಯಾಗಿ ಇಟ್ಟಿರತಕ್ಕಂಥ ಜಮೀನಿನಲ್ಲಿ ಯಾವುದೇ ಜನಾಂಗದ ಜನರಾಗಲೀ, ಖಾಸಗೀಯವರಾಗಲಿ ಏನು ಅಕ್ರಮ ಸಾಗುವಳಿ ಮಾಡುತ್ತಿದ್ದಾರೆ ಅವರು ಕನಿಷ್ಠ ಪಕ್ಷ ನೂರು ವರ್ಷ ಬದುಕಿ ಸಾಗುವಳಿ ಮಾಡಿ ಉಳತಕ್ಕಂಥದ್ದಕ್ಕೂ ಕೂಡ ನಾವು ಅವರಿಗೆ ಒಂದು ಅವಕಾಶ ಮಾಡಿ ಕೊಡುವುದಕ್ಕೆ ಆಗಲಿಲ್ಲ. ಆದ್ದರಿಂದ ದಯವಿಟ್ಟು ಅದನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಆ ಸ್ಮಶಾನದ ಜಮೀನನ್ನು ಅಳತೆ ಮಾಡಿ ಅದನ್ನು ಗುರುತಿಸಿ ಅದನ್ನು ಬಿಡಿಸಬೇಕು ಎಂದು ನಾನು ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ದೇವಾಲಯಗಳ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ನಾಲ್ಕು ಕಾನೂನು ಇವೆ. ಕೆಲವೊಂದು ಮಹಾರಾಷ್ಟ್ರದಿಂದ ಬಂದಿವೆ, ಕೆಲವು ಆಂಧ್ರದಿಂದ ಬಂದಿವೆ, ಕೆಲವು ಮದ್ರಾಸ್‌ದಿಂದ ಬಂದಿವೆ ಕೆಲವು ಹಳೆ ಮೈಸೂರಿನಿಂದ ಬಂದಿವೆ. ಈ ನಾಲ್ಕು ಆ್ಯಕ್ಟ್ ಇರುವುದರಿಂದ ತೊಂದರೆಯಾಗಿದೆ. ಆದಕಾರಣ ಸಮಾನವಾದ ರೀತಿ ಒಂದು ಕಾನೂನು ತಿದ್ದುಪಡಿಯನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದಿಂದ ಆರಾಧನಾ ಸ್ಕೀಮನ್ನು ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಆರಾಧನಾ ಸ್ಕೀಮ್‌ಗೆ ನಮ್ಮ ಸರ್ಕಾರ ಎಂಟು ಕೋಟಿ ರೂ.ಗಳ ಹಣವನ್ನೂ ಬಿಡುಗಡೆ ಮಾಡಿದೆ. ನಮ್ಮಲ್ಲಿ ಕೃಷ್ಣರಾಜನ ಕಾಲದಲ್ಲಿಯ, ವಿಜಯನಗರ ಸಾಮ್ರಾಜ್ಯದಲ್ಲಿಯ ಅನೇಕ ಪುರಾತನವಾದ ಹಾಗೂ ಪವಿತ್ರವಾದಂಥ ದೇವಾಲಯಗಳು ಇವೆ. ಆ ಒಂದು ಕಾಲದಲ್ಲಿ ಅವರು ಕಟ್ಟಿರತಕ್ಕಂಥ ಭವ್ಯವಾದ ದೇವಾಲಯಗಳು ಈಗಾಗಲೇ ದುರಸ್ಥಿಗೆ ಬಂದಿವೆ. ಅಂತಹ ದೇವಾಲಯಗಳ ಕಟ್ಟಡದ ದುರಸ್ಥಿಗೆ ಕೇವಲ ಐದು ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ನಮ್ಮ ಸರ್ಕಾರ ಐದು ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಗಂಗಮ್ಮ ಮಾರಮ್ಮ ದೇವಾಲಯಗಳನ್ನು ನಿರ್ಮಿಸುತ್ತಿದೆ. ಅಂತಹ ಅನೇಕ ದೇವಾಲಯಗಳನ್ನು ನಾವು ನಮ್ಮ ಸ್ವಾರ್ಥಕ್ಕೋಸ್ಕರ, ರಾಜಕೀಯ ಲಾಭಕ್ಕೋಸ್ಕರ ಅವುಗಳನ್ನು ಮಾಡಿಕೊಂಡಿದ್ದೇವೆ. ಆದಕಾರಣ ಆ ವೆಚ್ಚದ ಬದಲು ಆ ಎಲ್ಲಾ ಹಣವನ್ನು ಪುರಾತನ ದೇವಾಲಯಗಳ ಅಭಿವೃದ್ಧಿಗೆ ವೆಚ್ಚ ಮಾಡಿದರೆ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಉದಾಹರಣೆಗೆ ನನ್ನ ಮುಳಬಾಗಿಲು ಕ್ಷೇತ್ರದಲ್ಲಿ ಒಂದು ಪವಿತ್ರವಾದಂಥ ಯಾತ್ರಾ ಸ್ಥಳ ಹಾಗೂ ಅನೇಕ ಪುರಾತನ ದೇವಾಲಯಗಳು ಇವೆ. ಒಂದು ಗೋಪುರ ಅಥವಾ ಒಂದು ದೇವಾಲಯವನ್ನು ಕಟ್ಟಿಸಬೇಕಾದರೆ ಕನಿಷ್ಠಪಕ್ಷ ಇವೊತ್ತು ಒಂದರಿಂದ ಒಂದೂವರೆ ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಆದರೆ ನಮಲ್ಲಿರುವ ಆ ದೇವಸ್ಥಾನ ಕೆಲವೇ ವರ್ಷಗಳಲ್ಲಿ ಬೀಳತಕ್ಕಂಥ ಪರಿಸ್ಥಿತಿಯಲ್ಲಿ ಇದೆ. ಆದಕಾರಣ ಅಂತಹ ದೇವಾಲಯಗಳಿಗೆ ನಾವು ಹೆಚ್ಚು ಒತ್ತು ಕೊಟ್ಟು ಅದು ಅಭಿವೃದ್ಧಿ ಪಡಿಸುವುದು ನಮ್ಮ ಜವಾಬ್ದಾರಿ ಇದೆ. ಅದರ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಇನ್ನು ವಿವಿಧ ಇಲಾಖೆಗಳ ಬಗ್ಗೆ ನಮ್ಮ ಸರ್ಕಾರದ ಅಭಿವೃದ್ಧಿ ನಮ್ಮ ಸರ್ಕಾರದ ಸಾಧನೆ ತೆಗೆದುಕೊಂಡರೆ ಅದು ವಸತಿ ಇಲಾಖೆ ಆಗಬಹುದು ವಿದ್ಯಾ ಇಲಾಖೆ ಇರಬಹುದು ಪ್ರತಿಯೊಂದು

ತಾಲ್ಲೂಕುಗಳಲ್ಲಿ ನೂರರಿಂದ ನೂರಾ ಐವತ್ತು ಕೊಠಡಿಗಳನ್ನು ಕೊಟ್ಟು ಎಲ್ಲೆಲ್ಲಿ ಇಪ್ಪತ್ತೈದು ವಿದ್ಯಾರ್ಥಿಗಳು ಇರುತ್ತಾರೆ ಅಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ಪ್ರಾರಂಭ ಮಾಡತಕ್ಕಂಥ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಅದೇ ರೀತಿ ಆರೋಗ್ಯ ಇಲಾಖೆಯ ಬಗ್ಗೆ ಹೇಳಬೇಕಾದರೆ ಎಂಟು ಸಾವಿರ ಕೋಟಿ ಖರ್ಚು ಮಾಡಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಆಸ್ಪತ್ರೆಯನ್ನು ಕಟ್ಟಲು ಎರಡರಿಂದ ಮೂರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಸುಮಾರು ಹತ್ತರಿಂದ ಹದಿನೈದು ಸಾವಿರ ಜನರಿಗೆ ಅನುಕೂಲ ಆಗುವ ಹಾಗೆ ಆಸ್ಪತ್ರೆಯನ್ನು ತೆಗೆಯುವ ಒಂದು ಭಾವನೆಯನ್ನು ಇಟ್ಟು ಎಲ್ಲೆಲ್ಲಿ ವೈದ್ಯಾಧಿಕಾರಿಗಳ ಕೊರತೆ ಇದೆ ಅದನ್ನೆಲ್ಲಾ ತುಂಬಲು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದಾರೆ. ಮುಂದೆ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಕೂಡ ಇದೆ. ತಮಗೆ ಗೊತ್ತಿದ್ದ ಹಾಗೆ ವಿದ್ಯಾ ಇಲಾಖೆಯಲ್ಲಿ ಕೂಡ 29 ಸಾವಿರ ಅಧ್ಯಾಪಕರನ್ನು ನೇಮಕಾತಿ ಮಾಡಿರತಕ್ಕಂಥ ಸಾಧನೆ ನಮ್ಮ ಸರ್ಕಾರದ್ದು ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಸಾರಿಗೆ ಸಂಸ್ಥೆ ಬಗ್ಗೆ ಹೇಳಬೇಕಾದರೆ ಹಿಂದೆ ಮುನ್ನೂರರಿಂದ ಮುನ್ನೂರೈವತ್ತು ಕೋಟಿ ರೂಪಾಯಿ ನಷ್ಟದಲ್ಲಿ ನಡೆಯುತ್ತಿರುವ ಸಂಸ್ಥೆಯಾಗಿತ್ತು. ಆ ಬಸ್ಸುಗಳನ್ನು ನೋಡುವುದಕ್ಕೆ ಆಗುತ್ತಿರಲಿಲ್ಲ. ಅಂತಹ ವ್ಯವಸ್ಥೆಯಲ್ಲಿ ಸಚಿವರು ಆ ಒಂದು ಇಲಾಖೆಯನ್ನು ವಹಿಸಿಕೊಂಡನಂತರ ಸತತವಾಗಿ ಅದರ ನಷ್ಟವನ್ನು ಕಡಿಮೆ ಮಾಡಿಕೊಂಡು ಈಗ ಎರಡು ಸಾವಿರ ಬಸ್ಸುಗಳನ್ನು ಖರೀದಿ ಮಾಡಿ ಪ್ರತಿಯೊಂದು ಹಳ್ಳಿಯಲ್ಲಿ ಸಂಪರ್ಕ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಮಾಡಿದ್ದಾರೆ. ಹಿಂದೆ ವ್ಯವಸ್ಥೆ ಹೇಗೆ ಇತ್ತು ಎಂದರೆ ಜಿಲ್ಲಾ ಕಚೇರಿಯಿಂದ, ತಾಲ್ಲೂಕು ಕಚೇರಿಯಿಂದ ಕೇಂದ್ರ ಕಚೇರಿಗೆ ಮಾತ್ರ ಬಸ್ಸಿನ ವ್ಯವಸ್ಥೆ ಇತ್ತು. ಆದರೆ ಹಳ್ಳಿ ಜನ ಬರಬೇಕಾದರೆ ಬಡವರ ಅನುಕೂಲಕ್ಕೋಸ್ಕರ ಎರಡು ಸಾವಿರ ಬಸ್ಸುಗಳನ್ನು ಖರೀದಿ ಮಾಡಿ ಎಲ್ಲೆಲ್ಲಿ ಈಗಾಗಲೇ ರಾಷ್ಟ್ರೀಕರಣ ಮಾಡಿದ್ದೇವೆ ಅಲ್ಲಿ ಅಂತಹ ಒಂದು ತಾಲ್ಲೂಕುಗಳಲ್ಲಿ ಕಡಿಮೆ ಮಾಡಿ ರಾಷ್ಟ್ರೀಕರಣ ಪೂರ್ತಿ ಮಾಡಿರತಕ್ಕಂಥ ಎಲ್ಲಾ ತಾಲ್ಲೂಕುಗಳಲ್ಲಿ ಎರಡು ಬಸ್ಸು ಲೋಕಲ್ಲಾಗಿ ಬಸ್ಸುಗಳು ಓಡಾಡುವುದಕ್ಕೆ ಮಾಡಿರುವಂಥ ಕೀರ್ತಿ ನಮ್ಮ ಸರ್ಕಾರದ್ದು. ಇನ್ನು ನಾಲ್ಕು ಡಿವಿಜನ್‌ಗಳನ್ನು ಮಾಡಿದ್ದಾರೆ. ಆದರೆ ಕೆಲವರ ಅಭಿಪ್ರಾಯ ಏನೆಂದರೆ ನೌಕರರ ವಿಭಜನೆ ಎಂದು, ಅದು ತಪ್ಪು ಕಲ್ಪನೆ, ಆ ನಾಲ್ಕು ಡಿವಿಜನ್ ಮಾಡಿರತಕ್ಕಂಥದ್ದು ಏಕೆ ಎಂದರೆ ಚಿಕ್ಕದಾದ ಒಂದು ವ್ಯವಸ್ಥೆಯನ್ನು ಮಾಡಿದಾಗ ಒಬ್ಬೊಬ್ಬ ಡಿವಿಜನ್‌ನಲ್ಲಿ ಇರತಕ್ಕಂಥವನು ತಾನು 4 ಹೆಚ್ಚಿಗೆ ಲಾಭವನ್ನು ಗಳಿಸಬೇಕು, ಹೆಚ್ಚಾಗಿ ಶ್ರದ್ಧೆವಹಿಸಿ ಕೆಲಸ ಮಾಡಬಹುದು ಎನ್ನುವ ಒಂದು ಒಳ್ಳೆಯ ಉದ್ದೇಶದಿಂದ ಈ ನಾಲ್ಕು ವಿಭಾಗಗಳನ್ನು ಮಾಡಿದ್ದಾರೆ. ಅದಕ್ಕೆ ಎಷ್ಟೇ ಪ್ರತಿಭಟನೆಯಾದರೂ ಕೂಡ ಅದನ್ನು ಧೈರ್ಯದಿಂದ ಮಾನ್ಯ ಸಚಿವರು ಈ ಕಾರ್ಯಕ್ರಮವನ್ನು ಮಾಡಿದ್ದಾರೆ ಆ ಕೀರ್ತಿ ಕೂಡ ನಮ್ಮ ಸರ್ಕಾರಕ್ಕೆ ಇದೆ. ಅದೇ ರೀತಿ ನಾವು ಹೇಳಬೇಕಾದರೆ, ತೋಟಗಾರಿಕೆ ಇಲಾಖೆಯಾಗಬಹುದು, ಕೃಷಿ ಇಲಾಖೆಯಾಗಬಹುದು, ಲೋಕೋಪಯೋಗಿ ಇಲಾಖೆಯಾಗಬಹುದು ಹಾಗೆ ಇನ್ನೂ ಅನೇಕ ಇಲಾಖೆಗಳಾಗಬಹುದು. ಇವೊತ್ತಿನ ದಿನ ಲೋಕೋಪಯೋಗಿ ಇಲಾಖೆಯಲ್ಲಿ ಒಂದೊಂದು ಕ್ಷೇತ್ರಕ್ಕೆ ರಸ್ತೆ ದುರಸ್ಥಿ, ಸೇತುವೆಗಳ ದುರಸ್ಥಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ನಬಾರ್ಡ್‌ದಿಂದ ಒಂದೂವರೆಯಿಂದ ಎರಡು ಕೋಟಿ ರೂಪಾಯಿಗಳ ಹಣವನ್ನು ಕೊಡಿಸತಕ್ಕಂಥ ಕೀರ್ತಿ ನಮ್ಮ ಸರ್ಕಾರದ್ದಾಗಿವೆ ಎಂದು ಈ

ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ವ್ಯವಸ್ಥೆ ನೋಡಿದಾಗ ಬಡ ಜನರ ಆರ್ಥಿಕ ಪರಿಸ್ಥಿತಿಯನ್ನು ನಾವು ಏನು ಉನ್ನತ ಮಟ್ಟದಲ್ಲಿ ಇಡಬೇಕು ಅವರನ್ನು ಬಡತನ ರೇಖೆಗಿಂತ ಮೇಲೆತ್ತಬೇಕು ಎಂದು ಮಾಡಿದ್ದೆವು. ಆದರೆ ಐವತ್ತು ವರ್ಷಗಳಾದರೂ ಕೂಡ ಅವರಿಗೆ ಸೌಲಭ್ಯಗಳನ್ನು ಕೊಡುವುದಕ್ಕೆ ಆಗಲಿಲ್ಲ. ನಾವು 45 ವರ್ಷ ಅವರನ್ನು ನಿರ್ಲಕ್ಷ್ಯ ಮಾಡಿದ್ದೇವೆ. ಅದಕ್ಕೋಸ್ಕರ ಅವರಿಗೆ ಮೂಲಭೂತವಾದ ಸೌಲಭ್ಯಗಳಾದ ವಿದ್ಯೆ, ಕುಡಿಯುವ ನೀರು, ರಸ್ತೆ ಇವುಗಳಿಗೆ ಹೆಚ್ಚು ಒತ್ತು ಕೊಟ್ಟು ಗ್ರಾಮೀಣಾಭಿವೃದ್ಧಿಯಿಂದ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಿ ಅವರ ಅಭಿವೃದ್ಧಿಗೋಸ್ಕರ ಆ ಹಾದಿಗೆ ನಮ್ಮ ಸರ್ಕಾರ ಹೋಗುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ತಮಗೆಲ್ಲರಿಗೂ ಇದರ ಬಗ್ಗೆ ಗೊತ್ತಿದೆ. ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ ನಮ್ಮಲ್ಲಿರುವ 340 ಹಳ್ಳಿಗಳಿಗೆ ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಕೂಡ 100 ಗ್ರಾಮಗಳಿಗೆ ನೀರನ್ನು ಕೊಡುವುದಕ್ಕೆ ಆಗಿರಲಿಲ್ಲ. ನಮ್ಮ ಸರ್ಕಾರ ಬಂದಮೇಲೆ ಕೇವಲ ಎರಡೂವರೆ ವರ್ಷಗಳಲ್ಲಿ 100 ಗ್ರಾಮಗಳಿಗೆ ನೀರನ್ನು ಕೊಡುವ ವ್ಯವಸ್ಥೆಯನ್ನು ಕೈಗೊಂಡಿದ್ದೇವೆ. ಈ ಕೀರ್ತಿ ನಮ್ಮ ಜನತಾದಳ ಸರ್ಕಾರಕ್ಕೆ ಸಲ್ಲುತ್ತದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹುಶಃ ನಮ್ಮ ಸರ್ಕಾರದ ಸಾಧನೆಗಳನ್ನು ಯಾವ ರೀತಿ ಹೇಳಬೇಕೆಂದರೆ, ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರ ಸೀತಾದೇವಿಗೆ ಮುದ್ರಿಕೆ ಕೊಡಲು ಆಂಜನೇಯನನ್ನು ಲಂಕೆಗೆ ಕಳುಹಿಸುತ್ತಾನೆ. ಆಂಜನೇಯ ಲಂಕೆಗೆ ಹೋಗಿ ಮುದ್ರಿಕೆಯನ್ನು ಸೀತಾದೇವಿಗೆ ಕೊಟ್ಟು ಮರಳಿ ಬಂದಾಗ ಶ್ರೀರಾಮಚಂದ್ರ ಲಂಕೆ ಹೇಗಿತ್ತು ಎಂದು ಕೇಳುತ್ತಾನೆ. ಅದರ ವರ್ಣನೆಯನ್ನು ತೆಲುಗಿನಲ್ಲಿ ವಾಲ್ಮೀಕಿ ರಾಮಾಯಣದಲ್ಲಿ ತುಂಬಾ ಚೆನ್ನಾಗಿ ವರ್ಣಿಸಲಾಗಿದೆ. ಸುಮಾರು ಒಂದೂವರೆ ಗಂಟೆಗಳ ಕಾಲ ಅಂಜನೇಯ ಲಂಕೆಯ ಭವ್ಯತೆಯನ್ನು, ಅದ್ಭುತವಾದಂಥ ಮತ್ತು ಸುಂದರತೆಯನ್ನು ಶ್ರೀರಾಮಚಂದ್ರನಿಗೆ ವರ್ಣಿಸುತ್ತಾನೆ. ಅದೇ ರೀತಿ ನಮ್ಮ ರಾಷ್ಟ್ರದಲ್ಲಿಯೇ ನಮ್ಮ ಕರ್ನಾಟಕ ರಾಜ್ಯದ ಸರ್ಕಾರ ಕೇವಲ ಎರಡೂವರೆ ವರ್ಷಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದರಲ್ಲಿ ಪ್ರಗತಿಯನ್ನು ಸಾಧಿಸಿದ ರಾಜ್ಯವೆಂದರೆ ನಮ್ಮ ಕರ್ನಾಟಕ ರಾಜ್ಯವೇ ಎಂದು ಹೇಳಿದರೆ ತಪ್ಪಾಗಲಾರದು.

ಮಾನ್ಯ ಸದಸ್ಯರು : ರಾವಣ ರಾಜ್ಯವಾಗಿದೆ.

ಶ್ರೀ ಆರ್. ಶ್ರೀನಿವಾಸ್ : ರಾಮರಾಜ್ಯ

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ರಾವಣ ರಾಜ್ಯವಾಗಿದೆಯೆಂದು ನಿಮ್ಮ ಪಕ್ಷದವರೇ ಹೇಳುತ್ತಿದ್ದಾರೆ ನೀವು ಅದನ್ನು ಕೇಳಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ರಾವಣ ರಾಜ್ಯ ಜೆ.ಹೆಚ್ ಪಟೇಲ್ ಸರ್ಕಾರ ಇದ್ದಾಗ ಆಗುವುದಿಲ್ಲ. ನೀವೇನಾದರೂ ನಾಳೆ ಆಡಳಿತಕ್ಕೆ ಬಂದರೆ ಆಗ ಆದರೂ ಆಗಬಹುದು.

ಶ್ರೀ ಆರ್. ಶ್ರೀನಿವಾಸ್ : ಅಧ್ಯಕ್ಷರೇ, ರಾವಣ ಕೂಡ ಬ್ರಹ್ಮನ ಅವತಾರದಲ್ಲಿ ಹುಟ್ಟಿರತಕ್ಕಂಥವನು. ರಾವಣ ಸಾಮಾನ್ಯವಾದ ಮನುಷ್ಯ ಅಲ್ಲ. ಆತನ ಅವತಾರ ಬ್ರಹ್ಮಾವತಾರ. ಬೆಳಿಗ್ಗೆ ಬ್ರಹ್ಮಾವತಾರ, ಮಧ್ಯಾಹ್ನ ಮಾತ್ರ ರಾಕ್ಷಸನ ಅವತಾರ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಸೀತೆಯನ್ನು ಏಕೆ ಆತ ಕದ್ದುಕೊಂಡು ಹೋದ ಎಂಬುದನ್ನು ಹೇಳಿಬಿಡಿ.

ಶ್ರೀ ಆರ್. ಶ್ರೀನಿವಾಸ್ : ಆ ಲಂಕಾ ಪಟ್ಟಣ ಬಹಳ ಸುಂದರವಾದ ನಗರವಾಗಿತ್ತು.

ಶ್ರೀ ಎಸ್. ಕೃಷ್ಣಪ್ಪ : ಹೆಗಡೆಯವರೇ, ನೀವು ಕೇವಲ ರಾಮನ ಗುಡಿಯನ್ನು ಕಟ್ಟುವುದಕ್ಕೆ ಹೋಗುತ್ತಿದ್ದೀರಿ, ಆದರೆ ನಮ್ಮ ಸರ್ಕಾರ ರಾಮರಾಜ್ಯವನ್ನಾಗಿಯೇ ಮಾಡಲು ಹೋಗುತ್ತಿದೆ, ಕೇವಲ ಗುಡಿ ಕಟ್ಟುವುದಲ್ಲ, ಆದುದರಿಂದ ನಾವು ರಾಮರಾಜ್ಯವನ್ನು ಕಟ್ಟುವುದಕ್ಕೆ ಹೋಗುತ್ತಿದ್ದೇವೆಯೇ ಹೊರತು ಕೇವಲ ಗುಡಿಯಲ್ಲ ಅನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಆರ್. ಶ್ರೀನಿವಾಸ್ : ಈ ರೀತಿಯ ಪ್ರಗತಿಯನ್ನು ಸಾಧನೆ ಮಾಡಿ ತೋರಿಸುವುದಕ್ಕೆ ಅವರ ಕನಸು ಬಹುಶಃ ನನಸಾಗಲಿಲ್ಲ.

ಮಾನ್ಯ ಸದಸ್ಯರು : ಬಿ.ಜೆ.ಪಿ. ಯವರಿಗೆ ವ್ಯಥೆ ಏನೆಂದರೆ, ನಮ್ಮ ರಾಮನನ್ನು ಇವರು ಏಕೆ ಹಿಡಿದರು ಎಂಬುದಾಗಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ನೀವು ರಾಮನ ಸುದ್ಧಿಯನ್ನು ಹೇಳಲಿಲ್ಲ. ನೀವು ಹೇಳಿದ್ದು ರಾವಣನ ವಿಷಯ. ನೀವು ಏನು ಹೇಳಿದ್ದೀರೋ ಅದರ ಪ್ರಕಾರ ನಡೆದುಕೊಳ್ಳುತ್ತಿದ್ದೀರಿ.

ಶ್ರೀ ಆರ್. ಶ್ರೀನಿವಾಸ್ : ಅನೇಕ ವಿಧವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದೇ ನಮ್ಮ ಕೀರ್ತಿಗೆ ಕಾರಣವಾಗಿದೆ. ನಾವೆಲ್ಲರೂ ಕೂಡ ಇದರಲ್ಲಿ ಚಿಂತನೆಯನ್ನು ಮಾಡಬೇಕಾಗಿದೆ. ಎಲ್ಲಾ ವಿಧದಲ್ಲೂ ಪ್ರಗತಿಯನ್ನು ಮಾಡಿದ್ದರೂ ಕೆಲವೊಂದು ವಿಚಾರದಲ್ಲಿ ಈ ಸಂದರ್ಭದಲ್ಲಿ ನಾನು ಏನು ಹೇಳಬಯಸುತ್ತೇನೆಂದರೆ ಇದನ್ನು ನಮ್ಮ ಸರ್ಕಾರ ಬಂದಮೇಲೆ ಆದ ವ್ಯತ್ಯಾಸವೆಂದು ಹೇಳುವುದಿಲ್ಲ, ಸತತವಾಗಿ ಸ್ವಾತಂತ್ರ್ಯ ಬಂದ 50 ವರ್ಷಗಳಿಂದ ಮಾಡಿಕೊಂಡು ಬಂದಿರತಕ್ಕಂಥ ಕೆಲವು ವ್ಯತ್ಯಾಸಗಳನ್ನು ಹೇಳಬಯಸುತ್ತೇನೆ. ಅದೇನೆಂದರೆ ಸಣ್ಣ ನೀರಾವರಿ ಯೋಜನೆ, ಬಯಲು ಸೀಮೆ ಯೋಜನೆ, ಭಾರೀ ನೀರಾವರಿ ಯೋಜನೆ ಬಗ್ಗೆಯದ್ದಾಗಿರುತ್ತದೆ. ನಾವೆಲ್ಲಾ ಕೂಡ ಬಯಲು ಸೀಮೆಯ ಪ್ರದೇಶದಿಂದ ಬಂದಿರತಕ್ಕಂಥ ಜನರು.57 ತಾಲ್ಲೂಕುಗಳಿಂದ ಸುಮಾರು 72 ರಿಂದ 74 ಶಾಸಕರು ಆರಿಸಿಬಂದಿದ್ದೇವೆ. ಸ್ವಾತಂತ್ರ್ಯ ಬಂದಾಗಿನಿಂದ ಮಾಡಿಕೊಂಡು ಬಂದಿರುವ ವ್ಯತ್ಯಾಸಗಳನ್ನು ನಾನು ಇಲ್ಲಿ ಹೇಳುವುದಕ್ಕೆ ನೋವಾಗುತ್ತದೆ. ಎಷ್ಟು ವ್ಯತ್ಯಾಸವನ್ನು ಮಾಡಿದ್ದಾರೆಂದರೆ, ಈ ಬಯಲು ಸೀಮೆ ಪ್ರದೇಶಗಳಲ್ಲಿ ಸಣ್ಣ ನೀರಾವರಿ ವಿಚಾರದಲ್ಲಿ ಒಟ್ಟು 36,661 ಕೆರೆಗಳಿವೆ, 6,80,000 ಹೆಕ್ಟೇರ್ ಪ್ರದೇಶದ ಜಮೀನು ಇರತಕ್ಕಂಥದ್ದರಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ಜನರು ವಾಸ ಮಾಡುವ ಈ ಪ್ರದೇಶಕ್ಕೆ ಸತತವಾಗಿ ಎಷ್ಟು ವ್ಯತ್ಯಾಸ ಮಾಡಿದ್ದಾರೆಂದರೆ ಅವರು ಕೊಡತಕ್ಕಂಥ ಯೋಜನೆ ಗಾತ್ರದ ಶೇಕಡ 00.1ರಷ್ಟು ಕೊಡುವುದಕ್ಕೆ ಕೂಡ ವಿಫಲವಾಗಿದ್ದಾರೆ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಇವೊತ್ತು ಸಣ್ಣ ನೀರಾವರಿ ಬೇಡಿಕೆ ಮೇಲೆ ಚರ್ಚೆಯೇ ಇಲ್ಲದಿದ್ದರೂ ಕೂಡ ಸಣ್ಣ ನೀರಾವರಿ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಆ ಬೇಡಿಕೆಯೇ ಇಲ್ಲದಿದ್ದಾಗ ಅದರ ಮೇಲೆ ಹೇಗೆ ಚರ್ಚೆ ಮಾಡುತ್ತಾರೆ.

ಶ್ರೀ ಆರ್. ಶ್ರೀನಿವಾಸ್ : ಅಧ್ಯಕ್ಷರೇ, ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಬಯಲು ಸೀಮೆ ವಿಚಾರ ಬಂದಾಗ ಸರ್ಕಾರದ ಗಮನಕ್ಕೆ ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಆ ಪ್ರದೇಶದ ವಿಚಾರ ತಿಳಿಸುವುದಕ್ಕೆ ಅವಕಾಶ ಉಂಟು. ಇದರಲ್ಲಿ ಬೇಡಿಕೆಗಿಂತ ಸಲಹೆ ಕೊಡಬಹುದು.

ಡಾ|| ಎಂ. ಪಿ. ಕರ್ಕಿ : ಅಧ್ಯಕ್ಷರೇ, ಬೇಡಿಕೆ ಮಂಡನೆ ಮಾಡಿದಾಗ ಮಾತ್ರ ಅದರ ಮೇಲೆ ಮಾತನಾಡುವುದಕ್ಕೆ ಬರುತ್ತದೆಯೇ ಹೊರತು ಸುಮ್ಮನೆ ಲೋಕಾಭಿರಾಮವಾಗಿ ಮಾತನಾವುದಕ್ಕೆ ಬರುವುದಿಲ್ಲ.

ಶ್ರೀ ಆರ್. ಶ್ರೀನಿವಾಸ್ : ಅಧ್ಯಕ್ಷರೇ, ಬಯಲುಸೀಮೆಗೆ ಪ್ರತ್ಯೇಕವಾದಂಥ ಬೇಡಿಕೆ ಏನೂ ಇಟ್ಟಿಲ್ಲ. ಇದರಲ್ಲಿ ಕೃಷಿ ಇಲಾಖೆ ಬಗ್ಗೆ ಕೂಡ ಮಾತನಾಡಬಹುದು, ಬಯಲು ಸೀಮೆಯಲ್ಲಿ ಸಣ್ಣ ನೀರಾವರಿ ಬರತಕ್ಕಂಥ ವ್ಯವಸ್ಥೆ ಇಲ್ಲಿರುವುದರಿಂದ ಅದರ ಬಗ್ಗೆ ಇದರಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಕಾನೂನಿನಲ್ಲಿ ಹೇಳಲಾಗಿದೆ.

ಶ್ರೀ ಆಯನೂರ್ ಮಂಜುನಾಥ್ : ಬಯಲು ಸೀಮೆ ಬಗ್ಗೆ ಬೇಡಿಕೆ ಇಲ್ಲದಿದ್ದರೂ ಕೂಡ ಬೇಡಿಕೆ ಸಂಖ್ಯೆ 42ರಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಎಂದು ಇದೆ, ಅದರಲ್ಲಿ ಮಾನ್ಯ ಸದಸ್ಯರು ಮಾತನಾಡಬಹುದು.

ಶ್ರೀ ಆರ್. ಶ್ರೀನಿವಾಸ್ : ಅದೇ ಆಗಬಹುದು, ಅದಕ್ಕೇನೂ ಪರವಾಗಿಲ್ಲ. ನೀವು ಅದನ್ನೇ ತೆಗೆದುಕೊಳ್ಳಿ. ಈ ಬಯಲುಸೀಮೆ ಪ್ರದೇಶಗಳಲ್ಲಿ ಇಷ್ಟೊಂದು ಕೆರೆಗಳಿದ್ದರೂ ಕೂಡ ಅನುದಾನ ಎಷ್ಟಿದೆಯೆಂದರೆ ಕೇವಲ 75 ಕೋಟಿ ರೂ.ಗಳು ಮಾತ್ರ. ಸುಮಾರು 36 ಸಾವಿರ ಕೆರೆಗಳಿರತಕ್ಕಂಥ, 6 ಲಕ್ಷದ 80 ಸಾವಿರ ಹೆಕ್ಟೇರ್ ಜಮೀನು ಇರತಕ್ಕಂಥ, ರಾಜ್ಯದ ಒಟ್ಟಾರೆ ಜನಸಂಖ್ಯೆ 5 ಕೋಟಿಯಲ್ಲಿ ಸುಮಾರು ಒಂದೂವರೆ ಕೋಟಿ ಜನರು ವಾಸ ಮಾಡತಕ್ಕಂಥ ಅಂದರೆ ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಜನರು ವಾಸ ಮಾಡತಕ್ಕಂಥ ಪ್ರದೇಶಕ್ಕೆ ಕೇವಲ 75 ಕೋಟಿ ರೂ.ಗಳ ಅನುದಾನವಿದ, ಇದರಲ್ಲೂ 60 ಕೋಟಿ ರೂ.ಗಳ ಹಿಂದಿನ ಕಾಮಗಾರಿಗಳಿಗಾಗಿ ಉಪಯೋಗಿಸಬೇಕಾಗಿದೆ. 10 ಕೋಟಿ ರೂ.ಗಳನ್ನು ಸಿಬ್ಬಂದಿ ವೆಚ್ಚಕ್ಕಾಗಿ ಖರ್ಚು ಮಾಡಬೇಕಾಗಿದೆ, ಇನ್ನು ಉಳಿದ 5 ಕೋಟಿ ರೂ.ಗಳು ಈ ಸಾಲಿನ ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸಬೇಕಾಗಿದೆ. ಯಾವ ರೀತಿಯಲ್ಲಿ ಈ ಪ್ರದೇಶದ ಅಭಿವೃದ್ಧಿಗಾಗಿ ಹಣವನ್ನು ಮೀಸಲಾಗಿಟ್ಟಿದ್ದಾರೆಂಬುದನ್ನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಇದರ ಬಗ್ಗೆ ಮಾನ್ಯ ಸಚಿವರೂ ಕೂಡ ಗಮನಿಸಬೇಕು. ನಾವು ಇವೊತ್ತಿನ ದಿವಸ ಹೇಗೆ ಬದುಕಬೇಕು? ನಾವೇನು ನಿಮ್ಮನ್ನು ಗಂಗಾ-ಕಾವೇರಿಯನ್ನು ಅಳವಡಿಸಿ ತೆಗೆದುಕೊಂಡು ಬನ್ನಿ ಎಂದು ಹೇಳುವುದಿಲ್ಲ, ಕೃಷ್ಣ ತೆಗೆದುಕೊಂಡು ಬರುವುದಕ್ಕೆ ನಮಗ್ಯಾರಿಗೂ ಅವಕಾಶವಿಲ್ಲವಾದ್ದರಿಂದ ಅದು ಬೇಡ, ಈಗಾಗಲೇ ಭಾರಿ ನೀರಾವರಿ ಬಗ್ಗೆ ತೆಗೆದುಕೊಂಡಾಗ ಕೇವಲ ಯು.ಕೆ.ಪಿ.ಗೆ ಇಲ್ಲಿಯವರೆಗೆ 9 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಸ್ವಾತಂತ್ರ್ಯಾ ನಂತರ ಸಾವಿರಾರು ಕೋಟಿ

ರೂ.ಗಳನ್ನು ಖರ್ಚು ಮಾಡಲಾಗಿದೆ. ಸುಮಾರು 50 ವರ್ಷಗಳಿಂದ ನಾವು ಅನೇಕ ಜನರು ಶಾಸಕರಾಗಿ ಆ ಪ್ರದೇಶದಿಂದ ಆರಿಸಿಬಂದಿದ್ದೇವೆ, ಇದರಲ್ಲಿ ಪಕ್ಷಭೇದದ ಬಗ್ಗೆ ನಾನು ಕೇಳುತ್ತಿಲ್ಲ. ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಅಲ್ಲಿ ಯಾವ ಜನಾಂಗಕ್ಕೆ ಅನ್ಯಾಯವಾಗಿದೆ, ಯಾವ ತಾಲ್ಲೂಕುಗಳಿಗೆ ಅನ್ಯಾಯವಾಗಿದೆ ಎಂಬುದನ್ನು ತಿಳಿಸಬಯಸುತ್ತೇನೆ. ಹೊರತು ಯಾವ ಪಕ್ಷದ ಬಗ್ಗೆ ನಾನು ಹೇಳುವುದಿಲ್ಲ. ಯು.ಕೆ.ಪಿ. ಕಾವೇರಿ ಬೇಸಿನ್, ಹಾರಂಗಿ ಜಲಾಶಯ, ತುಂಗಭದ್ರಾ, ಇವುಗಳಿಗೆ ಯಾವುದಕ್ಕೇ ಹಣ ಕೊಟ್ಟರೂ ಕೂಡ ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಅವೆಲ್ಲವೂ ನಮ್ಮ ಕರ್ನಾಟಕದಲ್ಲಿಯೇ ಇರುವುದು. ಅದರ ಬಗ್ಗೆ ಕೋಟ್ಯಾಂತರ ರೂ.ಗಳನ್ನು ಕೊಟ್ಟರೂ ಕೂಡ ನನ್ನ ಅಭ್ಯಂತರವಿಲ್ಲ. ಅವರೂ ನಮ್ಮ ಜನರೇ, ನಮ್ಮ ಸಹೋದರರೇ, ಆ ಜನರನ್ನು ನಾವೆಲ್ಲಾ ಕೂಡಿ ಅಭಿವೃದ್ಧಿಪಡಿಸೋಣ. ಅದೇ ರೀತಿ ಕನಿಷ್ಟಪಕ್ಷ 25 ಪೈಸೆಯ ಭಾಗದಷ್ಟಾದರೂ ಹಣವನ್ನು ನಮ್ಮ ಪ್ರದೇಶಕ್ಕೆ ಕೊಡತಕ್ಕಂಥ ವ್ಯವಸ್ಥೆಯನ್ನು ಏಕೆ ಮಾಡಬಾರದು? ಆದರೆ ಹಾಗೆ ಮಾಡದೇ ಯಾವ ರೀತಿಯಲ್ಲಿ ನಮಗೆ ವ್ಯತ್ಯಾಸವನ್ನು ಮಾಡಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವೊತ್ತಿನ ದಿವಸ, ಉದಾಹರಣೆಗೆ ಹೇಳುತ್ತಿದ್ದೇನೆ, ಕೇವಲ ಒಂದು ಕಾಲುವೆಗೆ 450 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

4.10 ಪಿ.ಎಂ.

1995-96ರಲ್ಲಿ 450 ಕೋಟಿ ರೂಪಾಯಿಗಳನ್ನು ಇವತ್ತಿನ ದಿವಸ ವಿಶ್ವೇಶ್ವರಯ್ಯ ಚಾನಲ್‌ಗೆ ಕೊಟ್ಟಿರತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ ನಾವು ಇವತ್ತಿನ ದಿವಸ 5 ಕೋಟಿ ಜನ ವಾಸವಾಗಿದ್ದೇವೆ. ಆದುದರಿಂದ ನಾನು ಹೇಳುವುದೇನೆಂದರೆ ಬಯಲು ಸೀಮೆ ಪ್ರದೇಶಾಭಿವೃದ್ಧಿಯನ್ನು ಯಾವರೀತಿ ಅಭಿವೃದ್ಧಿ ಮಾಡಿದ್ದೀರಿ? ಸಣ್ಣ ನೀರಾವರಿ ಬಗ್ಗೆ ಏನು ನಿರ್ಲಕ್ಷ್ಯ ಮಾಡಿದ್ದೀರಿ ಹಾಗೆ ಇನ್ನು ಮುಂದೆ ದಯವಿಟ್ಟು ನಿರ್ಲಕ್ಷ್ಯ ಮಾಡತಕ್ಕಂಥ ವ್ಯವಸ್ಥೆ ತರಬೇಡಿ. ಇದರ ಪರಿಣಾಮ ಏನಾಗುತ್ತದೆ? ನಾವು ಏನಾಗುತ್ತೇವೆ ಎಂದರೆ ಕೆಲವೇ ವರ್ಷಗಳಲ್ಲಿ ಈಗಾಗಲೇ ಕೋಲಾರ, ಚಿತ್ರದುರ್ಗ, ತುಮಕೂರು, ಬೆಂಗಳೂರು ರೂರಲ್ ಹಾಸನ, ಬೆಳಗಾಂ, ವಿಜಾಪುರ ಹಾಗೂ ಧಾರವಾಡ ಈ ಜಿಲ್ಲೆಗಳ ಅನೇಕ ತಾಲ್ಲೂಕುಗಳಲ್ಲಿ ಇನ್ನೂ ಕೇವಲ 15 ವರ್ಷಗಳಲ್ಲಿ ಗತಿ ಏನಾಗುತ್ತದೆ ಎಂದರೆ ಮಣ್ಣು ತಿನ್ನಬೇಕಾದಂತಹ ಪರಿಸ್ಥಿತಿ ಬರುತ್ತದೆ. ಈಗಾಗಲೇ ನೀರಿಗಾಗಿ 500-600 ಅಡಿ ಆಳ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. 600 ಅಡಿ ಆಳದಲ್ಲಿ ಕೊಳವೆ ಬಾವಿ ಹಾಕಿದರೂ ಕೂಡ ಸುಮಾರು ಒಂದೂವರೆ ಎರಡೂವರೆ ಇಂಚು ನೀರು ಬರುತ್ತಿಲ್ಲ. ಇದರ ಮೂಲ ಉದ್ದೇಶ ಏನು? ಈ ಕಡೆ ಕೆರೆಗಳು ಹೂಳು ತುಂಬಿವೆ. ಇವುಗಳು ಪುರಾತನ ಕಾಲದಲ್ಲಿ ಕಟ್ಟಿರತಕ್ಕಂಥ ಕೆರೆಗಳು. ಇವುಗಳಿಗೆ ಹೂಳು ಎತ್ತಿ ಅದರ ಕಟ್ಟೆಗೆ ಒಂದು ಮಕರಿ ಮಣ್ಣು ಹಾಕಿರತಕ್ಕಂಥ ವ್ಯವಸ್ಥೆ ಇಲ್ಲ. ಇನ್ನೊಂದು ಕಡೆ ನೋಡಿದರೆ ವಿದ್ಯುಚ್ಛಕ್ತಿ ಕೊರತೆ ಇದೆ. ಇಂತಹ ಪರಿಸ್ಥಿತಿ ಬಂದಾಗ ಇನ್ನೊಂದು ಕಡೆ ಪ್ರಕೃತಿ ವಿಕೋಪದಿಂದ, ಈ ವಿಷಯದ ಬಗ್ಗೆ ನಾನು ಮುಂದೆ ಬರುತ್ತೇನೆ. ಜೂನ್, ಆಗಸ್ಟ್ ತಿಂಗಳಾದರೂ ಕೂಡ ಮಳೆ ಬಂದಿಲ್ಲ. ನಾವು ಬಿತ್ತನೆ ಮಾಡುತ್ತಿಲ್ಲ. ಇಂತಹ ಅನೇಕ ಕಷ್ಟಗಳನ್ನು ನಾವು ಆ ಪ್ರದೇಶದವರು ಅನುಭವಿಸುತ್ತಿದ್ದಾಗ, ಆ ಒಂದು ಪ್ರದೇಶಕ್ಕೆ ನೀವು ಕೊಟ್ಟಿರುವಂತಹ ಕೊಡುಗೆ ಏನಿದೆ? ಇದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನಾವೆಲ್ಲಾ ಈ ಒಂದು ಕನ್ನಡ ತಾಯಿಯ ಮಕ್ಕಳು. ಒಂದು

ಉದಾಹರಣೆ ಹೇಳುವುದಾದರೆ ಒಬ್ಬ ತಂದೆಗೆ ಮೂರು ಜನ ಮಕ್ಕಳು ಇದ್ದಾಗ, ಅವರ ಆಸ್ತಿಯಲ್ಲಿ ದೊಡ್ಡ ಮಗನಿಗೆ ಜಾಸ್ತಿ ಕೊಡಲಿ, ಇನ್ನೊಬ್ಬ ಮಗನಿಗೆ ಇನ್ನೊಂದು ಸ್ವಲ್ಪ ಜಾಸ್ತಿ ಆಸ್ತಿ ಕೊಡಲಿ, ಆದರೆ ಕೊನೆಯವನಿಗೆ ಕನಿಷ್ಟ ಪಕ್ಷ ನಾಲ್ಕಾಣೆ ಭಾಗ ಕೊಡತಕ್ಕಂಥ ವ್ಯವಸ್ಥೆ ಮಾಡತಕ್ಕಂಥಾದ್ದು ತಮ್ಮ ಜವಾಬ್ದಾರಿಯಾಗುತ್ತದೆ. ಆದರೆ ನಿನಗೆ ಆಸ್ತಿಯಲ್ಲಿ ಪಾಲು ಇಲ್ಲ ಎಂದು ಹೇಳಿದರೆ ಅವನ ಗತಿ ಏನಾಗುತ್ತದೆ? ಏಕೆ ನಾವು ಈ ಕುಟುಂಬದಲ್ಲಿ ಹುಟ್ಟಬೇಕು ಎನ್ನುವಂತಹ ಭಾವನೆ ಬರುತ್ತದೆ. ಏಕೆಂದರೆ ಇದು ಸತತವಾಗಿ 50 ವರ್ಷಗಳಿಂದ ಬಂದಿರತಕ್ಕಂಥ ಸಂಪ್ರದಾಯ. ನಾನು ನಮ್ಮ ಸರ್ಕಾರ, ಇನ್ನೊಬ್ಬರ ಸರ್ಕಾರ ಎಂದು ಹೇಳುತ್ತಿಲ್ಲ. ಯಾವುದೇ ಸರ್ಕಾರ ಇದ್ದರೂ ಕೂಡ ಸ್ವಾತಂತ್ರ್ಯದ ನಂತರ ನಾವು ಯಾವರೀತಿ ಕಷ್ಟಗಳನ್ನು ಅನುಭವಿಸುತ್ತಿದ್ದೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮಗೆ ಏನಾದರೂ ಇವತ್ತು 25 ಪರ್ಸೆಂಟ್ ಹೂಳು ಎತ್ತುವಂತಹ ಕೆಲಸವಾಗಿದ್ದರೆ, ಒಂದು ಬೆಳೆ ಆಗುವಂಥಾದ್ದು ಇದ್ದರೆ, ಇವತ್ತು ಎರಡು ಬೆಳೆ ಮಾಡಿಕೊಳ್ಳುವುದಕ್ಕೆ ಅವಕಾಶ ಇತ್ತು. ತಮಗೆ ಹೇಳುವುದೇನೆಂದರೆ ಕೋಲಾರ ಜಿಲ್ಲೆ ಬಯಲು ಪ್ರದೇಶದ ಜನರಿಗೆ ಫೆಬ್ರವರಿ ತಿಂಗಳು ಬಿಟ್ಟರೆ ಇನ್ನು 4-5 ತಿಂಗಳವರೆಗೆ ಕೂಡ ಅಲ್ಲಿರುವಂತಹ ಕೂಲಿಕಾರರಿಗೆ ಕೂಲಿ ಸಿಗುತ್ತಿಲ್ಲ. ಮಳೆ ನೀರು ಇರುವುದಿಲ್ಲ. ವಿದ್ಯುಚ್ಛಕ್ತಿ ಇರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಆರ್ಥಿಕವಾಗಿ ಚೆನ್ನಾಗಿ ಇರಬೇಕು ಎನ್ನುವ ಪರಿಸ್ಥಿತಿಯಲ್ಲಿ ಇರುವಾಗ ನಾನು ಕೇಳಿಕೊಳ್ಳುವುದೇನೆಂದರೆ ನಮಗೆ ಸಾವಿರಾರು ಕೋಟಿ ರೂಪಾಯಿ ಬೇಕಾಗಿಲ್ಲ. ಕನಿಷ್ಟ ಪಕ್ಷ ಒಂದೊಂದು ವರ್ಷಕ್ಕೆ ಈ ಬಯಲು ಸೀಮೆ ಪ್ರದೇಶಕ್ಕೆ 200 ಕೋಟಿ ರೂಪಾಯಿ ಹಣವನ್ನು ಮೀಸಲಿಟ್ಟು ಅಲ್ಲಿ ಪ್ರತ್ಯೇಕವಾಗಿ ಹೂಳೆತ್ತುವ ವ್ಯವಸ್ಥೆಯನ್ನು ಮಾಡಿದಾಗ ಮಾತ್ರ ಆ ಪ್ರದೇಶದ ಜನ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಇದ್ದರೆ ಖಂಡಿತವಾಗಿ ಕೆಲವೇ ವರ್ಷಗಳಲ್ಲಿ ನಾವು ನಿರ್ಗತಿಕರಾಗಿ ಕೂಲಿ ಮಾಡುವಂತಹ ಪರಿಸ್ಥಿತಿಗೆ ಬರಬೇಕಾಗುತ್ತದೆ. ಆದುದರಿಂದ ಸರ್ಕಾರ ಇದಕ್ಕೆ ಹೆಚ್ಚಿಗೆ ಒತ್ತುಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ) : ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಸ್ನೇಹಿತರಾದ ಶ್ರೀನಿವಾಸ್‌ರವರು ಬಯಲು ಸೀಮೆ ಅಭಿವೃದ್ಧಿ ಮಂಡಲಿ ಬಗ್ಗೆ ಏನು ಹೇಳುತ್ತಿದ್ದಾರೆ, 75 ಜನ ಶಾಸಕರು ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿಯಲ್ಲಿ ಬರುತ್ತೇವೆ. 57 ತಾಲ್ಲೂಕು ಇದರ ಅಡಿಯಲ್ಲಿ ಬರುತ್ತವೆ. ಆದರೆ ಇವತ್ತು ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿಗೆ ಸರ್ಕಾರ ಕೊಡುವಂತಹ ಅನುದಾನ ಎಳ್ಳಷ್ಟೂ ಸಾಲುವುದಿಲ್ಲ. ಇವತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಗೆ, ಮತ್ತು ಮಲೆನಾಡು ಅಭಿವೃದ್ಧಿ ಮಂಡಲಿಗೆ ಕನಿಷ್ಠ ಪಕ್ಷ 40-50 ಲಕ್ಷ ರೂಪಾಯಿ ಒಂದೊಂದು ಕ್ಷೇತ್ರಕ್ಕೆ ಇವತ್ತು ಸಿಗುತ್ತಿದೆ. ಹೀಗಾಗಿ ಇವತ್ತು ನಮ್ಮ ಬಯಲು ಸೀಮೆ ಅಭಿವೃದ್ಧಿ ಮಂಡಲಿಗೆ ಒಂದೊಂದು ಕ್ಷೇತ್ರಕ್ಕೆ 3-4 ಲಕ್ಷ ರೂಪಾಯಿ ಸಹ ಅಭಿವೃದ್ಧಿಗೆ ಸಿಗುತ್ತಿಲ್ಲ. ಇದು ಅನ್ಯಾಯವಾಗುತ್ತಿದೆ. ತೀರಾ ಅನ್ಯಾಯವಾಗುತ್ತಿದೆ. ಇದು ನಮ್ಮ ಪ್ರತಿಯೊಂದು ಅಭಿವೃದ್ಧಿ ಮಂಡಲಿ ಮೀಟಿಂಗ್‌ನಲ್ಲಿ ಚರ್ಚೆಯಾಗುತ್ತಿದೆ. ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಜಾಸ್ತಿ ಹಣ ಕೊಡಿ ಎಂದು ವಿನಂತಿ ಮಾಡಿಕೊಂಡಿದ್ದೇವೆ. ಕನಿಷ್ಠಪಕ್ಷ ಒಂದೊಂದು ಕ್ಷೇತ್ರಕ್ಕೆ 50 ಲಕ್ಷ ರೂಪಾಯಿ ಬರುವ ಹಾಗೆ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದರೂ ಸಹ ಇದುವರೆಗೂ ಅದರ ಬಗ್ಗೆ

ನಿರ್ಲಕ್ಷ್ಯವಾಗುತ್ತಾ ಬಂದಿದೆ. ಆದುದರಿಂದ ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ, ಉಪ ಮುಖ್ಯಮಂತ್ರಿಗಳಲ್ಲಿ ಹಾಗೂ ಸಂಬಂಧಪಟ್ಟ ಮಂತ್ರಿಗಳಲ್ಲಿ, ದಯವಿಟ್ಟು ಆ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಲಿಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಅಲ್ಲಿ ಜನತೆಗೂ, ಕ್ಷೇತ್ರದ ಅಭಿವೃದ್ಧಿಗೂ ಸರ್ಕಾರ ಸಹಾಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಅಶೋಕ್ ಕಾಟ್ವೆ : ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿಯಲ್ಲಿ ನಮ್ಮ ಕೃಷಿ ಸಚಿವರು ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿ ಎಂದು ಬಹಳ ಕಷ್ಟಪಟ್ಟು ಮಾಡಿದ್ದಾರೆ. ಮಾಡಿದಮೇಲೆ ಮೊದಲನೇ ವರ್ಷದಲ್ಲಿ ನಾವು ಆಗಿನ ಮುಖ್ಯಮಂತ್ರಿಗಳು, ಹಿಂದಿನ ಪ್ರಧಾನಮಂತ್ರಿಗಳು ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿಗೆ ಕನಿಷ್ಟ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿ ಸನ್ಮಾನ್ಯ ದೇವೇಗೌಡರು ಹೇಳಿದ್ದರು. ನಂತರ ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಜೆ.ಹೆಚ್. ಪಟೇಲ್‌ರವರು ಸಹ ಇದಕ್ಕೆ ಕನಿಷ್ಟ 25 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಂತಹ ಸಂದರ್ಭ ಇದ್ದರೂ ಸಹ ಇದುವರೆಗೂ ಯಾವುದೇ ರೀತಿಯ ಹಣವನ್ನು ಅಲ್ಲಿ ಬಿಡುಗಡೆ ಮಾಡಿಲ್ಲ. ಒಂದು ಕ್ಷೇತ್ರಕ್ಕೆ ಮಾತ್ರ ಮೂರು ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಅದಕ್ಕಿಂತ ಹೆಚ್ಚು ಹಣವನ್ನು ಬಿಡುಗಡೆ ಮಾಡುವುದಕ್ಕೆ ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಶ್ರೀನಿವಾಸ್ : ಈಗ ಅದರ ಮಾಹಿತಿ ಕೊಡುವುದರ ಜೊತೆಗೆ ನನ್ನ ಸ್ನೇಹಿತರು ಹೇಳಿದರು, ನಿಜ ನನ್ನ ಸ್ನೇಹಿತರು ಹೇಳುತ್ತಿರುವುದು. ನಾನು ತಮಗೆ ಒಂದೊಂದು ವಿವರ ಕೊಡುತ್ತಿದ್ದೇನೆ. ದಯವಿಟ್ಟು ಆ ಒಂದು ಪ್ರದೇಶಕ್ಕೆ ಸೇರಿರತಕ್ಕಂಥ ಮಿತ್ರರು ಇದ್ದರೆ ತಪ್ಪು ತಿಳಿದುಕೊಳ್ಳಬಾರದು. ಮಾಹಿತಿ ಯಾವರೀತಿ ನಮಗೂ ಅವರಿಗೂ ವ್ಯತ್ಯಾಸ ಇದೆ ಎನ್ನುವ ಭಾವನೆ ಬಿಟ್ಟರೆ, ಅಥವಾ ತಮಗೆ ಏಕೆ ಕೊಟ್ಟಿದ್ದಾರೆ ಎಂದು ಕೇಳುತ್ತಾ ಇಲ್ಲ. ಈಗ ಹೈದರಾಬಾದ್ ಕರ್ನಾಟಕಕ್ಕೆ 66 ಕೋಟಿ ರೂಪಾಯಿ ಕೊಟ್ಟರು. ಮಲೆನಾಡು ಅಭಿವೃದ್ಧಿ ಮಂಡಲಿಗೆ 36 ಕೋಟಿ ರೂಪಾಯಿ, ಅದೇರೀತಿಯಲ್ಲಿ 1992-93ರಲ್ಲಿ 63 ಕೋಟಿ ರೂಪಾಯಿ ಕೊಟ್ಟರು. 1994-95ರಲ್ಲಿ 46 ಕೋಟಿ ರೂಪಾಯಿ ಕೊಟ್ಟರು. ಸತತವಾಗಿ 44, 44, 48 ಕೋಟಿ ರೂಪಾಯಿ, 36, 33, 32, 30 ಕೋಟಿ ರೂಪಾಯಿ ಕೊಟ್ಟರು. ಈ ರೀತಿಯಾದಂತಹ ಒಂದು ದೊಡ್ಡ ಯೋಜನೆಗಳು ಇದ್ದು, ಅನೇಕ ನದಿಗಳು, ಕಟ್ಟಡಗಳು ಇರತಕ್ಕಂಥ ಪ್ರದೇಶಕ್ಕೆ ಬಹುಶಃ ಈಗಾಗಲೇ ಕೂಡ 200 ಕೋಟಿ ರೂಪಾಯಿಗಳನ್ನು ಹೈದರಾಬಾದ್ ಅಭಿವೃದ್ಧಿ ಪ್ರದೇಶಕ್ಕೆ ಕೊಟ್ಟಿದ್ದಾರೆ. ಇದಕ್ಕೆ126 ಕೋಟಿ ರೂಪಾಯಿ ಕೊಟ್ಟಿರುವಂತಹ ವ್ಯವಸ್ಥೆ ಇದೆ. ಆದರೆ ಬಯಲು ಸೀಮೆಗೆ 95ರಲ್ಲಿ ಅನುಷ್ಠಾನಕ್ಕೆ ಬಂದಾಗ ಇದರ ವೆಚ್ಚ ಎಷ್ಟು? 1995-96ರಲ್ಲಿ 3 ಕೋಟಿ 72 ಲಕ್ಷ 75 ಸಾವಿರ ರೂಪಾಯಿಗಳನ್ನು ಕೊಟ್ಟರು. 1996-97ರಲ್ಲಿ 6 ಕೋಟಿ 47 ಲಕ್ಷ ರೂಪಾಯಿ ಕೊಟ್ಟರು. 57 ತಾಲ್ಲೂಕು ಬಯಲು ಸೀಮೆ ಪ್ರದೇಶ ಅಭಿವೃದ್ಧಿ ಪ್ರದೇಶಕ್ಕೆ 72-73 ಜನ ಶಾಸಕರು ಪ್ರತಿನಿಧಿಸತಕ್ಕಂಥ ಒಂದು ಕ್ಷೇತ್ರಕ್ಕೆ ಕೇವಲ 10 ಕೋಟಿ

ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿ ಎರಡು ವರ್ಷಗಳಿಗೆ ಒಂದೊಂದು ಕ್ಷೇತ್ರಕ್ಕೆ 3-3 ಲಕ್ಷ ರೂಪಾಯಿಗಳನ್ನು ಕೊಟ್ಟರು. ಹೀಗೆ ಕೊಟ್ಟಿರುವ ಉದ್ದೇಶ ಹೂಳು ಎತ್ತಬೇಕೆಂದು. ಹೂಳು ಎತ್ತುವ ಯೋಜನೆ, ರಸ್ತೆಗಳ ಯೋಜನೆ, ಕಟ್ಟಡಗಳ ಯೋಜನೆ, ಇವರು 3 ಲಕ್ಷ ರೂಪಾಯಿಯನ್ನು ಕೊಟ್ಟಿರುವ ಒಂದು ವ್ಯವಸ್ಥೆಯಲ್ಲಿ ನಾವು ಏನು ಮಾಡಬೇಕೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ನಾನು ಆಡಳಿತ ಪಕ್ಷದ ಸದಸ್ಯ. ಆದರೂ ಕೂಡ ಹಿಂದಿನಿಂದ ಯಾವರೀತಿ ವ್ಯತ್ಯಾಸವಾಗಿದೆ, ಯಾವರೀತಿ ಅನ್ಯಾಯವಾಗಿದೆ, ಯಾವ ರೀತಿ ಧೋರಣೆಯಾಗಿದೆ, ಯಾವ ರೀತಿ ನಾವೆಲ್ಲ ಕಷ್ಟವನ್ನು ಅನುಭವಿಸುತ್ತಿದ್ದೇವೆ ಎಂದು ತಮ್ಮ ಮುಂದೆ ಹೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ಇದು ಒಂದು ಪವಿತ್ರವಾದಂತಹ ಸದನ. ಇದು ಒಂದು ಅವಕಾಶ ಆದುದರಿಂದ ಇದನ್ನು ತಾವು ಸರಿಪಡಿಸಬೇಕು. ಈ ಜನಕ್ಕೆ ನ್ಯಾಯ ದೊರಕಿಸಿಕೊಡಬೇಕು. ಈ ಸಾಮಾನ್ಯ ಜನರ ಜೀವನವನ್ನು ಉನ್ನತ ಮಟ್ಟಕ್ಕೆ ಏರಿಸುವುದಕ್ಕೆ ತಾವೆಲ್ಲರೂ ಕೂಡ ಪಾತ್ರರಾಗಬೇಕು. ಹಾಗಾದಾಗ ಮಾತ್ರ ಈ ಕರ್ನಾಟಕ ರಾಜ್ಯ ಸರ್ವತೋಮುಖವಾದಂತಹ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಾಗುತ್ತದೆ. ಕೇವಲ ಅಪ್ಪರ್ ಕೃಷ್ಣಾ ಒಂದನ್ನು ಮಾಡಿ ಕಾವೇರಿಯನ್ನು ಮಾಡಿ ಹಾರಂಗಿ ಮಾಡಿಬಿಟ್ಟರೆ ಒಂದು ಗ್ರಾಮದಲ್ಲಿ ಮೂರಂತಸ್ತಿನ ಮನೆಯವರು ಒಬ್ಬರು ಇದ್ದು, ಮಿಕ್ಕಿದ 99 ಜನ ಗುಡಿಸಲಿನವರು ಇದ್ದರೆ ಆ ಗ್ರಾಮಕ್ಕೆ ಬೆಲೆ ಇಲ್ಲ. ಅದೇ ರೀತಿಯಲ್ಲಿ ಕೂಡ ಇಲ್ಲಿ ಕೆಲವೇ ಪ್ರದೇಶ ನೀರಾವರಿಯಾಗಿ ಅಭಿವೃದ್ಧಿಯಾದರೆ ಮೂರನೇ ಒಂದು ಭಾಗ ಹೆಚ್ಚು ಕಡಿಮೆ ಆದಾಗ ತೊಂದರೆ ಆಗುತ್ತದೆ. ದಯವಿಟ್ಟು ಅದರ ಬಗ್ಗೆ ತಾವೆಲ್ಲರೂ ಕೂಡ ಮಾತನಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಎರಡನೆಯದಾಗಿ ತಮಗೆ ಹೇಳಬೇಕಾದರೆ ನಾವು ಏನು ಕಷ್ಟವನ್ನು ಅನುಭವಿಸುತ್ತಿದ್ದೇವೆ ಎಂದರೆ, ಸ್ವಾಮಿ ಈ ಸಾರಿ ಮಳೆ ಬಂದಿಲ್ಲ. ತಮಗೆ ನಾನು ಮಾಹಿತಿಯನ್ನು ಉದಾಹರಣೆ ರೂಪದಲ್ಲಿ ಕೊಡುತ್ತಿದ್ದೇನೆ. 1994-95 ರ ಮೇಯಿಂದ 65 ಮಿಲಿ ಮೀಟರ್ ಇರತಕ್ಕಂಥದ್ದು ಕೇವಲ 6 ಮಿ.ಮೀ. ಮಾತ್ರ ಬಿದ್ದಿದೆ. ಜೂನ್‌ನಲ್ಲಿ 265 ಆಗಬೇಕಾಗಿತ್ತು, 45 ಮಿ.ಮೀ. ಆಗಿದೆ. ಜುಲೈನಲ್ಲಿ 12 ಮಿ.ಮೀ. ಬಿದ್ದಿದೆ. ಆಗಸ್ಟನಲ್ಲಿ 39 ಮೀ.ಮೀ. ಬಿದ್ದಿದೆ. ಹೋದವರ್ಷ 368 ಮೀ.ಮೀ. ಆಯಿತು. ನಾನು ಹೇಳುವಂಥದ್ದು ಶ್ರೀನಿವಾಸಪುರ ತಾಲ್ಲೂಕಿನದ್ದು. ಸನ್ಮಾನ್ಯ ಉನ್ನತಮಟ್ಟದಲ್ಲಿ ಕುಳಿತಿರತಕ್ಕಂಥ ಅಧ್ಯಕ್ಷರ ಕ್ಷೇತ್ರದಲ್ಲಿ ಇಡೀ ಜಿಲ್ಲೆಯಲ್ಲಿ ಈ ರೀತಿ ತೆಗೆದುಕೊಂಡಾಗ ಶೇಕಡವಾರು 100ಕ್ಕೆ 25 ರಿಂದ 30 ಪರ್ಸೆಂಟ್‌ವರೆಗೂ ಕೂಡ ಬಿತ್ತನೆ ಆಗಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮ್ಮದ್ : ಶ್ರೀನಿವಾಸ್‌ರವರೇ ಒಂದು ನಿಮಿಷ... ತಾವು ಛೇರ್‌ಮನ್‌ರಿಗೆ ಮಳೆ ಆಗಿರುವಂಥ ವಿವರಗಳನ್ನೆಲ್ಲಾ ನೀಡುತ್ತಿದ್ದೀರಿ. ಅಲ್ಲಿ ನಿಮ್ಮ ಭಾಗದಲ್ಲಿ ಬಯಲು ಸೀಮೆ ಪ್ರದೇಶ ಎಂದು ಘೋಷಣೆ ಮಾಡಿದ್ದಾರೆ ಎಂದು ಹೇಳುತ್ತೀರಿ. ಹಣವನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ಮತ್ತು ಹೆಚ್.ಕೆ.ಡಿ.ಬಿ.ಗೆ ಬಿಡುಗಡೆ ಮಾಡಿದ್ದಾರೆ, ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಿದ್ದೀರಿ. ಇದನ್ನು ಯಾರಿಗೆ ಹೇಳುತ್ತಿದ್ದೀರಿ ಎಂದು ಅರ್ಥವಾಗುತ್ತಿಲ್ಲ. ಛೇರ್ಮನ್‌ರಿಗೆ ಮಳೆ ಬರಲಿಲ್ಲ ಎಂದು ಹೇಳಿದರೆ ಛೇರ್ಮನ್‌ರು ಎಲ್ಲಿಂದ ಮಳೆಯನ್ನು ತರಲಿಕ್ಕೆ ಸಾಧ್ಯ? ನಾನು ತಮಗೆ ಏನು ಹೇಳುತ್ತೇನೆ ಎಂದರೆ ಮಳೆ ಬಾರದಿರುವ ಕಾರಣ ನಿಮಗೆ ಮಳೆ ಎಲ್ಲಿಂದ ತರಬೇಕು, ನೀರಾವರಿ ಯೋಜನೆ ಆಗಬೇಕು ಎಂದರೆ ನೀರಾವರಿ ಯೋಜನೆಗೆ

ಯಾವ ನದಿಯಿಂದ ನಿಮ್ಮ ಭಾಗಗಳನ್ನು ಅಭಿವೃದ್ಧಿ ಪಡಿಸಬಹುದು ಎನ್ನುವುದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ ನಮಗೂ ಸ್ವಲ್ಪ ಮಾತನಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಆರ್. ಶ್ರೀನಿವಾಸ್ : ಬಹಳ ಉತ್ತಮವಾದ ಸಲಹೆ. ಅದನ್ನು ಈಗಾಗಲೇ ಹೇಳಿದ್ದೇನೆ. ನಮಗೆ ನದಿಯನ್ನು ತರುವುದಕ್ಕೆ ಆಗುವುದಿಲ್ಲ, ಬೇಡವೂ ಬೇಡ. ಆದರೆ ಇರತಕ್ಕಂಥ ವ್ಯವಸ್ಥೆಯನ್ನು ನಾನು ಹೇಳುತ್ತಿದ್ದೇನೆ. ನಮ್ಮಲ್ಲಿ ಕೆರೆ ಇದೆ. ಬಹುಶಃ ಕೋಲಾರ ಜಿಲ್ಲೆಯಲ್ಲಿ 4800 ಕೆರೆ ಇವೆ. ಆ ಕೆರೆಯಲ್ಲಿ ಹೂಳನ್ನು ಎತ್ತತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಡಿ. ಆಮೇಲೆ ಅಂತರ್‌ಜಲ ಮಟ್ಟವನ್ನು ನೀವೇನಾದರೂ ಕೂಡ ಅಭಿವೃದ್ಧಿ ಪಡಿಸಬೇಕಾದರೆ ಅಲ್ಲಲ್ಲಿ ಇರತಕ್ಕಂಥ ಚೆಕ್‌ಡ್ಯಾಂ ಎಂದು ಏನು ಹೇಳುತ್ತೀರಿ, ನಾಲಾ ಡ್ಯಾಂ ಮತ್ತೆ ಸಣ್ಣ ಪುಟ್ಟ ಅಣೆಕಟ್ಟುಗಳು ಏನು ಇದೆ, ಇವನ್ನೆಲ್ಲಾ ಆಗತಕ್ಕಂಥ ವ್ಯವಸ್ಥೆಯನ್ನು ಮಾಡಿದಾಗ ಇದರ ಒಂದು ಫಲಿತಾಂಶ ನೀರಿನ ಮಟ್ಟ ಮೇಲಕ್ಕೆ ಹೋಗತಕ್ಕಂಥ ವ್ಯವಸ್ಥೆ ಆಗುತ್ತದೆ. ಆದುದರಿಂದ ತಾವೂ ಕೂಡ ಬಯಲು ಸೀಮೆ ಪ್ರದೇಶಕ್ಕೆ ಈ ವರ್ಷ ಸುಮಾರು 200 ರಿಂದ 250 ಕೋಟಿ ರೂಪಾಯಿಯನ್ನು ವ್ಯವಸ್ಥೆಯನ್ನು ಮಾಡಬೇಕು. ನಾವೇನು ಸಾವಿರಾರು ಕೋಟಿ ರೂಪಾಯಿಗಳನ್ನು ಕೇಳುತ್ತಿಲ್ಲ. ಇತ್ತೀಚಿನ ಒಂದು ಕಾಲುವೆಗೆ ಸುಮಾರು 400 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ನಮ್ಮ ಇಡೀ 57 ತಾಲ್ಲೂಕುಗಳಿಗೆ ಕನಿಷ್ಠಪಕ್ಷ ನೀವು 250 ರಿಂದ 300 ಕೋಟಿ ರೂಪಾಯಿಗಳನ್ನು ವ್ಯವಸ್ಥೆ ಮಾಡಿಕೊಡಿ. ಈಗಾಗಲೇ ಸನ್ಮಾನ್ಯ ಕೃಷಿ ಮಂತ್ರಿಗಳು ಆಧುನಿಕ ಯಂತ್ರವನ್ನು ತರಿಸಿದ್ದಾರೆ. ಅದು ಬರೀ ಡೀಸೆಲ್ ಹಾಕಿಕೊಂಡು, ಟ್ರಾಕ್ಟರ್‌ಗೆ ತುಂಬಿದರೆ ಸಾಗಿಸತಕ್ಕಂಥ ವ್ಯವಸ್ಥೆಯನ್ನು ಖಾಸಗಿಯವರು ಮಾಡಿಕೊಳ್ಳುತ್ತಾರೆ. ಆದುದರಿಂದ ಇಂತಹ ಒಂದು ಯಂತ್ರಗಳನ್ನು ನಾವು ಉಪಯೋಗಿಸಕೊಳ್ಳಬೇಕಾಗುತ್ತದೆ ಅದಕ್ಕಾಗಿ ತಾಲ್ಲೂಕಿಗೆ ಒಂದು ಯಂತ್ರವನ್ನು ಕೊಡಿ ಮತ್ತು ಅದಕ್ಕೆ ಆಗತಕ್ಕಂಥ ವೆಚ್ಚವನ್ನು ಮಾಡಿ ಆ ಒಂದು ಅಭಿವೃದ್ಧಿ ಕಾರ್ಯಕ್ರಮಕ್ಕೆ ನೀವು ಹೆಚ್ಚು ಒತ್ತವನ್ನು ಕೊಟ್ಟಾಗ ಮಾತ್ರ ನಮ್ಮ ನೀರಿನ ಮಟ್ಟ ಜಾಸ್ತಿ ಆಗುತ್ತದೆ, ನೀವೂ ಕೂಡ ಉನ್ನತ ಮಟ್ಟಕ್ಕೆ ಹೋಗುತ್ತೀರಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ಮಳೆ ಬಾರದೆ ಇರತಕ್ಕಂಥ ವ್ಯವಸ್ಥೆಯಲ್ಲಿ ಈಗಾಗಲೇ ಅವರು ಹೇಳಿದ್ದಾರೆ. ಕೆಲವು ಕಡೆ ಅತಿವೃಷ್ಟಿಯಾಗಿದೆ, ಕೆಲವುಕಡೆ ಅನಾವೃಷ್ಟಿಯಾಗಿದೆ ಎಂದು. ನಮ್ಮ ಕಥೆ ಏನಾಗಿದೆ ಸ್ವಾಮಿ, ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ, ನಾನು ಒಂದು ಕ್ಷೇತ್ರಕ್ಕೆ ಹೋದಾಗ ಎಷ್ಟು ನೋವಾಯಿತು ಎಂದರೆ, ಅವನೊಬ್ಬ ಬಡ ಕೂಲಿ ಮಾಡತಕ್ಕಂಥ ರೈತ, ನಮ್ಮಲ್ಲಿ ಶೇಂಗಾ ಜಾಸ್ತಿ. 30 ರೂಪಾಯಿಗೆ ಅವರು ಒಂದು ಕೆ.ಜಿ. ಕಡಲೆಬೀಜ ತೆಗೆದುಕೊಂಡು ಬಿತ್ತನೆ ಮಾಡಿದ್ದಾರೆ. ಮಳೆಬಾರದ ಪ್ರಯುಕ್ತ ಕೇವಲ 16-17 ರೂಪಾಯಿಗೆ ಮಾರಿದ್ದಾನೆ. ಈ ಕಡೆ ಶೇಕಡ 5 ರೂಪಾಯಿಗೆ ಬಡ್ಡಿಗೆ ತೆಗೆದುಕೊಂಡು ಬಂದು ಏನೋ ನಾನು ಬದುಕಬೇಕು ಎಂಬ ಆಸೆ ಇರುತ್ತದೆ. ಆದರೆ ನೀರಿನ ವ್ಯವಸ್ಥೆ ಇಲ್ಲ ಬಯಲುಸೀಮೆ ನಮ್ಮದು ಎಂದು ಹೇಳಿಬಿಟ್ಟು ಅವನು ಹೋದಾಗ ಕೇವಲ 16 ರಿಂದ 17 ರೂಪಾಯಿಗೆ ಮಾರಿ ಕನಿಷ್ಟ ಇರತಕ್ಕಂಥ ವ್ಯವಸ್ಥೆಯಲ್ಲಿ ಏನಾಗಿದೆ ಎಂಬುದನ್ನು ತಮಗೆ ಹೇಳುತ್ತಿದ್ದೇನೆ. ಆದುದರಿಂದ ಸರ್ಕಾರಕ್ಕೆ ನಾನು ಹೇಳುತ್ತಿದ್ದೇನೆ ಅದರಲ್ಲೂ ಪ್ರತ್ಯೇಕವಾಗಿ ಕಂದಾಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಅವರೂ ಸಹ ಬಡ ಕುಟುಂಬದಿಂದ ಬಂದಿರತಕ್ಕಂಥ ಜನ ಆಗಿರುವುದರಿಂದ ಅವರಿಗೆ ಬಡ ಜನರ ಒಂದು ಕಷ್ಟ, ರೈತರ ಕಷ್ಟಸುಖ ಗೊತ್ತಿದೆ. ಆದ್ದರಿಂದ ನಾನು ಅವರಿಗೆ

ಹೇಳುತ್ತಿದ್ದೇನೆ. ಈ ಒಂದು ಪ್ರದೇಶವನ್ನು ಅಭಾವಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು. ತಾತ್ಕಾಲಿಕವಾಗಿ ನೀವು ಅಲ್ಲಿ ಇರತಕ್ಕಂಥ ಸಹಕಾರಿ ಸಂಘಗಳ ವಸೂಲಾತಿ, ಕಂದಾಯ ವಸೂಲಾತಿ ಇತರೇ ಎಲ್ಲಾ ವಸೂಲಾತಿಗಳಿಗೂ ಕೂಡ ರಿಯಾಯಿತಿಯನ್ನು ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ನಾನು ಏನು ಹೇಳುವುದು ಎಂದರೆ, ಬಡ್ಡಿಯನ್ನು ಮನ್ನಾ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿ. ನಬಾರ್ಡ್‌ನವರು ನಮಗೆ ಬಡ್ಡಿ ಮನ್ನ ಮಾಡತಕ್ಕಂಥ ವ್ಯವಸ್ಥೆ ಇಲ್ಲ ಎಂದು ತಾವು ಹೇಳಬಹುದು. ಆದರೆ ಎಲ್ಲೆಲ್ಲಿ ಅಭಾವಪೀಡಿತ ಪ್ರದೇಶಗಳಿವೆ ಅಲ್ಲಿಗೆ ನಮ್ಮ ಸರ್ಕಾರದಿಂದ ಹಣವನ್ನು ಕೊಟ್ಟು ಆ ರೈತರಿಗೆ ವಿಮುಕ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಲ್ಲಿ ಭೂಬ್ಯಾಂಕ್‌ನಲ್ಲಿ ತೆಗೆದುಕೊಂಡಂಥ ಸಾಲ, ತಕಾವಿ ಸಾಲ, ಟ್ಯಾಪ್‌ಲೋನ್ಸ್ ಏನು ಇದೆ ಇವುಗಳಿಗೆ ಸದ್ಯಕ್ಕೆ ಆ ಬಡ್ಡಿಯನ್ನು ರಿಯಾಯಿತಿ ಮಾಡಿ ಆ ಒಂದು ಪ್ರದೇಶದಲ್ಲಿ ಅನೇಕ ಕಾರ್ಯಕ್ರಮಗಳಿಗೆ ಹೆಚ್ಚಿನ ಅವಕಾಶವನ್ನು ಕೊಡಬೇಕು. ರಸ್ತೆ ರಿಪೇರಿ, ಕೂಲಿ ಕಾರ್ಮಿಕರಿಗೆ ಎಲ್ಲರಿಗೂ ಕೂಡ ಹೆಚ್ಚಿಗೆ ಒಂದು ಕೂಲಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರ ಒತ್ತನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ದಯವಿಟ್ಟು ಇದನ್ನು ಮಾಡತಕ್ಕಂಥ ವ್ಯವಸ್ಥೆ ತಮ್ಮದಾಗಿದೆ. ಇನ್ನು ವಿದ್ಯುಚ್ಛಕ್ತಿ ಬಗ್ಗೆ ನಾನು ಹೇಳುವುದಾದರೆ, ನಮ್ಮ ಸರ್ಕಾರ ಅನೇಕವಿಧವಾದಂಥ ಯೋಜನೆಗಳನ್ನು ಸತತವಾಗಿ, ಯಾವ ವರ್ಷ ಕೂಡ ಮಾಡಿಲ್ಲ, ಯಾವುದೇ ಸರ್ಕಾರವೂ ಕೂಡ ಮಾಡಿಲ್ಲ 45 ವರ್ಷಗಳಿಂದ ಯಾವ ಸರ್ಕಾರವೂ ಒಂದೇ ಒಂದು ಯೋಜನೆಯೂ ಮಂಜೂರಾತಿ ಆಗಿಲ್ಲ. ಆದರೆ ನಮ್ಮ ಸರ್ಕಾರ ಬಂದಾಗಿನಿಂದ 16 ಯೋಜನೆಗಳನ್ನು ಮಾಡಿದೆ, ಆ ಕೀರ್ತಿ ಇವೊತ್ತು ನಮ್ಮ ಸರ್ಕಾರಕ್ಕೆ ಬಂದಿದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವೇ ವರ್ಷಗಳಲ್ಲಿ 24 ಗಂಟೆಗಳ ಸತತವಾಗಿ ಒಂದು ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದೆ. ನಮ್ಮ ನಾಯಕರು ನಮ್ಮ ಆಗಿನ ಪ್ರಧಾನಮಂತ್ರಿಗಳಾದ ಸನ್ಮಾನ್ಯ ದೇವೇಗೌಡರು, ಈಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಜೆ.ಹೆಚ್. ಪಟೇಲರು ಇದನ್ನು ಮಾಡಿ ಒಂದು ಸರ್ವತೋಮುಖವಾದ ಅಭಿವೃದ್ಧಿಗೆ ಹೆಜ್ಜೆಯನ್ನು ಇಟ್ಟಿದೆ. ಅದರ ಬಗ್ಗೆ ನನ್ನ ಎರಡನೇ ಮಾತಿಲ್ಲ ಆದರೆ ವ್ಯವಸ್ಥೆಯಲ್ಲಿ ಸ್ವಲ್ಪ.....

ಶ್ರೀ ಸಿ.ಆರ್. ಸಗೀರ್ ಅಹಮದ್ : ನಮ್ಮ ಕಡೆ ಮಳೆ ಆಗದೇ ಹೋದರೆ ಇವರಿಗೆ ಹೇಳುವಂಥ ಶಕ್ತಿ ಎಲ್ಲಿ ಬರುತ್ತಿತ್ತು. ಸ್ವಲ್ಪ ಆಲೋಚನೆ ಮಾಡಿ ಅವರು ಹೇಳಲಿ. ಅವರದ್ದು ಮಳೆ ಆಗದೆ ಕೊರತೆ ಹೇಗೆ ಆಗಿದೆ, ನಮ್ಮ ಕಡೆ ಮಳೆ ಆಗಿರುವುದರಿಂದ ಇವೊತ್ತು ವಿದ್ಯುಚ್ಛಕ್ತಿಯ ಕಡಿತವನ್ನು ನಿಲ್ಲಿಸಿದ್ದಾರೆ ಎಂದು ಹೇಳುತ್ತೀರಿ, 24 ಗಂಟೆ ನಿಲ್ಲಿಸಿಬಿಟ್ಟಿರಾ? ನಿಮಗೆ ವಿದ್ಯಾರ್ಥಿಗಳ ಶಾಪವೇ ಸಾಕು.

ಶ್ರೀ ಆರ್. ಶ್ರೀನಿವಾಸ್ : ಇದನ್ನು ನಾನು ಒಪ್ಪಿಕೊಂಡೆ, ಅದರಲ್ಲಿ ಸ್ವಲ್ಪ ಬದಲಾವಣೆ ಮಾಡತಕ್ಕಂಥ ವ್ಯವಸ್ಥೆ ಇದೆ.

ಛೇರ್ಮನ್‌ರವರು : ತಾವು ಡಿಮ್ಯಾಂಡ್ ಮೇಲೆ ಮಾತನಾಡಿದರೆ ಮಂತ್ರಿಗಳು ಬರೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಯಾರೂ ಅದಕ್ಕೆ ಉತ್ತರವನ್ನು ಕೊಡುವವರು ಇಲ್ಲ. ಇವೊತ್ತು ಏನು ಡಿಮ್ಯಾಂಡ್ ಇದೆ ಅದರ ಬಗ್ಗೆ ಮಾತನಾಡಿದರೆ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ದಯಮಾಡಿ ಬೇಗನ ಮುಕ್ತಾಯಗೊಳಿಸಿ.

ಶ್ರೀ ಆರ್. ಶ್ರೀನಿವಾಸ್ : ಆಗಬಹುದು. ವಿದ್ಯುಚ್ಛಕ್ತಿ ಬಗ್ಗೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಏನು ವ್ಯವಸ್ಥೆ ಎಂದರೆ ತಾಲ್ಲೂಕುಮಟ್ಟದ ಒಂದು ಸಮಿತಿಯನ್ನು ಏರ್ಪಾಡು ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿ, ನಾನು ತಮಗೆ ಈ ಸದನದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಎಲ್ಲಾ ಸಮಿತಿಗಳಲ್ಲಿ ನಮ್ಮ ಪ್ರಾತಿನಿಧ್ಯ ಇದೆ. ಬಹುಶಃ ಭೂ ಮಂಜೂರಾತಿ ಇದೆ, ಶಾಲ ಮಂಜೂರಾತಿ, ಭೂ ಅಭಿವೃದ್ಧಿ ಬ್ಯಾಂಕುಗಳು ಆಗಲೀ, ಸಂಘಸಂಸ್ಥೆಗಳು ಆಗಲೀ ಪ್ರತಿಯೊಂದು ಸಾಲದ ಕಮಿಟಿಗಳಿವೆ. ಆದರೆ ಇವೊತ್ತಿನದಿನ ನಮ್ಮ ಒಂದು ತಾಲ್ಲೂಕಿನಲ್ಲಿ 11,250 ಬೋರ್‌ವೆಲ್‌ಗಳಿವೆ, ಸುಮಾರು 1,65,000 ಬೋರ್‌ವೆಲ್‌ಗಳು ನಮ್ಮ ಜಿಲ್ಲೆಯಲ್ಲಿದೆ. ಒಬ್ಬ ರೈತನಿಗೆ ಏನಾದರೂ ಕಷ್ಟಸುಖ ಬಂದಾಗ ನೇರವಾಗಿ ನಾವು ಅಧಿಕಾರಿಗಳ ಹತ್ತಿರ ಹೋಗಬೇಕಾಗಿದೆಯೇ ಹೊರತು ಅಲ್ಲಿ ನಮ್ಮ ಹಿಡಿತ ಇಲ್ಲ. ಇವೊತ್ತು ನಮಗೆ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ನಮ್ಮ ಹಿಡಿತ ಇಲ್ಲ.....

ಛೇರ್ಮನ್‌ರವರು : ಅದು ಡಿಮ್ಯಾಂಡ್‌ನಲ್ಲಿ ಇಲ್ಲ, ದಯಮಾಡಿ ಡಿಮ್ಯಾಂಡ್‌ನಲ್ಲಿ ಇರುವಂತಹದ್ದನ್ನು ಮಾತನಾಡಿ.

ಶ್ರೀ ಆರ್. ಶ್ರೀನಿವಾಸ್ : ಆಗಬಹುದು. ಆದುದರಿಂದ ಬಯಲು ಸೀಮೆ ಪ್ರದೇಶಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಕಂದಾಯ ಇಲಾಖೆಯ ವತಿಯಿಂದ, ಆಣೆವಾರು ತರಿಸಿ, ಏಕೆಂದರೆ ನಾನು ತಮ್ಮ ಮುಖಾಂತರ ಹೇಳುತ್ತಿದ್ದೇನೆ, ಡಿಮ್ಯಾಂಡ್ ಮೇಲೆ ಮಾತನಾಡಬೇಕಾದರೂ ಕೂಡ ಏನು ಕಂದಾಯ ಇಲಾಖೆಯವರು ಬರೆಯುತ್ತಾರೆ, ನಮ್ಮ ಕೆಳಮಟ್ಟದ ಒಂದು ಆಫೀಸಿನಲ್ಲಿ ಕುಳಿತುಕೊಂಡು ಒಂದು ಮಾಹಿತಿಯನ್ನು ಕಳುಹಿಸಿಬಿಡುತ್ತಾರೆ. ಎಂಟಾಣೆ ಆಣೆವಾರು, ಹತ್ತಾಣೆ ಆಣೆವಾರು, ಎಂದು. ಅಲ್ಲಿ ನ್ಯಾಯವಾಗಿ ನಾಲ್ಕಾಣೆ ಆಣೆವಾರು ಆಗಿರುವುದಿಲ್ಲ. ಆದ್ದರಿಂದ ಆ ಆಣೆವಾರನ್ನು ತರಿಸಿಕೊಂಡು ಕರ್ನಾಟಕದಲ್ಲಿ ಎಲ್ಲೇ ಆಗಬಹುದು, ಕೋಲಾರ ಜಿಲ್ಲೆಯ ಮಾಹಿತಿಯನ್ನು ಕೊಟ್ಟಿದ್ದೇನೆ. ಇಡೀ ವ್ಯಾಪ್ತಿಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಆಣೆವಾರು ಕಡಿಮೆ ಆಗಿದೆ ಅವುಗಳನ್ನು ತಾವೆಲ್ಲರೂ ಕೂಡ ಅಭಾವಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು. ಆ ಪ್ರದೇಶದಲ್ಲಿ ವಸೂಲಾತಿಗಳಿಗೆ ರಿಯಾಯಿತಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು, ಬಡ್ಡಿ ಮನ್ನಾ ಮಾಡಬೇಕು ಮತ್ತೆ ತಾವೆಲ್ಲರೂ ಕೂಡ ಅನುಕೂಲ ಮಾಡಿಕೊಡಬೇಕು, ಬಡ ರೈತರ ಜೀವನವನ್ನು ಸ್ವಲ್ಪಮಟ್ಟಿಗಾದರೂ ಸುಧಾರಣೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ನಮ್ಮ ಸರ್ಕಾರ ಒತ್ತು ಕೊಡುತ್ತದೆ ಎಂದು ಅಭಿಪ್ರಾಯ ಇಟ್ಟಿದ್ದೇನೆ. ಅವರು ಅದನ್ನು ಮಾಡಿ ಕೊಡುತ್ತಾರೆ. ನಮ್ಮ ಮಂತ್ರಿಮಂಡಲದಲ್ಲಿರುವವರು ಅನೇಕ ಜನರು ರೈತಾಪಿ ಜನರಿಂದ ಬಂದಿರುವವರಿರುವುದರಿಂದ ನಾವೆಲ್ಲರೂ ಬಡ ಜನರ ಕಷ್ಟಗಳನ್ನು ಅರಿತಿರುವವರು ಆಗಿದ್ದೇವೆ. ಆ ಜನರಿಂದ ನಾವು ಬಂದಿರುವವರು. ಆ ಒಂದು ಉದ್ದಿಮೆ ಕೂಡ ಅಂಥದ್ದೇ ಆಗಿರುವುದರಿಂದ ಇವತ್ತು ಬೇಡಿಕೆಯನ್ನು ಇಟ್ಟಿದ್ದೇವೆ. ಇದನ್ನು ಪೂರ್ತಿಗೊಳಿಸುತ್ತಾರೆಂಬ ಮಾತನ್ನು ಹೇಳಿ ಈ ಸಂದರ್ಭದಲ್ಲಿ ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳಲಿಚ್ಚಿಸುತ್ತೇನೆ. ನಾನು ಎರಡನೆಯ ಬಾರಿ ಖಾಸಗಿ ನಿರ್ಣಯವನ್ನು ಮಂಡನೆ ಮಾಡಬೇಕೆಂದು ಹೋದ ಸಾರಿ ಕಳುಹಿಸಿದ್ದೆ ಅದನ್ನು ಇವತ್ತಾದರೂ ಮಂಡನೆ ಮಾಡಲು ನನಗೆ ಅವಕಾಶವನ್ನು ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ನನ್ನದು ಎರಡು ಖಾಸಗಿ ನಿರ್ಣಯಗಳು ಇತ್ತು, ಅದನ್ನು ನಾನು ಕಳೆದ ವಾರ ಕಳುಹಿಸಿಕೊಟ್ಟಿದ್ದೆ.

ಛೇರ್ಮನ್ : ಮಾನ್ಯ ವಾಟಾಳ್ ನಾಗರಾಜ್‌ರವರ ಖಾಸಗಿ ನಿರ್ಣಯ ಹಾಗೆ ಉಳಿದಿದೆ. ಅವರದ್ದು ಆದ ಮೇಲೆ ನಿಮ್ಮದು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಡಿ. ಬಸವರಾಜ್ : ತಾವು ನನಗೆ ಅವಕಾಶವನ್ನು ಕೊಡಬೇಕು. ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲ.

ಛೇರ್ಮನ್ : ಅವರು ಇಲ್ಲದಿದ್ದರೂ ಅದನ್ನು ಪೂರೈಸಿದ ನಂತರ ನಿಮ್ಮದು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಡಿ. ಬಸವರಾಜ್ : ಇವತ್ತಿನ ಕಾರ್ಯಕಲಾಪದ ಪಟ್ಟಿಯಲ್ಲಿ ಮೂರು ನಿರ್ಣಯಗಳು ಬಂದಿವೆ. ಅದರಲ್ಲಿ ಇವರ ನಿರ್ಣಯ ಬಂದಿಲ್ಲ. ಇವತ್ತಿನ ನಿರ್ಣಯ ಬಂದಿರುವುದರಲ್ಲಿ ನನಗೆ ಮಂಡನೆಗೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ಕಲಾಪ ಮುಗಿದ ಮೇಲೆ ನನಗೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್ : ಮಾನ್ಯ ವಾಟಾಳ್ ನಾಗರಾಜ್‌ರವರು ನಿರ್ಣಯವನ್ನು ಕಳುಹಿಸಿರುವಂಥಾದು ಹಿಂದಿನ ಅಧಿವೇಶನದ ಸಮಯದಲ್ಲಿ ಕಳುಹಿಸಿದ್ದಾರೆ. ಆದುದರಿಂದ ಕಾನೂನಿನ ಪ್ರಕಾರ ಇದು ಮುಗಿದ ಮೇಲೆ ಬೇರೆಯದನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಅವರು ಬರಲಿಲ್ಲವೆಂದರೆ ನಾವು ಅಲ್ಲಿಯವರೆಗೂ ಕಾಯುತ್ತಾ ಕುಳಿತುಕೊಳ್ಳಬೇಕೇ?

ಛೇರ್ಮನ್ : ನಿಯಮದ ಪ್ರಕಾರ ಕಾಯಬೇಕಾಗುತ್ತದೆ. ದಯಮಾಡಿ ತಾವು ಕುಳಿತುಕೊಳ್ಳಿ.

+ಶ್ರೀ ಹೆಚ್ ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಅಧ್ಯಕ್ಷರೆ, ನಮ್ಮ ಅನೇಕ ಸದಸ್ಯರುಗಳು ಈಗಾಗಲೇ ಕಂದಾಯ ಬೇಡಿಕೆಯು ಸೇರಿದಂತೆ ಅನೇಕ ಬೇಡಿಕೆಗಳ ಮೇಲೆ ಮಾತನಾಡಿದ್ದಾರೆ. ಆ ಬೇಡಿಕೆ ಸಂಖ್ಯೆಗಳು 26, 27, 13, 39, 48, 49, 43, 44, 45, 54, 55, 20ರ ಬೇಡಿಕೆಗಳು ಮಂಡನೆಯಾಗಿದೆ. ಸರ್ಕಾರ ಇಲ್ಲಿ ಮಂಡನೆ ಮಾಡಿರುವಂಥ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ಕೆಲವು ಮಾಹಿತಿಗಳನ್ನು ಸಭೆಯ ಮುಂದಿಡುವುದಕ್ಕೆ ಇಚ್ಛಿಸುತ್ತೇನೆ. ಈಗಾಗಲೇ ಅನೇಕ ಸದಸ್ಯರುಗಳು ಮಾತನಾಡಿದಂತೆ ಬಗರ್‌ಹುಕುಂ ಸಾಗುವಳಿಯ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ. ಈಗ ದಿನಾಂಕ 19-8-91ರ ಹಿಂದೆ ಬಡವರು ಅರ್ಜಿಯನ್ನು ಸಲ್ಲಿಸತಕ್ಕಂಥ ದಿನಾಂಕವನ್ನು ಸರ್ಕಾರ ನಿಗದಿ ಮಾಡಿತ್ತು. ಅಂದರೆ ಸುಮಾರು ಆರು ವರ್ಷಗಳಿಂದ ಈಚೆಗೆ ಯಾವುದೇ ಅರ್ಜಿಯನ್ನು

ಸರ್ಕಾರ ಸ್ವೀಕಾರ ಮಾಡುತ್ತಿಲ್ಲ. ಅರ್ಜಿಗಳನ್ನು ಸ್ವೀಕಾರ ಮಾಡಿದರೂ ಕೂಡ ಅದನ್ನು ಮಾನ್ಯ ಮಾಡಿಲ್ಲ. ಈಗಲೂ 91ರ ಹಿಂದೆ ತೆಗೆದುಕೊಂಡಿರುವಂಥ ಅರ್ಜಿಗಳನ್ನೇ ನಾವು ವಿಲೇವಾರಿ ಮಾಡುತ್ತಿದ್ದೇವೆ. ಸರ್ಕಾರ ಎರಡು ವರ್ಷಗಳ ನಂತರ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಇಲ್ಲಿ ಎರಡನೆಯ ಸಮಸ್ಯೆ ಏನಾಗಿದೆ ಎಂದರೆ ಅರ್ಜಿಯನ್ನು ಕೊಟ್ಟಿದ್ದಾರೆ. ಇಲ್ಲಿ ಕೊಟ್ಟಿರುವಂತಹ ಅರ್ಜಿಗಳು ಎಂಡಾರ್ಸ್‌ಮೆಂಟ್ ಆಗಿದೆ. ಆದರೆ ಆ ಅರ್ಜಿಯ ದಾಖಲೆ ರಿಜಿಸ್ಟಾರ್‌ನಲ್ಲಿ ದಾಖಲೆಯಾಗಿಲ್ಲ. ಇದರಲ್ಲಿ ಕಾನೂನಿನ ತೊಡುಕು ಇದೆ. ಇದುರಿಜಿಸ್ಟಾರ್‌ನಲ್ಲಿ ದಾಖಲು ಆಗದೇ ಇರುವುದರಿಂದ ಇವತ್ತು ನಾವು ಬಗರ್‌ಹುಕುಂ ಸಮಿತಿಯ ಅಧ್ಯಕ್ಷರಾಗಿರುವುದರಿಂದ ನಾವು ನಮ್ಮ ಸದಸ್ಯರೆಲ್ಲರ ಜೊತೆಗೂಡಿ ಇವತ್ತು ಯಾವುದೇ ರೀತಿಯಲ್ಲಿ ಕಡತವನ್ನು ತಯಾರು ಮಾಡುವುದಕ್ಕೆ ಕಾನೂನಿನ ಸಂದರ್ಭಗಳು ಇಲ್ಲ.

ಛೇರ್ಮನ್ : ಮಾನ್ಯ ಕಂದಾಯ ಮಂತ್ರಿಯವರೇ, ಅವರ ಸಮಸ್ಯೆ ಏನೆಂದರೆ ಸ್ವೀಕೃತ ಪತ್ರ ಇದೆ, ಅಪ್ಲಿಕೇಷನ್ ರಿಜಿಸ್ಟಾರ್‌ನಲ್ಲಿ ದಾಖಲಾಗಿಲ್ಲ. ಅವರು ಏನು ಮಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ರಮೇಶ್. ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಅಲ್ಲಿ ಸ್ವಲ್ಪ ವ್ಯತ್ಯಾಸಗಳನ್ನು ಮಾಡಿದ್ದಾರೆ. ಕೆಲವನ್ನು ಬೋಗಸ್ ಆಗಿ ಕೂಡ ಕ್ರಿಯೇಟ್ ಮಾಡಿದ್ದಾರೆ, ನಾನು ಮಾಡಿಲ್ಲವೆಂದು ಹೇಳುವುದಿಲ್ಲ, ಬಹಳ ಕಡೆಗಳಲ್ಲಿ ನಾವು ಅರ್ಜಿಯನ್ನು ಕೊಟ್ಟಿದ್ದೇವೆ. ಅದರ ರಸೀದಿಯೂ ಇದೆ ಎಂದು ಹೇಳುತ್ತಾರೆ. ಆದರೆ ನಿಮ್ಮ ಆಫೀಸ್‌ನಲ್ಲಿ ಅರ್ಜಿಗಳು ಇಲ್ಲವೆಂದು ಸುಮಾರು ಜನರು ನನ್ನ ಬಳಿಯೂ ಬಂದಿದ್ದಾರೆ. ಇದರಲ್ಲಿ ಕೆಲವೊಂದು ಬೋಗಸ್ ಇದೆ. ಈಗ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ. ಅದರ ಡಿಟೈಲ್‌ಗಳನ್ನು ನನಗೆ ಕೊಡಲಿ. ಅದರ ಬಗ್ಗೆ ಯೋಗ್ಯ ನಿರ್ಣಯವನ್ನು ಮಾಡಿಸುತ್ತೇನೆ. ಇದು ನನ್ನ ಗಮನಕ್ಕೂ ಬಂದಿದೆ, ಸರ್ಕಾರದ ಗಮನಕ್ಕೂ ಬಂದಿದೆ, ಸುಮಾರು ಕೇಸ್‌ಗಳನ್ನು ನಾನು ಎನ್‌ಕ್ವೈರಿ ಮಾಡಿಸಿದ್ದೇನೆ. ಅಲ್ಲಿ ಯಾರೋ ಫಾರಂ-50ಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಮ್ಮ ಅಧಿಕಾರಿಗಳು ಯಾರೋ ಕುಳಿತಿರುತ್ತಾರೆ, ಅವರು ಏನು ಎಂಡಾರ್ಸ್‌ಮೆಂಟ್ ಸಹಿ ಕೊಡುತ್ತಾರೋ ಅಂತಹ ಸಹಿಗಳನ್ನು ಕೆಲವು ಜನರು ಮಾಡಿದ್ದಾರೆ. ಅಂಥದ್ದನ್ನು ನಾನು ಹೇಳುತ್ತಿದ್ದೇನೆ. ಅಲ್ಲಿ ಬೋಗಸ್ ಮಾಡುವಂಥಾದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರ ಮಾಹಿತಿಗಳು ಏನು ಇದೆ, ಅವುಗಳನ್ನು ನನಗೆ ಕೊಡಲಿ, ಮತ್ತೆ ಆ ಸದನದ ಸದಸ್ಯರುಗಳು ಈ ರೀತಿಯಾಗಿ ಅನ್ಯಾಯವಾಗಿದೆ ಎಂಬುದನ್ನು ನನ್ನ ಗಮನಕ್ಕೆ ತಂದರೆ ಖಂಡಿತವಾಗಿ ನಾನು ಅದನ್ನು ಸರಿಪಡಿಸುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ ಇದಕ್ಕೆ ಕಾರಣಕರ್ತರು ಯಾರು? ಸುಲಭವಾಗಿ ಎಂಡಾರ್ಸ್‌ಮೆಂಟ್ ಅನ್ನು ನಾವು ಕೊಟ್ಟಿದ್ದೇವೆ ಎಂದ ಮೇಲೆ ಅದು ರಿಜಿಸ್ಟರ್ ಆಗಬೇಕಾಗಿತ್ತು. ಹಾಗೆ ರಿಜಿಸ್ಟರ್‌ನ್ನು ನಮ್ಮ ಅಧಿಕಾರಿಗಳು ಮಾಡದೇ ಇರುವ ತಪ್ಪಿಗೆ ಜನರು ಏಕೆ ನರಳಬೇಕೆಂದು ನನ್ನ ಮೂಲಭೂತವಾದ ಪ್ರಶ್ನೆಯಾಗಿದೆ. ಅದಕ್ಕಾಗಿ ಅಂತಹ ಎಂಡಾರ್ಸ್‌ಮೆಂಟ್ ಇದ್ದರೆ ಪುನಃ ರಿಜಿಸ್ಟರ್‌ನಲ್ಲಿ ಎಂಟ್ರಿ ಮಾಡುವಂತಹ ಕೆಲಸವನ್ನು ಮಾಡಿಸಬೇಕು. ಈಗ ಅವರು ಎಂಡಾರ್ಸ್‌ಮೆಂಟ್ ಅನ್ನು ತಂದು ಕೊಟ್ಟರೆ ಅವು ಎಷ್ಟು

ವರ್ಷದ್ದು ಎಂದು ಗೊತ್ತಾಗಿ ಬಿಡುತ್ತದೆ. ಅವರು ಪ್ರತಿವಾರ ಸಂತೆಗೆ ಬರುವಾಗ ಎಂಡಾರ್ಸ್‌ಮೆಂಟ್ ಇಲ್ಲದೇ ಬರುವುದಿಲ್ಲ. ನಾವು ಇದ್ದಾಗ ನೋಡಿ ಎಂಡಾರ್ಸ್‌ಮೆಂಟ್ ಇದೆ ಎಂದು ತೋರಿಸುತ್ತಾರೆ. ಇನ್ನೊಂದು ವಿಚಾರದಲ್ಲಿ ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ನಲ್ಲಿ ದರ್ಖಾಸ್ತ್ ಮಂಜೂರು ಮಾಡುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮತ್ತು ಬಡವರಿಗೆ ಶೇ. 50ರಷ್ಟು ಪ್ರದೇಶವನ್ನು ನಾವು ಮೀಸಲು ಇಟ್ಟಿದ್ದೇವೆ. ಅದೇ ರೀತಿಯಲ್ಲಿ ಬಗರ್‌ಹುಕುಂನಲ್ಲಿ ಸಾಗುವಳಿ ಮಾಡುವವರಿಗೂ ಇಡಬೇಕು. ಈಗ ಬಗರ್‌ಹುಕುಂ ಸಾಗುವಳಿಯಲ್ಲಿ ಕಾನೂನು ಏನು ಹೇಳುತ್ತದೆ ಎಂದರೆ ಯಾರು ಅಲ್ಲಿ ನಿಜವಾದ ಸ್ವಾಧೀನದಾರರು ಇರುತ್ತಾರೆ, ಅವರಿಗೆ ನಾವು ಕೊಡುತ್ತೇವೆ. ನಿಜವಾದ ಸ್ವಾಧೀನದಾರ ರೆಂದರೆ ಎಲ್ಲರಿಗೂ ಇದ್ದಷ್ಟು ಭೂಮಿಯನ್ನು ಕೊಡುವುದಿಲ್ಲ. ಅಂದರೆ ಆರು ಎಕರೆ ಇದ್ದರೂ ಕೊಡುವುದಿಲ್ಲ, ಮೂರು ಎಕರೆ ಇದ್ದರೂ ಕೊಡುವುದಿಲ್ಲ. ಅವರವರೇ ಅಡ್ಜಸ್ಟ್ ಮಾಡಿಕೊಂಡು ಒಂದು ರೀತಿಯಲ್ಲಿ ಹೊಂದಾಣಿಕೆಯನ್ನು ಮಾಡಿಕೊಂಡು ಮಂಜೂರು ಮಾಡಿಕೊಳ್ಳುವಂತಹ ಅಭ್ಯಾಸ ಬೆಳೆದುಬಂದಿದೆ. ಅದರ ಬಗ್ಗೆ ಕೂಡ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ನಾನು ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿಂದೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಂದಾಯ ಮಂತ್ರಿಗಳಾಗಿದ್ದಾಗ ಮತ್ತು ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಎ.ಸಿ. ಕಚೇರಿಗಳನ್ನು ಮತ್ತು ಡಿ ವಿ ಸಿ ಕಛೇರಿಗಳನ್ನು ತೆಗೆಯಬೇಕೆಂಬ ನಿರ್ಣಯವನ್ನು ಮಾಡಿದರು. ಆದರೆ ನೌಕರರ ಒತ್ತಡಕ್ಕೆ ಮಣಿದು ಅದನ್ನು ಹಿಂತೆಗೆದುಕೊಂಡರೆಂದು ನಾನು ಭಾವಿಸಿದ್ದೇನೆ. ಮಾನ್ಯ ಸಚಿವರಲ್ಲಿ ನನ್ನ ಬೇಡಿಕೆ ಏನೆಂದರೆ ದಯಮಾಡಿ ಈ ಎ.ಸಿ. ಕಛೇರಿಯನ್ನು ಮತ್ತು ಡಿ ವಿ ಸಿ ಕಛೇರಿಯನ್ನು ತೆಗೆಯುವುದು ಬಹಳ ಉಪಯುಕ್ತವೆಂದು ಹೇಳುತ್ತೇನೆ. ಇಂತಹ ಸಂದರ್ಭಗಳಲ್ಲಿ ನೌಕರರ ಮುಷ್ಕರ ಇದ್ದೆ ಇರುತ್ತದೆ. ನಾವು ಇದನ್ನು ನೋಡುತ್ತಾ ಹೋದರೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಮತ್ತೆ ಯಾರೂ ಮುಂದೆ ಬರುವುದಕ್ಕಾಗುವುದಿಲ್ಲ. ಅವರು ನಾವು ಅದೇ ಕಛೇರಿಯಲ್ಲಿರಬೇಕು, ಇದೇ ಕಛೇರಿಯಲ್ಲಿರಬೇಕು, ಅದು ಬಿಟ್ಟರೆ ನಮ್ಮ ಜೀವನವೇ ಇಲ್ಲ ಎಂದು ಹೇಳುತ್ತಾರೆ. ಗ್ರಾಮ ಪಂಚಾಯತ್ ರಚನೆಯಾದಾಗ ಅದಕ್ಕೆ ನಮ್ಮೆಲ್ಲರನ್ನೂ ನೇಮಕ ಮಾಡಬೇಕೆಂದು ಆಗ ನಮ್ಮ ಕಂದಾಯ ಇಲಾಖೆಯ ನೌಕರರು ಮುಷ್ಕರ ಮಾಡಿದರು. ಆಗ ಗ್ರಾಮ ಪಂಚಾಯತ್ ನೌಕರರಿಗೆಲ್ಲಾ ವರ್ಗಾವಣೆಯನ್ನು ಕೊಟ್ಟಿರಿ. ಈಗ ನಮಗೆ ಗ್ರಾಮಪಂಚಾಯತ್ ಬೇಡ, ಕಂದಾಯ ಇಲಾಖೆಯನ್ನೇ ಕೊಡಿ ಎಂದು ಪುನಃ ಮುಷ್ಕರ ಮಾಡುತ್ತಿದ್ದಾರೆ. ಇದರಲ್ಲಿ ಅವರ ವೈಯಕ್ತಿಕವೋ ಅಥವಾ ಸರ್ಕಾರದವರ ಕಲ್ಯಾಣದ ಪ್ರಶ್ನೆ ಇದೆಯೋ ಏನೋ ಅದು ಬೇರೆ ಪ್ರಶ್ನೆ. ಆದರೆ ಇವತ್ತು ಆಡಳಿತದ ದೃಷ್ಟಿಯಿಂದ, ಆಡಳಿತವನ್ನು ಸುಧಾರಣೆ ಮಾಡುವಂತಹ ಹಿತದೃಷ್ಟಿಯಿಂದ ಇಲ್ಲಿ ತಹಶೀಲ್ದಾರರನ್ನು ಬಿಟ್ಟರೆ ಮತ್ತೆ ಡಿ.ಸಿ.ಯವರು ಬರುತ್ತಾರೆ, ಇವರನ್ನು ಬಿಟ್ಟರೆ ಸರ್ಕಾರ ಬರುತ್ತದೆ. ಇವತ್ತೂ ಕೂಡ ಎ.ಸಿ. ಕಛೇರಿಗಳು ಮತ್ತು ಡಿ.ವಿ.ಸಿ. ಕಛೇರಿಗಳು ಒಂದು ರೀತಿಯ ಪೋಸ್ಟ್ ಆಫೀಸ್‌ಗಳ ರೀತಿ ಇದ್ದ ಹಾಗೆಯೇ ಇವತ್ತು ಜನರ ಕೆಲಸ ಕಾರ್ಯಗಳು ವಿಳಂಬವಾಗುವುದಕ್ಕೆ ಇವು ಕಾರಣವಾಗಿದೆ.

4.40 ಪಿ. ಎಂ.

ನಾವು ಇವತ್ತು ಎಸಿ, ಡಿಸಿಯವರಿಗೆ ಜ್ಯುಡಿಷಿಯಲ್ ಪವರ್ಸ್ ಕೂಡ ಕೊಟ್ಟಿದ್ದೇವೆ. ಮಾನ್ಯ ಸದಸ್ಯರೊಬ್ಬರು ಹೇಳುತ್ತಿದ್ದರು, ಇದು ನಮ್ಮ ಸರ್ಕಾರ ಬಂದಾಗಿನಿಂದ ನಡೆಯುತ್ತಿದೆ ಎಂದಲ್ಲ, ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈಗ ಇದನ್ನು ನಾವು ಮೂಲಭೂತವಾಗಿಯೇ ಚರ್ಚೆ ಮಾಡಬೇಕಾಗಿದೆ. ಕಾನೂನ್ನು ಸರಳೀಕರಣಗೊಳಿಸದ ಹೊರತು, ಕಾನೂನಿನಲ್ಲಿರುವ ಕ್ಲಿಷ್ಟತೆಗಳನ್ನು, ಕಾಂಪ್ಲಿಸಿಟಿ ಏನಿದೆ ಅದನ್ನು ತಗೆಯದ ಹೊರತು ಬಹುಶಃ ನಾವು ಇವತ್ತು ಜನರ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಇವತ್ತು ಎಸಿಯವರಿಗೆ ರೆವಿನ್ಯೂ ಪವರ್ಸ್ ಕೊಟ್ಟಿದ್ದೇವೆ, ಡಿಸಿಯವರಿಗೆ ರೆವಿನ್ಯೂ ಪವರ್ಸ್ ಕೊಟ್ಟಿದ್ದೇವೆ. ಜೊತೆಗೆ ಜ್ಯುಡಿಷಿಯಲ್ ಪವರ್ಸ್ ಕೂಡ ಕೊಟ್ಟಿದ್ದೇವೆ, ಇವತ್ತು ಆ ರೆವೆವಿನ್ಯೂ ಪವರ್ಸ್ ವಿರುದ್ಧ ಜ್ಯುಡಿಷಿಯಲ್ ಪವರ್ಸ್ ಮೌನವಾಗಿದೆ. ಯಾರೂ ಕೂಡ ಇವತ್ತು ಕೋರ್ಟಿನಲ್ಲಿ ಕೆಲಸ ಮಾಡುವುದಕ್ಕಾಗುತಿಲ್ಲ. ಆದುದರಿಂದ ದಯವಿಟ್ಟು ಜ್ಯುಡಿಷಿಯಲ್ ಪವರ್ಸ್ ಹೊಂದಿರುವ ಒಬ್ಬ ಅಧಿಕಾರಿಯನ್ನೇ ಜಿಲ್ಲಾ ಮಟ್ಟದಲ್ಲಿ ನೇಮಿಸತಕ್ಕಂಥ ಕೆಲಸ ಮಾಡಬೇಕು. ಇವತ್ತು ಲ್ಯಾಂಡ್ ರೆವಿನ್ಯೂ ಆಕ್ಟ್ 49 ರ ಮೇಲೆ ಎಸಿಗೆ ಹೋಗುತ್ತೇವೆ, 50 ರ ಮೇಲೆ ಡಿಸಿಗೆ ಬರುತ್ತೇವೆ, ಪುನಃ ಅವರು ಅದರ ಮೇಲ್ಮಟ್ಟಕ್ಕೆ ಬರುತ್ತಾರೆ. ಅದಕ್ಕೆ ಇವತ್ತು ಜ್ಯುಡಿಷಿಯಲ್ ಪವರ್ ಬಗ್ಗೆಯೂ ಕೂಡ ತೀರ್ಮಾನವಾಗಬೇಕು. ಈ ಕಛೇರಿಗಳು ಅಗತ್ಯ ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ಒಂದು ಚರ್ಚೆ ನಡೆದು ಇವನ್ನು ತೆಗೆಯತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಇನ್ನು ಈ ಆಶಾಕಿರಣ ಯೋಜನೆಯಲ್ಲಿ ಒಂದು ಕಾನೂನಿದೆ. ಅದರಲ್ಲಿ ಈ ರೈತ ಸತ್ತರೆ ಮಾತ್ರ ಹಣವನ್ನು ಕೊಡಲಾಗುತ್ತಿದೆ. ಗಾಯವಾದರೆ ಮತ್ತೊಂದಾದರೆ ಹಣ ಕೊಡತಕ್ಕಂಥ ವ್ಯವಸ್ಥೆ ಇಲ್ಲ. ಇವತ್ತು ನನ್ನ ಕ್ಷೇತ್ರದಲ್ಲೊಬ್ಬ ತೆಂಗಿನ ಮರದ ಮೇಲಿನಿಂದ ಸುಮಾರು ಮೂವತ್ತು ಅಡಿಯಿಂದ, ಬಿದ್ದು ಸೊಂಟ ಪೂರ್ತಿ ಮುರಿದು ಹೋಗಿದೆ, ಸತ್ತರೆ ಮಾತ್ರ ಕೊಡುವುದಕ್ಕ ಅವಕಾಶವಿರುವುದು, ಸಾಯದಿದ್ದರೆ ಕೊಡುವುದಕ್ಕೆ ಬರುವುದಿಲ್ಲವೆಂದು ಇವತ್ತು ಒಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ. ದಯಮಾಡಿ ಇದನ್ನು ಪರಿಗಣಿಸಿ, ಗಾಯಗೊಂಡರೆ, ಅವನಿಗೆ ಬೇರೆ ರೀತಿಯಲ್ಲಾದರೂ ಮಾನಸಿಕವಾಗಿ ಅಥವಾ ಭೌತಿಕವಾಗಿ ತೊಂದರೆಯಾದರೂ ಕೂಡ ಅವನಿಗೆ ಪರಿಹಾರವನ್ನು ಕೊಡುವ ಕಾನೂನನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಇನ್ನು ಈ ಮುಜರಾಯಿ ಇನ್‌ಸ್ಟಿಟ್ಯೂಷನ್‌ಗೆ

(ಈ ಸಂದರ್ಭದಲ್ಲಿ ಅಧ್ಯಕ್ಷರು ಶ್ರೀ ರಮೇಶ್‌ಕುಮಾರ್‌ರವರು ಪೀಠವನ್ನು ಅಲಂಕರಿಸಿದರು)

ಸಂಬಂಧಪಟ್ಟ ಹಾಗೆ ಮೊನ್ನೆ ನಮ್ಮ ಸರ್ಕಾರ ಒಂದು ಹೇಳಿಕೆಯನ್ನು ಕೊಟ್ಟಿದೆ. ಸುಮಾರು 41,000 ಮುಜರಾಯಿ ಇನ್‌ಸ್ಟಿಟ್ಯೂಷನ್ಸ್ ಇದ್ದಾವೆ, ಅದರಲ್ಲಿ 33 ಕೋಟಿ ರೂಪಾಯಿಗಳು ನಮಗೆ ಲಾಭ ಬರುತ್ತಿದೆ ಎಂದು ಹೇಳಿದೆ. ಆದರೆ ವರ್ಷಕ್ಕೆ ಇಡೀ ಮುಜರಾಯಿ ಇಲಾಖೆಗೆ ನಾವು ಖರ್ಚು ಮಾಡುತ್ತಿರುವುದು ಸಾಮಾನ್ಯವಾಗಿ ಎರಡರಿಂದ ಮೂರು ಕೋಟಿ ರೂಪಾಯಿಗಳು. ಇದು ಯಾವುದಕ್ಕೂ ಸಾಲುವುದಿಲ್ಲ, ಹೆಚ್ಚು ಹಣವನ್ನು ತಾವು ಕೊಡಬೇಕು. ಇದೇ ಸಂದರ್ಭದಲ್ಲಿ ನಾವು ಆರಾಧನೆ ಯೋಜನೆಗೆ ಪ್ರತಿವರ್ಷ ಸುಮಾರು ಆರೂವರೆ, ಐದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ.

ಈಗ ಒಂದು ಅಂಕಿಅಂಶಗಳ ಪ್ರಕಾರ ಆರಾಧಾನಕ್ಕೆ 1994-95ರಲ್ಲಿ 6.71 ಕೋಟಿ, 1995-96ರಲ್ಲಿ 4.50, 1996-97ರಲ್ಲಿ 5 ಕೋಟಿ ರೂಪಾಯಿಗಳ ಹಣವನ್ನು ನಾವು ಕೊಟ್ಟಿದ್ದೇವೆ. ಇದು ಅನೇಕ ಕಾರಣಗಳಿಗಾಗಿ ಕಾರ್ಯಗತವಾಗುವುದು ಸ್ವಲ್ಪ ವಿಳಂಬವಾಗುತ್ತದೆ ಎನ್ನುವುದು ಕಂಡುಬಂದಿದೆ. ಇವತ್ತು ಆರಾಧನಾ ಯೋಜನೆಯಡಿಯಲ್ಲಿ ಕೊಡುತ್ತಿರತಕ್ಕಂಥದ್ದರಲ್ಲಿ ಪರಿಶಿಷ್ಟಜಾತಿಯವರು, ಹಿಂದುಳಿದವರು, ಅಲ್ಪಸಂಖ್ಯಾತರು, ಬಡವರೆಲ್ಲಾ ಆ ಒಂದು ಚಿಕ್ಕ ದೇವಸ್ಥಾನವನ್ನು ಕಟ್ಟಿಕೊಳ್ಳಲೆನ್ನುವ ಉದ್ದೇಶ ಇದೆ. ಆದರೆ, ತಾತ್ವಿಕವಾಗಿ ಇದೊಂದು ಒಳ್ಳೆಯ ಯೋಜನೆಯಲ್ಲ. ಹಿಂದಿನ ಸರ್ಕಾರ ಅದೇನೊ ಒಂದು ರೀತಿ ಅಗ್ಗದ ಪ್ರಚಾರಕ್ಕಾಗಿ ಮಾಡಿಕೊಂಡಂಥ ಕಾರ್ಯಕ್ರಮವಾಗಿದೆ. ಎಲ್ಲಾ ಹಿತದೃಷ್ಟಿಯಿಂದ ಈ ಕಾರ್ಯಕ್ರಮವನ್ನು ರದ್ದುಪಡಿಸುವುದು ಒಳ್ಳೆಯದು. ತಾವು ಆರು, ಏಳು ಕೋಟಿ ರೂಪಾಯಿಗಳನ್ನು ಏನು ಕೊಡುತ್ತೀರಿ ಅದನ್ನು ಮುಜರಾಯಿ ಸಂಸ್ಥೆಗೆ ಕೊಡಿ, ಇಲ್ಲವೆಂದರೆ ದಯಮಾಡಿ ನಾನು ನಮ್ಮ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಈ ಹಣವನ್ನು ನಮ್ಮ ಪರಿಶಿಷ್ಟ ಜಾತಿ/ವರ್ಗಗಳ ಕೇರಿಗಳಿಗೆ ಚರಂಡಿ ಮಾಡಿಸುವುದಿರಬಹುದು, ರಸ್ತೆ ಮಾಡುವುದಿರಬಹುದು, ಮತ್ತೊಂದು ಕೆಲಸಕ್ಕೆ ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಿ. ಏಕೆಂದರೆ, ಬಡವರು ಮೊದಲೇ ಮೂಢನಂಬಿಕೆಗಳಿಗೆ ಬಲಿಯಾಗಿರುತ್ತಾರೆ, ಅದರ ಮೂಲಕ ಅನೇಕ ರೀತಿಯ ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತಾರೆ. ಇವತ್ತು ರಸ್ತೆ ಕೇಳುವುದಿಲ್ಲ, ಚರಂಡಿ ಕೇಳುವುದಿಲ್ಲ, ಬರೀ ಆ ದೇವಸ್ಥಾನಕ್ಕೆ ಕೊಡಿ, ಈ ದೇವಸ್ಥಾನಕ್ಕೆ ಹಣ ಕೊಡಿ ಎಂದು ಕೇಳುತ್ತಾರೆ. ಈ ಪರಿಪಾಠ ಬೆಳೆದು ಬಂದಿದೆ. ದಯಮಾಡಿ ಇದನ್ನು ರದ್ದು ಮಾಡಿ ಆ ಕೇರಿಗಳಲ್ಲಿ ರಸ್ತೆಗಳನ್ನು ಮತ್ತು ಚರಂಡಿಗಳನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಬೆಳೆಗಳಿಗೆ ಪರಿಹಾರ ಕೊಡತಕ್ಕಂಥ ವಿಚಾರದ ಬಗ್ಗೆ ಹೇಳಿದ್ದಾರೆ, ಅದನ್ನೆಲ್ಲಾ ಮಾನ್ಯ ಸರ್ಕಾರ ಸರಿಯಾಗಿ ಪರಿಗಣಿಸಿ ನಿರ್ದಿಷ್ಟವಾಗಿ ಪರಿಹಾರವನ್ನು ಹೆಚ್ಚು ಮಾಡತಕ್ಕಂಥದ್ದನ್ನು ತಾವು ಮಾಡಬೇಕು. ಇದೆಲ್ಲದಕ್ಕಿಂತ ಹೆಚ್ಚಾಗಿ ಈ ಗ್ರಾಮಸಹಾಯಕರನ್ನು ಖಾಯಂ ಮಾಡತಕ್ಕಂಥ ವಿಚಾರ ಬಹಳ ವರ್ಷದಿಂದ ಉಳಿದಿದೆ. ಸುಮಾರು 19 ವರ್ಷಗಳಾಗಿವೆ ಈ ಗ್ರಾಮಸಹಾಯಕರನ್ನು ನೇಮಕ ಮಾಡಿಕೊಂಡು. ಮೊನ್ನೆ ಒಂದು ಪ್ರಶ್ನೆ ಬಂದಾಗ, ಮಾನ್ಯ ಸರ್ಕಾರ ಉತ್ತರ ಕೊಟ್ಟಿರುವುದೇನೆಂದರೆ, ಈ ಗ್ರಾಮಸಹಾಯಕರ ಸಂಘದವರು ಹೈಕೋರ್ಟಿನಲ್ಲಿ ಒಂದು ರಿಟ್ ಫೈಲ್ ಮಾಡಿದ್ದಾರೆ, ಅಲ್ಲಿ ಬಾಕಿ ಉಳಿದಿದೆ, ನಾವೊಂದು ಸಮಿತಿ ರಚನೆ ಮಾಡಿದ್ದೇವೆ ಆದುದರಿಂದ ಇವರನ್ನು ಖಾಯಂ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೀರಿ. ಮಾನ್ಯ ಸಭಾಧ್ಯಕ್ಷರ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ. ನಾವು ಈ ಕೇಸನ್ನು ವಾಪಸ್ ತೆಗೆದುಕೊಂಡರೆ, ತಾವು ಖಾಯಂ ಮಾಡುತ್ತೇವೆಂದು ಒಂದು ಅಂಡರ್‌ಟೇಕಿಂಗ್ ಕೊಡುವುದಾದರೆ ನಾಳೆಯೇ ಆ ಕೇಸನ್ನು ವಾಪಸ್ ತೆಗೆಸುತ್ತೇವೆ. ಇದು ದುರಾದೃಷ್ಟ, ಅವರು 19 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ, ಆ ವಿಲೇಜ್ ಅಕೌಂಟೆಂಟ್,ಆರ್‌ಐ, ಸರ್ವೆಯರ್ ಬ್ಯಾಗ್ ಹಿಡಿದುಕೊಂಡು ತಿರುಗುತ್ತಿದ್ದಾರೆ. ಇವತ್ತೂ ಕೂಡ ಎಂಟು ನೂರು, ಒಂಬೈನೂರು ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇನ್ನೇನೂ ಕೆಲಸವಿಲ್ಲ, ಎಲ್ಲಾ ಇಲಾಖೆಯಲ್ಲೂ ಕೂಡ, ಸುಪ್ರೀಂ ಕೋರ್ಟ್ ಆದೇಶ ಇನ್ನೂರನಲವತ್ತು ದಿವಸ ಕೆಲಸ ಮಾಡಿದವರನ್ನು ಖಾಯಂ ಮಾಡಬೇಕೆಂದು ಹೇಳುತ್ತದೆ. ಅನೇಕ ಇಲಾಖೆಗಳಲ್ಲಿ

ಸುಮಾರು 72 ಸಾವಿರ ನೌಕರರನ್ನು ನಾವು ಖಾಯಂ ಮಾಡಿದ್ದೇವೆ, ಇವರು 18 ಸಾವಿರ ಜನರೇನು? ಕೇವಲ 10 ಸಾವಿರ ಜನರು ಮಾತ್ರವಿದ್ದಾರೆ, ಇವರೇನು ತಪ್ಪು ಮಾಡಿದ್ದಾರೆ? ಇದರಲ್ಲಿ ಹೆಚ್ಚಾಗಿರುವವರು ಬಡವರು ಪರಿಶಿಷ್ಟಜಾತಿಯವರು, ಇನ್ನು ಸಣ್ಣಪುಟ್ಟ ಇರುವವರೇ ಇರುವುದು. ದಯಮಾಡಿ ನಮ್ಮ ಮಾನ್ಯ ಸರ್ಕಾರ, ಹಿಂದೆ ಅನೇಕ ಸರ್ಕಾರಗಳು ಸ್ಪಂಧಿಸಿಲ್ಲ, ಈಗಲಾದರೂ ತಾವು ಇದಕ್ಕೆ ಸ್ಪಂಧಿಸಿ ಇವರನ್ನು ಖಾಯಂ ಮಾಡುವ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಇನ್ನು ಕೆಲವು ಬ್ಯಾಂಕ್‌ಗಳಲ್ಲಿ ಪರಿಶಿಷ್ಟಜಾತಿಯವರು, ಬಡವರು ಅರಣ್ಯ ಭೂಮಿಯಲ್ಲಿ ವಾಸ ಮಾಡುತ್ತಿದ್ದಾರೆ. ಇವರು ವಾಸಮಾಡುವುದಕ್ಕಿಂತ ಮೊದಲು, ಮತ್ತು ಇವರು ಸ್ವಾಧೀನ ಪಡೆದ ನಂತರ ಕೆಲವು ಸಾರಿ ರೆವಿನ್ಯೂನಿಂದ ಫಾರೆಸ್ಟ್‌ಗೆ ಹಸ್ತಾಂತರವಾಗಿದೆ, ಈ ರೀತಿಯ ವ್ಯತ್ಯಾಸಗಳಾಗಿದ್ದಾವೆ. ನಮ್ಮಲ್ಲಿ ಅರಕಲುಗೂಡು ತಾಲ್ಲೂಕಿನ ಒಂದು ಗಂಗೂರು ಎನ್ನುವ ಗ್ರಾಮದಲ್ಲಿ ಇದೇ ಒಂದು ದೊಡ್ಡ ಸಮಸ್ಯೆಯಾಗಿ ಇವತ್ತು ತಮ್ಮ ಮುಂದೆ ನಿಂತಿದೆ; ಆ ಸಮಸ್ಯೆಯನ್ನೂ ಕೂಡ ತಾವು ಬಗೆಹರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದೆಲ್ಲಕ್ಕಿಂತ ಹೆಚ್ಚಾಗಿ ಇಲಾಖೆಯಲ್ಲಿ ಈ ಕಡತ ವಿಲೇವಾರಿಗೆ ತಾವು ಯಾವುದಾದರೊಂದು ಕಾಲಮಿತಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂಬುದು ನನ್ನ ಕೋರಿಕೆ. ಇದರಲ್ಲಿ ನಾವು ಕೊನೆಯಪಕ್ಷ, ಒಬ್ಬ ಗುಮಾಸ್ತ ಒಂದು ದಿವಸಕ್ಕೆ ಏನು ಕೆಲಸ ಮಾಡುತ್ತಾನೆ, ಎಷ್ಟು ಕಡತಗಳನ್ನು ವಿಲೇವಾರಿ ಮಾಡುತ್ತಾನೆ, ಏನು ಮಾಡುತ್ತಾರೆನ್ನುವುದಾದರೂ ತಾವು ನಿಗದಿ ಮಾಡಬೇಕು. ಇಲ್ಲದಿದ್ದರೆ ಇದೊಂದು ರೀತಿ ಮಾಮೂಲಿ ಕೆಲಸವಾಗಿ ಯಾವುದು ಕೂಡ ಆಗದ ಹಾಗೆ ಆಗುತ್ತದೆಂದು ಹೇಳುತ್ತೇನೆ. ಅದರಲ್ಲಿ ಅನೇಕ ರೀತಿಯ, ಈಗ ಕಾನೂನಿನ ಕ್ಲಿಷ್ಟತೆ ಇರಬಹುದು, ಮತ್ತೊಂದು ಕಾರಣವಿರಬಹುದು, ವ್ಯಕ್ತಿಯ ಅದಕ್ಷತೆಯಿರಬಹುದು ಅವರಿಗೆ ಏನು ಗೊತ್ತಿಲ್ಲದಿರಬಹುದು, ಆ ವಿಷಯದ ಬಗ್ಗೆ ಜ್ಞಾನವಿಲ್ಲದಿರಬಹುದು, ಸಂಖ್ಯೆಯ ಕೊರತೆ ಇರಬಹುದು, ಮತ್ತೊಂದು ಇರಬಹುದು ಇವೆಲ್ಲವನ್ನು ಪರಿಗಣನೆಗೆ ತೆಗೆದುಕೊಂಡು ನಮ್ಮ ಇಲಾಖೆಯಲ್ಲಿ ಹೆಚ್ಚು ಶೀಘ್ರ ಕಡತ ವಿಲೇವಾರಿಗೆ ಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಹೆಚ್ಚಾಗಿ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಒಂದು ಮಾತನ್ನು ನಾನು ಮಾನ್ಯ ಸಚಿವರಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕಂಟಾಕ್ಟ್ ಟೆಂಡರ್ ರೂಲ್ಸ್, ಇವತ್ತು ಕಂಟ್ರಾಕ್ಟ್‌ದಾರನನ್ನು ಎಲ್ಲಾ ಇಂಜಿನಿಯರ್ಸ್, ನಾವೇ ಎಲ್ಲಾ ಹೋಗಿ ಹಾರ ಹಾಕಿ ಬಾರಪ್ಪ ನೀನು ಕೆಲಸ ಮಾಡೆಂದು ಅಥವಾ ನೀನು ಒಪ್ಪಿಕೊ, ಮತ್ತೊಂದು ಮಾಡೆಂದು ಕರೆದುಕೊಂಡು ಬರಬೇಕು. ಟೆಂಡರ್ ರೂಲ್ಸ್ ರಿಸಿಂಡ್ ಮಾಡುವುದಕ್ಕೆ ಎಷ್ಟು ಕಾನೂನುಗಳು? ಇದು ಹತ್ತಾರು ವರ್ಷಗಳಿಂದ ನಡೆದು ಬಂದಿದೆ, ನಾವು ಹೇಳುತ್ತಲೇ ಇದ್ದೇವೆ ಈಗ ರಿಸಿಂಡ್ ಮಾಡುತ್ತಲೇ ಇಲ್ಲ ರಿಸಿಂಡ್ ಮಾಡುವುದಕ್ಕೆ ನಾವು ಚೀಫ್ ಇಂಜಿನಿಯರ್‌ವರೆವಿಗೂ ಬರಬೇಕು. ಪುನಃ ಅವನಿಗೆ ಅನೇಕ ನೋಟಿಸ್‌ಗಳನ್ನು ಕೊಡಬೇಕು, ನೋಟೀಸ್ ಕೊಟ್ಟು ಫೈನ್ ಹಾಕಿ, ಪುನಃ ಮಾಡಿ, ಅವನಿಗೆ ಗೊತ್ತು ನನ್ನನ್ನು ಸರ್ಕಾರ ಏನು ಮಾಡುವುದಕ್ಕಾಗುವುದಿಲ್ಲವೆಂದು ಅದಕ್ಕೆ ಸರ್ಕಾರ ಇವತ್ತು ಆ ಟೆಂಡರ್ ಅನ್ನು ರಿಸಿಂಡ್ ಮಾಡುವಂಥ ಅಧಿಕಾರ ಅದು ಎಕ್ಸಿಕ್ಯೂಟಿವ್ ಇಂಜನಿಯರ್ ಲೆವಲ್‌ನಲ್ಲೇ ಇರಬೇಕು, ಅದು ಬಿಟ್ಟ ಮೇಲೆ

ಬರಬಾರದು. ಆ ರೀತಿಯಲ್ಲಿ ಟೆಂಡರ್ ರಿಸಿಂಡ್ ಮಾಡುವ ಸರಳೀಕರಣವನ್ನು ತರಬೇಕೆಂದು ಹೇಳುತ್ತೇನೆ. ಇನ್ನು ಯಾವುದೇ ಕೆಲಸಕ್ಕೆ ತಾವು ನಿಗದಿ ಮಾಡುವ ಹಣವನ್ನು ಸಕಾಲದಲ್ಲಿ ತಾವು ಕೊಡಬೇಕು ಇಲ್ಲದಿದ್ದರೆ ಕೆಲಸಗಳು ಸುಲಭವಾಗಿ ಆಗುವುದಿಲ್ಲವೆನ್ನುವುದನ್ನು ನಾನು ತಮಗೆ ಜ್ಞಾಪಕ ಮಾಡುತ್ತೇನೆ. ಇನ್ನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳುವುದಾದರೆ ಈ ಇಲಾಖೆ, ಬರೀ ನಮ್ಮ ಎಲ್ಲಾ ಕೇಂದ್ರಗಳಿಗೆ ಜನರು ಬರುತ್ತಾರೆ ನೋಡಿಕೊಂಡು ಹೋಗುತ್ತಾರೆ ಎಂದು ಅಷ್ಟೇ ನಮ್ಮ ಕೆಲಸವೆಂದು ತಿಳಿದುಕೊಂಡಂತಿದೆ. ಇಲಾಖೆ ಅದರ ಕಡೆ ಹೆಚ್ಚು ಗಮನವನ್ನು ಕೊಟ್ಟು, ಆ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಅನುಕೂಲತೆಗಳನ್ನು ಎಷ್ಟು ಮಾಡಬೇಕು, ಏನು ಮಾಡಬೇಕೆನ್ನುವುದರ ಬಗ್ಗೆ ತಾವು ಹೇಳಬೇಕು. ಇವತ್ತು ನಮ್ಮ ಬೇಲೂರು, ಹಳೆಬೀಡು ಪ್ರವಾಸೋದ್ಯಮ ಕೇಂದ್ರಗಳು.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕುಮಾರ ಸ್ವಾಮಿಯವರು ಈ ಗ್ರಾಮಸಹಾಯಕರ ಖಾಯಂ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ಸುಮಾರು ಮೂವತ್ತು, ನಲವತ್ತು ವರ್ಷಗಳಿಂದಲೂ ಆ ಗ್ರಾಮಸಹಾಯಕರು ಇನ್ನು ಕೆಲಸ ಮಾಡುತ್ತಲೇ ಇದ್ದಾರೆ, ಅವರನ್ನು ನಾವು ಖಾಯಂ ಮಾಡುವುದಕ್ಕಾಗಲಿಲ್ಲ. ಸುಪ್ರೀಂ ಕೋರ್ಟ್‌ನಲ್ಲಿ ಯಾವುದೋ ಒಂದು ಆದೇಶವಾಯಿತೆಂದು ಎಲ್ಲಾ ಕಾನೂನುಗಳನ್ನು ಬದಿಗಿಟ್ಟು ಅವರನ್ನು ಖಾಯಂ ಮಾಡಿದೆವು. ಆದರೆ ಇವರು ಸುಪ್ರೀಂ ಕೋರ್ಟಿಗೆ ಹೋಗಲಾರದವರು ಪಾಪಿಗಳೆಂದು ತಿಳಿದುಕೊಂಡು ನಾವು ಇಲ್ಲಿಯ ತನಕ ಹಾಗೆಯೇ ಬಿಟ್ಟಿದ್ದೇವೆ. ಆದರೆ ನಿಜವಾಗಿ, ನ್ಯಾಯಯತವಾದ ಬೇಡಿಕೆ ಅವರದಾಗಿದೆ, ಕುಮಾರ ಸ್ವಾಮಿಯವರು ಏನು ಹೇಳಿದರು ಅದು ಬಹಳ ನ್ಯಾಯವಾದಂತಿದೆ. ಅವರಲ್ಲಿ ನೂರಕ್ಕೆ ತ್ತೊಂಭತ್ತೈದರಷ್ಟು ಜನರು ಪರಿಶಿಷ್ಟಜಾತಿ / ಪರಿಶಿಷ್ಟಪಂಗಡ, ಸಮಾಜದ ಬಹಳ ಕಟ್ಟಕಡೆಯ ದಟ್ಟದಾರಿದ್ರ್ಯ ಜನ ಅಲ್ಲಿದ್ದಾರೆ. ಆದರೆ ಅವರ ಬಗ್ಗೆ ಬಹಳ ಸಿಂಪತಟಿಕ್ ಆಗಿ ಅವರನ್ನು ಇಲ್ಲಿ ಖಾಯಂ ಮಾಡಬೇಕೆಂದು ಸರ್ಕಾರ ಬಹಳ ಗಂಭೀರವಾಗಿ ಚಿಂತನೆ ಮಾಡುತ್ತಿದೆ. ಇದನ್ನು ಮಂತ್ರಿ ಮಂಡಲದ ಉಪ ಸಮಿತಿ ಪರಿಶೀಲಿಸುತ್ತಿದೆ. ಬಹುಶಃ ಇನ್ನೊಂದು 15 ದಿವಸ ಅಥವಾ ತಿಂಗಳೊಳಗಾಗಿ ಸರ್ಕಾರ ಈ ಬಗ್ಗೆ ಏನಾದರೂ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಜಿಗಜಿಣಗಿಯವರದು ಮತ್ತು ಮಾನ್ಯ ಬೈರೇಗೌಡರದು ಒಂದು ಹೊಸ ಸ್ಟೈಲ್‌ಇದೆ. ಅದೇನೆಂದರೆ ಇವರೇ ಅಪೋಸಿಷನ್ ಮೆಂಬರ್ಸ್ ತರಹ ಮಾತನಾಡಿ ಬಿಡುತ್ತಾರೆ. ಸರ್ಕಾರ ನಿಮ್ಮಕೈಯಲ್ಲಿದೆ. ಈ ಟೈಮ್‌ನಲ್ಲಿ ನೀವು ಆರ್ಡರ್ ಮಾಡಿ, ನಾವು ಆರ್ಡರ್ ಮಾಡಿದ್ದೇವೆ ಎಂದು ಹೇಳಿ ತಾವು ಹೆಮ್ಮೆಪಡಬೇಕು. ಪಾಪ ಅವರಿಗೆ ಹೇಳಿದರೆ ಅವರೇನು ಮಾಡುತ್ತಾರೆ, ಅವರು ಮಾಡಿ ಎಂದು ನಿಮ್ಮನ್ನೇ ಕೇಳಿಕೊಳ್ಳುತ್ತಾರೆ. ಮೊನ್ನೆ ಯಾವುದೋ ಒಂದು ವಿಚಾರಕ್ಕೆ ಮಾನ್ಯ ಬೈರೇಗೌಡರೂ ಹಾಗೆಯೇ ಮಾಡಿದರು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ನಿಯಮ ಬಿಟ್ಟು ನಾವು ಮಾಡುವುದಕ್ಕೆ ಬರುವುದಿಲ್ಲ. ನಾವು ಹೆಚ್ಚು ಕಡಿಮೆ ಅವರ ಪರವಾಗಿಯೇ ಇದ್ದೇವೆ. ಅದಕ್ಕೆ ಸ್ವಲ್ಪ ಕಾನೂನಿನ ತೊಡಕು ಇದೆ. ಅದು ಈಗ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ.

ಅಧ್ಯಕ್ಷರು : ನಿಯಮಗಳು ಬಲಹೀನರು ಬಂದಾಗ ಸಡಿಲಗೊಳ್ಳಬೇಕು. ಬಲಿಷ್ಠರು ಬಂದಾಗ ಬಲಗೊಳ್ಳಬೇಕು. ನಿಯಮಕ್ಕೆ ಯಾವ ರೀತಿ ಶಕ್ತಿ ಇರಬೇಕು ಅಂದರೆ ದುರ್ಬಲ ವರ್ಗದವರು ಬಂದಾಗ ನಿಯಮ ಸಡಿಲಗೊಳ್ಳಬೇಕು, ಅವನಿಗೆ ದಾರಿ ಬಿಡಬೇಕು ಅವನನ್ನು ಸ್ವೀಕಾರ ಮಾಡಬೇಕು, ಬಲಿಷ್ಠರು ಬಂದಾಗ ನಿಯಮ ಗಟ್ಟಿಯಾಗಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಈ ವಿಚಾರವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತಂದೆಯಷ್ಟೇ.

ಶ್ರೀ ಹೆಚ್. ಕೆ. ಕುಮಾರ ಸ್ವಾಮಿ : ಮಾನ್ಯ ಅಧ್ಯಕ್ಷರು ಹೇಳಿದಂತೆ ಕಳಕಳಿ ಅವರಿಗೂ ಇದೆ, ತಮಗೂ ಇದೆ. ಇದನ್ನು ಜಾರಿ ಮಾಡಿ ಎಂದು ನಾವು ಕೇಳುತ್ತಿದ್ದೇವೆ. ನಾವೇ ಎಲ್ಲಾ ನಿಯಮ ಮಾಡುವವರು. ಹಾಗಿರುವಾಗ ಬೇರೆಯವರ ಮೇಲೆ ಹೇಳಿಕೊಂಡಿದ್ದರೆ ಸರಿಯಾಗುವುದಿಲ್ಲ. ಮಾನ್ಯ ಸಚಿವರು 10 ಸಾವಿರ ಗ್ರಾಮ ಸಹಾಯಕರನ್ನು ರೆಗ್ಯೂಲರೈಸ್ ಮಾಡುವ ಕೆಲಸ ಮಾಡಿದರೆ ಮಾನ್ಯ ಸಚಿವರಿಗೂ ಹಾಗೂ ಸರ್ಕಾರಕ್ಕೂ ಒಂದು ದೊಡ್ಡ ಕಿರೀಟ ಬರುತ್ತದೆ. ಎಲ್ಲಾ ಗ್ರಾಮ ಸಹಾಯಕರುಗಳೂ ತಮ್ಮ ಮನೆಯೊಳಗಡೆ ಮಾನ್ಯ ಸಚಿವರ ಫೋಟೋ ಹಾಕಿಕೊಳ್ಳುತ್ತಾರೆ. ಇನ್ನು ಪ್ರವಾಸೋದ್ಯಮ ಬಗ್ಗೆ ನಾನು ಮಾತನಾಡುತ್ತಿದ್ದೆ. ಪ್ರವಾಸೋದ್ಯಮ ಇಲಾಖೆಯವರು ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಪಡಿಸುವುದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ಬೇಲೂರು ಇರಬಹುದು, ಹಳೇಬೀಡು ಇರಬಹುದು, ಶ್ರವಣಬೆಳಗೊಳ ಇರಬಹುದು, ಬಾದಾಮಿ ಇರಬಹುದು, ಐಹೊಳೆ ಇರಬಹುದು, ಇಂತಹ ಪ್ರವಾಸಿ ಸ್ಥಳಗಳಿಗೆ ಅನೇಕ ಪ್ರವಾಸಿಗರು ಬರುತ್ತಾರೆ. ಅಲ್ಲಿಗೆ ಬರುವ ಪ್ರವಾಸಿಗರಲ್ಲಿ ಹೊರ ರಾಜ್ಯದವರು ಹಾಗೂ ಹೊರ ದೇಶದವರೇ ಜಾಸ್ತಿ ಇರುತ್ತಾರೆ. ಅಲ್ಲಿ ನೀರು ಮತ್ತಿತರ ಸೌಲಭ್ಯಗಳಿಲ್ಲದಿದ್ದಲ್ಲಿ ಅವರಿಗೆ ಈ ಊರಿನ ಬಗ್ಗೆ, 'ಇದೇನು ಈ ಊರು ಈ ರೀತಿ ಇದೆ' ಎಂಬ ಭಾವನೆ ಬರುತ್ತದೆ. ಅಲ್ಲಿಗೆ ಬರುವ ಪ್ರವಾಸಿಗರಿಗೆ ತಂಗಲು ಹೋಟೆಲ್ ಮುಂತಾದೆಡೆ ವಸತಿ ಸೌಕರ್ಯ ಸರಿಯಾಗಿರಬೇಕು. ಪ್ರವಾಸಿಗರು ತಂಗಲು ಕಟ್ಟಡ ಮತ್ತು ಹೋಟೆಲ್‌ಗಳ ನಿರ್ಮಾಣದ ಕಡೆಗೆ ಪ್ರವಾಸೋದ್ಯಮ ಇಲಾಖೆಯವರು ಗಮನ ಹರಿಸಿ ಅನುಕೂಲ ಮಾಡಿಕೊಡಬೇಕು. ಪುರಾತತ್ವ ಇಲಾಖೆಯವರೂ ಕೂಡ ಹಳೆಯದನ್ನು ಸಂರಕ್ಷಿಸುವ ಕೆಲಸ ಮಾಡಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಸುಮಾರು 35-40 ಹಳ್ಳಿಗಳಲ್ಲಿರುವ ಹಳೆಯ ಕಾಲದ ವಿಗ್ರಹ ಮುಂತಾದವುಗಳನ್ನು ಸಂರಕ್ಷಿಸಲಿಕ್ಕೆ ಅವಕಾಶ ಇದೆ. ಆ ವಿಗ್ರಹಗಳು ಒಂದು ಚೂರು ಕಲೆ ಇಲ್ಲದೆ ಇನ್ನೂ ಬಹಳ ಉತ್ತಮ ಸ್ಥಿತಿಯಲ್ಲೇ ಇವೆ. ಅವುಗಳನ್ನು ಸರಿಯಾಗಿ ಕಾಪಾಡಿ ಪ್ರಿಸರ್ವ್ ಮಾಡತಕ್ಕ ಕೆಲಸವನ್ನು ನಾವ್ಯಾರೂ ಕೂಡ ಮಾಡುತ್ತಿಲ್ಲ. ಸರ್ಕಾರ ಆ ಕೆಲಸವನ್ನು ಮಾಡಬೇಕು. ಅಂತಹ ವಿಗ್ರಹಗಳು, ಶಾಸನಗಳು ಮುಂತಾದವು ಇರುವಂತಹ ಊರುಗಳಿಗೆ ಹೋಗಲು ಉತ್ತಮವಾದ ರಸ್ತೆಗಳು, ಮತ್ತಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅವುಗಳನ್ನು ಅಭಿವೃದ್ಧಿ ಪಡಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ನಮ್ಮ ಸರ್ಕಾರವೇನೋ ಚೆನ್ನಾಗಿ ಕೆಲಸ ಮಾಡುತ್ತಿದೆ. ಗ್ರಾಮ ನೈರ್ಮಲ್ಯದ ವಿಷಯವಾಗಿ ಹೇಳುವುದಾದರೆ, ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚು ಹಣವನ್ನು ಕೊಡಬೇಕು. ಗ್ರಾಮ ನೈರ್ಮಲ್ಯ

ಆಗಬೇಕಾದರೆ ಚರಂಡಿ ಮತ್ತು ರಸ್ತೆಗಳ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ಕೊಡಬೇಕು. ಇಲ್ಲದಿದ್ದರೆ ರೋಗ ರುಜಿನಗಳು ಬರುತ್ತವೆ, ಇದರಿಂದ ಇನ್ನೇನು ಪರಿಣಾಮಗಳಾಗುತ್ತವೆ ಎಂಬ ಬಗ್ಗೆ ತಮಗೇ ಗೊತ್ತಿದೆ. ಇದರಲ್ಲಿ ಜನರನ್ನು ತೊಡಗಿಸಿಕೊಳ್ಳತಕ್ಕಂತಹ ಕಾರ್ಯಕ್ರಮವನ್ನು ನಾವು ಮಾಡಬೇಕು. ಜನರನ್ನು ಈ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ಅವರಿಗೆ ನಮ್ಮದೂ ಕೂಡ ಜವಾಬ್ದಾರಿ ಇದರಲ್ಲಿದೆ ಎಂಬ ಭಾವನೆ ಮೂಡುವುದು ಸಾಧ್ಯವಾಗುತ್ತದೆ. ಕೊನೆಯ ಪಕ್ಷ ಕೂಲಿಯನ್ನು ಅವರು ಮಾಡಬೇಕು. ಉಳಿಯುವ ಮೆಟೀರಿಯಲ್ಸ್ ಜನರದ್ದು. ಈ ತರಹದ ಜವಾಬ್ದಾರಿಯನ್ನು ಜನರಲ್ಲಿ ಮೂಡಿಸಿ ಕೆಲಸವನ್ನು ಮಾಡಬೇಕು ಎಂದು ಹೇಳುತ್ತಾ, ಇನ್ನು ಅನೇಕ ವಿಷಯಗಳ ಬಗ್ಗೆ ಮಾನ್ಯ ಎಲ್ಲಾ ಸದಸ್ಯರೂ ಮಾತನಾಡಿದ್ದಾರೆ. ಈ ಎಲ್ಲಾ ಬೇಡಿಕೆಗಳನ್ನೂ ಮತ್ತೊಮ್ಮೆ ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ತಮಗೆ ವಂದನೆಗಳು.

+ ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) : ಸನ್ಮಾನ್ಯ ಅಧ್ಯಕ್ಷರೇ,....

ಅಧ್ಯಕ್ಷರು : ತಮಗೆ ಮಾತನಾಡಲು ಸುಮಾರು ಎಷ್ಟು ಗಂಟೆ ಬೇಕಾಗಬಹುದು.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಸುಮಾರು ಅರ್ಧಗಂಟೆ ಬೇಕಾಗುತ್ತದೆ. ತಾವು ಒಂದು ಗಂಟೆಯವರೆಗೆ ಮಾತನಾಡಿ ಎಂದರೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ನಮಗೆ ಇಲ್ಲಿ ಮಾತನಾಡುವವರ ಅಭಾವವಿಲ್ಲ, ಮಾತನಾಡ ಬಯಸುವವರು ಇಲ್ಲಿ ಬಹಳ ಜನರಿದ್ದಾರೆ. ತಾವು ಮೊನ್ನೆ ಕೂಡ ಕೆಲವೊಂದು ಬೇಡಿಕೆಗಳ ಮೇಲೆ ಮಾತನಾಡಿದಿರಿ. ತಾವು ತಮ್ಮ ಭಾಷಣವನ್ನು ಬೇಗ ಮುಗಿಸಿದರೆ, ತಮ್ಮ ನಂತರ ಡಾ|| ಕರ್ಕಿಯವರಿಗೂ ಮಾತನಾಡಲು ಅವಕಾಶ ಕೊಟ್ಟು ನಂತರ ಸದನವನ್ನು ಮುಂದೂಡೋಣ. ಏಕೆಂದರೆ ಬೇರೆ ಲೀಡರ್ಸ್ ಯಾರೂ ಸದನದಲ್ಲಿ ಇಲ್ಲ. ಅಲ್ಲದೇ ಸೋಮವಾರ ಬೇಡಿಕೆಗಳ ಮೇಲಿನ ಚರ್ಚೆಗೆ ಸರ್ಕಾರದವರು ಉತ್ತರಿಸಬೇಕಾಗಿದೆ. ಸುಮ್ಮನೆ ಅನಾವಶ್ಯಕವಾಗಿ ಕಾಲಹರಣ ಮಾಡುವುದು ಬೇಡ. ತಾವು 20 ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಕಂದಾಯ ಇಲಾಖೆ ಮತ್ತು ವಿವಿಧ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿರುವಂತಹ ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಕಂದಾಯ ಮಂತ್ರಿಗಳ ಗಮನಕ್ಕೆ ತರುವಂತಹ ವಿಚಾರ ಏನು ಎಂದರೆ, ಈ ಸರ್ಕಾರ ಮಲೆನಾಡು ಪ್ರದೇಶಗಳಲ್ಲಿ ಅಕ್ರಮವಾಗಿ ಸಾಗುವಳಿ ಮಾಡಿರುವ ಕಾಫಿ ತೋಟಗಳನ್ನು ಸಕ್ರಮಗೊಳಿಸುವ ಬಗ್ಗೆ ಅನೇಕ ಬಾರಿ ವಾಗ್ದಾನವನ್ನು ಮಾಡಿದೆ. ಹಿಂದೆ ವಿಧಾನ ಸಭಾಚುನಾವಣೆ ನಡೆದಂತಹ ಸಂದರ್ಭದಲ್ಲೂ ಸಹ....

ಅಧ್ಯಕ್ಷರು : ತಮ್ಮ ಭಾಷಣದ ಆರಂಭದಲ್ಲೇ ಎಂತಹ ಗಹನವಾದ ವಿಚಾರ ಪ್ರಸ್ತಾಪಿಸಿದಿರಿ, ಕಾಫಿ ಪ್ಲಾಂಟರ್ಸ್ ಎಲ್ಲಾ ತೀರಾ ನಲುಗಿ ಹೋಗಿದ್ದಾರೆ ಅಲ್ಲವೇ ? ಆ ವಿಷಯ ಬಹಳ ಅರ್ಜೆಂಟಾಗಿದೆ ಅಲ್ಲವೇ ?

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ಕಾಫಿ ಪ್ಲಾಂಟರ್ಸ್ ಕಷ್ಟದಲ್ಲಿದ್ದಾರೆ. ಆ ಬಗ್ಗೆ ನಾನು ತಮಗೆ ಹೇಳುತ್ತೇನೆ. ಇದು ಕೇವಲ ಕಾಫಿ ತೋಟದವರ ಬಗ್ಗೆ ಅಂತಲ್ಲ, ನಾನು ತಮಗೆ ಎಲ್ಲವನ್ನೂ ವಿವರವಾಗಿ ಹೇಳುತ್ತೇನೆ.

ಅಧ್ಯಕ್ಷರು : ತಾವು ಸಮಾಜದ ಅತ್ಯಂತ ದುರ್ಬಲ ವರ್ಗದವರ ಬಗ್ಗೆ ಮಾತನಾಡುತ್ತಿದ್ದೀರಿ, ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಕಾಫಿ ಪ್ಲಾಂಟರ್ಸ್‌ಗಳು ತಾಕತ್ತು ಇದ್ದಷ್ಟು ಬೇಲಿಗಳನ್ನು ಹಾಕಿಕೊಂಡಿದ್ದಾರೆ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ಅವರೂ ಕೂಡ ಏನೂ ಕಡಿಮೆ ಮಾಡಿಲ್ಲ. ಅಡಿಕೆ ತೋಟ ಎಷ್ಟು ಒತ್ತುವರಿ ಮಾಡಿದ್ದಾರೆ ಎಂಬ ಬಗ್ಗೆ ತಾವೇನಾದರೂ ಮಾಹಿತಿ ತರಿಸಿದರೆ...

ಶ್ರೀ ಅರಗ ಜ್ಞಾನೇಂದ್ರ : ಅವರದ್ದೆಲ್ಲಾ ಕಿ.ಮೀ. ಲೆಕ್ಕದಲ್ಲಿ ಸಿಗುತ್ತದೆ. ನಮ್ಮದ್ದೆಲ್ಲಾ ಕೇವಲ ಎಕರೆ, ಗುಂಟೆ ಲೆಕ್ಕದಲ್ಲಿ ಸಿಗುತ್ತದೆಯಷ್ಟೆ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಆದರೂ ತಾವೂಕೂಡ ನಮ್ಮ ಜೊತೆಗೆ ಸೇರಿರುತ್ತೀರಲ್ಲಾ. ವೀರಪ್ಪನ್ ತಂಡದವರು ಎಂದು ಹೇಳಿದರೆ ಅವರ ಜೊತೆಗೇ ಇರುತ್ತಾರೆ ಎಂದು ಆಯಿತಲ್ಲಾ. ಇಲ್ಲ ಎಂದು ಹೇಗೆ ಹೇಳುವುದಕ್ಕಾಗುತ್ತದೆ? ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವಂತಹ ವಿಚಾರ ಏನು ಎಂದು ಹೇಳಿದರೆ, ಇವತ್ತು 2-3 ವಿಚಾರಗಳಲ್ಲಿ ಸರ್ಕಾರದವರು ಆಲೋಚನೆ ಮಾಡಬೇಕಾಗುತ್ತದೆ. ಒಂದು ಕಡೆ ಪರಿಸರವನ್ನು ಉಳಿಸುವಂಥಾದ್ದರ ಬಗ್ಗೆ ಸರ್ಕಾರ ಬಹಳ ಚಿಂತನೆ ಮಾಡುವಂತಹ ಜಾಗದಲ್ಲಿ ಇವತ್ತು ಗ್ರಾಮಗಳಲ್ಲಾಗಲೀ, ಹಳ್ಳಿಗಳಲ್ಲಾಗಲೀ ಸರ್ಕಾರ ಏನೊಂದು ನಾಮ ಫಲಕ ಹಾಕುತ್ತದೆ ಎಂದರೆ 'ಅರಣ್ಯವನ್ನು ಬೆಳಸುವಂಥಾದ್ದು ಇವತ್ತು ಬಹಳ ಮುಖ್ಯ' ಎಂದು ಅದರಲ್ಲಿ ಇರುತ್ತದೆ. ಅರಣ್ಯ ಬೆಳೆಸಲು ನಾವು ಇವತ್ತು ಕೋಟ್ಯಾಂತರ ರೂ.ಗಳ ಯೋಜನೆಯನ್ನು ಹಮ್ಮಿಕೊಂಡು ಅರಣ್ಯವನ್ನು ಬೆಳೆಸುವುದರ ಬಗ್ಗೆ ನಾವು ಇವತ್ತು ಬಹಳ ದೀರ್ಘವಾಗಿ ಆಲೋಚನೆ ಮಾಡುತ್ತಿದ್ದೇವೆ. ಕಾಫಿ ತೋಟಗಳನ್ನು ಸಕ್ರಮಗೊಳಿಸುವ ಬಗ್ಗೆ ಹೇಳುವುದಾದರೆ, ತಾವು ಬಹುಶಃ ತಮ್ಮ ಕಾಲದಲ್ಲಿ ಅದನ್ನು ಮಾಡಬಹುದಾಗಿತ್ತು, ಆದರೆ ಏಕೆ ಸಕ್ರಮಗೊಳಿಸಲಿಲ್ಲ ಎಂದು ತಾವು ಕೇಳಬಹುದು. ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲಿಕ್ಕೆ ಸಾಧ್ಯವಿಲ್ಲ ಎಂಬ ಕಾಂಗ್ರೆಸ್ ಪಕ್ಷದ ಸ್ಪಷ್ಟ ಅಭಿಪ್ರಾಯವನ್ನು ಕಾಫಿ ಬೆಳೆಗಾರರ ಗಮನಕ್ಕೆ ತರಲಾಗಿತ್ತು. ಆದರೆ ತಾವು ಚುನಾವಣಾ ಸಂದರ್ಭದಲ್ಲಿ, ಕೇವಲ ಅವರ ಮತಗಳನ್ನು ಗಳಿಸುವ ಉದ್ದೇಶದಿಂದ, ಅವರ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಭರವಸೆಯನ್ನು ಕೊಟ್ಟಿದ್ದಿರಿ. ಆದರೆ ತಾವು ಈ ರೀತಿಯ ಭರವಸೆ ಕೊಟ್ಟು ಎರಡು ವರ್ಷ ಎರಡು ತಿಂಗಳಾದರೂ ಸಹ ಇಲ್ಲಿಯವರೆಗೂ ಕಾಫಿ ತೋಟವನ್ನು ಸಕ್ರಮಗೊಳಿಸುವುದರ ಬಗ್ಗೆ ಯಾವುದೇ ರೀತಿಯ ನಿರ್ಣಯವನ್ನು ತೆಗೆದುಕೊಂಡಿಲ್ಲ. ಈ ವಿಚಾರ ಮನಸ್ಸಿಗೆ ಬಹಳ ನೋವನ್ನು ತರುತ್ತದೆ. ಲೋಕಸಭಾ ಚುನಾವಣೆ ನಡೆಯುವಂತಹ ಸಂದರ್ಭದಲ್ಲಿಯೂ ಸಹ ಈ ರಾಜ್ಯದ ಮಾಜಿ

ಮುಖ್ಯಮಂತ್ರಿಗಳು ಹಾಗೂ ಮಾಜಿ ಪ್ರಧಾನ ಮಂತ್ರಿಗಳಾದಂತಹ ಶ್ರೀಮಾನ್ ಹೆಚ್.ಡಿ. ದೇವೇಗೌಡರವರು ಚಿಕ್ಕಮಗಳೂರಿಗೆ ಭೇಟಿ ಕೊಟಂತಹ ಸಮಯದಲ್ಲಿ ಕಾಫಿ ಬೆಳೆಗಾರರ ಕಷ್ಟವನ್ನು ನಾನು ಅರಿತಿದ್ದೇನೆ, ಈ ಸಮಸ್ಯೆ ಅನೇಕ ವರ್ಷಗಳಿಂದ ಹಾಗೆಯೇ ಉಳಿದುಕೊಂಡು ಬಂದಿರುವಂತಾದ್ದು ನನ್ನ ಗಮನಕ್ಕೆ ಬಂದಿದೆ, ನನಗೆ ಇದರ ಬಗ್ಗೆ ಸಾಕಷ್ಟು ಮಾಹಿತಿ ಇದೆ, ನಾನು ಇದನ್ನು ಸಕ್ರಮಗೊಳಿಸುತ್ತೇನೆ ಎನ್ನುವಂತಹ ವಾಗ್ದಾನವನ್ನು ಮಾಡಿದ್ದರು. ಆದರೆ ದುರದೃಷ್ಟವಶಾತ್ ನಾನು 3-4 ಬಾರಿ ಈ ಸದನದಲ್ಲಿ ಅಕ್ರಮವಾಗಿ ಸಾಗುವಳಿ ಮಾಡಿರತಕ್ಕ ಕಾಫಿ ತೋಟಗಳ ವಿಸ್ತೀರ್ಣವೆಷ್ಟು ಎಂಬ ಪ್ರಶ್ನೆಯನ್ನು ಕೇಳಿದಾಗ, ಮೂರು ಬಾರಿಯೂ ಸಹ ಮಾನ್ಯ ಕಂದಾಯ ಮಂತ್ರಿಗಳು ನನಗೆ ಪ್ರಶ್ನೆಗೆ ಉತ್ತರ ಕೊಡುತ್ತಾ ಕೇವಲ 25 ಸಾವಿರ ಎಕರೆ ಮಾತ್ರ ಅಕ್ರಮ ಸಾಗುವಳಿ ಆಗಿದೆ ಎಂದು ನನಗೆ ಉತ್ತರ ಕೊಟ್ಟಿದ್ದಾರೆ. ಆದರೆ ನಾನು ಇವತ್ತು ಸನ್ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಇವತ್ತಿಗೂ ಸಹಾ ಸರ್ಕಾರದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಕಾಫಿ ತೋಟಗಳನ್ನು ಅಕ್ರಮವಾಗಿ ಸಾಗುವಳಿ ಮಾಡಲಾಗಿದೆ ಎಂಬ ಬಗ್ಗೆ ಸಂಪೂರ್ಣವಾದಂತಹ ಮಾಹಿತಿ ಸರ್ಕಾರದ ಬಳಿ ಇಲ್ಲ. ಇಂತಹ ಒಂದು ಸ್ಥಿತಿ ಇದ್ದಾಗ ತಾವು ವಾಗ್ದಾನ ಮಾಡಿರುವಂತೆ ಕ್ರಮ ಕೈಗೊಳ್ಳಲು ಏನು ಮಾಡಿದ್ದೀರಿ? ಅನೇಕ ಸಾರ್ವಜನಿಕ ವೇದಿಕೆಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಮಾನ್ಯ ಕಂದಾಯ ಸಚಿವರು ಕಾಫಿ ತೋಟಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರವು ಸಚಿವ ಸಂಪುಟದ ಉಪ ಸಮಿತಿಯೊಂದನ್ನು ರಚಿಸಿದ್ದು, ಅಲ್ಲಿ ಚರ್ಚೆ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಸಚಿವ ಸಂಪುಟದ ಉಪ ಸಮಿತಿಯ ನಡವಳಿಗಳೇನು, ನಿರ್ಣಯಗಳೇನು ಎಂಬ ಬಗ್ಗೆ ಕಾಫಿ ಬೆಳೆಗಾರರಿಗಾಗಲೀ, ಅಡಿಕೆ ಬೆಳೆಗಾರರಿಗಾಗಲೀ, ಬಾಳೆ ಬೆಲೆಗಾರರಿಗಾಗಲೀ, ತೆಂಗು ಬೆಳೆಗಾರರಿಗಾಲೀ ಇವತ್ತಿನವರೆಗೂ ಸಂಪೂರ್ಣವಾದ ಯಾವುದೇ ಮಾಹಿತಿಯನ್ನು ಒದಗಿಸಿ ಕೊಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅನೇಕ ಸಂದರ್ಭಗಳಲ್ಲಿ ಸರ್ಕಾರ ತನ್ನ ಸಾಧನೆಗಳನ್ನು ಹೇಳಿಕೊಳ್ಳುತ್ತಿದೆ. ಅಂತಹ ಸಂದರ್ಭಗಳಲ್ಲಿ ಸರ್ಕಾರ ತಾನು ಭೂ ಮಾಪನ ಇಲಾಖೆಯಲ್ಲಿ ಸಾವಿರ ಜನ ಸರ್ವೇಯರ್‌ಗಳನ್ನು ನೇಮಕ ಮಾಡಿದ್ದೇವೆ ಎಂದು ಘೋಷಣೆ ಮಾಡುತ್ತಿದೆ. ಹೀಗಿದ್ದರೂ ಕೂಡ ಅಕ್ರಮವಾಗಿ ಸಾಗುವಳಿ ಮಾಡಿರುವಂತಹ ಜಮೀನು ಎಷ್ಟು ಎಂಬ ಬಗ್ಗೆ ಸರ್ಕಾರ ಮಾಹಿತಿ ಪಡೆಯುವುದರಲ್ಲಿ ಯಶಸ್ವಿಯಾಗದೇ ಇರುವುದಕ್ಕೆ ಕಾರಣವೇನು ಎನ್ನುವುದರ ಬಗ್ಗೆ ದಯವಿಟ್ಟು ಸರ್ಕಾರದವರು ಆಲೋಚನೆ ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ಉತ್ತಮವಾದ ಕೆಲಸ ಮಾಡುತ್ತದೆ ಎಂದು ತಾವು ಪತ್ರಿಕೆಗಳಲ್ಲಿ ಮಾತ್ರ ಹೇಳಿಕೊಳ್ಳುತ್ತಿದ್ದೀರಿ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ, ಅವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ತಾವು ಈ ಒಂದು ಅಕ್ರಮವಾಗಿ ಸಾಗುವಳಿ ಮಾಡಿರುವಂತಹ ಜಮೀನುಗಳನ್ನು ಸಕ್ರಮಗೊಳಿಸುವುದರಲ್ಲಿ ನೂರಕ್ಕೆ ನೂರರಷ್ಟು ವಿಫಲರಾಗಿದ್ದೀರಿ.

ಸರ್ಕಾರ ಕಾಫಿ ಬೆಳೆಗಾರರಿಗೆ ಮಾಡಿದಂಥ ವಾಗ್ದಾನದ ಪ್ರಕಾರ ತಾನು ನಡೆಯುವುದರಲ್ಲಿ ಬಹಳ ಹಿಂದೆ ಬಿದ್ದಿದೆ. ಮುಂದೆ ಕಾಫಿ ಬೆಳೆಗಾರರಿಗೆ ಏನು ಮಾಡುತ್ತಾರೋ ಎನ್ನುವ ಅನುಮಾನ ನಮಗಂತೂ ಇದೆ. ಈ ಅನುಮಾನಕ್ಕೆ ಕಾರಣವೇನೆಂದರೆ ಅಕ್ರಮ ಸಕ್ರಮ ಮಾಡುವ ಹಂತದಲ್ಲಿ ಸರ್ಕಾರ ಇಲ್ಲ. ಕಾಫಿ ತೋಟದ ಮಾಲೀಕರು ಎಂದರೆ ಮೈಸೂರು ಮಹಾರಾಜರ ಮಕ್ಕಳು ಎಂದು

ಅನೇಕರು ತಿಳಿದಿದ್ದಾರೆ. ಕಾಫಿ ತೋಟದ ಮಾಲೀಕರಿಗೆ ಎಷ್ಟು ಕಷ್ಟ ಇದೆ ಎನ್ನುವುದು ನಮ್ಮ ಮಾನ್ಯ ಅಧ್ಯಕ್ಷರಿಗೆ ತಿಳಿದಿರುವಂಥ ವಿಚಾರವಾಗಿದೆ. ಏಕೆಂದರೆ ಅವರು ಇಂದು ನೆನ್ನೆಯಲ್ಲ ಅನೇಕ ವರ್ಷಗಳಿಂದ ಚಿಕ್ಕಮಗಳೂರನ್ನು ನೋಡಿರುವವರು ಆಗಿದ್ದಾರೆ. ಮತ್ತು ಚಿಕ್ಕಮಗಳೂರಿನಲ್ಲಿಯ ಅನೇಕ ಕಾಫಿ ಬೆಳೆಗಾರರ ಸ್ಥಿತಿಗತಿಗಳನ್ನು ನಮ್ಮ ಮಾನ್ಯ ಅಧ್ಯಕ್ಷರು ತಿಳಿದಂಥವರಾಗಿರುತ್ತಾರೆ. 'ನಿಮಗೇನಪ್ಪ, ನೀವು ಚಿನ್ನ ಬೆಳೆಯುತ್ತಿದ್ದೀರಿ' ಎಂದು ಮಾನ್ಯ ಅಧ್ಯಕ್ಷರು ಹೇಳಬಹುದು. ಚಿನ್ನ ತೆಗೆಯುವುದಕ್ಕಾಗಿ ಕೋಲಾರದ ಚಿನ್ನದ ಗಣಿಗೆ ಹೋದಾಗ ಮುಖ, ಬಟ್ಟೆಯೆಲ್ಲಾ ಹೇಗೆ ಮಸಿಯಾಗಿ ಕಪ್ಪಾಗಿರುತ್ತದೆಯೋ ಅದೇ ರೀತಿಯಲ್ಲಿ ಕಾಫಿ ತೋಟದ ಕೆಲಸವನ್ನು ನಾವು ಮಾಡಬೇಕಾದಂಥ ಸಂದರ್ಭದಲ್ಲಿ ನಮ್ಮ ಸ್ಥಿತಿಯು ಸಹ ಅವರ ರೀತಿಯಲ್ಲೇ ಆಗಿರುತ್ತದೆ.

ಶ್ರೀ ರಮೇಶ್. ಸಿ. ಜಿಗಜಿಣಗಿ : ಮನ್ಯ ಅಧ್ಯಕ್ಷರೆ, ಮಾನ್ಯ ಸಗೀರ್ ಅಹಮದ್‌ರವರು ಬಹಳ ಚೆನ್ನಾಗಿ ಹೇಳಿದರು, ಕಾಫಿ ಬೆಳೆಗಾರರು ಏನು ಇದ್ದಾರೆ ಅವರಿಗೆ ತಿನ್ನಲಿಕ್ಕೆ ಗತಿ ಇಲ್ಲ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ. ಅವರುಗಳು ಬಹಳ ಬಡವರು ಎನ್ನುವ ಹಾಗೆ ಅವರ ಬಗ್ಗೆ ಮಾನ್ಯ ಸದಸ್ಯರು ಇಲ್ಲಿ ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರಿನಲ್ಲಿ ಕಾಫಿ ಬೆಳೆಗಾರರ ಬಗ್ಗೆ ನಿಮಗೆ ಬಹಳ ಚೆನ್ನಾಗಿ ಗೊತ್ತಿದೆ ಎಂದು ಮಾನ್ಯ ಸಗೀರ್ ಅಹಮ್ಮದ್‌ರವರು ಹೇಳುತ್ತಿದ್ದಾರೆ. ಅವರು ಹೇಳುವ ಹಾಗೆ ತಮ್ಮದು ಚಿಕ್ಕಮಗಳೂರು ಕಡೆಗೆ ಯಾವಾಗ ಪ್ರಯಾಣ ಆಗಿತ್ತು?

ಅಧ್ಯಕ್ಷರು : ನಮ್ಮ ಕೋಲಾರದಲ್ಲಿ ಕಾಫಿ ಎಸ್ಟೇಟ್ ಇದೆಯಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೇ ಹೇಳುವುದು, ಕೋಲಾರದವರಿಗೂ ಚಿಕ್ಕಮಗಳೂರಿಗೂ ಏನು ಸಂಬಂಧ

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಮ್ಮ ಕಡೆಯಿಂದ 50 ಎಕರೆ ಜಾಗವನ್ನು ಮಾನ್ಯ ಸಗೀರ್ ಅಹಮ್ಮದ್‌ರವರಿಗೆ ಕೊಡಿಸುತ್ತೇನೆ. ಮಾನ್ಯ ಸಗೀರ್ ಅಹಮದ್ ಅವರ ಊರಾದ ಚಿಕ್ಕಮಗಳೂರಿನಲ್ಲಿ ನಮಗೆ ಒಂದು ಎಕರೆ ಜಾಗ ಕೊಡಲಿ ಸಾಕು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಹೇಳಿದಂಥ ವಿಚಾರ ಇದು ಕಡತಕ್ಕೆ ಅಂತೂ ಹೋಗುತ್ತದೆ. ನಾನು ಒಂದು ಎಕರೆ ಅವರಿಗೆ ಕೊಡುತ್ತೇನೆ. ನನಗೆ ಅವರು 5 ಎಕರೆ ಕೊಡಲಿ. ನಾನು ಅವರ ಊರಿಗೆ ಹೋಗುವುದು ಬೇರೆ ಇದೆ. ತಾವು ಕಚೇರಿಗೆ ಬಂದು ಅದನ್ನು ನಿರ್ಣಯ ಮಾಡಿಕೊಡಿ ಅಧ್ಯಕ್ಷರೆ, ಅವರ ಊರಿಗೆ ಹೋಗುವುದು ಬೇರೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಗೀರ್ ಅಹಮದ್‌ರವರು ಅವರ ಊರಿನಲ್ಲಿ ಒಂದು ಎಕರೆ ಜಾಗವನ್ನು ಕೊಡಿಸಿಕೊಟ್ಟರೆ ನಾನು ಅದಕ್ಕೆ 10 ಎಕರೆ ನಮ್ಮ ಊರಿನಲ್ಲಿ ಕೊಡಿಸುತ್ತೇನೆ. ನಾನು ಹೇಳಿದ್ದು ಕಡತದಲ್ಲಿ ಉಳಿಯಲಿ. ಇದು ಒಪ್ಪಿಗೆ ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು : ಸಗೀರ್ ಅಹಮದ್‌ರವರೆ ನೀವು ಸುಮ್ಮನೆ ಕೇಳಿರಿ. ಅವರ ಹತ್ತಿರ ಸುಮ್ಮನೆ ಚಾಲೇಂಜ್ ಮಾಡುತ್ತೀರಿ. ಆದರೆ ಅವರಿಗೆ ನೀವು ಜಾಗ ಕೊಡಲಿಕ್ಕಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸಗೀರ್ ಅಹಮ್ಮದ್‌ರವರು ಎಸ್.ಎಸ್. ಪಾಟೀಲರ ಜೊತೆ ಚಾಲೆಂಜ್ ಮಾಡುವುದು ಬೇಡ. ಏಕೆಂದರೆ ಮಾನ್ಯ ಎಸ್.ಎಸ್.ಪಾಟೀಲರ ಊರಿನಲ್ಲಿ ಒಂದು ಎಕರೆ ಜಾಗ ಬಹುಶಃ 10 ಸಾವಿರ ರೂಪಾಯಿಗಿಂತ ಹೆಚ್ಚಿಗೆ ಯಾರೂ ಕೇಳುವುದಿಲ್ಲ. ಆ ಮೇಲೆ ಎಲ್ಲಿಯಾದರೂ ಮಾನ್ಯ ಸಗೀರ್ ಅಹಮ್ಮದ್ ರವರು ಅಲ್ಲಿಯ ಜಾಗವನ್ನು ತೆಗೆದುಕೊಂಡರೆ ನಂತರ ತೊಂದರೆಗೀಡಾಗುತ್ತಾರೆ.

ಶ್ರೀ ಸಿ. ಆರ್. ಸಗೀರ್ ಅಹಮ್ಮದ್ : ಮಾನ್ಯ ಅಧ್ಯಕ್ಷರೆ, ಇವತ್ತು ಕಾಫಿ ತೋಟಗಳನ್ನು ಮಾಡಿರುವಂಥದ್ದಾಗಲೀ, ಅಡಿಕೆ ತೋಟಗಳನ್ನು.....

ಡಾ॥ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಕಾಫಿ ಬೆಳೆಗಾರರು ಬಹಳ ತೊಂದರೆಯಲ್ಲಿದ್ದಾರೆಂದು ಮಾನ್ಯ ಸಗೀರ್ ಅಹಮದ್‌ರವರು ಹೇಳಿದರು. ಎಲ್ಲರೂ ತೊಂದರೆಯಲ್ಲಿರುತ್ತಾರೆ. 'ಉಪ್ಪಿನ ಮೂಟೆ ಜೊತೆ ನೀರಿನಲ್ಲಿ ಬಿದ್ದವನೂ ತೀರಿಕೋತ್ತಾನೆ. ತೆಂಗಿನಕಾಯಿ ಮೂಟೆ ಜೋತೆ ನೀರಿನಲ್ಲಿ ಬಿದ್ದವನೂ ತೀರಿಕೋತಾನೆ ಎಂದು ನಮ್ಮ ಕಡೆ ಒಂದು ಗಾದೆ ಇದೆ. ಆ ರೀತಿ ಆಯಿತು ಇದು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಡಾ॥ ಕರ್ಕಿಯವರನ್ನು ಒಂದು ಸಲ ಚಿಕ್ಕಮಗಳೂರಿಗೆ ಕರೆದುಕೊಂಡು ಹೋಗುತ್ತೇನೆ.

ಅಧ್ಯಕ್ಷರು : ಡಾ॥ ಕರ್ಕಿಯವರು ಒಂದು ಗಾದೆ ಹೇಳಿದರು. ಅದೇ ಗಾದೆಯನ್ನು ನಮ್ಮ ಕಡೆ ಹೇಗೆ ಹೇಳುತ್ತಾರೆಂದರೆ 'ಮಳೆ ಬಂದಾಗ ಬಹಿರಂಗವಾಗಿ ಉಪ್ಪು ಹರಡಿಕೊಂಡಿರುವವನು ಆ ಉಪ್ಪು ಎಲ್ಲಾ ಕರಗಿ ಹೋದರೂ ಸುಮ್ಮನಿರುತ್ತಾನೆ, ಪಕ್ಕದ ವೀಳೀದೆಲೆಯವನದು ಬಹಳ ಗಲಾಟೆ. ಆದ್ದರಿಂದ ಪಾಪ ಚಿಕ್ಕಮಗಳೂರಿನವರು ವೀಳೆದೆಲೆಯವರು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ರಾಜ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ಅರಣ್ಯ ಬೆಳೆಸಬೇಕು ಎನ್ನುವ ಯೋಜನೆ ನಮ್ಮಲ್ಲಿ ಇತ್ತೋ ಅಷ್ಟು ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಅರಣ್ಯ ಪ್ರದೇಶ ಇಲ್ಲ. ಇವತ್ತು ಸರ್ಕಾರ ಕೊಟ್ಟಿರುವಂಥ ಮಾಹಿತಿ ಪ್ರಕಾರ ಶೇಕಡ 13ರಷ್ಟು ಅರಣ್ಯ ಈ ರಾಜ್ಯದಲ್ಲಿ ಉಳಿದಿದೆ, ಬಾಕಿ ಪ್ರದೇಶದಲ್ಲಿ ಅರಣ್ಯವೆಲ್ಲಾ ನಾಶವಾಗಿದೆ ಎನ್ನುವುದರ ಬಗ್ಗೆ ಸರ್ಕಾರವೇ ನೇರವಾಗಿ ಹೇಳಿಕೆಯನ್ನು ಕೊಟ್ಟಿದೆ, ಮಾಹಿತಿಯನ್ನು ಒದಗಿಸಿರುವಂಥದ್ದು ತಮಗೂ ಮತ್ತು ನನಗೆ ತಿಳಿದಿರುವಂಥ ವಿಚಾರವಾಗಿದೆ. ಕಾಫಿ ತೋಟ ಎಂದು ಅದಕ್ಕೆ ನಾವು ಪ್ರಾಮುಖ್ಯತೆ ಏಕೆ ಕೊಡುತ್ತೇವೆಂದರೆ ಕೆಲವು ಈ ಕ್ಲಾಸ್-ಸಿ ಅಂಡ್ ಡಿ ಲ್ಯಾಂಡ್ ಇರುವಂಥ ಜಾಗದಲ್ಲಿ ಇಂಥ ಮಲೆನಾಡು ಪ್ರದೇಶದ ಭೂಮಿಗಳಲ್ಲಿ ಕಷ್ಟಪಟ್ಟು ಉತ್ತಮವಾದ ಗಿಡಮರಗಳನ್ನು ಬೆಳೆಸುವುದರ ಜೊತೆಗೆ ಕಾಫಿಯನ್ನು ಬೆಳೆಸುತ್ತೇವೆ. ಅದು ಇಲ್ಲ ಎಂದು ನಾವು ಅದರ ಬಗ್ಗೆ ವಾಗ್ದಾನ ಮಾಡುವುದಕ್ಕಾಗುವುದಿಲ್ಲ ಅಥವಾ ವಾದವಿವಾದಕ್ಕೆ ನಾವು ಈಡಾಗುವುದಿಲ್ಲ. ಆದರೆ, ಇದು ಈ

ದೇಶದ, ರಾಜ್ಯದ ಒಂದು ಸಂಪತ್ತು ಮತ್ತು ಈ ದೇಶಕ್ಕೆ, ರಾಜ್ಯಕ್ಕೆ ಇದರಿಂದ ಅನುಕೂಲವಾಗುವಂಥದ್ದು ಅಥವಾ ಟ್ಯಾಕ್ಸ್ ಮುಖಾಂತರವಾಗಿ ಹಣ ಪಾವತಿ ಮಾಡುವುದರಲ್ಲಿ ತಾವು ಯಾವುದೇ ದಾಖಲೆಗಳನ್ನು ಪರಿಶೀಲಿಸಬಹುದು. ಇವತ್ತು ಕಾಫಿ ತೋಟದ ಮಾಲೀಕರು ಪಾವತಿ ಮಾಡುವಂಥ ಈ ಟ್ಯಾಕ್ಸ್ ವಿಚಾರವನ್ನು ನಾವು ಮಾತನಾಡುವುದಕ್ಕೆ ಹೋದರೆ ಇಡೀ ನಮ್ಮ ರಾಜ್ಯದಲ್ಲಿ ಪ್ರಥಮ ಸ್ಥಾನ ಏನಾದರೂ ದೊರೆಯುತ್ತದೆ ಎಂದು ಹೇಳಿದರೆ ಅದು ಚಿಕ್ಕಮಗಳೂರು ಜಿಲ್ಲೆಗೆ ಮಾತ್ರ ಪ್ರಥಮ ಸ್ಥಾನ ಹೋಗುತ್ತದೆ. ನಮ್ಮ ಚಿಕ್ಕಮಗಳೂರು ಜಿಲ್ಲೆಗೆ ಪ್ರಥಮ ಸ್ಥಾನ ಬರುತ್ತದೆಂದು ಹೇಳಲು ಕಾರಣವೇನೆಂದರೆ - ಅಷ್ಟು ಪ್ರಮಾಣದಲ್ಲಿ ಯಾವುದೇ ಟ್ಯಾಕ್ಸ್ ರೂಪದಲ್ಲಾಗಲೀ, ಮತ್ತು ಇತರೇ ರೂಪದಲ್ಲಾಗಲೀ ಸರ್ಕಾರಕ್ಕೆ ಹಣವನ್ನು ಒದಗಿಸಿಕೊಡುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಈ ವಿಚಾರವನ್ನು ಇಲ್ಲಿ ಈಗ ಏಕೆ ಪ್ರಸ್ತಾವನೆ ಮಾಡುತ್ತಿದ್ದೇನೆಂದರೆ- ನಮ್ಮ ಚಿಕ್ಕಮಗಳೂರು ಜಿಲ್ಲೆಯ ಕಾಫಿ ಬೆಳೆಗಾರರ ಕೂಗು ಬಹಳ ವರ್ಷಗಳಿಂದ ಕರ್ನಾಟಕ ರಾಜ್ಯ ಸರ್ಕಾರದ ಎದುರು ಇದೆ. ಆದರೆ ನಮ್ಮ ಕೂಗಿಗೆ ಮಾನ್ಯತೆ ಸಿಗಲಿಲ್ಲ ಎನ್ನುವುದರ ಬಗ್ಗೆಯೂ ನಮ್ಮದೇ ವಾದ ಇತ್ತು. ಆದರೆ ತಮ್ಮ ಸರ್ಕಾರ ಅಧಿಕಾರಕ್ಕೆ ಬರುವಂಥ ಸಂದರ್ಭದಲಿ 'ಕಾಫಿ ಬೆಳೆಗಾರರು, ಅಡಿಕೆ ಬೆಳೆಗಾರರು ತೆಂಗು ಬೆಳೆಗಾರರು ಅಕ್ರಮವಾಗಿ ಮಾಡಿರುವಂಥ ಜಮೀನನ್ನು ಸಕ್ರಮಗೊಳಿಸುವುದರ ಬಗ್ಗೆ ನಮ್ಮ ಸರ್ಕಾರ ಬದ್ಧವಾಗಿದೆ' ಎನ್ನುವ ವಾಗ್ದಾನವನ್ನು ತಮ್ಮ ಸರ್ಕಾರದವರು ಮಾಡಿದ್ದಾರೆ. ತಾವು ಬಜೆಟ್ ಪುಸ್ತಕವನ್ನು ಓದುವಂಥ ಸಂದರ್ಭದಲ್ಲಿ ಸಹ ಮಾನ್ಯ ಮುಖ್ಯಮಂತ್ರಿಗಳು ಆದಂಥ ಶ್ರೀ ಹೆಚ್. ಡಿ. ದೇವೇಗೌಡರು ಸಹ ಆ ಸಂದರ್ಭದಲ್ಲಿ ವಾಗ್ದಾನ ಮಾಡಿದ್ದಾರೆ. ಹೀಗಿರುವಂಥ ಸಂದರ್ಭದಲ್ಲಿ ತಮ್ಮ ಸರ್ಕಾರದ ಕಾಲ ಬಹಳ ಕಡಿಮೆ ಇದೆ. ಸರ್ಕಾರದ ಮುಕ್ಕಾಲು ಪಾಲು ಆಯಸ್ಸು ಮುಗಿದೇ ಹೋಗಿದೆ. ಈ ಸರ್ಕಾರ ಆಡಳಿತಕ್ಕೆ ಬಂದು 2 ವರ್ಷದ 8 ತಿಂಗಳು ಮುಗಿದು ಹೋಗಿದೆ. ಉಳಿದಿರುವಂಥ ಕಾಲ ಕೇವಲ 2 ವರ್ಷ 2 ತಿಂಗಳು ಮಾತ್ರ. ಅದರಲ್ಲೂ ಸಾರ್ವಜನಿಕವಾಗಿ ಇಲ್ಲಿ ಇರುವಂಥ ಸದಸ್ಯರ ಮಂತ್ರಿಗಳ ಒಂದು ರಾಜಕೀಯ ಬೆಳವಣಿಗೆಗಳನ್ನು ನೋಡಿದಾಗ ಕಂದಾಯ ಮಂತ್ರಿಗಳು ಆಗಿರತಕ್ಕಂಥವರು ಮುಂದೆ ಕಂದಾಯ ಮಂತ್ರಿಗಳಾಗಿ ಉಳಿಯುತ್ತಾರೆಯೇ? ಹಾಗೆಯೇ ಅರಣ್ಯ ಮಂತ್ರಿಗಳಾಗಿರತಕ್ಕಂಥವರು ಅರಣ್ಯ ಮಂತ್ರಿಗಳಾಗಿ ಉಳಿಯಬಹುದೇ ಎನ್ನುವಂಥ ಅನುಮಾನ ನಮ್ಮಲ್ಲಿ ಉಂಟಾಗಿದೆ. ಆದ್ದರಿಂದ 2 ವರ್ಷದ...

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಆ ಚಿಂತೆ ಮಾನ್ಯ ಸಗೀರ್ ಅಹಮದ್‌ರವರಿಗೆ ಏಕೆ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಮಂತ್ರಿಗಳು ಚಿಂತನೆ ಮಾಡಬಾರದೆಂದು ಹೇಳಿದರೆ ನಾನು ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ. ಕಳೆದ 2 ವರ್ಷ 8 ತಿಂಗಳ ಅವಧಿಯಲ್ಲಿ ಈ ಒಂದು ವಾಗ್ದಾನ ಮಾಡುವಂಥ ವಿಚಾರದಲ್ಲಿ ತಮ್ಮ ಸರ್ಕಾರದ ನಿಲುವು ಏನು? ಅಕ್ರಮವಾಗಿ ಯಾರು ಜಮೀನು ಸಾಗುವಳಿ ಮಾಡಿದ್ದಾರೆ ಅದನ್ನು ಸಕ್ರಮಗೊಳಿಸಿರುವ ಬಗ್ಗೆ ಅವರ ಗಮನಕ್ಕೆ ತರುವಂಥ ಪ್ರಯತ್ನವನ್ನು 2 ವರ್ಷದ 8 ತಿಂಗಳಿನಲ್ಲಿ ತಾವು ಮಾಡಿದ್ದೀರಾ ಎಂಬುದನ್ನು ಸ್ಪಷ್ಟವಾಗಿ ಈ ಸದನದ ಮುಖಾಂತರ ಹೇಳಬೇಕು. ಅಕ್ರಮ ಸಾಗುವಳಿಯನ್ನು

ಸಕ್ರಮಗೊಳಿಸುವ ಬಗ್ಗೆ ಸರ್ಕಾರದ ನಿರ್ಣಯ ಏನು ಎನ್ನುವುದರ ಬಗ್ಗೆ ಇಲ್ಲಿಯವರೆಗೆ ಬಹಿರಂಗ ಪಡಿಸಿಲ್ಲ. ನೀವು ಈಗ ಸರ್ವೇಯರ್ ಮುಖಾಂತರ.....

ಅಧ್ಯಕ್ಷರು : ಇನ್ನೂ ಕೆಲವು ಮಾನ್ಯ ಸದಸ್ಯರುಗಳು ಮಾತನಾಡುವುದು ಇದೆ. ಕೆಲವರು ಈಗ ಊಟ ಮುಗಿಸಿಕೊಂಡು ಸದನಕ್ಕೆ ಬಂದರು. ಆದ್ದರಿಂದ ತಾವು ಬೇಗ ಮುಗಿಸಿದರೆ ಒಳ್ಳೆಯದು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿ ಬೇಗ ಮುಗಿಸಿಬಿಡುತ್ತೇನೆ. ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ವಿಚಾರದಲ್ಲಿ ಸರ್ಕಾರ ತುರ್ತಾದ ನಿರ್ಣಯವನ್ನು ಮಾಡಬೇಕಾಗುತ್ತದೆ. ಇದನ್ನು ಸರ್ಕಾರ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಕಾಫಿ ತೋಟದ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ ಅನೇಕ ಪತ್ರಿಕಾ ಹೇಳಿಕೆಗಳನ್ನು ಮಾನ್ಯ ಕಂದಾಯ ಮಂತ್ರಿಗಳು ಮಾಡಿರುವಂಥದ್ದು ನನ್ನ ಗಮನಕ್ಕೆ ಬಂದಿದೆ. ಅದು ಏನೆಂದರೆ 'ನಮ್ಮ ರಾಜ್ಯದಲ್ಲಿರುವಂಥ ನಾಲ್ಕು ವಿಭಾಗಗಳಲ್ಲಿ, ಆ ವಿಭಾಗಕ್ಕೆ ಸೇರಿರುವಂಥ ಉಪ ವಿಭಾಗಾಧಿಕಾರಿಗಳ ಸಮಕ್ಷಮದಲ್ಲಿ ಅಕ್ರಮವಾಗಿ ಮಾಡಿರುವಂಥ ಕಾಫಿ ತೋಟಗಳನ್ನು ಸಕ್ರಮಗೊಳಿಸುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವಂತೆ ನಾವು ವಿಭಾಗಾಧಿಕಾರಿಗಳಿಗೆ ಆದೇಶವನ್ನು ನೀಡಿದ್ದೇವೆ. ಎನ್ನುವ ಮಾತನ್ನು ಮಾನ್ಯ ಕಂದಾಯ ಮಂತ್ರಿಗಳು ಪತ್ರಿಕೆಗಳ ಮುಖಾಂತರ ಹೇಳಿದ್ದಾರೆ. ಆದರೆ ಆ ಹೇಳಿಕೆಯಲ್ಲಿನ ಸ್ಥಿತಿಗತಿಗಳ ಬಗ್ಗೆ ಏನು ಆಯಿತು ಎನ್ನುವುದರ ಬಗ್ಗೆ ಇವತ್ತಿನವರೆಗೆ ಮಾಹಿತಿ ಇಲ್ಲ. ಆದರೆ ಈ ಕೆಲಸ ನಡೆಯುತ್ತಿದೆಯೋ ಅಥವಾ ಸರ್ಕಾರ ಸರ್ವೇಯರುಗಳನ್ನು ನೇಮಿಸಿಬಿಟ್ಟು ಯಾವ ಯಾವ ಹೋಬಳಿಯಲ್ಲಿ, ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಜಮೀನುಗಳಲ್ಲಿ ಅಕ್ರಮವಾಗಿ ಕಾಫಿ ತೋಟಗಳಾಗಲಿ, ಅಡಿಕೆ ತೋಟಗಳಾಗಲಿ, ತೆಂಗಿನ ಅಥವಾ ಬಾಳೆ ತೋಟಗಳಾಗಲಿ ಮಾಡಿರುವಂಥದ್ದರ ಬಗ್ಗೆ ಮಾಹಿತಿ ಇದೆಯೇ? ಸರ್ಕಾರದಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲ. ಸರ್ಕಾರ ಸರ್ವೇ ಕಾರ್ಯದಲ್ಲಿ ಯಶಸ್ವಿಯಾಗದೆ ಸಂಪೂರ್ಣವಾಗಿ ವಿಫಲವಾಗಿದೆ. ಮಾನ್ಯ ಕಂದಾಯ ಮಂತ್ರಿಗಳು ಬಹಳ ಜಾಣರು ಇದ್ದರೂ ಸಹ ಇದರ ಬಗ್ಗೆ ಇಲ್ಲಿಯವರೆಗೆ ಆಲೋಚನೆ ಮಾಡದಿರುವುದಕ್ಕೆ ಕಾರಣವೇನೆಂದು ನನಗೆ ತಿಳಿದಿಲ್ಲ. ಆದ್ದರಿಂದ ಸರ್ಕಾರ ಇದರ ಬಗ್ಗೆ ತುರ್ತಾಗಿ ಗಮನಹರಿಸಿ ತಾವು ಮಾಡಿರುವಂಥ ವಾಗ್ದಾನವನ್ನು ಉಳಿಸಿಕೊಳ್ಳುವುದರ ಜೊತೆಗೆ ಈ ಕಾಫಿ ಬೆಳೆಗಾರರ ಮತ್ತು ಇತರೆ ಅಡಿಕೆ ಮತ್ತು ತೆಂಗಿನ ತೋಟದ ಬೆಳೆಗಾರರ ಹಿತವನ್ನು ಕಾಪಾಡಬೇಕು. ಇದಕ್ಕೆ ನಿಗದಿ ಪಡಿಸುವಂಥ ದರಗಳು ಏನೇ ಇರಲಿ ಅದರ ಬಗ್ಗೆ ಸಾರ್ವಜನಿಕವಾಗಿ ಹಾಗು ಈ ಬೆಳೆಗಾರರ ಮಾಹಿತಿಗಾಗಿ ಸರ್ಕಾರ ಮಾಹಿತಿಯನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಹೇಳುತ್ತೇನೆ.

5.10 ಪಿ. ಎಂ.

ಈ ದರಖಾಸ್ತಿನ ಒಂದು ಯೋಜನೆ ಕರ್ನಾಟಕ ರಾಜ್ಯ ಸರ್ಕಾರ ಬಹಳ ಹಿಂದೆ ಹಾಕಿಕೊಂಡಿದೆ. ನಾನು ತಮ್ಮ ಗಮನಕ್ಕೆ ತರುವಂಥದ್ದಾದರೆ, ಸರ್ಕಾರದವರು ಉದಾಹರಣೆಗೆ ನಾವು ಹೇಳುತ್ತಿದ್ದೇವೆ ಜನತಾದಳ ಸರ್ಕಾರ ಅಧಿಕಾರ ಇದ್ದಂಥ ಕಾಲದಲ್ಲಿ ಇವತ್ತು ದರಖಾಸ್ತು ಸಮಿತಿಗಳನ್ನು ತಾಲ್ಲೂಕುವಾರು

ರಚನೆ ಮಾಡಿ ರಚನೆ ಮಾಡಿದಂತಹ ಸಂದರ್ಭದಲ್ಲಿ ಪ್ರಾಯಶಃ ನನಗೆ ತಿಳಿದ ಹಾಗೆ ಮತ್ತು ಕಂದಾಯ ಮಂತ್ರಿಗಳಿಗೆ ತಿಳಿದಿರುವಂತೆ ಹಾಗೂ ಅನೇಕ ಶಾಸಕ ಮಿತ್ರರಿಗೆ ತಿಳಿದಂತಿರುವಂತೆ ನಾವು ವೇದಿಕೆಯ ಮುಖಾಂತರವಾಗಿ, ರಾಜಕೀಯವಾಗಿ ಬಡವರ ದೀನದಲಿತರ ವಿಚಾರಕ್ಕಾಗಿ ಅನೇಕ ವಿಚಾರಗಳನ್ನು ಮಾತನಾಡುತ್ತೇವೆ. ಇವತ್ತು ಪರಿಶಿಷ್ಟ ವರ್ಗಕ್ಕೆ ಸೇರಿದಂತಹ ಜನರ ಬಗ್ಗೆ ಮಾತನಾಡುತ್ತೇವೆ. ಇದೆಲ್ಲಾ ಇವತ್ತು ದಾಖಲಾತಿಗಳನ್ನು ಪರಿಶೀಲನೆ ಮಾಡಿ ನೋಡಿದಂತಹ ಸಂದರ್ಭದಲ್ಲಿ ಇದು ಕೇವಲ ಕಾಗದ ಪತ್ರಗಳಲ್ಲಿ ಉಳಿದಿದೆಯೇ ವಿನಃ ಅವರಿಗೆ ಅದರ ಲಾಭ ಪಡೆಯುವುದಕ್ಕೆ ಆಗಲಿ ಅವರ ಉದ್ಧಾರಕ್ಕಾಗಿ ಹಾಕಿಕೊಂಡಿರುವಂತಹ ಕಾರ್ಯಕ್ರಮಗಳು ಯಶಸ್ವಿಯಾಗಿಲ್ಲ. ಪ್ರಾಯಶಃ ನಮ್ಮ ತಾಲ್ಲೂಕಿನಲ್ಲಿ ಇಂತಹ ಪ್ರಕರಣಗಳು ಉಳಿದಿದೆ, ನಿಮ್ಮ ತಾಲ್ಲೂಕಿನಲ್ಲಿ ಉಳಿದಿರುವಂತಹ ಸಾಧ್ಯತೆಗಳಿವೆ. 1993ನೇ ಸಾಲಿನಲ್ಲಿ ದರಖಾಸ್ತು ಸಮಿತಿಯನ್ನು ರಚನೆ ಮಾಡಿದಂತಹ ಸಂದರ್ಭದಲ್ಲಿ ಅನೇಕ ಬಡಬಗ್ಗರ, ಪರಿಶಿಷ್ಟ ವರ್ಗದ ಪರಿಶಿಷ್ಟ ಪಂಗಡ ಜನರಿಗೆ ದರಖಾಸ್ತು ಮುಖಾಂತರ ಎರಡು ಎಕರೆ, ಮೂರು ಎಕರೆ ಭೂಮಿಯನ್ನು ಕೊಡಬೇಕೆಂದು ಹೇಳಿ ನಿರ್ಣಯವನ್ನು ಮಾಡಿದ್ದಾರೆ. ಆದರೆ ಅವರ ಸ್ವಾಧೀನದಲ್ಲಿ ಇವತ್ತಿನವರೆಗೆ ಜಮೀನು ಇದ್ದರೂ ಸಹ ಅವರಿಗೆ ಯಾವುದೇ ರೀತಿಯ ಪಹಣಿ ಪಟ್ಟಾ ಪುಸ್ತಕವಾಗಲಿ ಸಾಗುವಳಿಯ ಚೀಟಿಗಳಾಗಲಿ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಅವರು ಏನು 50ನೇ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕಾಗಿತ್ತೋ, ಅದನ್ನು ಸಲ್ಲಿಸಿಲ್ಲ ಆದರೆ ಜಮೀನು ಅವರ ಸ್ವಾಧೀನದಲ್ಲಿ ಇರುವುದರಿಂದ ದರಖಾಸ್ತುನಲ್ಲಿ ರಿಕಾರ್ಡ್ ಆಗಿದೆ ಎನ್ನುವ ಭಾವನೆಯಿಂದ ಅವರು 50ನೇ ಫಾರಂನಲ್ಲಿ ಅರ್ಜಿಯನ್ನು ಹಾಕದೇ ಇರುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡದ ಜನರು ಏನು ಅಕ್ರಮವಾಗಿ ಮಾಡಿರುವಂತಹ ಜಮೀನನ್ನು ಸಕ್ರಮ ಮಾಡಬೇಕೆಂದು ನಿರ್ಣಯವವನ್ನು ಮಾಡಿದರೋ ಆ ನಿರ್ಣಯಕ್ಕೆ ಇವತ್ತಿವರೆಗೆ ಸರ್ಕಾರದಿಂದ ಮಾನ್ಯತೆ ಸಿಗಲಿಲ್ಲ. ಆದುದರಿಂದ ಪರಿಶಿಷ್ಟ ವರ್ಗದವರ ಏಳಿಗೆಗಾಗಿ ದುಡಿಯುವಂತಹ ಯಾವುದೇ ರಾಜಕೀಯ ಪಕ್ಷದ ಯಾವುದೇ ಸದಸ್ಯರುಗಳು ಇರಲಿ, ಯಾವುದೇ ಸರ್ಕಾರ ಇರಲಿ ಕೇವಲ ವೇದಿಕೆಗಳಲ್ಲಿ, ಪತ್ರಿಕೆಗಳಲ್ಲಿ ಮಾತನಾಡುವಂತಹ ವಿಚಾರವನ್ನು ದಯವಿಟ್ಟು ಮಾಡಬೇಡಿ. ಆ ದೃಷ್ಟಿಯಲ್ಲಿ ಪರಿಶಿಷ್ಟ ವರ್ಗದ, ಪರಿಶಿಷ್ಟ ಪಂಗಡದ ಜಮೀನನ್ನು ಸಕ್ರಮಗೊಳಿಸುವಂತೆ ಸೂಕ್ತವಾದಂತಹ ಮಾರ್ಗದರ್ಶನವನ್ನು ತಾವು ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರ್‌ರವರಿಗೆ ಇದನ್ನು ವಹಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರವಾಗಿ ಸರ್ಕಾರವನ್ನು ಒತ್ತಾಯಮಾಡುತ್ತೇನೆ. ಇನ್ನು ಮುಖ್ಯವಾದಂತಹ ವಿಚಾರವೆಂದರೆ, ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸಣ್ಣ ರೈತರು ಅಕ್ರಮವಾಗಿ ಮಾಡಿರುವಂತಹ ಜಮೀನನ್ನು ಸಕ್ರಮಗೊಳಿಸುವಂತಹ ವಿಚಾರದಲ್ಲಿ ಬಹಳ ತೊಂದರೆ, ತಾಪತ್ರಯಗಳು ಬರುತ್ತಿರುವಂತಹ ವಿಚಾರವನ್ನು ಮೊನ್ನೆ ನಮ್ಮ ಕಾಗೋಡು ತಿಮ್ಮಪ್ಪಾಜಿಯವರು ಮತ್ತು ಇತರ ಸದಸ್ಯರುಗಳೂ ಕೂಡ ಮಾತನಾಡಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳು ಮತ್ತು ಅರಣ್ಯ ಮಂತ್ರಿಗಳು ಇರುವಂತಹ ಈ ಸಂದರ್ಭದಲ್ಲಿ ಅವರ ಸಮ್ಮುಖದಲ್ಲಿ ತರುವಂತಹ ವಿಚಾರವೆಂದರೆ, ಇವತ್ತು ಈ ಸಮಿತಿಯನ್ನು ಏನು ಆ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯನ್ನು

ಏನು ಮಾಡಿದ್ದೀರಿ, ಅನೇಕ ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್‌ನಲ್ಲಿ ರೈತರು ಹತ್ತಾರು ವರ್ಷಗಳಿಂದ ಜಮೀನನ್ನು ಸಾಗುವಳಿಯನ್ನು ಮಾಡಿಕೊಂಡು ಬರುತ್ತಿರುವಂತಹ ಸಂದರ್ಭದಲ್ಲಿ ಇವತ್ತು ಸಕ್ರಮಗೊಳಿಸಿ ಅವರಿಗೆ ಸಾಗುವಳಿ ಚೀಟಿಯನ್ನು ವಿತರಣೆಯನ್ನು ಮಾಡುವಂತಹ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಅದಕ್ಕೆ ಅಡ್ಡಿಯನ್ನು ಪಡಿಸುತ್ತಿದ್ದಾರೆ. ಅವರು ನೇರವಾಗಿ ಇಂತಹ ಜಮೀನನ್ನು ಸಕ್ರಮಗೊಳಿಸಲು ಸಾಧ್ಯವಾಗುವುದಿಲ್ಲ ಸಮಿತಿಯವರು ಮಾಡಿರುವಂತಹ ನಿರ್ಣಯ ತಪ್ಪಾಗಿದೆ ಆದುದರಿಂದ ನಾವು ಇದಕ್ಕೆ ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಒಂದು ಹಿಂಬರಹವನ್ನು ನೇರ ತಹಶೀಲ್ದಾರ್‌ರವರ ಕಛೇರಿಗೆ ಬರೆದಿರುವಂಥದ್ದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅರಣ್ಯ ಇಲಖೆಯವರು ಅಡ್ಡಿಯನ್ನು ಪಡಿಸುತ್ತಿದ್ದಾರೆಂದು ಹೇಳುತ್ತಿರುವುದು ನಿಜ. ಏಕೆಂದರೆ 17,000 ಹೆಕ್ಟೇರ್‌ಗಳನ್ನು ನಾವು 1978ರಲ್ಲಿ ಯಾರು ಕಾಬೀಜ್ ಇದ್ದರು ಅಂಥದ್ದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರಲ್ಲಿ 14,000 ಹೆಕ್ಟೇರ್ ಮಂಜೂರಾಗಿ ಬಂದಿದೆ ಅದನ್ನು ವಿತರಣೆ ಮಾಡುತ್ತಿದ್ದೇವೆ. ಯಾವುದು ಬೇರೆ ಜಮೀನು ಅನಾವಶ್ಯಕವಾಗಿ ಕೊಟ್ಟಿದ್ದೇವೆ ಅಂಥದ್ದನ್ನು ಖಾಲಿ ಮಾಡಿಸುತ್ತಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಕಳೆದ ಒಂದು ವರ್ಷದಿಂದ 14,000 ಹೆಕ್ಟೇರ್ ಮಂಜೂರಾಗಿ ಬಂದಿದೆ ಎಂದು ಹೇಳುತ್ತಿದ್ದೀರಿ ಅರಣ್ಯ ಜಮೀನಿನ ಪಟ್ಟಾವನ್ನು ಯಾವಾಗ ವಿತರಣೆ ಮಾಡುತ್ತೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ.

ಅಧ್ಯಕ್ಷರು : ಮಾನ್ಯ ಅರಗ ಜ್ಞಾನೇಂದ್ರರವರೇ, ನಿಮಗೆ ಗೊತ್ತಿದೆ ಸಮಿತಿಗಳು ಬಂದ ಮೇಲೆ ಅನೇಕ ಕಡೆ ಕೆಲವರು, ಇದ್ದ ಕಾಡನೆಲ್ಲಾ ತೆಗೆದು ಹೊಸದಾಗಿ ಜಮೀನೆಲ್ಲಾ ರೆಡಿಮಾಡಿಕೊಂಡು ಆಂಟಿಡೇಟೆಡ್ ಅಪ್ಲಿಕೇಷನ್ ಎಲ್ಲಾ ರೆಡಿಮಾಡಿಕೊಂಡು ಕಮಿಟಿಯ ಮುಂದೆ ಬಂದಿದ್ದಾರೆ. ಇದು ಹೌದೋ ಅಲ್ಲವೋ ಆ ರೀತಿಯಾಗುತ್ತಿದೆ ಅಲ್ಲವೇ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಅದನ್ನು ಇಲಾಖೆಯವರು ನಿರ್ಬಂಧಪಡಿಸಬೇಕು. ಊರಿನ ಹತ್ತಿರ ಮೊದಲು ಕಾಡನ್ನು ಬೆಳೆಸಿ ಅದನ್ನು ಮುಗಿಸಿಬಿಟ್ಟಿದ್ದರೆ ಸರಿಯಾಗುತ್ತಿತ್ತು ಆದರೆ ಅದನ್ನು ಏನೂ ಮಾಡಲಿಲ್ಲ. ಖುಲ್ಲಾ ಬಿಟ್ಟುಬಿಟ್ಟಿದ್ದಾರೆ. ಅರಣ್ಯ ಅಧಿಕಾರಿಗಳೂ ಕೂಡ ಬಂದು ನೋಡುತ್ತಿಲ್ಲ. ಆದರೆ ಉಳಿದಂಥವರಿಗೆ ಪಟ್ಟಾ ವಿತರಣೆಯನ್ನು ಮಾಡಿ ಬಂದೋಬಸ್ತು ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಲ್ಲಿ ಅಲ್ಲಿಯೇ ಇದ್ದಂತಹ, ಕಾಡನ್ನು ತೆಗೆದು ಜಮೀನು ಮಾಡಿಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರು ಹೇಳಿದ್ದುದು ಬಹಳ ಸತ್ಯವಾದಂತಹ ಮಾತು. ಆ ರೀತಿಯಾಗಿದೆ.

ಡಾ॥ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡದಲ್ಲಿ ಕಾಲು ಇಟ್ಟರೆ ರಿಸರ್ವ್ ಫಾರೆಸ್ಟ್ Even a minor forest which does not have even gross, that is also reserve forest. ಅಂಥದ್ದನ್ನು ಏನು ಮಾಡಬೇಕು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, 80 ಪರ್ಸೆಂಟ್ ಫಾರೆಸ್ಟ್ ಇದ್ದದನ್ನು ಈಗ 60 ಪರ್ಸೆಂಟ್‌ಗೆ ತಂದಿದ್ದೇವೆ. ಎಲ್ಲಾ ಹೊಡೆದು ಹೊಡೆದು ಆ ರೀತಿಯಾಗಿ ಮಾಡಿದ್ದೇವೆ.

ಶ್ರೀ ಕುಂಬ್ಳೆ ಸುದರರಾವ್ : ಮಾನ್ಯ ಅಧ್ಯಕ್ಷರೇ, ಆ ರೀತಿಯಾಗಿ ಅರಣ್ಯ ಇಲಾಖೆಯ ಸಿಬ್ಬಂದಿಯವರ ಕೃಪಾಕಟಾಕ್ಷದಿಂದ ಆಗಿರುವಂಥದ್ದು. ತನ್ನಷ್ಟಕ್ಕೆ ಅದು ಆಗಲಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆ ಕೃಪಾಕಟಾಕ್ಷವನ್ನು ತೆಗೆಯುತ್ತಿದ್ದೇವೆ. ಯಾರ್ಯಾರು ಒತ್ತುವರಿಯನ್ನು ಮಾಡಿದ್ದಾರೆ ಎಲ್ಲವನ್ನೂ ಖಾಲಿ ಮಾಡಿಸುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ ಕೋಲಾರ ತಾಲ್ಲೂಕಿನಲ್ಲೂ ಹರಟೆ ಎಂಬ ಗ್ರಾಮದಲ್ಲಿ ಫಾರೆಸ್ಟ್ ಲ್ಯಾಂಡ್‌ಇದೆ. ಅದರಲ್ಲಿ 10 ಎಕರೆ ಜಮೀನನ್ನು ಅಲ್ಲಿ ವಿಲೇಜ್ ಅಕೌಂಟೆಂಟ್ ನೇರವಾಗಿ ಒಬ್ಬ ಖಾಸಗಿಯವರಿಗೆ ಪಹಣಿಯನ್ನು ಬರೆದು ಖಾತೆಯನ್ನು ಎಲ್ಲಾ ಚೇಂಜ್ ಮಾಡಿದ್ದಾನೆ. ಹೀಗೆ ಫಾರೆಸ್ಟ್ ಲ್ಯಾಂಡ್‌ನ್ನು ರಾತ್ರೋ ರಾತ್ರೆ ಹಗಲು ದರೋಡೆಯನ್ನು ಮಾಡುತ್ತಿದ್ದಾರೆ. ಇದನ್ನು ಕಟ್ಟು ನಿಟ್ಟಾಗಿ ನೋಡದೇ ಹೋದರೆ ಮುಂದಿನ ಪೀಳಿಗೆಯವರಿಗೆ ಮರಗಳನ್ನು ಚಿತ್ರದಲ್ಲಿ ತೋರಿಸಬೇಕಾಗುತ್ತದೆ. ಅಷ್ಟೇ ಇವತ್ತು ನನ್ನ ಕ್ಷೇತ್ರದಲ್ಲಿ ಅನ್ಯಾಯವಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಬರೆದೆ, ಅಸಿಸ್ಟೆಂಟ್ ಕಮೀಷನರ್‌ಗೆ ಬರೆದೆ ಯಾವುದೂ ಪ್ರಯೋಜನವಾಗಲಿಲ್ಲ. ನಿಮ್ಮ ಅರಣ್ಯ ಇಲಾಖೆಯವರು ಅದಕ್ಕೆ ಗಮನವನ್ನೇ ಕೊಡುತ್ತಿಲ್ಲ. ಬರೀ ವೀರಪ್ಪನ್ ಮಾತ್ರ ಕಳ್ಳ ಅಲ್ಲ. ನಿಮ್ಮ ಅರಣ್ಯ ಇಲಾಖೆಯವರೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆಂದು ನೇರವಾಗಿ ಹೇಳುವುದಕ್ಕೆ ಇಚ್ಛೆಯನ್ನು ಪಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀನಿವಾಸಗೌಡರು ಹೇಳಿರುವಂಥದ್ದು ಸುಳ್ಳು ಎಂದು ಹೇಳುವುದಿಲ್ಲ. ಇಲಾಖೆಯಲ್ಲಿ ಒಳ್ಳೆಯವರು ಇದ್ದಾರೆ ಕೆಟ್ಟವರೂ ಸಹ ಇದ್ದಾರೆ. ಎಲ್ಲರೂ ಸಹ ಒಳ್ಳೆಯವರು, ಎಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲ. ಆದರೂ ಕೂಡ ಯಾವ ರೀತಿಯಲ್ಲಿ ಅದರಲ್ಲಿ ಕಟ್ಟು ನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು ತೆಗೆದುಕೊಳ್ಳುತ್ತಿದ್ದೇವೆ. ಯಾರ್ಯಾರು ಒತ್ತುವರಿಯನ್ನು ಮಾಡಿದ್ದಾರೆ ಅಂತಹ ಒತ್ತುವರಿಯನ್ನು ಎಂದಿಗೂ ಸಹ ಬಿಡುವುದಿಲ್ಲ. ಅಂಥದ್ದನ್ನು ತೆಗೆದುಕೊಳ್ಳುತ್ತೇವೆ. ಹಿಂದೆ ನಮ್ಮ ರೆವಿನ್ಯೂ ಇನ್‌ಸ್ಪೆಕ್ಟರುಗಳು ಅರಣ್ಯಕ್ಕೆ ಎಂದು ಏನು ಡಿಕ್ಲೇರ್ಡ್ ಆಗಿದೆ ಅಂಥದ್ದನ್ನು ಹಂಚಿಬಿಟ್ಟಿದ್ದಾರೆ. ಇಂತಹ ಬೇಕಾದಷ್ಟು ವ್ಯಾಜ್ಯಗಳಿವೆ ಅವುಗಳನ್ನು ಬಗೆಹರಿಸಬೇಕಾಗಿದೆ, ಬಗೆಹರಿಸುತ್ತೇವೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ತಾವು ಒಂದು ವಿಚಾರವನ್ನು ಹೇಳಿದ್ದೀರಿ, ನಾನು ಅರಣ್ಯ ಮಂತ್ರಿಯವರ ವಾದವನ್ನು ಖಂಡಿತವಾಗಿಯೂ ಒಪ್ಪುವುದಿಲ್ಲ. ಕಾರಣ ಏನೆಂದರೆ 30.7.1997ಕ್ಕೆ ಅರ್ಜಿಯನ್ನು ಹಾಕುವುದಕ್ಕೆ ಕೊನೆಯ ದಿನಾಂಕವನ್ನು ಸರ್ಕಾರದವರು ನಿಗದಿಪಡಿಸಿದ್ದರು. ಅನಂತರ ಅದಕ್ಕೆ ಏನಾದರೂ ಅವಕಾಶವನ್ನು ಕೊಡುತ್ತೀರಾ ಎನ್ನುವುದರ ಬಗ್ಗೆ ಹತ್ತಾರು ಬಾರಿ ಇದೇ ಸದನದಲ್ಲಿ ಚರ್ಚೆಯಾಗಿದೆ. ಆದರೆ ಅದಕ್ಕೆ ಸರ್ಕಾರ ಒಪ್ಪಿಗೆಯನ್ನು ನೀಡಲಿಲ್ಲ. ಫ್ಲಡ್‌ಗೇಟ್ ಓಪನ್ ಮಾಡಿದಂತೆ ಆಗುತ್ತದೆ. ಅದರ ಬಗ್ಗೆ ಸರ್ಕಾರ ಪರಿಶೀಲನೆಯನ್ನು ಮಾಡುತ್ತದೆಂದು

ಹೇಳಿದರೆ ವಿನಹ ಅಕ್ರಮವಾಗಿ ಸಾಗುವಳಿಯನ್ನು ಮಾಡಿರುವಂತಹ ಯಾವುದೇ ರೈತನು 1991ನೇ ಇಸವಿಯ ನಂತರ ಅರ್ಜಿಯನ್ನು ಹಾಕುವಂತಹ ಅವಕಾಶವೇ ಇಲ್ಲ. ನಾನು ಈಗ ಹೇಳುವುದೇನೆಂದರೆ ಸಾಗುವಳಿಯನ್ನು ಮಾಡಿರುವಂತಹ ಜಾಗವು ಅದು ಅರಣ್ಯ ಇಲಾಖೆಗೆ ಸೇರದೇ ಇರಲಿ, ಕಂದಾಯ ಇಲಾಖೆಗೆ ಸೇರಿರುವಂಥದ್ದು ಇರಲಿ...

ಅಧ್ಯಕ್ಷರು : ಈಗ ಹಿಂದೆ ನೀವು ಮಂತ್ರಿಗಳಾಗಿದ್ದವರು. ನಮ್ಮ ರಾಜ್ಯದಲ್ಲಿ ಸರಾಸರಿ ಅರಣ್ಯ ಪ್ರದೇಶ ಎಷ್ಟು ಇರಬೇಕು?

ಶ್ರೀ ಸಿ. ಆರ್. ಸಗೀರ್ ಅಹಮದ್ : 33 ಪರ್ಸೆಂಟೋ, 31 ಪರ್ಸೆಂಟೋ

ಅಧ್ಯಕ್ಷರು : ಎಷ್ಟು ಇರಬೇಕು? ಎಷ್ಟು ಇದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, 33 ಪರ್ಸೆಂಟ್ ಇರಬೇಕು, ದಟ್ಟವಾಗಿ ಇರುವುದು 13,14 ಪರ್ಸೆಂಟ್ ಬರುತ್ತದೆ. ಸರಾಸರಿ 20 ಪರ್ಸೆಂಟ್ ಇದೆ.

ಅಧ್ಯಕ್ಷರು : ಆಕ್ಚುಯಲಿ 8 ಪರ್ಸೆಂಟ್ ಇದೆ. ಅದನ್ನು ನಿಮ್ಮ ಇಲಾಖೆಯವರು ಬರೆದುಕೊಟ್ಟಿರುವಂಥದ್ದು ಬೇಕಾದರೆ ಬನ್ನಿ ತೋರಿಸುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಅರಣ್ಯ ಮಂತ್ರಿಗಳು ಈ ಖಾತೆಯನ್ನು ಇಟ್ಟುಕೊಂಡಮೇಲೆ 20 ಪರ್ಸೆಂಟ್ ಆಗಿರಬೇಕು.

ಶ್ರೀ ಅರಗಜ್ಞಾನೇಂದ್ರ : ಅಧ್ಯಕ್ಷರೇ, ಕೃತಕ ಕಾಡು ಸೇರಿ ಆಗಬಹುದೇನೋ.

ಅಧ್ಯಕ್ಷರು : ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರೇ, ಗಿಡಗಳು ಬೇರೆ, ಪೊದೆಗಳು ಬೇರೆ, ವೃಕ್ಷಗಳು ಬೇರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಸುಡುಗಾಡು ಕಾಡೇ? ಅದು ಸೇರಿದರೆ ಅದು ಸೇರಿದರೆ 20 ಪರ್ಸೆಂಟ್ ಆಗಬಹುದು.

ಅಧ್ಯಕ್ಷರು : ಅವುಗಳನ್ನೆಲ್ಲವನ್ನೂ ಸೇರಿಸಿದರೆ 20 ಪರ್ಸೆಂಟ್ ಆಗಬಹುದು. ನಾನು ನಿಮಗೆ ಏಕೆ ಪ್ರಶ್ನೆಯನ್ನು ಕೇಳಿದೆ ಎಂದರೆ ಇರುವಂತಹ ಕಾಡೇ ಕಡಿಮೆಯಾಗಿದೆ ಮತ್ತೆ ಅದನ್ನು ಬಿಟ್ಟು ಕೊಡಿ ಎಂದರೆ, ಎಲ್ಲವನ್ನೂ ಬಿಟ್ಟು ಕೊಟ್ಟು ಏನು ಮಾಡುತ್ತೀರಿ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ತಾವು ಹೇಳುವಂತಹ ವಿಚಾರದಲ್ಲಿ ನಮ್ಮದು ಏನೂ ವಾದ ಇಲ್ಲ. ನಾನು ತಮ್ಮ ಮುಖಾಂತರ ಕಂದಾಯ ಮಂತ್ರಿಗಳಿಗೆ ಮತ್ತು ಅರಣ್ಯ ಮಂತ್ರಿಗಳಿಗೆ ಎಂದರೆ ಹತ್ತಾರು ವರ್ಷಗಳಿಂದ ಅಲ್ಲಿ ಯಾವುದೇ ಮರಗಳು ಇಲ್ಲದೇ ಇರತಕ್ಕಂತಹ ಜಾಗದಲ್ಲಿ ಸಾಗುವಳಿಯನ್ನು ಮಾಡಿರತಕ್ಕಂತಹ ಜಮೀನು ಯಾವಾಗ ಕಂದಾಯ ಇಲಾಖೆಯಿಂದ

ಅರಣ್ಯ ಇಲಾಖೆಗೆ ವರ್ಗಾವಣೆಯನ್ನು ಮಾಡಿದರೋ ಆ ಜಾಗವನ್ನು ನಮ್ಮ ಇಲಾಖೆಗೆ ಸೇರಿರುವಂಥದ್ದು ಎಂದು ಅರಣ್ಯ ಇಲಾಖೆಯವರು ಹೇಳುತ್ತಾರೆ. ತಾವು ಬೇಕಾದರೆ ಇವತ್ತು ಹೋಗಿ ವೀಕ್ಷಣೆಯನ್ನು ಮಾಡಬಹುದು. ಅಲ್ಲಿ ಒಂದು ಮರಗಳೂ ಸಹ ಇರುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹಾಲಿ ಇದ್ದ ಕಾಡನ್ನೆಲ್ಲಾ ತೆಗೆದುಹಾಕಿದ್ದಾರೆ. ಅಂಥದ್ದಕ್ಕೆ ಏನು ಮಾಡುತ್ತೀರಿ? ಬಹಳ ಕಡೆ ಕಾಡು ಇದ್ದುದ್ದನ್ನೆಲ್ಲಾ ತೆಗೆದು ತೋಟ ಮಾಡುವುದಕ್ಕೆ ಸಿದ್ಧ ಮಾಡಿಕೊಂಡಿದ್ದಾರೆ. 1978ಕ್ಕೆ ಮೊದಲು ಮರಗಳು ಇದ್ದವು ಎಂದು ಹೇಳುತ್ತಿದ್ದಾರೆ. ಆದರೆ ಅದಕ್ಕೆ ರೆಕಾರ್ಡ್ ಇಲ್ಲ. ಅಂಥದ್ದಕ್ಕೆ ಏನು ಮಾಡಬೇಕು? ಎಲ್ಲಿ ಹೋಗಿ ಮುಟ್ಟಬೇಕು? ಹೀಗೆ ಮರಗಳನ್ನು ಕಡಿಯುತ್ತಾ ಹೋದರೆ ಮುಂದೆ 5-10 ಪರ್ಸೆಂಟ್ ಕೂಡ ಮರಗಳು ಇರುವುದಿಲ್ಲ.

ಅಧ್ಯಕ್ಷರು : ನಿಮ್ಮ ಚಿಕ್ಕಮಗಳೂರು ಮತ್ತು ಶಿವಮೊಗ್ಗದಲ್ಲಿ ಏಪ್ರಿಲ್-ಮೇ ತಿಂಗಳಲ್ಲಿ ಉಷ್ಣಾಂಶ ಎಷ್ಟಿತ್ತು?

ಶ್ರೀ ಸಿ. ಆರ್. ಸಗೀರ್ ಅಹಮದ್ : 38-40 ಡಿಗ್ರಿಯವರೆಗೆ ಹೋಗುತ್ತದೆ.

ಅಧ್ಯಕ್ಷರು : ಇಲ್ಲ, 38-39 ಬಳ್ಳಾರಿಯಿಂದ ಆಚೆಗೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕಾಡು ಎಂಬ ಸ್ವರೂಪ ಇಲ್ಲದೇ ಇರುವ ಕೋಲಾರದಲ್ಲಿ 32-33 ಡಿಗ್ರಿ ಉಷ್ಣಾಂಶ ಇರುತ್ತದೆ. ನಿಮ್ಮಲ್ಲೂ ಅಷ್ಟೇ ಆಗಿದೆ. ನಮ್ಮ ಹಾಗೆ ಆಗಬೇಕು ನೀವು?

ಶ್ರೀ ಸಿ. ಆರ್. ಸಗೀರ್ ಅಹಮದ್ : ನಿಮ್ಮ ಹಾಗೆ ಆಗುವ ಪ್ರಶ್ನೆಯ ಬಗ್ಗೆ ಶ್ರೀನಿವಾಸ್ ಅವರು ಆಗಲೇ ಮಾತನಾಡುತ್ತಿದ್ದರು. ನಮ್ಮಲ್ಲಿ ಇರುವಷ್ಟು ಕಾಡು ಇಡೀ ರಾಜ್ಯದಲ್ಲಿ ಬೇರೆ ಎಲ್ಲಿಯೂ ಇಲ್ಲ. ಕೆಲವು ಭಾಗ....

ಅಧ್ಯಕ್ಷರು : ಕಡಿಯುವುದಕ್ಕೆ ಆಗದೆ ಇರುವ ಕೆಲವು ಭಾಗ ಉಳಿದಿದೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಭದ್ರ ಅಭಯಾರಣ್ಯ ಎಂದು ಏನು ಹೇಳುತ್ತೇವೆ ಅದು ಬಹಳ ದಟ್ಟವಾದ ಅರಣ್ಯ. ಅಲ್ಲಿರತಕ್ಕ ಮರಗಳು ಬೇರೆ ಎಲ್ಲಿಯೂ ಇಲ್ಲ. ನಾನು ದಾಂಡೇಲಿಗೆ ಹೋಗಿದ್ದೇನೆ. ಅಲ್ಲಿ ಹೋದರೂ ಅಂತಹ ಮರಗಳನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ. ನಂತರ ನಿಮ್ಮ ಮೈಸೂರು ಹತ್ತಿರ ಇರುವ ಬಂಡೀಪುರಕ್ಕೆ ಹೋಗಿದ್ದೇನೆ; ನಾಗರಹೊಳೆಗೆ ಹೋಗಿದ್ದೇನೆ. ಅಲ್ಲೆಲ್ಲೂ ಕೂಡ ಅಂಥ ಮರಗಳನ್ನು ನೋಡುವುದಕ್ಕೆ ಸಿಗಲಿಲ್ಲ. ಆದರೆ ಇಷ್ಟು ದಟ್ಟವಾದ ಅರಣ್ಯ ಚಿಕ್ಕಮಗಳೂರಿನ ಕೆಲವು ಭಾಗ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆ ಇಲ್ಲೆಲ್ಲಾ ಬಹಳ ಉತ್ತಮವಾದ ಅರಣ್ಯ ಇದೆ. ಇದರಲ್ಲಿ ನಾವು ಯಾವುದೇ ತರಹ ಅಕ್ರಮ ಮಾಡಿ ಕಾಫಿ...

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಒಂದು ಮರ 50 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಅದು 300 ವರ್ಷದ ಮರ. ಕೆಲವು ಮರಗಳು ಬಹಳ ಚೆನ್ನಾಗಿವೆ. ನಾನು ಕರ್ನಾಟಕದ ಎಲ್ಲಾ ಕಡೆ ಹೋಗಿ ನೋಡಿ ಬಂದಿದ್ದೇನೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ನಮ್ಮಲ್ಲಿ ಬಹಳಷ್ಟು ಗುಡ್ಡಗಾಡುಗಳು ಇವೆ. ಇಡೀ ರಾಜ್ಯದಲ್ಲಿ ಗುಡ್ಡಗಾಡು ಖಾಲಿ ಇವೆ. ಅದರಲ್ಲಿ ಅರಣ್ಯ ಬೆಳಸತಕ್ಕ ಪ್ರಯತ್ನ ಮಾಡಿ. ಇಷ್ಟಾದರೂ ಮಾಡಿ ಎಂದು ಬೆಳಿಗ್ಗೆ ಹೇಳಿದೆ. ಯಾರು ಯಾರು ಸಾಯುತ್ತಾರೆ, ಅವರನ್ನು ರುದ್ರಭೂಮಿಗೆ ಹಾಕುತ್ತಾರೆ ಅವರ ಹೆಸರಿನಲ್ಲಿ ಒಂದು ಗಿಡ ನೆಡಿಸಿ ಎಂದು ಹೇಳೋಣವೆಂದು ಇದೆ ಇದರ ಬಗ್ಗೆ ವಿಚಾರ ಮಾಡಿ. ಎರಡರಲ್ಲಿ ಒಂದಾದರೂ ಮಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕಡ್ಡಾಯವಾಗಿ ಒಂದು ಎಕರೆಯಾದರೂ ಮಾಡಬೇಕೆಂದು ಸರ್ಕಾರದ ಯೋಜನೆ ಇದೆ.

ಶ್ರೀ ಎಂ. ಪಿ. ಪ್ರಕಾಶ್ : ಈ ವಿಚಾರದಲ್ಲಿ ಹೈದರಾಲಿ, ಟಿಪ್ಪುಸುಲ್ತಾನ್ ಬಹಳ ಮುಖ್ಯವಾದ ಕ್ರಮ ಕೈಗೊಂಡಿದ್ದರು. ಯಾರಿಗಾದರೂ ಜೀವನ್ಮರಣದ ಶಿಕ್ಷೆ ಏನಾದರು ಕೊಟ್ಟಿದ್ದರೆ ಅವರು 3 ಮಾವಿನ ಮರಗಳನ್ನು, 3 ಹಲಸಿನ ಮರಗಳನ್ನು ಮೂರು ವರ್ಷಗಳ ಕಾಲ ಸಾಕಿದರೆ ಅವರನ್ನು ಶಿಕ್ಷೆಯಿಂದ ಸಂಪೂರ್ಣವಾಗಿ ಬಿಡುಗಡೆ ಮಾಡುತ್ತೇವೆಂದು ಆಜ್ಞೆ ಮಾಡಿದ್ದರು. ಅಂಥ ಆಜ್ಞೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ನೋಡಬಹುದು. ಅವರಿಗಿದ್ದ ಪ್ರಗತಿಪರ ದೃಷ್ಟಿ.....

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ನಮ್ಮಲ್ಲಿ 6 ಸಾವಿರ ಪಂಚಾಯಿತಿಗಳು ಇವೆ. ಅವುಗಳಿಗೆ ಪ್ರತಿ ವರ್ಷ 10 ಸಾವಿರ ಗಿಡ ಕೊಟ್ಟು ನೆಡಿಸುವ ಕೆಲಸ ಮಾಡಿದರೂ 60 ಕೋಟಿ ಗಿಡಗಳನ್ನು ನೆಡಿಸಬಹುದು. ಇದನ್ನು ಮಾಡಿ. ಇದನ್ನು ಏತಕ್ಕೆ ನೀವು ಮಾಡುವುದಿಲ್ಲ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಶಾಲೆಯಲ್ಲಿ ಹುಡುಗರು ಇದ್ದಾರೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಶಾಲೆಯಲ್ಲಿ ಬೇಡ, 6 ಸಾವಿರ ಪಂಚಾಯಿತಿಗಳೇನಿವೆ ಅವುಗಳಿಗೆ ಈ ಕೆಲಸ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರಿ ಜಮೀನಿನಲ್ಲಿ ಎತ್ತುಗಳನ್ನು ಬಿಟ್ಟ ಹಾಗೆ ಆಯಿತು.

ಶ್ರೀ ಎಸ್. ಎಸ್. ಪಾಟೀಲ್ : ನಮ್ಮ ಕಡೆ ರೈತ ಸಂಘದವರು ನಮ್ಮದೇ ಸರ್ಕಾರ ಎಂದು ಅರಣ್ಯ ಜಮೀನಿಗೆ ಪಟ್ಟಾ ಕೊಟ್ಟರು. ಅದರಲ್ಲಿದ್ದ ಗಿಡಗಳನ್ನೆಲ್ಲಾ ಕಡಿದರು. ಇದು ರೈತ ಸಂಘದವರು ಮಾಡಿದ ಕೆಲಸ. ಇದು ನಮ್ಮ ಕಡೆ ನಡೆದಂಥ ಘಟನೆ.

ಅಧ್ಯಕ್ಷರು : ನಿಮ್ಮ ಊರಿನ ರೈತರು ಹಾಗೆ ಇರಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಪುಟ್ಟಣ್ಣಯ್ಯನವರು ಬೇಡ, ಅವರು ಪ್ರೋಗ್ರೆಸೀವ್ ಇದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನನ್ನ ಮೇಲೆ ಆಪಾದನೆ ಮಾಡಿರುವುದರಿಂದ ಹೇಳಬೇಕಾಗಿದೆ. ಕಾಡನ್ನು ಬೆಳಸತಕ್ಕದ್ದರಲ್ಲಿ ನಿಮ್ಮ ಅರಣ್ಯ ಇಲಾಖೆಯವರು ಏನು ಮಾಡುತ್ತಾರೆ? ಮೈದಾನ ಜಾಗ ಹುಡುಕುತ್ತಾರೆ. ಕಾಡನ್ನು ಬೆಳಸತಕ್ಕದ್ದರಲ್ಲಿ ಅರಣ್ಯ ಇಲಾಖೆಯವರು ಏನು ಮಾಡುತ್ತಾರೆಂದರೆ, ಮೈದಾನಗಳನ್ನು ಮಾತ್ರ ಹುಡುಕುತ್ತಾರೆ. ಗುಡ್ಡ-ಬೆಟ್ಟ ಈ ಪ್ರದೇಶಗಳನ್ನು ಹುಡುಕುವುದಿಲ್ಲ. ನಾನು

ಆಂಧ್ರದ ಬಾರ್ಡರ್‌ನಲ್ಲಿದ್ದೇನೆ. ಆಂಧ್ರಕ್ಕೆ ಹೋಗುವಾಗ ನಾನು ನೋಡಿದ್ದೇನೆ, ಅಲ್ಲಿ ಗುಡ್ಡಗಳಲ್ಲಿ ಬಹಳ ಸುಂದರವಾದ ಅರಣ್ಯವನ್ನು ಮಾಡುತ್ತಿದ್ದಾರೆ. ಅಂಥ ಕಡೆ ಅರಣ್ಯ ಮಾಡುವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಅವರಿಗೆ ಸುಲಭವಾಗಿ ಫೆನ್ಸ್ ಹಾಕಬೇಕು. ನೀವು 2.50 ಪೈಸೆ ಕೊಡುತ್ತೀರಿ ಎಂದು ಫೆನ್ಸಿಗೆ. ಅವರಿಗೆ 50 ಪೈಸೆಯಲ್ಲಿ ಆಗಬೇಕು. ಅಂಥ ಜಾಗ ಹುಡುಕಿ ಫೆನ್ಸ್ ಹೊಡೆದು ಫಾರೆಸ್ಟ್ ಮಾಡುತ್ತಾರೆ. ಅದರ ಬದಲು ಗುಡ್ಡ-ಬೆಟ್ಟ ಇರುವ ಕಡೆ ಹೋಗಿ ಕಾಡು ಬೆಳಸಿದರೆ ಎರಡು ರೀತಿಯಲ್ಲಿ ಉಪಯೋಗವಾಗುತ್ತದೆ. ಪರಿಸರ ಶುದ್ಧವಾಗುತ್ತದೆ ಮಳೆ ಬರುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿ ಅಷ್ಟು ಸುಲಭವಾಗಿ ಕಾಡನ್ನು ಕಡಿಯುವುದಕ್ಕಾಗುವುದಿಲ್ಲ. ಅದೇ ಮೈದಾನದಲ್ಲಿ ಬೇಗ ಕಡಿಯುತ್ತಾರೆ. ಆ ರೀತಿ ವ್ಯವಸ್ಥೆ ಮಾಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ರೈತಸಂಘ ಎಂದು ಆಪಾದನೆ ಮಾಡಿದ್ದೀರಿ. ರೈತಸಂಘದವರು ಕಾಡು ಕಡಿದು ಎಲ್ಲರಿಗೆ ನಿಮ್ಮ ನಿಮ್ಮಲ್ಲೇ ಪಟ್ಟಾ ಕೊಟ್ಟು ನೀವೇ ಭೂಮಿ ಉಳಿಸತಕ್ಕ ಕೆಲಸ ಮಾಡಿದ್ದೀರೆಂದು ಹೇಳಿ ಆಪಾದನೆ ಮಾಡಿದ್ದಾರೆ. ಅದಕ್ಕೆ ಉತ್ತರ ಕೊಡುವುದು ಬೇಡವೇ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅರಣ್ಯ ಮಂತ್ರಿಗಳಿಗೆ ಹೇಳುತ್ತೇನೆ; ತಮ್ಮ ಜಿಲ್ಲೆಯಲ್ಲಿ ಸಹ ಮಳೆಯ ಅಭಾವ, ಕುಡಿಯುವ ನೀರಿನ ಅಭಾವ ಇರತಕ್ಕದ್ದು ತಮಗೆ ಗೊತ್ತಿದೆ; ಇವತ್ತು ಈ ರಾಜ್ಯದಲ್ಲಿ ಶೇಕಡ ಎಷ್ಟು ಅರಣ್ಯ ಇರಬೇಕೆಂಬುದರ ಬಗ್ಗೆ ತಮಗೆ ಮಾಹಿತಿ ಇದೆ. ತಾವು ಸದನಕ್ಕೆ ಮಾಹಿತಿ ನೀಡಿದ್ದೀರಿ. ಸಾರ್ವಜನಿಕರಿಗೆ ಮತ್ತು ಈ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ ಜನರಿಗೆ ನೀರಿನ ಅಭಾವ ಉಂಟಾಗಿರುವುದರಿಂದ ನಾವು ನೀರಾವರಿ ಯೋಜನೆಗಳನ್ನು ಮಾಡುತ್ತೇವೆಂದು ಹೇಳುತ್ತೀರಲ್ಲಾ ಆ ಯೋಜನೆಗಳಲ್ಲಿ ಮುಳುಗಡೆಯಾಗಿರತಕ್ಕ ಅರಣ್ಯ ಎಷ್ಟು ಎಂದು ಸರ್ಕಾರದಲ್ಲಿ ದಾಖಲಾತಿ ಇದೆ. ಅದರ ಬಗ್ಗೆ ತಾವು ಚಿಂತನೆ ಮಾಡಿದ್ದೀರಾ? ಇವತ್ತು ತಾವು ಏನು ಹೇಳುತ್ತಿದ್ದೀರಿ? ಚಿತ್ರದುರ್ಗಕ್ಕೆ ನಮಗೆ ಕುಡಿಯುವುದಕ್ಕೆ ನೀರು ಬೇಕು, ಬೇಸಾಯಕ್ಕೆ ನೀರು ಬೇಕು, ಆದುದರಿಂದ ಭದ್ರಾ ಮೇಲ್ದಂಡೆ ಯೋಜನೆ ಮಾಡುತ್ತೇವೆಂದು ನೀವೇ ಹೇಳಿಕೆ ಮಾಡುತ್ತೀರಿ. ಒಂದು ಕಡೆ ಸಾರ್ವಜನಿಕರ ಮೇಲೆ ನೀವು ದೂಷಣೆ ಮಾಡುತ್ತೀರಿ, ಮತ್ತೊಂದು ಕಡೆ ತಾವು ಅರಣ್ಯ ನಾಶ ಮಾಡುತ್ತಿದ್ದೀರಿ. ಮಾನ್ಯ ನಾಗೇಗೌಡರು ನಮ್ಮ ಕಡೆ ಅರಣ್ಯ ನಾಶ ಮಾಡುವುದಕ್ಕೆ ತಯಾರಾಗಿದ್ದಾರೆ. ಏಕೆಂದರೆ ಅವರು 2-3 ಹೇಳಿಕೆಗಳನ್ನು ಮಾಡಿದರು, ಚಿತ್ರದುರ್ಗಕ್ಕೆ ನೀರು ಕೊಡುವುದರ ಬಗ್ಗೆ ನಾನು ಪರಿವರ್ತನೆ ನಾಳೆ ಮಾಡುತ್ತಿದ್ದೇನೆ, ಭದ್ರಾ ಮೇಲ್ದಂಡೆ ಯೋಜನೆಗೆ ನಾವು ಅನುಮತಿ ಕೊಡುತ್ತಿದ್ದೇವೆಂದು ಹೇಳಿದರು. ನಾನು ಹೇಳಿದೆ, ಸಂಪೂರ್ಣವಾಗಿ ನೀವು ಈ ಮಾತಿನಲ್ಲಿ ವಿಫಲರಾಗುತ್ತೀರಿ, ನಾವು ಅದಕ್ಕೆ ಬಿಡುವುದಿಲ್ಲವೆಂದು ಒಂದು ನಿರ್ಣಯ ಮಾಡಿದ್ದೇವೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದು ಕೇವಲ ಕೋಲಾರ, ಚಿತ್ರದುರ್ಗ, ಚಿಕ್ಕಮಗಳೂರು ಜನರ ಪ್ರಶ್ನೆ ಅಲ್ಲ. ನೀರಿನ ವಾದ ವಿವಾದ ಅಂದರೆ ಎಲ್ಲಿ ಶೀಘ್ರವಾಗಿ ನೀರು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ ಅಲ್ಲಿ ಒದಗಿಸಿಕೊಡಬಹುದು. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ನಾವು ಚಿಕ್ಕಮಗಳೂರು ಜಿಲ್ಲೆಯವರು ಬಹಳ ಚೆನ್ನಾಗಿದ್ದೇವೆ. ನಮ್ಮ ಚಿಕ್ಕಮಗಳೂರು, ಚಿತ್ರದುರ್ಗದ ಬಗ್ಗೆ ಚಿಂತನೆ ಮಾಡದಿದ್ದರೆ ನಾವು ನಾಳೆ ಕೋಲಾರದಂತೆ

ಆಗಬೇಕಾಗುತ್ತದೆ. ಕಾರಣವೇನೆಂದರೆ, ನಮ್ಮಲ್ಲಿ ಅರಣ್ಯ ಪ್ರದೇಶ ಉಳಿದಿರುವುದರಿಂದ ಬಹಳ ಮಳೆಯಾಗುವುದರ ಜೊತೆಗೆ ಅನೇಕ ಕಡೆಗಳಲ್ಲಿ ಇವತ್ತು ಆ ಪರಮಾತ್ಮನ ಆಶೀರ್ವಾದದಿಂದ ಎಲ್ಲಾ ಅಣೆಕಟ್ಟೆಗಳು ತುಂಬುವಂತೆ ಆಯಿತು.

ಅಧ್ಯಕ್ಷರು : ಅದು ನೀವು ಕಷ್ಟಪಟ್ಟು ಒತ್ತುವರಿ ಮಾಡಿ ಗಿಡಗಳನ್ನು ಬೆಳಸಿದ್ದರಿಂದ ಕಾಫಿ ತೋಟ ಎಲ್ಲಾ ಮಾಡಿದ್ದರಿಂದ ಮಳೆ ಚೆನ್ನಾಗಿ ಆಯಿತು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಇವರು ಮಾಡುವುದು ಒಂದೊಂದಲ್ಲ. ಕುದುರೆ ಮುಖ ಎಂದು ಅನುಮತಿ ಕೊಟ್ಟಿದ್ದಾರೆ...

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಯಾವ ಬೇಡಿಕೆ ಮೇಲೆ ಮಾತನಾಡುತ್ತಿದ್ದೀರಿ?

ಶ್ರೀ ಸಿ. ಆರ್. ಸಗೀರ್ ಅಹಮದ್ : ರೆವಿನ್ಯೂ....

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಕಾಡೇ ಬರುತ್ತಿದೆಯಲ್ಲಾ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಕಾಡು ಏತಕ್ಕೆ ಬರುತ್ತಿದೆ ಎಂದರೆ, ಅಕ್ರಮವಾಗಿ ಏನು ಬಡವರು ಜಮೀನು ಮಾಡಿದ್ದಾರೆ ಅವರಿಗೆ ಈ ಕಾಡು ಕಡಿಯುವವರು ಬಂದು ತೊಂದರೆ ಮಾಡುತ್ತಿದ್ದಾರೆಂಬುದರ ಬಗ್ಗೆ ಮಾತನಾಡುತ್ತಿದ್ದೇನೆ. ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿ ಏನೆಂದರೆ, ಹತ್ತು ವರ್ಷಗಳಿಗೆ ಮುಂಚೆ ಕಂದಾಯ ಮಂತ್ರಿಗಳು ಗಮನಿಸಬೇಕು. ರೈತರು ಏನು ಭೂಮಿ ಸಾಗು ಮಾಡಿದ್ದಾರೆ, ಆ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಒಂದು ಮರವನ್ನೂ ಸಹ ಅಲ್ಲಿ ನೆಡದೆ, ಒಂದು ಮರವನ್ನು ಬೆಳಸದೆ, ಇರತಕ್ಕ ಜಮೀನುಗಳಿಗೆ ನೀವು ಎನ್.ಓ.ಸಿ. ಕೊಡುವುದರ ಬಗ್ಗೆ ನಿಮಗೆ ಏನು ತೊಂದರೆ ಇದೆ? ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್‌ನಲ್ಲಿ ಅಕ್ರಮವಾಗಿ ಸಾಗು ಮಾಡಿರುವಂಥ ಜಮೀನನ್ನು ಸಕ್ರಮ ಮಾಡಬೇಕೆಂದು ತಾವು ಏನು ಹೇಳುತ್ತೀರಿ ಅದು ಕೇವಲ ನಿಮ್ಮ ಅಭಿಪ್ರಾಯ. ಕೇಳುವುದಕ್ಕೆ ಬಂದಾಗ ನೀವು ಕೊಡುವುದಕ್ಕೆ ಬರುವುದಿಲ್ಲವೆಂದರೆ 10-15-20 ವರ್ಷಗಳಿಂದ ಆ ರೈತರು ಜಮೀನು ಮಾಡಿಕೊಂಡು ಬರತಕ್ಕ ಸಂದರ್ಭದಲ್ಲಿ ನಿಮ್ಮ ಇಲಾಖೆಯ ಅಧಿಕಾರಿಗಳು ಮಲಗಿದ್ದರೆ ಅಥವಾ ನಿಮ್ಮ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಆ ವಿಚಾರ ಬಂದಿಲ್ಲವೆ ಅಥವಾ ಬಡವರು ಜಮೀನು ಮಾಡತಕ್ಕ ಸಂದರ್ಭದಲ್ಲಿ ಸರ್ಕಾರದ ವತಿಯಿಂದ, ಅಧಿಕಾರಿಗಳ ವತಿಯಿಂದ ಅದನ್ನು ನಿಲ್ಲಿಸುವ ಪ್ರಯತ್ನಗಳನ್ನು ನಡೆಸುವುದಕ್ಕೆ ಸಾಧ್ಯವಿರಲಿಲ್ಲವೇ? ಏತಕ್ಕೆ ಆ ಪ್ರಯತ್ನ ಮಾಡಲಿಲ್ಲ? ಹಾಗಿದ್ದಲ್ಲಿ ಬಡವರ ಬಗ್ಗೆ ಚಿಂತನೆ ಮಾಡುವ ಸರ್ಕಾರ ಎಂದು ತಾವು ಏನು ಹೇಳುತ್ತೀರಿ, ತಾವು 4 ಎಕರೆ 38 ಗುಂಟೆ ಜಮೀನು ಕೊಡುವ ಅಧಿಕಾರ ಈ ಸಮಿತಿಗೆ ಕೊಟ್ಟಿರುವುದರಿಂದ ಇಂಥ ಸಿ ಅಂಡ್ ಡಿ ವರ್ಗದ ಜಮೀನನ್ನು ಈ ಬಡವರಿಗೆ ಅರಣ್ಯ ಇಲಾಖೆಯ ಅನುಮತಿ ಕೋರಿದಾಗ ದಯಮಾಡಿ ತಾವು ಕೊಡುವುದರ ಜೊತೆಗೆ ಆ ಜಮೀನನ್ನು ಅವರಿಗೆ ಸಕ್ರಮಗೊಳಿಸುವಂತೆ ತಾವು ಮತ್ತು ಕಂದಾಯ ಮಂತ್ರಿಗಳು ಕೂಡಿ ಅದಕ್ಕೆ ಒಂದು ಸರ್ಕಾರದ ಆದೇಶ ಹೊರಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ರಮೇಶ್.ಸಿ. ಜಿಗಜಿಣಗಿ : ಸಿ ಅಂಡ್ ಡಿ ಲ್ಯಾಂಡ್ ಬಗ್ಗೆ ನಮ್ಮ ತಕರಾರು ಇಲ್ಲ. ರಿಸರ್ವ್ ಫಾರೆಸ್ಟ್ ಇದ್ದರೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರು ಹೇಳಿದ ಹಾಗ ದಟ್ಟವಾದ ಅರಣ್ಯ ಪ್ರದೇಶದಲ್ಲಿ ನಾವು ಕಾಫಿ ತೋಟ ಮಾಡಿದರೂ ನಮಗೆ ಸಕ್ರಮ ಮಾಡಿಕೊಡಿ ಎಂದು ನಾವು ಕೇಳುತ್ತಿಲ್ಲ. ಬಹಳ ಕ್ಲಿಯರ್ ಆಗಿ ಇವತ್ತು ಸದನದಲ್ಲಿ ಅಧ್ಯಕ್ಷರ ಮುಖಾಂತರವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇವೆ. ಇವತ್ತು ಭದ್ರಾ ಅಭಯಾರಣ್ಯದಲ್ಲಿರುವಂತಹ ತೋಟಗಳನ್ನು ಸಕ್ರಮ ಮಾಡಿ ಎಂದು ಹೇಳಿ ನಾನೇನಾದರೂ ಕೇಳಿದರೆ, ನಾವು ಚಿಕ್ಕಮಗಳೂರಿಗೆ ವಾಪಸ್ ಹೋಗುವ ಹಾಗಿಲ್ಲ. ಜನರು ಪ್ರಶ್ನಿಸುವಂತಹ ಅವಕಾಶ. ನಾವೇನು ಹೇಳುತ್ತಿದ್ದೇವೆ, ಸಿ ಅಂಡ್ ಇ ಕ್ಲಾಸ್ ಲ್ಯಾಂಡ್ ನಿಮಗೆ ಅಬ್ಯಾಂಡನ್‌ಮೆಂಟ್ ಆಗುವಂತಹ ಕೆಲವು ಕಂದಾಯ ಇಲಾಖೆಯ ಜಮೀನಿತ್ತು, ಆ ಜಮೀನನ್ನು ಏನು ತಮಗೆ ವರ್ಗಾಯಿಸಿಬಿಟ್ಟಿದ್ದಾರೆ, ಆ ಜಮೀನುಗಳಲ್ಲಿ ಬೆಳೆಸಿರುವಂತಹ ಅಕ್ರಮವಾಗಿ ಮಾಡಿರುವಂತಹ ಜಮೀನುಗಳನ್ನು ಸಕ್ರಮಗೊಳಿಸುವುದರ ಬಗ್ಗೆ ತಮ್ಮ ಇಲಾಖೆಯವರು ಯಾವುದೇ ತರಹದಲ್ಲಿ ಸಣ್ಣ ರೈತರಿಗೆ ಅಡ್ಡಿ ಆತಂಕವನ್ನು ಮಾಡುವಂಥದ್ದರ ಬಗ್ಗೆ ತಾವು ಒಂದು ಸೂಚನೆಯನ್ನು ನೀಡಬೇಕು. ಅವರಿಗೆ ಸಾಗುವಳಿ ಚೀಟಿ ಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನಾನು ಅಧ್ಯಕ್ಷರ ಮುಖಾಂತರವಾಗಿ...

ಅಧ್ಯಕ್ಷರು : ನನಗೆ ಗೊತ್ತಿದೆ, ನೀವು ಆಮೇಲೆ ರಿಪ್ಲೈ ಕೊಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮೊದಲೂ ನಾನು ಹೇಳಿದ್ದೇನೆ. 16 ಸಾವಿರ ಎಕರೆ ಬಿಟ್ಟರೆ ಬೇರೇನೂ ಮಾಡುವುದಕ್ಕಾಗುವುದಿಲ್ಲ. ಕೇಂದ್ರಸರ್ಕಾರದ ಅನುಮತಿ ಬೇಕಾಗಿದೆ. ಅದಿಲ್ಲದೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್: ಬಹಳ ಮುಖ್ಯವಾದುದು ಇದೆ. ನಾನು ಕಂದಾಯ ಮಂತ್ರಿಯವರ ಹತ್ತಿರ ಮಾತನಾಡಿದ್ದೇನೆ, ತಮ್ಮ ಗಮನಕ್ಕೂ ತರುತ್ತೇನೆ. ಏಕೆಂದರೆ, ಈ ಬೇಡಿಕೆ ಬಹುದಿನಗಳಿಂದ ಇದೆ. ಇಡೀ ರಾಜ್ಯದ ಜನರ ಪರವಾಗಿ ಈ ಬೇಡಿಕೆ ಇದೆ. ಈ ರಾಜ್ಯದಲ್ಲಿ ಇನಾಂ ಅಬಾಲಿಷನ್ ಆಕ್ಟ್ ಜಾರಿಯಲ್ಲಿದ್ದು, ಅದಕ್ಕೆ ಒಂದು ಸಮಯವನ್ನು ನಿಗದಿಪಡಿಸಿ, ಅನೇಕ ಜನ ಅವಿದ್ಯಾವಂತರು ಅರ್ಜಿ ಹಾಕುವುದಕ್ಕೆ ಸಮಯವಿಲ್ಲದೆ, ಇವತ್ತಿನ ದಿವಸ ಅನೇಕ ಇನಾಂ ಜಮೀನುಗಳನ್ನು ರೈತ ಅಧ್ಯಕ್ಷರು ಆವಾಗ ಒಂದು ವಿಚಾರವನ್ನೇನು ಹೇಳಿದರೆಂದರೆ, ಅಧಿಕಾರಿಗಳು, ಕಾನೂನು ವಿಚಾರ ಅಥವಾ ಕಾನೂನು ಸಲಹೆಗಾರರ ಮೇರೆಗೆ ನಾನು ಈ ಕೆಲಸ ಮಾಡುತ್ತೇನೆಂದು ಹೇಳಿದರೆ ನಾವು ಈ ಸದನದ ಮಹತ್ವ ಕಳೆದಂತಾಗುತ್ತದೆ. ನಿನ್ನೆ ಅಧ್ಯಕ್ಷರು ಮಹತ್ವವಾದಂತಹ ನಿರ್ಣಯವನ್ನು ಮಾಡಿದ್ದಾರೆ. ಕೆಲವೊಮ್ಮೆ ಚಲಾಯಿಸಬೇಕಾಗುತ್ತದೆ. ಏಕೆಂದರೆ, ಅಧ್ಯಕ್ಷರು ಸ್ವಲ್ಪ ಹೊತ್ತು ಮುಂಚೆ ಹೇಳಿದರು, ಸಾರ್ವಜನಿಕರಿಗೆ, ಬಡವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವುದಾದರೆ ಕೆಲವು ನಿರ್ಣಯವನ್ನು ತಾವು ಮಾಡಬೇಕಾಗುತ್ತದೆಂದು. ಈಗ ತಾವೇನು ಹೇಳಿದಿರಿ.

ಶ್ರೀ ರಮೇಶ್ ಸಿ. ಜಿಣಜಿಣಗಿ : ಅಧ್ಯಕ್ಷರು ಹೇಳಿದ್ದು ತಾವು ಗಮನಿಸಲಿಲ್ಲ. ಅಧ್ಯಕ್ಷರು ಕಾನೂನು ಬಿಟ್ಟು ಮಾಡಿ ಎಂದು ಹೇಳಲಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಅಧ್ಯಕ್ಷರೇ ನಾನು ಕಾನೂನು ಬಿಟ್ಟು ಮಾಡಿ ಎಂದು ಹೇಳಿದ್ದೇನೆಯೇ?

ಶ್ರೀ ರಮೇಶ್.ಸಿ. ಜಿಗಜಿಣಗಿ : ಅವರು ಹೇಳಿದ್ದುದು, ಬಡವರ ಬಗ್ಗೆ ಅಥವಾ ಪರಿಶಿಷ್ಟ ಜಾತಿ, ಜನಾಂಗದ ಬಗ್ಗೆ ತೀರ್ಮಾನವನ್ನೇನಾದರೂ ಮಾಡುವುದಕ್ಕೆ ಬಂದಾಗ, ಕಾನೂನು ಬಿಟ್ಟು ನೀವು ಮಾಡಿರೆಂದು ಹೇಳಲಿಲ್ಲ. ಸ್ವಲ್ಪ ಸಡಿಲಿಸಿಕೊಂಡು ಮಾಡಿ ಎಂದು ಹೇಳಿದರಷ್ಟೇ. ನೀವು ಕಾನೂನು ಬಿಟ್ಟು ಮಾಡಿ ಎಂದು ಹೇಳುತ್ತಿದ್ದೀರಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಕಾನೂನು ಬಿಟ್ಟು ಮಾಡಿ ಎಂದು ನಾನೂ ಹೇಳಲಿಲ್ಲ. ನಾನು ಹಾಗೆ ಹೇಳಲಿಲ್ಲ, ನೀವೂ ಹಾಗೆ ಹೇಳಲಿಲ್ಲ. ನಾನು ಅಧ್ಯಕ್ಷರು, ಬಡವರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡುವಂತೆ ನಿಮಗೆ ಮಾರ್ಗಸೂಚಿ ಕೊಟ್ಟಿದ್ದಾರೆ. ಅದರ ಬಗ್ಗೆ ಆಲೋಚನೆ ಮಾಡಿ ಎಂದು ಹೇಳಿದೆ. ಅಧ್ಯಕ್ಷರು ಕಾನೂನು ಬಿಟ್ಟು ಕೆಲಸವನ್ನು ಮಾಡಿ ಎಂದು ಹೇಳಿದರೆಂದು ನಾನು ಹೇಳಲಿಲ್ಲ. ಆದ್ದರಿಂದ, ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ನಾನು ಕಂದಾಯ ಮಂತ್ರಿಯವರಲ್ಲಿ ಏನು ವಿನಂತಿಸಿಕೊಳ್ಳುತ್ತೇನೆಂದರೆ, ರೈತರು ಬಹಳ ಕಷ್ಟಪಟ್ಟಿದ್ದಾರೆ. ಇವತ್ತು ಇನಾಂ ಅಬಾಲಿಷನ್ ಆಕ್ಟ್ ಅಸ್ತಿತ್ವದಲ್ಲಿದ್ದರೂ, ಇವತ್ತು ದಾಖಲಾತಿಗಳಲ್ಲಿ ಸರ್ಕಾರೀ ಇನಾಂ ಎಂದು ಇದೆ, ಕಂದಾಯ ಮಂತ್ರಿಗಳನ್ನು ಕೇಳಿ. ಒಬ್ಬ ಬಡವ ಎರಡು ಎಕರೆ ಜಮೀನು ಹೊಂದಿರುವಂತಹ ಒಬ್ಬ ರೈತ ಹೋಗಿ 10 ಸಾವಿರ ರೂಪಾಯಿಗಳನ್ನು ಸಾಲ ಪಡೆಯುವಂತಹ ಸ್ಥಿತಿಯಲ್ಲಿಲ್ಲ. ಎಲ್ಲಿಯವರೆಗೆ ಇವರು ಈ ಕಾನೂನನ್ನು ತಿದ್ದುಪಡಿ ಮಾಡುವುದಿಲ್ಲವೋ, ಅಲ್ಲಿಯವರೆಗೆ ಎರಡು ಎಕರೆ ಜಮೀನು ಇರುವಂತಹ ರೈತ ಸಾಲ ಪಡೆಯುವುದಕ್ಕೆ ಸಾಧ್ಯಾವಾಗುವುದಿಲ್ಲ. ದಾಖಲಾತಿಗಳಲ್ಲಿ ಇನಾಂ ಲ್ಯಾಂಡ್ ಎಂದೇ ಬರೆದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಆ ರೀತಿ ಬರೆದಿರಬೇಕಾದರೆ, ಇನಾಂ ಆಕ್ಟ್ ವಾಯಿದೆಯೊಳಗೆ ಅರ್ಜಿ ಹಾಕದಿರುವ ಕಾರಣಕ್ಕೆ ಆಗಿರಬಹುದು. ಈಗ ಅದಕ್ಕೆ ಬೇರೆ ಮಾರ್ಗವಿಲ್ಲ. ಅಂಥ ಪ್ರಕರಣಗಳಿದ್ದರೆ, ಹೊಸದಾಗಿ ಅರ್ಜಿ ಹಾಕುವುದಕ್ಕೆ ನೀವು ವಾಯಿದೆಯನ್ನು ವಿಸ್ತಾರ ಮಾಡಬೇಕು. ಹೊಸದಾಗಿ ಅರ್ಜಿ ಹಾಕಲು ಅವಕಾಶ ಮಾಡಿಕೊಡಬೇಕು. ಇಲ್ಲವೇ, ಆ ಜಮೀನನ್ನು ಸರ್ಕಾರಕ್ಕೆ ಫರ್‌ಫೀಟ್ ಮಾಡಿ, ಗೇಣಿ ಜಮೀನ್ದಾರರಿಂದ ಸರ್ಕಾರಕ್ಕೆ ಬರುತ್ತದೆ, ಸರ್ಕಾರಕ್ಕೆ ತೆಗೆದುಕೊಂಡು ಅದನ್ನು ನೀವು ನಮ್ಮ ರೆಗ್ಯುಲರ್ ಲ್ಯಾಂಡ್ ಗ್ರಾಂಟ್ ಮೂಲಕ ಮಾಡಬೇಕು. ನಿಮಗೆ ಬಹಳ ಕೇಸ್ ಇದ್ದರೆ, ಏಕೆಂದರೆ, ಒಂದು ಸಾರಿ ಅಧ್ಯಕ್ಷರೆ, ಸಂಡೂರು ಇನಾಂ ಕೇಸ್ ತನಿಖೆಗೆ ಹೋಗಿದ್ದೆವು. ಲೇಟೆಸ್ಟ್ ಅಂದರೆ, ಸಂಡೂರು ಇನಾಂ ಅಬಾಲಿಷನ್ ನಡೆಯಿತು. ಆಗ ಕಾನೂನು ಜಾರಿಗೆ ಬಂದಾಗ, ಒಂದು ವಾಯಿದೆ ಕೊಟ್ಟಿದ್ದು, ಆ ವಾಯಿದೆಯೊಳಗೆ ಅರ್ಜಿಯನ್ನು ಬಹಳ ಜನ ಹಾಕಿರಲೇ ಇಲ್ಲ. ಇಲ್ಲಿ ಭಾಷಣ ಮಾಡುವುದಲ್ಲ, ಅಲ್ಲಿ ಹೋಗಿ ಊರೂರು ತಿರುಗಿ ಹಾಕಿಸುವವರಾರು? ಅದಕ್ಕೆ ಹಾಕಿರಲಿಲ್ಲ.

ಕೊನೆಯದಾಗಿ ಮತ್ತೆ, ನಮ್ಮ ವಿರೋಧಪಕ್ಷದ ನಾಯಕರು ಕಂದಾಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ವಾಯಿದೆಯನ್ನು ಮತ್ತೆ ಕೊಟ್ಟು ಅರ್ಜಿ ಹಾಕುವುದಕ್ಕೆ ಮಾಡಿ...

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ತಿಮ್ಮಪ್ಪನವರೇ, ಸಂಡೂರು ಅಬಾಲಿಷನ್ ಆಕ್ಟ್ ಸತ್ಯಾಗ್ರಹದಲ್ಲಿ ನೀವು, ನಾವು ಎಲ್ಲರೂ 35 ದಿವಸ ಸತ್ಯಾಗ್ರಹ ಮಾಡಿದ್ದೇವೆ. ಆಗ ನಾನೇ ಪಕ್ಷದ ಅಧ್ಯಕ್ಷನಾಗಿದ್ದೆ. ಆ ಸಂದರ್ಭದಲ್ಲಿ ಒಂದು ಬುದ್ಧಿವಂತಿಕೆಯಾಗಿತ್ತು. ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ತಂದಾಗ, ಸಂಡೂರು ಇನಾಂ ಅಬಾಲಿಷನ್ ಆಕ್ಟ್ ಎನ್ನತಕ್ಕದ್ದೊಂದಿದೆ, ಅದು ರಿಪೀಲಾಗಿದೆ ಎನ್ನುವ ಶಬ್ದವನ್ನು ಬರೆದಿರಲಿಲ್ಲ. ಆದಂತಹ ತಮಾಷೆ ಎಂದರೆ, ಸಂಡೂರು ಸಣ್ಣದಾದ ರಾಜ್ಯವಾಗಿತ್ತು. ಆ ಸಣ್ಣ ರಾಜ್ಯಕ್ಕೆ ಒಂದು ಸಂಡೂರು ಇನಾಂ ಅಬ್ಬಾಲಿಷನ್ ಆಕ್ಟ್ ಇತ್ತು. ನಮ್ಮ ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಅಲ್ಲಿ ಬರುವಂತಹ ಸಂದರ್ಭದಲ್ಲಿ all these Acts are stand repealed ಎನ್ನುವಂಥ ಮಾತಿನಲ್ಲಿ ಸಂಡೂರು ಇನಾಂ ಅಬಾಲಿಷನ್ ಆಕ್ಟ್ ರಿಪೀಲ್ ಆಗಿದೆ ಎನ್ನುವ ಶಬ್ದವಿರಲಿಲ್ಲ. ಆದ್ದರಿಂದ ಏನಾಯಿತು ಎಂದರೆ, 15 ಸಾವಿರ ಎಕರೆ ಜಮೀನುಗಳಿಗೆ ಸಂಬಂಧಪಟ್ಟ ಗೇಣಿದಾರರಿಗೆ ಯಾರಿಗೂ ಹಕ್ಕುಪತ್ರ ಸಿಗಲಿಲ್ಲ. ಆಗ ದಿವಂಗತ ದೇವರಾಜ ಅರಸ್‌ರವರು, ಕಂದಾಯಮಂತ್ರಿಗಳು, ನೀವು, ಮೊಯಿಲಿಯವರು ಎಲ್ಲರೂ ಬಂದಾಗ, ಅದು ತಪ್ಪಾಗಿದೆ ಎಂಬುದು ಕಂಡು ಬಂತು. ಆಗ ಶ್ರೀ ದೇವರಾಜ್ ಅರಸ್‌ರವರಿಗೆ ಆಶ್ಚರ್ಯವಾಯಿತು. ಏನು ಅಂತಹ ಒಂದು ಸಣ್ಣ ರಾಜ್ಯದಲ್ಲಿ ಒಂದು ಕಾನೂನು ಎಂದು ಕೇಳಿದರು. ಹೌದು. ಅಂತಹ ಒಂದು ಸಣ್ಣ ರಾಜ್ಯದಲ್ಲಿ ಒಂದು ಕಾನೂನಾ ಎಂದು ಕೇಳಿದರು. ಹೌದು, ಅಂತಹ ಒಂದು ಸಣ್ಣ ರಾಜ್ಯ ಅಲ್ಲಿ ಕಾನೂನು ಇತ್ತು, ಆ ಕಾರಣದಿಂದ ಅದು ತಪ್ಪಾಗಿದೆ ಎಂದು ಹೇಳಿದ ಮೇಲೆ ಅದಕ್ಕೆ ತಿದ್ದುಪಡಿ ತಂದಮೇಲೆ, ಎಲ್ಲರಿಗೂ ಹೊಸದಾಗಿ ಅವಕಾಶವನ್ನು ಕಲ್ಪಿಸಿಕೊಟ್ಟರು. ಹಾಗಾಗಿ ಜನರಲ್‌ಆಗಿ ಅವಕಾಶವನ್ನು ಕಲ್ಪಿಸಿಕೊಟ್ಟಿರತಕ್ಕದ್ದಲ್ಲ. ಅಂದರೆ, ಈ ಕಾರಣಕ್ಕಾಗಿ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟಿರತಕ್ಕದ್ದು.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಹೇಳಿದ್ದೇನೆಂದರೆ, ಸಂಡೂರು ಇನಾಂ ಅಬಾಲಿಷನ್ ಆಕ್ಟ್ ಜಾರಿಗೆ ಬಂತಲ್ಲಾ, ಅದು ಬಂದಾದ ಮೇಲೆ ಒಂದು ವಾಯಿದೆಯೊಳಗೆ ಎಲ್ಲಾ ಗೇಣಿರಹಿತರೂ ಅರ್ಜಿ ಹಾಕಬಹುದೆಂದು ಹೇಳಿ...

ಶ್ರೀ ಎಂ. ಪಿ. ಪ್ರಕಾಶ್ : ಅದಕ್ಕಾಗಿ ಪ್ರತ್ಯೇಕವಾಗಿ ಡೇಟ್ ಮಾಡಿ, ನೀವು ಮತ್ತೆ ಒಂದು ಅರ್ಜಿ ಕೊಡಿ ಎಂದು ಹೇಳಲಿಲ್ಲ. ಸಂಡೂರಿಗೆ ಸೀಮಿತಗೊಂಡಂತೆ ಈ ಕಾನೂನು ರಿಪೀಲ್ ಆಗಿರುವುದರಿಂದ, ನೀವು ಹೆಚ್ಚು ದಿನವನ್ನು ಕೊಟ್ಟಿರಿ.

ಶ್ರೀ ಕಾಗೋಡು ತಿಮ್ಮಪ್ಪ : ಇನಾಂ ಅಬಾಲಿಷನ್ ಆಕ್ಟ್ ಬಂತು. ಅದು ಬಂದಾದ ಮೇಲೆ, ಅರ್ಜಿ ಹಾಕುವುದಕ್ಕೆ ವಾಯಿದೆ ಕೊಟ್ಟರು. ಅವರು ಅರ್ಜಿಯನ್ನೂ ಹಾಕಿದರು. ಕೆಲವರು ಅರ್ಜಿ ಹಾಕಿದವರಿಗೆ ಆಕ್ಯುಪೆನ್ಸಿ ರೈಟ್ಸ್ ಕೊಟ್ಟಾಯಿತು. ಕೆಲವರು ಅರ್ಜಿ ಹಾಕಿರಲಿಲ್ಲ. ಶ್ರೀ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇದು ಅವರ ಗಮನಕ್ಕೂ ಬಂತು. ಗಮನಕ್ಕೆ ಬಂದಾದಮೇಲೆ ಮತ್ತೊಂದು ವಾಯಿದೆ ಕೊಟ್ಟು, ಎಲ್ಲರಿಗೂ ಅರ್ಜಿ ಹಾಕಲಿಕ್ಕೆ ಅವಕಾಶ ಕೊಟ್ಟಾಯಿತು.

ಶ್ರೀ ಎಂ.ಪಿ. ಪ್ರಕಾಶ್ : ಆ ಕಾರಣಕ್ಕೆ. ಸೂ-ಮೋಟೋ ಆಗಲಿಲ್ಲ.

MR. SPEAKER : Both of you are right.

ಶ್ರೀ ಕಾಗೋಡು ತಿಮ್ಮಪ್ಪ : ಆ ರೀತಿ ನೀವು ದೊಡ್ಡ ಪ್ರಮಾಣದಲ್ಲಿ ಇದ್ದರೆ

SRI M.P. PRAKASH : Sir, how could it be?

MR. SPEAKER : The cause of action arose for those people on the date as you said. You have narrated the circumstances. An opportunity was provided.

ಶ್ರೀ ಎಂ. ವೀರಪ್ಪ ಮೊಯಿಲಿ : ಶ್ರೀ ಹುಚ್ಚ ಮಾಸ್ತಿಗೌಡರು ರೆವಿನ್ಯೂಮಿನಿಸ್ಟರ್ ಆಗಿದ್ದಾಗ, ಸಂಡೂರು ಇನಾಂ ಅಬಾಲಿಷನ್ ಆಕ್ಟ್ ಎಂದು ಹೇಳಿ ಬಿಲ್ ಬಂತು. ನಾವೆಲ್ಲಾ ಅದರ ಜಾಯಿಂಟ್ ಸೆಲೆಕ್ಟ್ ಕಮಿಟಿ ಮೆಂಬರ್ಸ್ ಆಗಿದ್ದೆವು. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಸೆಪರೇಟಾಗಿ ಬಂತು. ಅಲ್ಲಿ ಹೋಗಿ ಅದರ ರಿಪೋರ್ಟ್ ಕೊಟ್ಟಮೇಲೆ, ಅದೊಂದು ಆಕ್ಟ್ ಆಗಿ ಬಂತು. ಅದಕ್ಕೆ ಅವಕಾಶ ಇತ್ತು, ಡಿಕ್ಲೇರೇಷನ್ ಕೊಟ್ಟಮೇಲೆ, ವಾಯಿದೆಯಾಯಿತು. ಇನ್ನೂ ಕೆಲವರು ಉಳಿದಿದ್ದರು. ಆಗ ಇವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಎಕ್ಸ್‌ಟೇನ್‌ಷನ್ ಕೊಟ್ಟರು.

MR. SPEAKER : That is what I am telling.

SRI M. VEERAPPA MOILY : Therefore both of them are right.

MR. SPEAKER : That is exactly what I have said ಸಗೀರ್‌ರವರೇ, ಮೂರು ನಿಮಿಷಗಳಲ್ಲಿ ಮುಗಿಸಿ. because I have to comply with the request of others.

ಶ್ರೀ ಸಿ. ಆರ್. ಸಗೀರ್ ಅಹಮದ್ : ಇದರ ಬಗ್ಗೆ ಸರ್ಕಾರ ಸಮ್ಮೇಳನ ಮಾಡಿ, ಆ ಸಂಡೂರು ರೈತರಿಗೆ ಹಕ್ಕುಪತ್ರ ಸಿಗುವ ವ್ಯವಸ್ಥೆ ಮಾಡಬೇಕೆನ್ನುವುದರ ಬಗ್ಗೆ ತಮ್ಮ ಮುಖಾಂತರ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಈಗ ಮುಖ್ಯವಾದ ಇನ್ನೊಂದು ವಿಚಾರವೆಂದು ಹೇಳಿದರೆ, ಇವತ್ತು ಅನೇಕ ಕಡೆ ವಾದ-ವಿವಾದಗಳು ನಡೆಯುತ್ತಿದ್ದು, ಧರ್ಮದ ಸ್ಥಳದಲ್ಲಿ ಮಸೀದಿ, ದೇವಸ್ಥಾನ, ಚರ್ಚ್ ಇರಬಹುದು, ಎಲ್ಲೆಲ್ಲೂ ರುದ್ರಭೂಮಿಗಳಿವೆ. ಸರ್ಕಾರೀ ಜಾಗಗಳಲ್ಲಿ ಕಟ್ಟಿರುವಂತಹ ಅನೇಕ ರುದ್ರಭೂಮಿಗಳಿವೆ. ಅನೇಕ ಕಡೆ ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ಅನೇಕರು ವಿಚಾರವನ್ನು ಮಾತನಾಡಿದ್ದೀರಿ. ನನ್ನ ಅಭಿಪ್ರಾಯದಲ್ಲಿ ಅನೇಕ ಕಡೆ ಸರ್ಕಾರೀ ಜಾಗಗಳಲ್ಲಿ ಅಕ್ರಮವಾಗಿ ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು ಬಂದಿವೆ.

5.40 ಪಿ.ಎಂ.

ಈ ರುದ್ರಭೂಮಿ ಎಂದು ಏನು ಹೇಳುತ್ತೇವೆ ಅವು ಬಂದಿವೆ. ಇದು ಸರ್ಕಾರಿ ಜಮೀನಿರುವುದರಿಂದ ಸರ್ಕಾರ ರೆಗ್ಯುಲರೈಸ್ ಮಾಡಿ ಅವರಿಗೆ ಹಕ್ಕುಪತ್ರ ಕೊಡುವುದರಲ್ಲಿ ಏಕೆ ವಿಳಂಬವಾಗುತ್ತಿದೆ? ನಾನು

ಈ ಸಂದರ್ಭದಲ್ಲಿ ಇನ್ನೊಂದು ವಿಚಾರ ಹೇಳಬೇಕಾಗುತ್ತದೆ. ಇವತ್ತು ಮನುಷ್ಯ ಜೀವಂತವಾಗಿ ಇರುವವರೆಗೆ ಆ ಜಾತಿಗೆ ಸೀಮಿತವಾಗಿರುವುದು ಈ ಜಾತಿಗೆ ಸೀಮಿತವಾಗಿರುವುದು ಎನ್ನುವ ಬಗ್ಗೆ ನಾವು ಚರ್ಚೆ ಮಾಡುತ್ತೇವೆ. ಈ ಆತ್ಮ ಹೋದನಂತರ ಒಂದು ಹೆಣ ಹೂಳುವ ಬಗ್ಗೆಯೂ ಸಹ ಇವತ್ತು ಹಳ್ಳಿ ಮಟ್ಟದಲ್ಲಿ ಚರ್ಚೆಯಾಗುತ್ತದೆ. ಹಳ್ಳಿ ಮಟ್ಟದಲ್ಲಿ ವಾದ ವಿವಾದ ಆಗುತ್ತಿದೆ. ನಮ್ಮ ಸರ್ಕಾರ ಇದ್ದಾಗ ಇದಕ್ಕೆ ಕಾಂಪೌಂಡ್ ಹಾಕಬೇಕು, ಇದಕ್ಕೆ ತಂತಿಬೇಲಿ ಹಾಕಬೇಕು ಎನ್ನುವ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೆವು. ನಾವು ಅನೇಕ ಗ್ರಾಮಾಂತರ ಪ್ರದೇಶದಲ್ಲಿ ಯಶಸ್ವಿಯಾಗಿ ಮಾಡಿದ್ದೇವೆ. ಆದ್ದರಿಂದ ತಮ್ಮ ಮುಖಾಂತರವಾಗಿ ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಸರ್ಕಾರಿ ಜಮೀನಿನಲ್ಲಿ ಬಂದಿರುವಂಥ ಯಾವುದೇ ಧಾರ್ಮಿಕಸಂಸ್ಥೆಗಳು ಇರಲಿ, ರುದ್ರಭೂಮಿಗಳೇ ಇರಲಿ ಇದು ಸಕ್ರಮಗೊಳಿಸುವ ಬಗ್ಗೆ, ಸರ್ಕಾರಿ ಆದೇಶಗಳನ್ನು ಹೊರಡಿಸುವ ಬಗ್ಗೆ ಅಥವಾ ಜಿಲ್ಲಾಧಿಕಾರಿಗಳ ಮುಖಾಂತರವಾಗಿ ಮಾಹಿತಿಗಳನ್ನು ತರಿಸಿ ಅದನ್ನು ಸರಿಪಡಿಸುವ ಬಗ್ಗೆ ಸರ್ಕಾರಕ್ಕೆ ಏನಾದರೂ ಅಡ್ಡಿ ಆತಂಕಗಳು, ಅಡಚಣೆಗಳು ಇದೆಯಾ ಎಂದು ತಮ್ಮ ಮುಖಾಂತರವಾಗಿ ರೆವಿನ್ಯೂ ಮಂತ್ರಿಗಳನ್ನು ಕೇಳುತ್ತೇನೆ. ಕೊನೆಯದಾಗಿ ಅಧ್ಯಕ್ಷರೆ, ಒಂದು ಸಮಸ್ಯೆ ಎಂದರೆ 1983, 1967-68ನೇ ಸಾಲಿನಲ್ಲಿ ಅನೇಕ ಜನರಿಗೆ ಹಂಗಾಮಿ ಸಾಗುವಳಿ ಚೀಟಿಯನ್ನು ವಿತರಣೆ ಮಾಡಿದ್ದಾರೆ. ಸಾವಿರಾರು ಎಕರೆಗಳಿಗೆ ಹಂಗಾಮಿ ಸಾಗುವಳಿ ಚೀಟಿಗಳನ್ನು ವಿತರಣೆ ಮಾಡಿ ಇವತ್ತು ಸರ್ಕಾರಕ್ಕೆ ಪಕ್ಕಾ ಸಾಗುವಳಿ ಚೀಟಿಗಳನ್ನು ಕೋರಿ ತಾಲ್ಲೂಕು ಕಛೇರಿಗಳ ಮುಖಾಂತರವಾಗಿ ಜಿಲ್ಲಾಧಿಕಾರಿಗಳ ಮುಖಾಂತರವಾಗಿ ಸರ್ಕಾರಕ್ಕೆ ತಲುಪಿಸುವಂಥ ವ್ಯವಸ್ಥೆ ಇವತ್ತಿದೆ. ಆ ಕಾಲದಲ್ಲಿ ಸರ್ಕಾರಿ ಆದೇಶದ ಪ್ರಕಾರ ಎಕರೆಗೆ 500 ರೂಪಾಯಿ ಹಣ ಜಮಾ ಮಾಡಿಕೊಂಡು ಆ ಜಮೀನುಗಳಿಗೆ ಪಕ್ಕಾ ಸಾಗುವಳಿ ಚೀಟಿಗಳನ್ನು ಕೊಡುವಂತೆ ಆದೇಶ ಆಯಿತು. ಆದರೆ ಈಗ ಹಾಲಿ ಸರ್ಕಾರ ಒಂದು ಎಕರೆ ಜಮೀನಿಗೆ 50 ಸಾವಿರ, 60 ಸಾವಿರ ರೂಪಾಯಿಗಳನ್ನು ಪಾವತಿ ಮಾಡಿ, ಸರ್ಕಾರಕ್ಕೆ ಜಮಾ ಮಾಡಿ ಪಕ್ಕಾ ಸಾಗುವಳಿ ಚೀಟಿಯನ್ನು ಪಡೆಯುವುದಕ್ಕೆ ಆದೇಶ ಮಾಡಿದೆ. ಇದರಿಂದ ದಯಮಾಡಿ ಪರಿಶಿಷ್ಟ ವರ್ಗದ ಪರಿಶಿಷ್ಟ ಪಂಗಡದ ಜನರಿಗೆ, ಸಣ್ಣ ರೈತರಿಗೆ ಬಹಳ ತೊಂದರೆಯಾಗುತ್ತಾ ಇದೆ. ಎಕರೆಗೆ 50-60 ಸಾವಿರ ರೂಪಾಯಿ ಕಟ್ಟುವಂಥ ರೈತರು ನಮ್ಮ ಭಾಗದಲ್ಲೂ ಇಲ್ಲ, ತಮ್ಮ ಭಾಗದಲ್ಲೂ ಇಲ್ಲ. ಆ ದೃಷ್ಟಿಯಿಂದ ಸರ್ಕಾರ ಮರುಪರಿಶೀಲನೆ ಮಾಡಬೇಕಾಗುತ್ತದೆ. ಹಂಗಾಮಿ ಸಾಗುವಳಿ ಚೀಟಿ ಕೊಟ್ಟಿರುವಂಥದ್ದರ ಬಗ್ಗೆ, ತರಿ ಜಮೀನಿಗೂ 50-60 ಸಾವಿರ ಹಾಕಿದ್ದು ಅನೇಕ ಪ್ರಕರಣಗಳು ಇವತ್ತು ನ್ಯಾಯಾಲಯಕ್ಕೆ ಹೋಗಿ ಅನೇಕ ತೀರ್ಮಾನಗಳು ಆಗಿ ಸರ್ಕಾರ ಕ್ರಮ ತೆಗೆದುಕೊಳ್ಳುವಂತೆ ನ್ಯಾಯಾಲಯಗಳಲ್ಲಿ ಆದೇಶ ಹೊರಡಿಸಿದೆ. ಆದ್ದರಿಂದ ತಮ್ಮ ಮುಖಾಂತರವಾಗಿ ನಾನು ಕಂದಾಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಇದರ ಬಗ್ಗೆ ಅನೇಕ ಜನರಿಗೆ, ಬಡವರಿಗೆ ಬಹಳ ಹೊರೆಯಾಗುವಂಥ ವಿಚಾರವಾಗಿರುವುದರಿಂದ ಇದರ ಬಗ್ಗೆ ತಾವು ತುರ್ತಾಗಿ ಗಮನ ಹರಿಸಿ ಅಂಥ ರೈತರಿಗೆ ರಿಯಾಯಿತಿ ದರದಲ್ಲಿ ಪಕ್ಕಾ ಸಾಗುವಳಿ ಚೀಟಿ ಕೊಡುವಂಥ ವ್ಯವಸ್ಥೆ ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಅಧ್ಯಕ್ಷರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

+ ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ಕನ್ನಡ ಅಭಿವೃದ್ಧಿ ಬಗ್ಗೆ ಮಾತನಾಡಬೇಕೆಂದು ನಾನು ಬಯಸುತ್ತೇನೆ. ಇವತ್ತು ನಮ್ಮ ರಾಜ್ಯ ಸರ್ಕಾರ ಇವತ್ತು ಕನ್ನಡ ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಕನ್ನಡ ಕಾವಲು ಸಮಿತಿ, ಕನ್ನಡ ಪ್ರಾಧಿಕಾರ, ಇನ್ನೂ ಹಲವಾರು ಕನ್ನಡದ ಹೆಸರಿನಲ್ಲಿ ಕನ್ನಡವನ್ನು ಅಭಿವೃದ್ಧಿಪಡಿಸಬೇಕೆಂದು ಯೋಜನೆಗಳನ್ನು ರೂಪಿಸಿಕೊಳ್ಳುತ್ತಾ ಇರತಕ್ಕಂಥ ಈ ದಿನಗಳಲ್ಲಿ ನನ್ನ ಮನಸ್ಸಿನಲ್ಲಿ ಒಂದು ಭಾವನೆ ಇದೆ. ಕಳೆದ ಆಗಸ್ಟ್ 15ಕ್ಕೆ ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷ ಆಯಿತು ಎಂದು 50ನೇ ವರ್ಷವನ್ನು ಸಡಗರದಿಂದ, ಸಂಭ್ರಮದಿಂದ ದೇಶದ ಉದ್ದಗಲದಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಣೆ ಮಾಡಿದ್ದೇವೆ. ಇವತ್ತು 1947ರಿಂದ ಹಿಡಿದು ಇಲ್ಲಿಯವರೆಗೂ ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿಗಳಾದಂಥ ಕೆ.ಸಿ. ರೆಡ್ಡಿಯವರಿಂದ ಹಿಡಿದು ಜೆ.ಎಚ್. ಪಟೇಲರವರೆಗೆ ನಮ್ಮನ್ನು ಆಳಿದಂಥವರೆಲ್ಲಾ ಈ ನಾಡಿನ ಕನ್ನಡಿಗರೇ ಆದಂಥ ಮುಖ್ಯಮಂತ್ರಿಗಳು ಸುಮಾರು 50 ವರ್ಷಗಳ ಕಾಲ ಆಳಿದರು. ಕರ್ನಾಟಕ ಏಕೀಕರಣ ಆಗಬೇಕು ಎಂದು ಹೇಳಿ ಯಾವ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಒಂದು ಕಾಲನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿಟ್ಟು ಮತ್ತೊಂದು ಕಾಲನ್ನು ಕರ್ನಾಟಕ ಏಕೀಕರಣವಾಗಬೇಕು ಎಂದು ಹೋರಾಟ ಮಾಡಿದಂಥ ಮಹಾನ್ ನಾಯಕರುಗಳು ಉದಯವಾಗಲಿ ಚೆಲುವ ಕನ್ನಡ ನಾಡು ಎಂದು ಹಾಡನ್ನು ಬರೆದು ಹಾಡಿದಂಥ ಹುಯಿಲಗೋಳ ನಾರಾಯಣರಾಯರು ಇವತ್ತು ನಮ್ಮಿಂದ ಕಣ್ಮರೆಯಾಗಿರಬಹುದು. ಆದರೆ ಯಾವ ಭಾವನೆಯಿಂದ ಅವರು ಉದಯವಾಗಲಿ ಚೆಲುವ ಕನ್ನಡನಾಡು ಎಂದು ಹಾಡನ್ನು ಹಾಡಿದರೋ ಅದಾದಮೇಲೆ ಕರ್ನಾಟಕ ಏಕೀಕರಣವಾಗಬೇಕಾದರೆ ಎಷ್ಟೋ ಜನ ಮಹಾನ್ ನಾಯಕರುಗಳು ಅದಕ್ಕಾಗಿ ತ್ಯಾಗಬಲಿದಾನವನ್ನು ಮಾಡಿದರು. ಈ ನಾಡಿನ ಜನ ವಿಜಯನಗರ ಸಾಮ್ರಾಜ್ಯದಲ್ಲಿ ರಕ್ಕಸತಂಗಡಿಯಲ್ಲಿ ಅಳಿಯ ರಾಮರಾಯರ ಅಳಿವಿನ ನಂತರ ದಿಕ್ಕಾಪಾಲಾಗಿ ಚೆದುರಿದಂಥ ಸೋದರರು ಮತ್ತೆ ಒಂದುಗೂಡಬೇಕಾದರೆ 1956ರ ನವೆಂಬರ್ 1ನೇ ತಾರೀಖು ಕರ್ನಾಟಕ ರಾಜ್ಯದ ಹಲವಾರು ಭಾಗಗಳು ಇನ್ನೂ ನಮಗೆ ಬರಬೇಕಾಗಿದ್ದು ಪಕ್ಕದ ರಾಜ್ಯಗಳಲ್ಲಿ ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ರಾಜ್ಯಗಳಲ್ಲಿ ಕರ್ನಾಟಕ ಭಾಗಗಳು ಉಳಿದಿದ್ದರೂ ಕೂಡ 1956 ನವೆಂಬರ್ 1ನೇ ತಾರೀಖು ಕರ್ನಾಟಕ ಏಕೀಕರಣವಾಗಿ ಭಾಷಾವಾರು ಪ್ರಾಂತ್ಯ ರಚನೆಯಾದಮೇಲೆ ಪೂಜ್ಯ ಮಹಾತ್ಮ ಗಾಂಧಿಯವರೂ ಕೂಡ ಎಲ್ಲಿ ಆಡುಭಾಷೆ ಇದೆಯೋ ಅಲ್ಲಿ ಆ ಭಾಷೆ ಆಡಳಿತಭಾಷೆಯಾಗಬೇಕೆಂದು ಅವರ ಕೂಡ ಪ್ರತಿಪಾದನೆ ಮಾಡುತ್ತಾ ಇದ್ದರು. ಆ ಒಂದು ಹಿನ್ನೆಲೆಯಲ್ಲಿ ಇವತ್ತು ಕನ್ನಡ ನಾಡು 5 ಭಾಗಗಳಾಗಿದ್ದಂಥ ಸಂದರ್ಭದಲ್ಲಿ ಅವುಗಳನ್ನು ಒಂದುಗೂಡಿಸಬೇಕೆಂದು ಹೋರಾಟವನ್ನು ಮಾಡಿದರು. ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಹಳೇ ಮೈಸೂರು ಭಾಗ ಮತ್ತು ತಮಿಳುನಾಡಿನಿಂದ ಬಂದಂಥ ಕೆಲವು ಭಾಗಗಳು ಮತ್ತು ಕೊಡಗು ಪ್ರತ್ಯೇಕ ಸಿ ದರ್ಜೆಯ ರಾಜ್ಯವಾಗಿ ಇದ್ದಂಥ ದಿನಗಳು ಅದೆಲ್ಲವೂ ಸೇರಿ ಇವತ್ತು 41 ವರ್ಷಗಳಾದರೂ ಕೂಡ, ಸ್ವಾತಂತ್ರ್ಯ ಬಂದು 50 ವರ್ಷ, ಕರ್ನಾಟಕ ಏಕೀಕರಣವಾಗಿ 41 ವರ್ಷಗಳಾದರೂ ಕೂಡ ಇಡೀ ದೇಶದಲ್ಲಿ 25 ರಾಜ್ಯಗಳಿವೆ. ಯಾವ ರಾಜ್ಯದಲ್ಲೂ ಕೂಡ ಆ ಭಾಷೆಯನ್ನು ಕಾಪಾಡಲು ಕಾವಲು ಸಮಿತಿ ಮತ್ತು ಪ್ರಾಧಿಕಾರಗಳನ್ನು ಮಾಡಿಕೊಳ್ಳುತ್ತಿಲ್ಲ. ನಮ್ಮ ದುರದೃಷ್ಟ ನಾವು ಇವತ್ತು ಕನ್ನಡ ಕಾವಲು ಸಮಿತಿ, ಪ್ರಾಧಿಕಾರ ಎಂದು ಹೇಳಿ

ಕನ್ನಡದ ಬಗ್ಗೆ ಅಭಿವೃದ್ಧಿಗೊಳಿಸಲು ಪ್ರಯತ್ನವನ್ನು ಪಡುತ್ತಿದ್ದೇವೆ. ಇವತ್ತು ನಾನು ಮೊದಲೇ ಹೇಳಿದ ರೀತಿಯಲ್ಲಿ ಈ ನಾಡನ್ನು ಆಳಿದವರೆಲ್ಲರೂ ಕನ್ನಡಿಗರೇ ಆಗಿದ್ದರೂ ಕೂಡ, ಯಾರೂ ಪಕ್ಕದ ರಾಜ್ಯದವರು ಬಂದು ನಮ್ಮನ್ನು ಆಳಲಿಲ್ಲ, ಕನ್ನಡಿಗರೇ ಆಳಿದರೂ ಕೂಡ ನಾವು ಕುಗ್ರಾಮದಿಂದ ಹಿಡಿದು ವಿಧಾನಸೌಧದವರೆಗೂ ನ್ಯಾಯಾಲಯದಲ್ಲಿ ಎಲ್ಲೂ ಕೂಡ ಇವತ್ತು ಸಂಪೂರ್ಣವಾಗಿ ಕನ್ನಡವನ್ನು ಆಡಳಿತ ಭಾಷೆಯಾಗಿ ತರಲಿಕ್ಕೆ ಸಾಧ್ಯವಾಗದ ಪರಿಸ್ಥಿತಿಯಲ್ಲಿ ಇವತ್ತು ಇದ್ದೇವೆ. ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿರತಕ್ಕ ಜೆ.ಹೆಚ್‌ಪಟೇಲರು ಲೋಕಸಭೆಯಲ್ಲಿ ಮಾತನಾಡಿದ ದಿನಗಳಲ್ಲಿ ಕನ್ನಡದಲ್ಲಿ ಪ್ರಥಮವಾಗಿ ಅವರ ಭಾಷಣವನ್ನು ಪ್ರಾರಂಭ ಮಾಡಿ ಈ ರಾಜ್ಯ ಭಾಷೆಗಳಿಗೆ ಪ್ರಾಮುಖ್ಯತೆ ಬೇಕು ಎಂದು ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿದರು. ಭಾಷಾವಾರು ಪ್ರಾಂತ್ಯಗಳ ಅರ್ಥವೇ ಅಲ್ಲಿ ಜನ ಆಡುವ ಭಾಷೆಗಳನ್ನು ಆಡಳಿತ ಭಾಷೆ ಮಾಡಬೇಕು ಎಂದು. ಆ ಹಿನ್ನೆಲೆಯಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾಯಿತು. ಆದರೆ ಅವರು ಲೋಕಸಭೆಯಲ್ಲಿ 1967ರಲ್ಲಿ ಮಾತನಾಡಿದ ಮೇಲೂ ಕೂಡ ರಾಜಕೀಯವಾಗಿ ಇವತ್ತು ಈ ಭಾಷೆಗೆ ಗೌರವವನ್ನು ಆ ರಾಜ್ಯ ಭಾಷೆಗಳಿಗೆ ಸಲ್ಲಿಸಬೇಕು ಎನ್ನುವ ಧ್ಯೇಯವನ್ನು ಹೊಂದಿರುವಂಥ ನಾವು 41 ವರ್ಷದ ಕರ್ನಾಟಕ ಏಕೀಕರಣದಲ್ಲಿ ಇವತ್ತು ನಾವು ವಿಧಾನಸೌಧದಲ್ಲಿ ಎಷ್ಟೋ ತೀರ್ಮಾನಗಳು, ಎಷ್ಟೋ ಸಮಿತಿಯ ನಿರ್ಣಯಗಳು ಎಷ್ಟೋ ಅಧಿಕಾರಿಗಳಿಂದ ಬರತಕ್ಕದ್ದು, ಮಂತ್ರಿಮಾನ್ಯರಿಂದ ಬರತಕ್ಕದ್ದು ಇನ್ನೂ ಕೂಡ ಆಂಗ್ಲಭಾಷೆಯಲ್ಲಿ ಇರತಕ್ಕದ್ದನ್ನು ನಾವು ನೋಡಿದಾಗ ಮನಸ್ಸಿಗೆ ನೋವಾಗುತ್ತದೆ. ಈ 41 ವರ್ಷದ ಕರ್ನಾಟಕ ಏಕೀಕರಣದ ನಂತರ ಇನ್ನೂ ಕೂಡ ನಾವು ಆಂಗ್ಲ ವ್ಯಾಮೋಹವನ್ನು ಬ್ರಿಟಿಷರು ದೇಶಬಿಟ್ಟು ಹೋಗಿ 50 ವರ್ಷಗಳಾದರೂ ಕೂಡ ಇವತ್ತು ಕೂಡ ಬಿಟ್ಟಿಲ್ಲದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮ ಪಕ್ಕದ ರಾಜ್ಯಗಳಲ್ಲಿ, ಮದ್ರಾಸಿಗೆ ಹೋಗಿ ಇವತ್ತು ನೋಡುವಾಗ ಅಲ್ಲಿ ಒಬ್ಬ ಮಾರ್ವಾಡಿ ಅಂಗಡಿಯಲ್ಲಿ ಯಾರಾದರೂ ಜನರು ತಮ್ಮ ಕಷ್ಟ ಕಾರ್ಪಣ್ಯಗಳಿಗೆ ಒಂದು ವಸ್ತುವನ್ನು ಒಂದು ಒಡವೆಯನ್ನು ಗಿರವಿ ಇಟ್ಟರೆ ಅಲ್ಲಿರತಕ್ಕ ಮಾರ್ವಾಡಿ ತಮಿಳಿನಲ್ಲಿ ಬರೆದು ಇಂಥ ವ್ಯಕ್ತಿ ಇಂಥ ವಸ್ತುವನ್ನು ಗಿರವಿ ಇಟ್ಟಿದ್ದಾರೆ ಎಂದು ರಶೀತಿಯನ್ನು ಕೊಡುವುದನ್ನು ನೋಡುತ್ತೇವೆ. ಆದರೆ ನಮ್ಮಲ್ಲಿ ಇನ್ನೂ ಆ ಪರಿಸ್ಥಿತಿ ಬಂದಿಲ್ಲ ಎನ್ನುವುದಾದರೆ ನಮ್ಮ ನಾಡಿನ ನಾಯಕರುಗಳು, ಇಲ್ಲಿಯ ರಾಜಕೀಯ ವಾತಾವರಣ ಮತ್ತು ನಮಗಿರತಕ್ಕ ವಿಶಾಲ ಮನೋಭಾವದ ಹೆಸರಿನಲ್ಲಿ ಇವತ್ತು ಬೇರೆ ಭಾಷೆಗಳನ್ನು ನಾವು ಇವತ್ತು ಕಲಿಯುತ್ತೇವೆ. ಆದರೆ ಕನ್ನಡಕ್ಕೆ ಸಲ್ಲಬೇಕಾದ ಸ್ಥಾನಮಾನಗಳನ್ನು ಸಲ್ಲಿಸಲು ನಾವು ಹಿಂದೇಟು ಹಾಕಿದಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇದನ್ನು ಬದಲಾವಣೆ ಮಾಡಿ ಈ ನಾಡಿನ ಭಾಷೆಗೆ ಗೌರವವನ್ನು ಸಲ್ಲಿಸುವ ದಿಸೆಯಲ್ಲಿ ಸರ್ಕಾರ ಯಶಸ್ವಿಯಾಗಿ ಇನ್ನೂ ತೀವ್ರವಾಗಿ ಕೆಲಸ ಮಾಡಬೇಕಾಗಿದೆ. ಇವತ್ತು ಯಾವುದೋ ಒಂದು ಕುಗ್ರಾಮದಲ್ಲಿರತಕ್ಕ ಒಬ್ಬ ಸಾಧಾರಣ ರೈತನ ಮಗ ಶಾಲೆಗೆ ಹೋಗಿ ಒಂದು ಅಕ್ಷರ ಕೂಡ ಕಲಿತಿರದೆ ಅವನು ಯಾವುದೋ ಒಂದು ಸಣ್ಣ ಜಮೀನಿಗೆ 4 ಗುಂಟೆ 5 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಹೋಗುತ್ತಾನೆ. ನ್ಯಾಯಾಲಯಗಳಲ್ಲಿ ನೋಡಿದರೆ ಅಲ್ಲಿ ನ್ಯಾಯಾಧೀಶರು ಮತ್ತು ವಕೀಲರು ಅವರೂ ಸಹ ಇಂಗ್ಲೀಷ್ ಭಾಷೆಯಲ್ಲಿ ವ್ಯವಹಾರ ಮಾಡುವುದನ್ನು ನಾವು ನೋಡುತ್ತೇವೆ. ಅಲ್ಲಿ ಬರುವಂಥ ರೈತರಿಗೆ, ಶ್ರೀಸಾಮಾನ್ಯನಿಗೆ ಅವರು ಏನು

ಮಾತನಾಡುತ್ತಾರೆ ಎಂದು ಗೊತ್ತಾಗುವುದಿಲ್ಲ. ಆದ್ದರಿಂದ ಕನ್ನಡ ಭಾಷೆಯ ಅನುಷ್ಠಾನ ತೀವ್ರಗತಿಯಿಂದ ಆಗಬೇಕಾಗಿದೆ. ಎಲ್ಲಾ ಹಂತಗಳಲ್ಲೂ ಕನ್ನಡಬಳಕೆಯಾಗಬೇಕೆಂದು ಬರೇ ಸರ್ಕಾರ ಆಜ್ಞೆಯನ್ನು ಹೊರಡಿಸಿದರೆ ಸಾಲದು, ಪ್ರತಿಯೊಂದನ್ನೂ ತೀವ್ರವಾಗಿ ಜಾರಿಗೆ ತರಬೇಕಾಗಿದೆ. ನಮ್ಮಲ್ಲಿ ತುರ್ತುಪರಿಸ್ಥಿತಿ ಕಾಲದಲ್ಲಿ ಬೆಂಗಳೂರಿನಲ್ಲಿ ಸರ್ಕಾರ ಒಂದು ಹೇಳಿಕೆಯನ್ನು ಕೊಟ್ಟಿತು. ಯಾರಾದರೂ ರೇಷನ್ ಕಾರ್ಡು, ಡೂಪ್ಲಿಕೇಟ್ ಕಾರ್ಡು ಅಥವಾ ಹಲವಾರು ಕಾರ್ಡುಗಳನ್ನು ಇಟ್ಟುಕೊಂಡಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರ ಒಂದು ಹೇಳಿಕೆಯನ್ನು ಕೊಟ್ಟಿತು. ಯಾರನ್ನೂ ಪೊಲೀಸರು ಬಂಧಿಸಲಿಲ್ಲ. ಯಾರನ್ನೂ ಕಾರಾಗೃಹಕ್ಕೆ ಹಾಕಲಿಲ್ಲ. ಆ ಒಂದು ಹೇಳಿಕೆಗೆ ಬೆಂಗಳೂರಿನಲ್ಲಿ ಸಿನೇಮಾ ಥಿಯೇಟರುಗಳಲ್ಲಿ ಕ್ಯೂ ನಿಂತುಕೊಳ್ಳುವ ರೀತಿಯಲ್ಲಿ ಒಂದೊಂದು, ಎರಡೆರಡು ಕಿಲೋಮೀಟರ್ ಕ್ಯೂ ನಿಂತುಕೊಂಡು ಅವರ ಹತ್ತಿರ ಇದ್ದಂಥ ಡೂಪ್ಲಿಕೇಟ್ ಕಾರ್ಡುಗಳನ್ನು ಸರ್ಕಾರಿ ಕಚೇರಿಗಳಿಗೆ ಹೋಗಿ ಅಲ್ಲಿ ಬಾಕ್ಸ್‌ಗಳಲ್ಲಿ ಹಾಕುವಂಥಾದ್ದನ್ನು ನಾವು ನೋಡಿದ್ದೇವೆ. ಆ ರೀತಿ ನಮ್ಮ ಜನ ಬಂದು ಇವತ್ತು ಈ ಭಾಷೆ ಬಗ್ಗೆ, ಮತ್ತು ಭಾಷೆಯ ಬಗ್ಗೆ ಅಭಿಮಾನವನ್ನು ಮೂಡಿಸಬೇಕಾದರೆ ಸರ್ಕಾರ ಕಡ್ಡಾಯವಾಗಿ ಈ ರಾಜ್ಯದ ಭಾಷೆಯನ್ನು ಜನರ ಮೇಲೆ ಒತ್ತಾಯಮಾಡಿ ಇಂಗ್ಲೀಷನ್ನು, ಹಿಂದಿಯನ್ನು ಹೇರುವುದನ್ನು ನಾವು ನೋಡುತ್ತೇವೆ. ಶಾಲೆಗಳಲ್ಲಿ ಮಕ್ಕಳು ಶಾಲೆಗೆ ಹೋಗಬೇಕಾದರೆ ಒಂದು ದೊಡ್ಡ ಪುಸ್ತಕಗಳ ಮೂಟೆಯನ್ನು ಹೊತ್ತುಕೊಂಡು ಹೋಗುತ್ತಾರೆ. ಹಿಂದಿ, ಆಂಗ್ಲ ಭಾಷೆಯ ಹಲವಾರು ಪುಸ್ತಕಗಳನ್ನು ತೆಗೆದುಕೊಂಡು ಅವರು ಹೋಗುತ್ತಾರೆ. ಆದರೆ ಆ ಒಂದು ಉತ್ಸಾಹ ಮತ್ತು ಕನ್ನಡದಲ್ಲಿ ಅಕ್ಷರ ಕಲಿಯುವುದನ್ನು, ನ್ಯಾಯಾಲಯದಲ್ಲಿ ಕಟ್ಟುನಿಟ್ಟಾಗಿ ಕನ್ನಡವನ್ನು ಜಾರಿಗೆ ತರುವುದನ್ನು, ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳಿಂದ ಹಿಡಿದು ಸಾಧಾರಣ ಗ್ರಾಮಪಂಚಾಯಿತಿಯ ಅಧ್ಯಕ್ಷ ಕೂಡ ಕನ್ನಡದಲ್ಲೇ ಅವನು ಪತ್ರ ಬರೆಯುವುದು, ಕನ್ನಡದಲ್ಲೇ ಉತ್ತರವನ್ನು ಪಡೆಯುವ ಕೆಲಸವನ್ನು ಇವತ್ತು ತೀವ್ರವಾಗಿ ಮಾಡಿದರೆ ಮಾತ್ರ ನಾವು ಈ ಕರ್ನಾಟಕ ಏಕೀಕರಣ ಆಗಿದ್ದಕ್ಕೆ ಒಂದು ಅರ್ಥವಿರುತ್ತದೆ. ಭಾಷಾವಾರು ಪ್ರಾಂತ್ಯ ರಚನೆಯಾಗಿದ್ದಕ್ಕೂ ಕೂಡ ಅರ್ಥ ವಿರುತ್ತದೆ ಎಂದು ನಾನು ಅಚಲವಾಗಿ ನಂಬಿದ್ದೇನೆ. ಈಗ ಪ್ರತಿವರ್ಷ ನವೆಂಬರ್ ಒಂದನೇ ತಾರೀಖು ಬಂದರೆ ರಾಜ್ಯೋತ್ಸವವನ್ನು ಆಚರಣೆ ಮಾಡುವಾಗ, ನಾವು ಬಣ್ಣ ಬಣ್ಣದ ದೀಪಗಳನ್ನು ಹಾಕಿ ಸಾವಿರಾರು ಕಡೆ ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡುತ್ತೇವೆ. ಆದರೆ ಆ ನವೆಂಬರ್ ಒಂದು ತಿಂಗಳು ಹೋಗಿಬಿಟ್ಟರೆ ಮತ್ತೆ ನಾವು ಕನ್ನಡವನ್ನು ಮರೆಯುತ್ತೇವೆ. ಆ ಪರಿಸ್ಥಿತಿ ಬದಲಾಗಬೇಕು. ಇವತ್ತು ಎಷ್ಟೋ ಜನ ಕನ್ನಡ ಸಾಹಿತಿಗಳು ಅವರು ಬರೆದಂಥ ಪುಸ್ತಕಗಳನ್ನು ಒಂದು ಸಾವಿರ ಎರಡು ಸಾವಿರ ಪ್ರತಿಗಳನ್ನು ಪ್ರಿಂಟ್ ಮಾಡಿದರೆ, ಹಣ ಕೊಟ್ಟು ಪ್ರೆಸ್ಸಿನಿಂದ ಪುಸ್ತಕಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಎಷ್ಟೋಜನ ನಮ್ಮ ಸಾಹಿತಿಗಳು ಇವತ್ತು ನರಳುವುದನ್ನು ನಾವು ನೋಡುತ್ತಿದ್ದೇವೆ. ಈ ಪರಿಸ್ಥಿತಿಯನ್ನು ಬದಲಾವಣೆ ಮಾಡಿ ಇವತ್ತು, ಕನ್ನಡವನ್ನು ಎಲ್ಲಾ ಹಂತದಲ್ಲೂ ಜಾರಿಗೆ ತರಲು ಮತ್ತು ಅದು ಬಲಾತ್ಕಾರವಾದರೂ ಸರಿ ಈ ನಾಡಿನ ಭಾಷೆಯನ್ನು ಒಂದು ಸಿಂಹಾಸನದಲ್ಲಿ ಕೂರಿಸಿ ನಮ್ಮ ಹಿರಿಯರು ಕಂಡಂಥ ಕನಸನ್ನು ನನಸಾಗಿಸುವ ದಿಸೆಯಲ್ಲಿ ಸರ್ಕಾರ ತೀವ್ರವಾದ ಕೆಲಸವನ್ನು ತೀವ್ರವಾದ ಆಸಕ್ತಿಯನ್ನು ವಹಿಸಿ ಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಪಡಿಸಿ, ಇವತ್ತು ಪ್ರವಾಸೋದ್ಯಮದ ಬಗ್ಗೆ

ಮಾತನಾಡುವಾಗ, ಇವತ್ತು ಬೆಂಗಳೂರು ನಗರ ಕರ್ನಾಟಕ ರಾಜ್ಯದ ರಾಜಧಾನಿಯಾಗಿದೆ. ಇವತ್ತು ಹಲವಾರು ಜನರು ಹೊರರಾಜ್ಯಗಳಿಂದ ಮತ್ತು ದೇಶಗಳಿಂದ ಬೆಂಗಳೂರಿಗೆ ಪ್ರವಾಸ ಬರುವುದನ್ನು ನಾವು ನೋಡುತ್ತೇವೆ. ಇಲ್ಲಿ ಬೆಂಗಳೂರಿಗೆ ಬಂದರೆ ಸುಮಾರು 40-50-60 ಲಕ್ಷ ಎಂದು ಹೇಳಿದರೂ ಕೂಡ, ಒಂದು ಕೋಟಿ ಜನ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಮತ್ತು ರೆವಿನ್ಯೂ ಬಡಾವಣೆ ಮತ್ತು ಬಿ.ಡಿ.ಎ ಪ್ರದೇಶಗಳು ಮತ್ತು ಬೆಂಗಳೂರಿಗೆ ಸುತ್ತಮುತ್ತಲೂ ಅಂಟಿಕೊಂಡಿರುವ ಪ್ರದೇಶಗಳ ಸಂಖ್ಯೆಯನ್ನು ತೆಗೆಯುವಾಗ ಒಂದು ಕೋಟಿ ಜನಸಂಖ್ಯೆಗೆ ಮೀರಿದೆ. ಇವತ್ತು ಹೊರಗಡೆಯಿಂದ ಬರುವವರಿಗೆ ಏನಾದರೂ ಇಲ್ಲಿ ಪ್ರವಾಸದ ವಿಶೇಷವಿದೆಯೇ ಎಂದು ನೋಡುವಾಗ ಈ ಸುಂದರವಾದ ವಿಧಾನಸೌಧ, ಕಬ್ಬನ್‌ಪಾರ್ಕ್, ಲಾಲ್‌ಬಾಗ್‌ನ್ನು ಬಿಟ್ಟರೆ ಬೇರೇನನ್ನೂ ಬೆಂಗಳೂರಿನಲ್ಲಿ ತೋರಿಸುವುದಕ್ಕೆ ಸಾಧ್ಯವಿಲ್ಲ. ನಂತರ ಗವರ್ನಮೆಂಟ್ ಸೋಪ್ ಫ್ಯಾಕ್ಟರಿಯನ್ನು ತೋರಿಸಬೇಕು. ಇವತ್ತು ಬೆಂಗಳೂರಿನಲ್ಲಿರುವಂಥ ಜನರು, ಮಕ್ಕಳು, ಹುಡುಗರು, ಅದರಲ್ಲೂ ಶಾಲಾ ಬಾಲಕರಿಗೆ ಯಾವುದೇ ಪ್ರವಾಸದ ಆಕರ್ಷಣೆಯನ್ನು ಬೆಂಗಳೂರು ನಗರದಲ್ಲಿ ತೋರಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಕಳೆದವರ್ಷ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಪರವಾಗಿ ಕಳೆದ ವರ್ಷ ಅಂಡಮಾನ್-ನಿಕೋಬಾರ್‌ಗೆ ಪ್ರವಾಸ ಹೋಗಿದ್ದಂಥ ಸಂದರ್ಭದಲ್ಲಿ, ಒಂದು ಸಣ್ಣ ದ್ವೀಪವಾಗಿರತಕ್ಕಂಥ ಅಂಡಮಾನ್ - ನಿಕೋಬಾರ್‌ನಲ್ಲಿ ಒಂದು ನೂರಡಿ-ನೂರೈವತ್ತು ಅಡಿ ಸಾಧಾರಣವಾಗಿರತಕ್ಕಂಥ ಜಾಗದಲ್ಲೇ ಕೃತಕವಾಗಿ ನೀರನ್ನು ಬಿಟ್ಟು ಅಲ್ಲಿ ಸಣ್ಣಮಕ್ಕಳಿಗೆ ದೋಣಿಯನ್ನು ಓಡಿಸಿ ಆ ಮಕ್ಕಳಿಗೆ ಮನೋರಂಜನೆಯನ್ನು ಕೊಡುವುದನ್ನು ನೋಡಿದ್ದೇವೆ. ಅದೇರೀತಿಯಲ್ಲಿ ಮುನ್ನೂರು-ಮುನ್ನೂರಡಿ ಜಾಗದಲ್ಲಿ ಪ್ರವಾಸಕ್ಕೆ ಬರತಕ್ಕಂಥ ಜನರನ್ನು ಆಕರ್ಷಣೆ ಮಾಡಲು ದೊಡ್ಡವರಿಗೂ ಕೂಡ ಅಲ್ಲಿ ಬೋಟನ್ನು ಬಿಟ್ಟು, ಅದಕ್ಕೆ ಹಣವನ್ನು ನಿಗದಿಮಾಡಿ ಅಲ್ಲಿ ಮನರಂಜನೆ ನೀಡುವಂಥ ಕಾರ್ಯಕ್ರಮವನ್ನು ಸಣ್ಣ ಅಂಡಮಾನ್- ನಿಕೋಬಾರ್ ದ್ವೀಪದಲ್ಲಿ ನೋಡುತ್ತೇವೆ. ಯಾವುದೋ ಫ್ರೆಂಚ್ ಕಾಲದಲ್ಲಿದ್ದಂಥ ಪರಿಸ್ಥಿತಿಗಳು, ಅಲ್ಲಿ ಸೆಲ್ಯುಲಾರ್ ಜೈಲು ಮಾತ್ರ ಇರುವುದನ್ನು, ಅದು ಕಪ್ಪುನೀರಿನ ದಂಡನೆ ಕೊಡುತ್ತಿದ್ದರು ಎಂಬುದನ್ನು ನಾವು ಚರಿತ್ರೆಯನ್ನು ಓದಿದ್ದೇವೆ, ಕೇಳಿದ್ದೇವೆ. ಆದರೆ ಅಲ್ಲೂ ಕೂಡ ಒಂದು ಸಾಧಾರಣ ಗವರ್ನರ್ ಆಳ್ವಿಕೆಯಲ್ಲಿರತಕ್ಕಂಥ ಅಂಡಮಾನ್-ನಿಕೋಬಾರ್ ದ್ವೀಪದಲ್ಲಿ ಕೂಡ ಅಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ಕೊಡುವ, ಪ್ರವಾಸಿಗರನ್ನು ಆಕರ್ಷಣೆ ಮಾಡುವಂಥ ಕೆಲಸವನ್ನು ಮಾಡತಕ್ಕಂಥ ದಿನಗಳಲ್ಲಿ ಇವತ್ತು ಬೆಂಗಳೂರು ನಗರದಲ್ಲಿ ಇಲ್ಲಿಯ ಮಕ್ಕಳಿಗೆ ಯಾವುದೇ ವಿಧವಾದ ಮನರಂಜನೆ ಇಲ್ಲ. ಆ ಸ್ಯಾಂಕಿಟ್ಯಾಂಕ್‌ನ್ನು ಆಕರ್ಷಣೆಯಿರುವ ಜಾಗವನ್ನಾಗಿ ಮಾಡಿ, ಅಲ್ಲಿ ಬೋಟುಗಳನ್ನು ಬಿಟ್ಟು, ಹಲವಾರು ಯೋಜನೆಗಳನ್ನು ಅಲ್ಲಿ ರೂಪಿಸಿ, ಬೆಂಗಳೂರು ನಗರದ ಜನರಿಗೆ ಮನರಂಜನೆಯನ್ನು ನೀಡಬಹುದು. ಬೆಂಗಳೂರಿನಲ್ಲಿರತಕ್ಕಂಥ ಜನರಿಗೆ ಇಲ್ಲಿ ಏನು ಮನರಂಜನೆ ಇದೆಯಂತ ಕೇಳಿದಾಗ, ಎಲ್ಲಿ ನೋಡಿದರೂ ಹೊಗೆ, ಎಲ್ಲಿ ನೋಡಿದರೂ ಧೂಳು ಮತ್ತು ಎಲ್ಲಿ ನೋಡಿದರೂ ಹಳೆಕಾಲದ ಸ್ಯಾನಿಟರಿ ಲೈನ್‌ಗಳನ್ನು ಹಾಕಿ ಬೆಂಗಳೂರು ನಗರದ ನಾನಾಭಾಗಗಳಲ್ಲಿ ಇವತ್ತು ಆ ಸ್ಯಾನಿಟರಿ ಎಲ್ಲೆಲ್ಲಿ ಕಟ್ಟಿಕೊಳ್ಳುತ್ತದೋ, ಆ ವಾಸನೆಯನ್ನು ಕುಡಿಯುವುದು ಮಾತ್ರ ಬೆಂಗಳೂರು ಜನರಿಗೆ ಉಳಿದಿದೆ. ಈ ಪರಿಸ್ಥಿತಿ ಇವತ್ತು ಬದಲಾವಣೆಯಾಗಬೇಕಾಗಿದೆ. ಅದೇ ನಾವುಕೆ.ಆರ್.ಎಸ್.ಗೆ ಹೋಗಿ ನೋಡುತ್ತೇವೆ,

ಅಲ್ಲಿ ಹಲವಾರು ಕಡೆ ಬಣ್ಣಬಣ್ಣದ ಕಾರಂಜಿಗಳನ್ನು ನೋಡುವಾಗ, ಈ ಸ್ಯಾನಿಟರಿಯನ್ನೇ ಇವತ್ತು ನಾವು ಕಾರಂಜಿಯಾಗಿ ನೋಡಿ, ಆನಂದಪಡಬೇಕಾದ ಪರಿಸ್ಥಿತಿ ಇವತ್ತು ಬೆಂಗಳೂರು ನಗರದಲ್ಲಿದೆ. ಬೆಂಗಳೂರು ನಗರವನ್ನು ಇನ್ನೂ ಹೆಚ್ಚು ಹೆಚ್ಚು ಆಕರ್ಷಣೆಯನ್ನು ಮಾಡಿ, ಪ್ರವಾಸಿಗರು ಇಲ್ಲಿ ಬರುವಂಥ ದಿನಗಳಲ್ಲಿ, ಯಾವುದು ಬೆಂಗಳೂರನ್ನು ಒಂದು ಗಾರ್ಡನ್ ಸಿಟಿ ಎಂದು ಹೇಳುತ್ತಾರೋ, ಅದು ಈಗ ತನ್ನ ಹಳೆಯ ಕಾಲದ ಮಹಿಮೆಯನ್ನು ಕಳೆದುಕೊಂಡು ಬೆಂಗಳೂರಿನ ಜನ ಇವತ್ತು ನನ್ನ ಗೆಳೆಯರು ಮಾತನಾಡುವಾಗ ಹೇಳಿದರು. ಬೆಂಗಳೂರಿನಲ್ಲಿ ಒಂದು ದಿವಸಕ್ಕೆ ಎಷ್ಟೋ ಪ್ರಮಾಣದಲ್ಲಿ ಹೊಗೆ ಮತ್ತು ಧೂಳು ನಮ್ಮದೇಹದೊಳಗೆ ಹೋಗುತ್ತಿರುವುದನ್ನು ನಾವು ನೋಡುತ್ತೇವೆ. ಪ್ರತಿಯೊಬ್ಬರೂ ಈಗ ಕೆಮ್ಮುವುದನ್ನು ಬೆಂಗಳೂರಿನಲ್ಲಿ ನೋಡುತ್ತೇವೆ. ಇವತ್ತು ಕೆಮ್ಮು ಮತ್ತು ಗಂಟಲು ತೊಂದರೆಗಾಗಿ ಆಸ್ಪತ್ರೆಗಳಲ್ಲಿರುವ ಡಾಕ್ಟರ್‌ಗಳ ಹತ್ತಿರ ಹೋಗುತ್ತಾರೆ. ಇದನ್ನು ನಾವು ನೋಡುತ್ತಿದ್ದೇವೆ. ಇವತ್ತು ಬೆಂಗಳೂರನ್ನು ಒಂದು ಸುಂದರವಾದ ನಗರವನ್ನಾಗಿ ಮಾಡಬೇಕು. ಬೆಂಗಳೂರಿನಲ್ಲಿ ಗತಕಾಲದಲ್ಲಿ ಏನು ವೈಭವ ಇತ್ತೋ, ಅದು ಮತ್ತೆ ಬರುವ ರೀತಿಯಲ್ಲಿ ಮಾಡಬೇಕು. ಯಾವ ಭಾಗದಲ್ಲಿ ಕೂಡ ಪ್ರವಾಸಿಗರು ಬೆಂಗಳೂರು ನಗರಕ್ಕೆ ಬಂದರೆ ಇವತ್ತು ಯಾವುದೇ ವಿಧವಾದ ಆಕರ್ಷಣೆ ಇಲ್ಲ. ಆದ್ದರಿಂದ ಹೆಚ್ಚುಹೆಚ್ಚು ಪ್ರವಾಸೋದ್ಯಮ ಇಲಾಖೆಯಿಂದ ಬೆಂಗಳೂರಿನ ಹಲವಾರು ಭಾಗಗಳಲ್ಲಿ ಹಲವಾರು ಪ್ರಕೃತಿದತ್ತವಾಗಿ ಬಂದಿರತಕ್ಕಂಥ ಕೆರೆಗಳು ಇಲ್ಲಿ ಇದ್ದರೂ ಕೂಡ, ಅದನ್ನು ಸೂಕ್ತ ರೀತಿಯಲ್ಲಿ ನಮ್ಮ ಪ್ರವಾಸೋದ್ಯಮ ಇಲಾಖೆ ಅವುಗಳಿಗೆ ಆಕರ್ಷಣೆಯನ್ನು ನೀಡುತ್ತಿಲ್ಲ, ಆ ಕೆಲಸವನ್ನು ಮಾಡುತ್ತಿಲ್ಲ. ಅದನ್ನು ಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಮಾಡುತ್ತ, ಇವತ್ತು ಏನು ಪ್ರವಾಸಿಗರು ತಾವು ಬೇರೆ ಬೇರೆ ರಾಜ್ಯಗಳಿಗೆ, ದೇಶಗಳಿಗೆ ಹೋಗುವಂಥ ಸಂದರ್ಭದಲ್ಲಿ ಏನೊಂದು ಕೃತಕವಾದಂಥ ಮನರಂಜನೆ ನೀಡುವ ಕಾರ್ಯಕ್ರಮಗಳನ್ನು ಹಾಕಿ, ನೀರಿಲ್ಲದಿದ್ದರೂ ಕೂಡ ಬಲಾತ್ಕಾರವಾಗಿ ನೀರನ್ನು ತಂದು, ತೊಟ್ಟಿಗಳನ್ನು ಟ್ಯಾಂಕ್‌ಗಳನ್ನು ಕಟ್ಟಿ ವ್ಯವಸ್ಥೆ ಮಾಡುತ್ತಾರೋ ಅಂತಹ ಪರಿಸ್ಥಿತಿ ಇವತ್ತು ನಮಗೆ ಇಲ್ಲ. ಪ್ರಕೃತಿದತ್ತವಾಗಿ ನಮಗೆ ನೀರಿನ ಸೌಲಭ್ಯಗಳು ಇದೆ, ಹಲವಾರು ಕೆರೆಗಳು ಇವೆ. ಆ ಕೆರೆಗಳನ್ನೆಲ್ಲ ಅಭಿವೃದ್ಧಿ ಪಡಿಸಿ ಬೆಂಗಳೂರು ನಗರದಲ್ಲಿರತಕ್ಕಂಥ ಮಕ್ಕಳಿಗೆ ಮತ್ತು ಹೊರಗಿನಿಂದ ಬರತಕ್ಕಂಥ ಜನರಿಗೆ ಕೂಡ, ಒಂದು ಪ್ರವಾಸದ ಆಕರ್ಷಣೆಯನ್ನು ಮಾಡಿ, ಇವತ್ತು ವಿಧಾನಸೌಧ, ಕಬ್ಬನ್ ಪಾರ್ಕ್, ಲಾಲ್‌ಬಾಗ್ ಬಿಟ್ಟರೆ ಬೇರೆ ಏನೂ ಇಲ್ಲ. ಇದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿ, ಸರ್ಕಾರ ಈ ಪ್ರವಾಸಿಗರಿಗೆ ಒಳ್ಳೆಯ ಆಕರ್ಷಣೆಯನ್ನು ಮಾಡಬೇಕು ಅಂತ ನಾನು ಈ ಒತ್ತಾಯವನ್ನು ಮಾಡಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ನಾನು ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಮಾಡುತ್ತೇನೆ.

ಚೇರ್ಮನ್ : ಪುಟ್ಟಣ್ಣಯ್ಯನವರು....

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಇಲ್ಲ, ನಾನು ಇವತ್ತು ಧಾರವಾಡಕ್ಕೆ ಹೋಗುತ್ತಿದ್ದೇನೆ. ನಾನು ಲೆಟರ್ ಕೊಟ್ಟಿದ್ದೇನೆ.

ಚೇರ್ಮನ್ : ಇವತ್ತು ಏನೋ ರಿಪ್ಲೈ ಆಗಲೇಬೇಕಂತೆ ಸ್ವಲ್ಪ ಮಾತನಾಡಿಬಿಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ನನ್ನ ಮುಂದಿನವರಿಗೆ ಹೇಳಿ. ನಾನು ನಂತರ ಮಾತನಾಡುತ್ತೇನೆ.

ಚೇರ್ಮನ್: ಕರ್ಕಿಯವರು....

+ ಡಾ||ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಅಧ್ಯಕ್ಷರೇ, ಬೇಡಿಕೆ ಸಂಖ್ಯೆ 27 ಪ್ರವಾಸೋದ್ಯಮ ಇಲಾಖೆ ಬಗ್ಗೆ ಮಾತನಾಡುತ್ತಾ, ಈ ಇಲಾಖೆಯ ಬೇಡಿಕೆ ಸಾರಾಸಗಟಾಗಿ ತಿರಸ್ಕಾರಕ್ಕೆ ಯೋಗ್ಯವಾಗಿದೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಡಿಪಾರ್ಟ್‌ಮೆಂಟ್ ಆಫ್ ಟೂರಿಸಂ- ಇದರಲ್ಲಿ ತಮ್ಮ ಧ್ಯೇಯಗಳನ್ನು ಹೇಳುತ್ತಾ

"The Tourism Department is a service-oriented Department. The main object of the Department is to encourage private entreprenuers and Non-Government Organisations involved in the Development of the State".

ಅಲ್ಲಿಯವರೆಗೆ. ಆದರೆ ಅನಂತರ -

"....by extending a package of incentives and concessions like investment subsidy, luxury tax concession, sales tax concession/exemption, concession in payment of electrical charges on par with industries"

ಇದು ಸರಿಯಾದದ್ದು ಅಲ್ಲ. ಯಾವಾಗ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಈ ಸಬ್ಸಿಡಿಗಳ ಕಡಿತ ಆಗಬೇಕು ಎಂದು ನಾವು ಇಚ್ಛಿಪಡುತ್ತೇವೋ, ನಾವು ಯೋಚನೆ ಮಾಡುತ್ತೇವೋ, ರೈತರಿಗೆ ಕೊಡತಕ್ಕಂಥ ಸಬ್ಸಿಡಿ, ವಿದ್ಯುತ್ ಸಬ್ಸಿಡಿಯನ್ನು ಕೂಡ ಕಡಿತ ಮಾಡಬೇಕು ಎಂದು ನಮ್ಮ ಯೋಚನೆ ಇದೆಯೋ, ಅಂತಹ ಸಮಯದಲ್ಲಿ ಕೇವಲ 18 ಕೋಟಿ ರೂಪಾಯಿಗಳ ಒಂದು ಡಿಪಾರ್ಟ್‌ಮೆಂಟ್, ಮಿಲಿನಿಯರ್ಸ್‌ಗೆ ಸಬ್ಸಿಡಿಯನ್ನು ಕೊಡುವುದಕ್ಕೆ ಹೊರಟಿದೆ. ಆದ್ದರಿಂದ ಈ ಒಂದು ಗುರಿ ಏನಿದೆ, ಆ ಗುರಿಯಲ್ಲೇ ತಪ್ಪಿದ್ದಾರೆ. "involved in the Development process, Yes; private entreprenuers involve ಮಾಡಬೇಕು. ಇನ್‌ವಾಲ್ವ್ ಮಾಡಿದಾಕ್ಷಣ ಅವರಿಗೆ ಸಬ್ಸಿಡಿ ಕೊಡಬೇಕೆಂದೇನೂ ಇಲ್ಲ. ಸಬ್ಸಿಡಿ ಕೊಟ್ಟರೆ ಮಾತ್ರ ಬರುತ್ತಾರೆಂದೇನಲ್ಲ. ಉದಾಹರಣೆಗೆ ಹೇಳುವುದಾದರೆ ಯಾವುದೇ ಒಬ್ಬ ವ್ಯಾಪಾರಿ ಲಾಭ ಇದ್ದರೆ ಮಾತ್ರ ಬರುತ್ತಾನೆ. ನೂರಾರು ಕೋಟಿ ರೂಪಾಯಿಗಳನ್ನು ತೊಡಗಿಸಿ ಕೇವಲ ಸಬ್ಸಿಡಿ ರೂಪದಲ್ಲಿ ಬರುವಂತಹ 25-30-35 ಲಕ್ಷ ರೂ.ಗಳಿಗೆ ಯಾರೂ ಬರುವುದಿಲ್ಲ. ಲಾಭ ಇದ್ದರೆ ಮಾತ್ರ ಬರುತ್ತಾರೆ. ಬೆಂಗಾಡಿನಲ್ಲಿ35 ಲಕ್ಷ ರೂ. ಸಬ್ಸಿಡಿ ಕೊಡುತ್ತೇವೆಂದರೆ ಯಾರು ಮಾಡುವುದಿಲ್ಲ. ಎಲ್ಲಿ ಲಾಭ ಇದೆಯೋ ಅದಕ್ಕಾಗಿ ಬರುವುದರಿಂದ ಸಬ್ಸಿಡಿ ಕೊಡುವುದು ಅನಗತ್ಯ. ಗುರಿ ಧ್ಯೇಯ ಏನಿದೆ ಅದನ್ನು ತಪ್ಪಿದ್ದಾರೆ, ಇವತ್ತು ಇದರ ಬಗ್ಗೆ ನೀತಿ ನಿರೂಪಿಸತಕ್ಕಂಥರವರಿಗೆ ಇಮ್ಯಾಜಿನೇಷನ್ ಹಾಗೂ ವಿಷನ್ ಕೂಡ ಯಾವುದೂ ಇಲ್ಲ. ಈ ಇಲಾಖೆ ಬಗ್ಗೆ ಪರಿಕಲ್ಪನೆ ಕೂಡ ಇಲ್ಲವೆಂದು ಹೇಳಬೇಕಾಗುತ್ತದೆ. ಸರ್ಕಾರದ ಪ್ರಕಟಣೆಯಲ್ಲಿ New Tourism Policy - new Education Policy, Industrial policy, agricultural policy. ಮಾಡಿರುವ ರೀತಿಯಲ್ಲಿ ಇದು ಹೊಸ ಪ್ರವಾಸೋಧ್ಯಮದ ನೀತಿ ನಾನು ಇದನ್ನು ಮೊದಲು ನೋಡಿದಾಗ ಬಹಳ ಮಹತ್ವದ್ದುವಿರಬೇಕೆಂದು

ತಿಳಿದಿದ್ದೆ. ಆದರೆ ಇದನ್ನು ನೋಡಿದಾಗ ನನಗೆ ಆಶ್ಚರ್ಯವಾಯಿತು ಏಕೆಂದರೆ ಕೇವಲ ಸಬ್ಸಿಡಿ ಕೊಡುವುದರಲ್ಲಿ ಬಹಳಷ್ಟು ಗಮನ ನೀಡಿದ್ದಾರೆ. 9 ಇಲಾಖೆಗಳು ಏನು ಮಾಡಿದ್ದಾರೆಂದರೆ ಎ.ಬಿ.ಸಿ.ಡಿ.ಇ. ಎಂದು ... ನಾನೇನೋ ಮಹತ್ವದ್ದು ಎಂದು ತಿಳಿದುಕೊಂಡಿದ್ದೆ. ಅದು ಯಾವುದೂ ಅಲ್ಲ. ಎ ಅಂದರೆ ಬೆಂಗಳೂರಿನಂಥ ಒಂದು ದೊಡ್ಡ ಪ್ರದೇಶ. ಬಿ ಅಂದರೆ ಪ್ರವಾಸಗರಿಗೆ ಅನುಕೂಲವಾಗಿರುವ ಪ್ರದೇಶ. ಈ ರೀತಿಯಲ್ಲಿ ಎ ಬಿ ಸಿ ಡಿ ಇ ಎಂದು ಕ್ಯಾಟಗರಿ ಮಾಡಿದ್ದಾರೆ. ಇದು ಎಷ್ಟು ಅವೈಜ್ಞಾನಿಕವಾಗಿ ಮಾಡಿದ್ದಾರೆಂದರೆ ಒಂದು ಪ್ರವಾಸೋದ್ಯಮ ಸ್ಥಳವನ್ನು ಯಾವುದೂ ಮುಖ್ಯ ಅಮುಖ್ಯವೆಂದು ನಾವು ಇಲ್ಲಿ ಕುಳಿತುಕೊಂಡು ನಿಶ್ಚಯ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಪ್ರವಾಸಿಗರು ಮಾಡಬೇಕಾಗಿದೆ. ಈ ಯೋಜನೆ ಕೇವಲ ಸಬ್ಸಿಡಿ ಕೊಡುವಂತಹ ಯೋಜನೆ ಅದನ್ನು ಬಿಟ್ಟು ಬೇರೆ ಏನೂ ಇಲ್ಲ. ಯಾರಾದರೂ ಪ್ರವಾಸಿಗರು ಬರಬೇಕಾದರೆ ಇದು 'ಎ' ಕ್ಷೇತ್ರ ಎಂದು ನೋಡಿಕೊಂಡು ಬರುವುದಿಲ್ಲ, ಬರುವುದಕ್ಕಾಗುವುದಿಲ್ಲ, ಅವರಿಗೆ ಅರ್ಜ್ ಇರುತ್ತದೆ, ಏನನ್ನು ನೋಡಬೇಕು, ಯಾವುದಕ್ಕೆ ನಾನು ಗಮನ ಕೊಡಬೇಕೆಂದು ಅವರಿಗೆ ಇರುತ್ತದೆ. ಉದಾಹರಣೆಗೆ ಹೇಳುವುದಾದರೆ ಕೆಲವರಿಗೆ ಧಾರ್ಮಿಕ ಸ್ಥಳ, ಕೆಲವರಿಗೆ ಬೀಚ್, ಕೆಲವರಿಗೆ ಸಮುದ್ರದ ತೀರ, ಕೆಲವರಿಗೆ ನಿಸರ್ಗ- ರಮಣೀಯ ಪ್ರದೇಶ, ಕೆಲವರಿಗೆ ಆರ್ಕಿಟಿಕ್ಚರ್ ಬ್ಯೂಟಿ ಇನ್ನು ಕೆಲವರಿಗೆ ಐತಿಹಾಸಿಕ ಸ್ಥಳ ಬೇಕಾಗಬಹುದು, ಅದು ಅವರವರ ಅಭಿರುಚಿಗೆ ತಕ್ಕಂತೆ ಇರುತ್ತದೆ. ಈ ರೀತಿ ಒಂದು ಚೈನ್ ಮಾಡಿದ್ದರೆ ನಾನು ಅಪ್ರೀಷಿಯೇಟ್ ಮಾಡುತ್ತಿದ್ದೆ, ಇದಕ್ಕೆ ವಿರುದ್ಧವಾಗಿ ಈ ಪ್ರವಾಸಿಗರ ಆಕರ್ಷಣೆ ಏನು ಇರುತ್ತದೆಯೋ ಅದಕ್ಕೆ ವಿರುದ್ಧವಾದ ಕೇವಲ ಸಬ್ಸಿಡಿ ಕೊಡುವ ಸಲುವಾಗಿ ಎ ಬಿ ಸಿ ಡಿ ಇ ಎಂದು ಕ್ಯಾಟಗರಿ ಮಾಡಿದ್ದಾರೆ, ಇದನ್ನು ಎಷ್ಟು ಅವೈಜ್ಞಾನಿಕವಾಗಿ ಮಾಡಿದ್ದಾರೆಂದರೆ ಇದರಲ್ಲಿ ಒಂದು ವಿಚಾರಶೀಲತೆ ಮತ್ತೊಂದು ಯಾವುದೂ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಛೇರ್ಮನ್‌ರೇ, ಕೇವಲ ಸಬ್ಸಿಡಿಗಾಗಿ ಪ್ರವಾಸೋಧ್ಯಮ ನೀತಿ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಏಕೆಂದರೆ ಮಾನ್ಯ ಕರ್ಕಿಯವರು ಹಿರಿಯರು, ನಾನು ಉತ್ತರ ಕೊಡುವ ಸಂದರ್ಭದಲ್ಲಿ ಇದಕ್ಕೆ ಎಲ್ಲಾ ವಿವರಣೆಯನ್ನು ಕೊಡುತ್ತೇನೆ.

ಡಾ||ಎಂ.ಪಿ. ಕರ್ಕಿ : ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ಅದು ಏನೆಂದರೆ Centrally Sponsored schemes. ಇದರಲ್ಲಿ way-side facilities ಹೋಟೆಲ್ ಕಟ್ಟತಕ್ಕಂಥದ್ದಕ್ಕೆ ಬಹಳ ಖರ್ಚು ಮಾಡಿದ್ದಾರೆ, ಕೇವಲ ಹೋಟೆಲ್, ಛತ್ರ is it the duty of the Government? Should public money be spent in developing these areas? This is not the way. ತಮಗೆ ಒಂದು ಉದಾಹರಣೆಯನ್ನು ಹೇಳುವುದಾರೆ ಧರ್ಮಸ್ಥಳವನ್ನೂ ನೀವು ನೋಡಿರಬಹುದು, ಅಲ್ಲಿಯ ಧರ್ಮಾಧಿಕಾರಿ ಶ್ರೀ ಹೆಗಡೆಯವರು ಬಹಳ ಚೆನ್ನಾಗಿ ನಡೆಸಿಕೊಂಡು ಆ ಜಾಗವನ್ನು ಬಹಳ ಚೊಕ್ಕಟವಾಗಿ ಇಟ್ಟಿದ್ದಾರೆ, ಇಂತಹ ಪ್ರದೇಶಗಳಾದ ಉಡುಪಿ, ಧರ್ಮಸ್ಥಳಗಳಲ್ಲೂ ಕೂಡ ಸ್ಯಾನಿಟರಿಗಾಗಿ ಖರ್ಚು ಮಾಡುವಂಥದ್ದು, ಇದು ಏಕೆ ಬೇಕು? ಸರ್ಕಾರ ಇದಕ್ಕಾಗಿ ಒಂದು ಪೈಸೆ ಖರ್ಚು ಮಾಡುವುದು ಬೇಡ, ಖರ್ಚು ಮಾಡುವ ಅಗತ್ಯವೂ ಕೂಡ ಇಲ್ಲ. ಇಂತಹ ಅನೇಕ ಸ್ಥಳಗಳಲ್ಲಿ ಅಂದರೆ ಉಡುಪಿ ಧರ್ಮಸ್ಥಳಗಳಲ್ಲಿ ಸಾವಿರಾರೂ ರೂ. ಖರ್ಚು ಮಾಡಿದ್ದಾರೆ, ಎಲ್ಲಿ ಅನಗತ್ಯವೋ ಜನರು

ತಾನೇ ತಾನಾಗಿ ಮುಂದೆ ಬಂದು ಮಾಡುತ್ತಿದ್ದಾರೋ ಅಂಥಹ ಕಡೆ ಸರ್ಕಾರದವರು ಅನಗತ್ಯವಾಗಿ ಏಕೆ ಖರ್ಚು ಮಾಡಬೇಕು ?It is waste of moneyಇದರಿಂದ ಜನಕ್ಕೆ ಏನೂ ಪ್ರಯೋಜನವಾಗುವುದಿಲ್ಲ ಯಾವಾಗ ಅಲ್ಲಿಯ ಧರ್ಮಾಧಿಕಾರಿಗಳು ಇವರಿಗಿಂತ ಬಹಳ ಚೆನ್ನಾಗಿ ನಡೆಸಿಕೊಂಡು ಹೋಗುತ್ತಾರೆ ಅಂತಹ ಕಡೆ ಹೋಟೆಲ್ ಕಟ್ಟತಕ್ಕಂಥದ್ದು ಸರ್ಕಾರಕ್ಕೆ ಏಕೆ ಬೇಕು? ನಮ್ಮ ಕೆಎಸ್‌ಆರ್‌ಟಿಸಿ, ಕೆಇಬಿ ಈ ಸಂಸ್ಥೆಗಳನ್ನು ನಾವು ನಡೆಸುವುದಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೋಟೆಲ್ ಕಟ್ಟುತ್ತಾರೆ, ಟೂರಿಸ್ಟ್ ಕಾಂಪ್ಲೆಕ್ಸ್, ಹಿಲ್ ಕಾಟೇಜಸ್ ಮಾಡಿದರೆ ಇದರಿಂದ, ಏನಾದರೂ ಜನಕ್ಕೆ ಅವಶ್ಯಕತೆ ಇದೆಯೇ? ಮಹದೇಶ್ವರ ಬೆಟ್ಟದಲ್ಲಿ ಜನ ಹೋಗಲಿಕ್ಕೆ ಅನುಕೂಲ ಮಾಡಿಕೊಟ್ಟರೆ ತನಗೆ ತಾನೇ ಜನರು ಬರುತ್ತಾರೆ ಹೋಟಲ್ ಕೂಡ ಕಟ್ಟುತ್ತಾರೆ, ನಾವು ಅದಕ್ಕೆ ಹಣವನ್ನು ಖರ್ಚು ಮಾಡಿ ಕೈಸುಟ್ಟುಕೊಳ್ಳುವಂತಹ ಅಗತ್ಯವಿಲ್ಲ. ಇರತಕ್ಕಂಥ ಕೇವಲ ಕೆಲವಾರು ಕೋಟಿರೂಪಾಯಿಗಳನ್ನು ಸದುಪಯೋಗ ಮಾಡಿಕೊಳ್ಳುವುದಕ್ಕೆ, ನಿಮ್ಮ ಇಲಾಖೆಗೆ ಬರುತ್ತಿಲ್ಲ. ನಾವು ಮಾಡಬೇಕಾದರೆ ಸ್ಥಳ ಒಂದು ರೀತಿ ಇರುತ್ತದೆ, ನಾವು ಇದಕ್ಕೆ ಏನು ಮಾಡಬೇಕು? ಹೋಟೆಲ್ ಇಲ್ಲದೇ ಇರತಕ್ಕಂಥ ಸ್ಥಳಗಳನ್ನು ಗುರುತಿಸಿ ಅಂದರೆ ಎ ಬಿ ಸಿ ಡಿ ಇ ಆ ಕ್ಯಾಟಗರಿ ಬೇಡ, ಅದು ಅಗತ್ಯವಿಲ್ಲ. ಪ್ರವಾಸಿಗಳ ಅನುಕೂಲಕ್ಕೆ ತಕ್ಕಂತೆ ಜಾಗಗಳು ಇವೆ, ಬೀಚಸ್‌ನೋಡಿ. ತಾವು ಕೆಲವಾರು ಬೀಚ್‌ಗಳನ್ನು ಹೇಳಿದ್ದೀರಿ, ಕಾರವಾರ ತೀರ, ಮಲ್ಪೆ ತೀರ, ಒಂದು 3-4 ಸ್ಥಳಗಳನ್ನು ಹೇಳಿದ್ದೀರಿ. ಇದು ಅಲ್ಲ. ಇಲ್ಲಿ ಪ್ರತಿಯೊಂದು ಬೀಚ್‌ಗಳೂ ಕೂಡ ಪ್ರೇಕ್ಷಣೀಯ ಸ್ಥಳಗಳಾಗಿವೆ ಸಮುದ್ರಗಳು ಅನೇಕ ರೀತಿಯಲ್ಲಿ ಇರುತ್ತವೆ, ಶಾಂತವಾಗಿರುವ ಮುರೇಡೇಶ್ವರ ಸಮುದ್ರ, ಸುಂದರವಾಗಿರುವ ಕಾಸರಗೋಡು ಸಮುದ್ರ ಇರಬಹುದು ಇವುಗಳನ್ನು ನೋಡಲಿಕ್ಕೆ ಜನ ಬಂದೇ ಬರುತ್ತಾರೆ. ಅನೇಕ ರೀತಿಯ ಬೀಚ್‌ಗಳಿವೆ, ಅನೇಕ ರೀತಿಯ ಪ್ರಕೃತಿಯ ಸೌಂದರ್ಯ ಸ್ಥಳಗಳಿವೆ, ಅವುಗಳನ್ನು ಗುರುತಿಸಬೇಕಾಗುತ್ತದೆ. ಅವುಗಳನ್ನು ನಾವು ಗುರುತಿಸಿ ಅಲ್ಲಿinfrastructure develop ಅಭಿವೃದ್ಧಿಪಡಿಸಬೇಕು ಉದಾಹರಣೆಗೆ ಹೇಳುವುದಾದರೆ ನಮ್ಮ ಮುರೆಡೇಶ್ವರದಲ್ಲಿ ಅಥವಾ ಕಾರವಾರದಲ್ಲಿ ಬೀಚ್‌ಗಳಿವೆ, ಬೀಚ್‌ಗಳಿದ್ದರೆ ಉತ್ತಮ ಪ್ರದೇಶಗಳು ಅಥವಾ ಅರಣ್ಯ ಪ್ರದೇಶಗಳು, ಅಥವಾ ಖಾಸಗಿಯವರಿಗೆ ಸೇರತಕ್ಕಂಥದ್ದು, ಈ ಎಲ್ಲಾ ಪ್ರದೇಶಗಳನ್ನು ನಮ್ಮ ವಶಕ್ಕೆ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಬೇಕು, ಸರ್ಕಾರ ಆಸಕ್ತಿವಹಿಸಿ ಪ್ರಯತ್ನ ಮಾಡಬೇಕು. Resorts and lands for the development of that place. ಹಾಗೆ ಮಾಡುವುದಿದ್ದರೆ ಯಾರೂ ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಛೇರ್ಮನ್‌ರೆ, ನಾವು ಎಷ್ಟು ಮನವಿ ಮಾಡಿಕೊಂಡಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳಿಗೆ, ಹಾಗೂ ನಾಗಪ್ಪನವರಿಗೆ ಎಷ್ಟು ಮನವಿಗಳನ್ನು ಮಾಡಿಕೊಂಡರೂ ನಮ್ಮ ಮಾತನ್ನೇ ಅವರು ಯಾರು ಕೇಳಿಲ್ಲ. ಕೊನೆಗೆ ಇವತ್ತು ಹೈ-ಕೋರ್ಟಿನಲ್ಲಿ APMC Ordinance struck down ಮಾಡಿ ಹೇಳಿದ್ದಾರೆ, ಇದು ಸರಿಯಿಲ್ಲ ರಾಜಕೀಯದ ದುರುದ್ದೇಶದಿಂದ ಈ ಸುಗ್ರೀವಾಜ್ಞೆಯನ್ನು ತಂದಿದ್ದಾರೆಂದು ಹೇಳಿ ಅದು ರಿಜೆಕ್ಟ್ ಆಗಿದೆ. ಇಲ್ಲಿ ನೀವು ಇದನ್ನು ಇಲ್ಲೇ ಮಾಡಿದ್ದರೆ ಎಷ್ಟು ಮರ್ಯಾಧೆ, ಗೌರವ, ಬರುತ್ತಿತ್ತು. ನೀವು ಇನ್ನು ಮುಂದೆ ಹೋಗಿ ನಿಮಗೆ ಗೊತ್ತಾಗುತ್ತದೆ. ಅದಕ್ಕಾಗಿ ಯಾವಾಗಲೂ ಸ್ವಲ್ಪ ನ್ಯಾಯ-ನೀತಿಯಿಂದಾದರೂ ಮಾಡಬೇಕು. ಅನ್ಯಾಯವಾಗಿ

ರಾಜಕೀಯದ ದುರುದ್ದೇಶದಿಂದ ಕೂಡಿರುವುದನ್ನು ನಾವು ಹೇಳಿದ್ದರೆ ಇಲ್ಲ ಅದನ್ನು ನಾವು ಮಾಡುವುದಿಲ್ಲವೆಂದು ಹೇಳಿ. ಆದರೆ ರಾಜಕೀಯವಾಗಿ ದುರುದ್ದೇಶದಿಂದ ಮಾಡಿದರೆ ಹೀಗೆ ಆಗುತ್ತದೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಇನ್ನು ಮುಂದಾದರೂ ಸ್ವಲ್ಪ ಸುಧಾರಣೆ ಮಾಡಿಕೊಳ್ಳಿ.

ಡಾ॥ ಎಂ. ಪಿ. ಕರ್ಕಿ : ಛೇರ್ಮನ್‌ರೆ, ಆ ಸ್ಥಳಗಳಿಗೆ ವಿದ್ಯುತ್ ಪೂರೈಕೆ ಮಾಡಿ those are the infrasturctures which are necessary.ತಾವು ಹೇಳಿದ್ದು 10 ಪರ್ಸೆಂಟ್ ಸಬ್ಸಿಡಿ 15 ಪರ್ಸೆಂಟ್ ಸಬ್ಸಿಡಿ ಅಲ್ಲಿ ಬೇಕಾಗಿಲ್ಲ. ಅಲ್ಲಿ ಲೈಟ್ ಇರುವುದಿಲ್ಲ. ರೋಡ್ಸ್ ಇರುವುದಿಲ್ಲ. ಸಣ್ಣ ಪುಟ್ಟ ರೋಡ್ಸ್‌ಗಳನ್ನು ಮಾಡಿ ಎಂದು ಹೇಳಿದರೆ ಅದು ನಮ್ಮ ಕೆಲಸವಲ್ಲ ಅದಕ್ಕೆ ಬೇರೆ ಇಲಾಖೆಯವರು ಇದ್ದಾರೆ ಎನ್ನತಕ್ಕಂಥ ಮಾತನ್ನು ನಾವೇನಾದರೂ ಪ್ರಶ್ನೆ ಕೇಳಿದರೆ ಇದಕ್ಕೆ ಈ ರೀತಿಯಾದಂತಹ ಒಂದು ಉತ್ತರ ನಮಗೆ ದೊರೆಯುತ್ತದೆ. ಹಾಗೆ ಚಿಕ್ಕ ಪುಟ್ಟ ರಸ್ತೆಗಳನ್ನು ಮಾಡಬೇಕು, ಆ ಪರಿಸರವನ್ನು ಚೆನ್ನಾಗಿ ಕಾಣುವಂತೆ ಮಾಡಬೇಕು, ಹೂ ದೋಟಗಳನ್ನು ರಚಿಸಿ, ತೋಟಗಳನ್ನು ಮಾಡಿ ಜನರು ಇವುಗಳನ್ನು ನೋಡುವುದಕ್ಕೆ ಬರಬೇಕು. ನಂತರ ಇದಕ್ಕೆ ತಕ್ಕಂತೆ ಒಂದು ಸಾಧಾರಣವಾಗಿ ಯಾತ್ರಿಗಳು, ಪ್ರವಾಸಿಗರು ಬರುವುದಕ್ಕೆ ಪ್ರಾರಂಭವಾದಮೇಲೆ ಅದಕ್ಕೆ ವೈಲ್ಡ್ ಪಬ್ಲಿಸಿಟಿ ಬೇಕಾಗುತ್ತದೆ. ಆ ಪಬ್ಲಿಸಿಟಿ ಮಾಡಬೇಕಾಗುತ್ತದೆ. ಹೋಟೆಲ್ ಮಾಡಬೇಕಾಗುತ್ತದೆ. ಗೋವಾ ಬೀಚನ್ನು ನೋಡುವುದಕ್ಕೆ ಬಹಳ ಜನರು ಬರುತ್ತಾರೆ. ಅಂತಹ ಜನಗಳು ನಮ್ಮ ಕಾರವಾರ, ಮುರುಡೇಶ್ವರ, ದಕ್ಷಿಣ ಕನ್ನಡ ಇವುಗಳನ್ನು ನೋಡುವುದಕ್ಕೆ ಬರುವಂತಹ ಕೆಲಸವನ್ನು ಮಾಡಬೇಕು. ಆ ರೀತಿಯಾದಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯತೆ ಉಂಟು. ಬೇರೆ ಸರ್ಕಾರಗಳ ಜೊತೆ ಮಾತನಾಡಿ ಅದನ್ನು ಮಾಡಬಹುದು.

6.10 ಪಿ.ಎಂ.

ಈಗ ಟಾಟಾ ಅವರಿಗೆ ಅಥವಾ ಒಬೆರಾಯರಿಗೆ ಯಾರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ, ಇಲ್ಲಿ ಹೋಟೆಲ್ ಸ್ಥಾಪಿಸಿ, ಅದರಿಂದ ದುಡ್ಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೋ, ಹಣ ಗಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೋ, ನಿಮ್ಮ ಸಬ್ಸಿಡಿ ಏಕೆ ಬೇಕು ಅವರಿಗೆ? Why are you asking them? ಏಕೆ ತೋರಿಸುತ್ತೀರಿ? ಅದರ ಅಗತ್ಯವೇ ಇಲ್ಲ. 35 ಲಕ್ಷಗಳ ಸಬ್ಸಿಡಿ, ಅದಕ್ಕೆ ಏಕೆ ಬೇಕು? ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥವರಿಗೆ35 ಲಕ್ಷ ಖರ್ಚುಮಾಡುವುದಕ್ಕೆ ಏನೂ ತೊಂದರೆ ಇಲ್ಲ. ನೀವು ಅಂಥವರಿಗೆ ಏಕೆ ಸಬ್ಸಿಡಿ ಕೊಡುತ್ತೀರಿ. ಸಬ್ಸಿಡಿ ಕೊಡುವುದಾದರೆ ರೈತರಿಗೆ ಕೊಡಿ, ಯಾರು ಬಡವರಿದ್ದಾರೋ ಅವರಿಗೆ ಸಬ್ಸಿಡಿ ಕೊಡಬೇಕಾಗುತ್ತದೆ. ಯಾವುದನ್ನು ಹೊಸದಾಗಿ ಪ್ರಾರಂಭ ಮಾಡುತ್ತಾರೆ, ಅವರಿಗೆ ಸಬ್ಸಿಡಿ ಕೊಡಬೇಕಾಗುತ್ತದೆ. ಇಂತಹ ವ್ಯಾಪಾರಿಗಳಿಗೆ, ವ್ಯಾಪಾರಿ ಮನೋಭಾವನೆ ಇರತಕ್ಕಂಥ ಇಂಡಸ್ಟ್ರೀಸ್‌ಗಳವರಿಗೆ ಸಬ್ಸಿಡಿ ಕೊಡತಕ್ಕಂತಾದ್ದು ಸರಿಯಲ್ಲ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಮಾನ್ಯ ಕರ್ಕಿಯವರು ಪ್ರವಾಸಿಗರನ್ನು ಆಕರ್ಷಣೆ ಮಾಡಬೇಕು, ಅವರಿಗೆ ಬೇಕಾದಂಥ ಮೂಲ ಸೌಲಭ್ಯಗಳು ಮತ್ತು ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆಂದು ಒಂದು ಕಡೆ ಹೇಳುತ್ತಾರೆ. ನನ್ನ ಇಲಾಖೆಯ ಬಜೆಟ್ ನೂರು ಕೋಟಿ ಇಲ್ಲ. ಅವರು

ತಪ್ಪು ತಿಳಿದುಕೊಂಡಿದ್ದಾರೆ. ಇನ್ನೊಂದು ಕಡೆ ಹೇಳುತ್ತಾರೆ, ಇದೆಲ್ಲಾ ಸರ್ಕಾರವೇ ಮಾಡಬೇಕು, ಅವರನ್ನೇಕೆ ಕರೆಯುತ್ತೀರಾ ಎಂದು ಹೇಳುತ್ತಾರೆ. ಇದು ದ್ವಂದ್ವವಾದಂಥಾದ್ದು. ಇವೆಲ್ಲಾ ಅನುಕೂಲತೆಗಳನ್ನು ಮಾಡಿಕೊಡುವುದಕ್ಕೆ, ಆಕರ್ಷಣೀಯವಾದಂಥ ನೀತಿ ನಿರೂಪಣೆ ಮಾಡಿದ್ದೇವೆ. ಒಂದು ಕಡೆ ಅವರೇ ಹೇಳುತ್ತಿದ್ದಾರೆ. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು, ಅವರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸತಕ್ಕ ಕಾರ್ಯಕ್ರಮ ರೂಪಿಸಬೇಕೆಂದು ಹೇಳುತ್ತಾರೆ. ಇನ್ನೊಂದು ಕಡೆ ನೀವು ಸಬ್ಸಿಡಿ ಏಕೆ ಕೊಡುತ್ತೀರಿ ಎಂದು ಹೇಳುತ್ತಾರೆ. ಹೋಟೆಲ್ ಕಟ್ಟಬೇಕೆಂದು ಹೇಳುತ್ತಾರೆ, ಹೋಟೆಲ್ ನವರನ್ನು ಏಕೆ ಕರೆಯುತ್ತೀರಾ ಎಂದೂ ಹೇಳುತ್ತಾರೆ. ಹಿರಿಯರಾದಂಥ ಕರ್ಕಿಯವರು ಇಂಥ ದ್ವಂದ್ವ ಧೋರಣೆ ಮಾತನಾಡುವುದು ಸರಿಯಲ್ಲ.

ಡಾ|| ಎಂ. ಪಿ. ಕರ್ಕಿ : ನಾನು ಹೇಳಿರತಕ್ಕಂಥಾದ್ದು ಸ್ಪಷ್ಟವಾಗಿದೆ. ಸರ್ಕಾರ ಹೋಟೆಲ್ ಕಟ್ಟತಕ್ಕಂಥ ಅಗತ್ಯ ಇಲ್ಲ. ಹೋಟೆಲ್ ಕಟ್ಟತಕ್ಕಂಥ ಕೆಲಸಕ್ಕೆ ಹೋಗಬೇಡಿ.

SRI K. N. NAGE GOWDA : Tourism is part of our Irrigation Department also. ನಮ್ಮ ತುಂಗಭದ್ರಾ ಡ್ಯಾಮ್ ಹತ್ತಿರ, ಕೆ.ಆರ್.ಎಸ್. ಡ್ಯಾಮ್ ಹತ್ತಿರ ಮತ್ತು ವಾಣಿವಿಲಾಸ್ ಡ್ಯಾಮ್ ಹತ್ತಿರ ಹಿಗೆ ಎಲ್ಲಾ ಕಡೆ ಇದೆ. ಖಾಸಗಿಯವರು ಬಂದರೆ ಫಸ್ಟ್ ಬಿಟ್ಟುಕೊಡುತ್ತೇವೆ. ಆದರೆ, ಕೆಲವು ಭಾಗಗಳಲ್ಲಿ, ಈಗ ಶಿವನಸಮುದ್ರ ಇದೆ, I think you have seen that place. It is a most beautiful place. There is big water fall. ಅಲ್ಲಿ ಏನಾಗಿದೆ ಎಂದರೆ, ಖಾಸಗಿಯವರು ಯಾರೂ ಹೋಟೆಲ್ ಮಾಡುವುದಿಲ್ಲ. ಕಾರಣ, ಅವರಿಗೆ ಕಸ್ಟಮರ್ಸ್ ಇಷ್ಟೇ ಬರುತ್ತಾರೆಂಬ ನಂಬಿಕೆಯೇ ಅವರಿಗೆ ಇರುವುದಿಲ್ಲ. ಅಂತಹ ಕಡೆ ನಮ್ಮ ಟೂರಿಸಂ ಡಿಪಾರ್ಟ್‌ಮೆಂಟಿನವರು ಅಥವಾ ನಮ್ಮ ಡಿಪಾರ್ಟ್‌ಮೆಂಟಿನವರು ಮಾಡದೇ ಹೋದರೆ ಅದು ಅಡ್ಜೆಸ್ಟ್ ಆಗುವುದಿಲ್ಲ ಮತ್ತು ಆ ಏರಿಯಾವೇ ಸ್ಪಾಯಿಲ್ ಆಗಿ ಹೋಗುತ್ತದೆ. ನೀವು ಹೇಳುವುದು ನ್ಯಾಷನಲ್ ಹೈವೇನಲ್ಲಿ ಮಾಡಬೇಕಾಗಿಲ್ಲ.

ಡಾ|| ಎಂ.ಪಿ. ಕರ್ಕಿ : ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೆ, ಸರ್ಕಾರ ಹೋಟೆಲ್ ಮಾಡತಕ್ಕ ಅವಶ್ಯಕತೆ ಇಲ್ಲ. ಸರ್ಕಾರದ ಹೋಟೆಲ್ ಹೇಗಿವೆ ಎಂಬುದನ್ನು ನಾವು ನೋಡಿದ್ದೇವೆ. ಅದರ ಅಗತ್ಯ ಇಲ್ಲ. ಟೂರಿಸ್ಟ್‌ನವರು ಬಂದರೂ ಕೂಡ ಅಲ್ಲಿಗೆ ಹೋಗುವುದಿಲ್ಲ. ಅಂತಹ ಪರಿಸ್ಥಿತಿ ಇದೆ. ಶಿವನ ಸಮುದ್ರದಂತಹ ಸ್ಥಳಗಳಲ್ಲಿ ಜನ ಬರತಕ್ಕ ವ್ಯವಸ್ಥೆ ಮಾಡಬೇಕಾಗುತ್ತದೆ. ಜನಕ್ಕೆ ಪ್ರಚಾರ ಕೊಡಬೇಕಾಗುತ್ತದೆ. ಇಂಥಾದ್ದು ಇದೆ ಎಂದು ಹೇಳಬೇಕಾಗುತ್ತದೆ, ತಿಳಿಸಬೇಕಾಗುತ್ತದೆ. ಆ ರೀತಿ ತಿಳಿಸಿದಾಗ ಜನ ತನ್ನಷ್ಟಕ್ಕೆ ಬರುತ್ತಾರೆ. You spent money on that, not on building the hotel. ಅದು ಖಾಯಂ ಆಗಿ, ಹೊರೆಯಾಗತಕ್ಕ ಬೊಕ್ಕಸಕ್ಕೆ ಭಾರವಾಗತಕ್ಕ ಪರಿಸ್ಥಿತಿ ಇರುತ್ತದೆ. ಅದಕ್ಕಾಗಿ ಅದನ್ನು ಕಟ್ಟತಕ್ಕ ಅಗತ್ಯವಿಲ್ಲ. ಸರ್ಕಾರ ಅದಕ್ಕೆ ಹೋಗಬಾರದು. ನಮಗೆ ಯಾವುದು ಸಾಧ್ಯವಿಲ್ಲವೆಂಬುದನ್ನು ಗುರುತಿಸಬೇಕಾಗುತ್ತದೆ, ಮತ್ತು ಅಂತಾದ್ದನ್ನು ಮಾಡಲಿಕ್ಕೆ ಹೋಗಬಾರದು. ಇನ್ನು ಜೋಗ್‌ಜಲಪಾತದ ಬಗ್ಗೆ ಬಹಳ ಆಕರ್ಷಣೀಯವಾಗಿ ಬರೆದಿದ್ದಾರೆ. ಅಲ್ಲಿ ವರ್ಷಕ್ಕೆ 8 ತಿಂಗಳು ನೀರೇ ಇರುವುದಿಲ್ಲ. ಜಲಪಾತವೇ ಇಲ್ಲ. ಬರೀ ಕಲ್ಲುಬಂಡೆ. ಆದರೆ, ಇದನ್ನು ಒಳ್ಳೆಯ ಪ್ರವಾಸಿ ಕೇಂದ್ರ ಮಾಡುತ್ತೇವೆಂದು ಹೇಳಿದ್ದಾರೆ. I think it comes under 'B' category. Bangalore comes

under `A' Category. 8 ತಿಂಗಳು ಅಲ್ಲಿ ಯಾರೂ ಇರುವುದಿಲ್ಲ ಮತ್ತು ನೀರೂ ಇರುವುದಿಲ್ಲ. ಅಲ್ಲಿ ಒಂದು ಹುಳು ಕೂಡ ಇರುವುದಿಲ್ಲ. ಅಂತಹ ಜಾಗದಲ್ಲಿ "ಬಿ" ಕೆಟಗರಿ ಮಾಡಿ, ನೀವು ಬನ್ನಿ ಎಂದು ಕರೆಯುತ್ತಾ ಇದ್ದಾರೆ. ಈ ರೀತಿಯ ಪ್ರಚಾರ ಮಾಡಿದರೆ, ತಮ್ಮ ಪ್ರಚಾರಕ್ಕೆ ಯಾವುದೇ ಕಿಮ್ಮತ್ತು ಇರುವುದಿಲ್ಲ. ಸರ್ಕಾರದವರು ಇದನ್ನು ದೊಡ್ಡ ಪ್ರವಾಸಿ ಕೇಂದ್ರ ಎಂದು ಹೇಳುತ್ತಾರೆ ಇಲ್ಲಿ ಏನೂ ಇಲ್ಲ, ಬರೀ ಕಲ್ಲುಬಂಡೆ ಇದೆ ಎಂದು ಹೇಳತಕ್ಕಂಥ ಭಾವನೆ ಬರುತ್ತದೆ. ಅದೂ ಕೂಡ ಮಳೆಗಾಲದಲ್ಲಿ ಜಾಸ್ತಿ ಮಳೆಯಾದರೆ ಮಾತ್ರ ಜೋಗ್‌ನಲ್ಲಿ ಜಲಪಾತ ಇರುತ್ತದೆ. ಲಿಂಗನಮಕ್ಕಿ ಡ್ಯಾಮ್ ಆಗುವುದಕ್ಕೆ ಮುನ್ನ ಅದು ಬಹಳ ಚೆನ್ನಾಗಿತ್ತು. ನಾವು ಅದನ್ನು ನೋಡಿದ್ದೇವೆ. ಆದರೆ, ಈಗ ನಾನು ಹೋಗುತ್ತಾ ಬರುತ್ತಾ ನೋಡುತ್ತೇನೆ. ಅಲ್ಲಿ ಬರೀ ಕಲ್ಲುಬಂಡೆ, ಅಲ್ಲಿ ಒಬ್ಬ ಪ್ರವಾಸಿಯೂ ಇರುವುದಿಲ್ಲ. ಅದಕ್ಕೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕೊಟ್ಟು "ಬಿ" ಕೆಟಗರಿ ಎಂದು ಮಾಡಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಈ ಮಳೆಗಾಲದಲ್ಲಿ ಜೋಗ್‌ಜಲಪಾತ ತುಂಬಿ ಹರಿಯುತ್ತಾ ಇದೆ. ಈಗ ನೋಡುವುದಕ್ಕೆ ಜೋಗ್ ತುಂಬಾ ಚೆನ್ನಾಗಿದೆ. ತಾವು ನೋಡಿಕೊಂಡು ಬನ್ನಿ.

ಡಾ|| ಎಂ.ಪಿ. ಕರ್ಕಿ : ನಾನು ದಿವಸ ಹೋಗುವಾಗ ಮತ್ತು ಬರುವಾಗ ಅದೇ ಮಾರ್ಗದಲ್ಲಿ ಹೋಗುತ್ತೇನೆ. ನಾನು ಹೋಗುವಾಗಲೆಲ್ಲಾ ಅದನ್ನು ನೋಡುತ್ತೇನೆ. ಅದಕ್ಕೇ ನಾನು ಹೇಳುವುದು. ವರ್ಷದಲ್ಲಿ 9-10 ತಿಂಗಳು ಏನೂ ಇರುವುದಿಲ್ಲ. ಒಂದೆರಡು ತಿಂಗಳು ಮಾತ್ರ ನೀರು ಹರಿಯುತ್ತದೆ. ಇನ್ನು 15-20 ದಿವಸ ಹೋದರೆ, ಅಲ್ಲಿ ಜಲಪಾತವೂ ಇರುವುದಿಲ್ಲ, ಏನೂ ಇರುವುದಿಲ್ಲ. ಬರೀ ಕಲ್ಲುಬಂಡೆ ಇರುತ್ತದೆಯೇ ಹೊರತಾಗಿ ಮತ್ತೆ ಏನೂ ಇರುವುದಿಲ್ಲ. ಅಂತಹ ಕ್ಷೇತ್ರವನ್ನು ಬಹಳ ಉತ್ತಮವಾದ ಪ್ರವಾಸಿ ಕೇಂದ್ರವನ್ನು ಮಾಡುತ್ತೇವೆಂದು ವಿಂಗಡಣೆ ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸದಸ್ಯರು ತುಂಬಾ ತಪ್ಪಾಗಿ ಜೋಗನ್ನು ಅರ್ಥಮಾಡಿ ಹೇಳುತ್ತಿದ್ದಾರೆ. ಅವರು ಹೇಳುವ ರೀತಿ ಇಲ್ಲ. ವರ್ಷದ8 ತಿಂಗಳಲ್ಲಿ ಬರೀ ಕಲ್ಲುಬಂಡೆ ಇರುತ್ತದೆ ನೀರು ಇರುವುದಿಲ್ಲವೆಂದು ಹೇಳುತ್ತಿದ್ದಾರೆ. ಅದು ಹಾಗಲ್ಲ. ನೀರು ಕಡಿಮೆಯಾಗುವುದು ಯಾವಾಗ ಎಂದರೆ, ಮೇ, ಏಪ್ರಿಲ್ ಮಾರ್ಚ್. ಇದು ನನ್ನ ಕ್ಷೇತ್ರ, ನಾನು ನೋಡಿಲ್ಲವೆಂದರೆ ಹೇಗೆ? ಬಹಳ ಕೆಳಗಡೆ 3-4 ತಿಂಗಳು ಮಾತ್ರ ನೀರು ಇರುವುದಿಲ್ಲ. ಏಕೆಂದರೆ, ಡ್ಯಾಮ್‌ನಿಂದ ನೀರು ಬಿಡುವುದಿಲ್ಲ. ಹಿಂದೆ ಸರ್ಕಾರದಲ್ಲಿ ಒಂದು ತೀರ್ಮಾನ ಮಾಡಿದ್ದೆವು. ಅದರಲ್ಲಿ ಡೆಡ್ ಸ್ಟೋರ್‌ನಲ್ಲಿ ಇರತಕ್ಕ ನೀರಿನಲ್ಲಿ, ಪ್ರತಿವಾರ, ಶನಿವಾರ ಮತ್ತು ಭಾನುವಾರ ಮಧ್ಯಾಹ್ನ 3 ಗಂಟೆಯಿಂದ 5 ಗಂಟೆಯವರೆಗೆ ನೀರನ್ನು ಬಿಡತಕ್ಕ ಸರ್ಕಾರದ ಆಜ್ಞೆ ಹೊರಟು, ಹಿಂದಿನ ವರ್ಷ ಅಲ್ಲ, ಅದರ ಹಿಂದಿನ ವರ್ಷ ನಾವು ಕಾರ್ಯಾಚರಣೆ ಮಾಡಿದ್ದೆವು. ಆ ಕೆಲಸ ಮಾಡಿದಾಗ, ಸಾಕಷ್ಟು ಪ್ರಚಾರ ಆಗದೇ, ಜನರು ಬರುವುದು ಕಡಿಮೆಯಾಗಿದ್ದಾರೆ. ಇದನ್ನು ನಾನೇ ಸ್ವತಃ ನೋಡಿ, ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಬಂದು, ದಯವಿಟ್ಟು ಇದಕ್ಕೆ ಸಾಕಷ್ಟು ಪ್ರಚಾರ ಮಾಡಿ, ಇಷ್ಟು ಹಣ ಖರ್ಚು ಮಾಡಿ ನೀರು ಬಿಡುತ್ತಾ ಇದ್ದೇವೆ. ಜನ ಸಾಕಷ್ಟು ಬರುತ್ತಾ ಇಲ್ಲವೆಂದು ಹೇಳಿದಮೇಲೆ, ಈಗ ಜನ ಬರುತ್ತಾ ಇದ್ದಾರೆ. ಕಳೆದ ವರ್ಷ ಏನಾಯಿತೆಂದರೆ, ಮಳೆ ಕಡಿಮೆಯಾಗಿ, ನೀರು ಸಾಕಷ್ಟು ತುಂಬಲಿಲ್ಲ. ಅದರಿಂದಾಗಿ ಈ ವರ್ಷ ನಾವು

ಆ ಕೆಲಸ ಮಾಡುವುದಕ್ಕಾಗಲಿಲ್ಲ. ಈ ವರ್ಷ ತುಂಬಿದೆ ಈ ವರ್ಷ ಆ ಕಾರ್ಯಕ್ರಮ ಮಾಡುತ್ತೇವೆ. ಈಗ ನಾವು ಯಾವ ತಿಂಗಳಿನಲ್ಲಿದ್ದೇವೆ, ಆಗಸ್ಟ್ ತಿಂಗಳಲ್ಲಿದ್ದೇವೆ. ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ ನವೆಂಬರ್, ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ಈ 8 ತಿಂಗಳಲ್ಲಿ ಜಲಪಾತದಲ್ಲಿ ನೀರು ಇದ್ದೇ ಇರುತ್ತದೆ. ಆದರೆ, ಈಗ ಬಂದಷ್ಟು ನೀರು ಬಾರದೇ ಇರಬಹುದು. ನಾಲ್ಕು ಅಲ್ಲಿ ರಾಜಾ ರೋರರ್, ರಾಕೆಟ್, ರಾಣಿ ಎಂದು ಇವೆ. ಈ ನಾಲ್ಕರಲ್ಲಿ ಈಗಲೂ ಕೂಡ, ಮಳೆಗಾಲದಲ್ಲಿ ಹೋಗತಕ್ಕ ಪ್ರಮಾಣದಲ್ಲಿ ಹೋಗದೇ ಇದ್ದರೂ ನೋಡುವುದಕ್ಕೆ ಅಂದವಾಗಿ, ಚಂದವಾಗಿ ಕಾಣುತ್ತವೆ. ಇದು ರಾಜನಾಗಿ ಕಾಣುವಹಾಗೆ, ರೋರರ್ ಆಗಿ ಕಾಣುವಹಾಗೆ, ರಾಕೆಟ್‌ಆಗಿ ಕಾಣುವಹಾಗೆ, ರಾಣಿಯಾಗಿ ಕಾಣುವಹಾಗೆ, ಇವುಗಳಿಗೆ ಹಿಂದೆ ಏನು ಹೆಸರನ್ನಿಟ್ಟಿದ್ದಾರೆ, ವಿಶ್ವೇಶ್ವರಯ್ಯನವರ ಕಾಲದಲ್ಲಿ, ಆ ಸೌಂದರ್ಯವನ್ನು ನೋಡುವಷ್ಟು ಪ್ರಮಾಣದ ನೀರು ಹೋಗುತ್ತದೆ. ವರ್ಷದ ಈ ಎಲ್ಲಾ ತಿಂಗಳಲ್ಲಿಯೂ ಹೋಗುತ್ತದೆ. ಅದಕ್ಕೆ ಏನೂ ತೊಂದರೆ ಇಲ್ಲ. ಬಹುಶಃ ನೀವು ಇದನ್ನು ತಪ್ಪಾಗಿ ತಿಳಿದುಕೊಂಡಿದ್ದೀರಿ. ಅದಕ್ಕೋಸ್ಕರ ಜೋಗ್‌ಡೆವಲಪ್‌ಮೆಂಟ್ ಅಥಾರಿಟಿ ಎಂದು ರಚನೆ ಮಾಡಿ, ಅದಕ್ಕೆ ಮಂತ್ರಿಗಳೇ ಅಧ್ಯಕ್ಷರೂ ಕೂಡ ಆಗಿ ಅವತ್ತು ಕೆಲಸ ಮಾಡಿದ್ದರು; ಇದುವರೆಗೆ ಏನಿತ್ತು, ಬರೀ ಜಲಪಾತವೇ ಇತ್ತು. ಅಷ್ಟರಿಂದ ಸಾಕಾಗುವುದಿಲ್ಲ. ಅದಕ್ಕೆ ಹತ್ತಿರದಲ್ಲೇ ಒಂದು ವನ್ಯಜೀವಿಗಳ ತಾಣ ಮಾಡಬೇಕೆಂದು, ಒಂದು ಕಾರ್ಯಕ್ರಮ ಹಾಕಿದೆವು. ಲಿಂಗನಮಕ್ಕಿ ಅಣೆಕಟ್ಟಿನ ಕೆಳಭಾಗದಲ್ಲಿ ಒಂದು ಬೃಂದಾವನ ಮಾಡಬೇಕೆಂದು ಇದ್ದು, ಅದೂ ಕೂಡ ಕಾರ್ಯಕ್ರಮದಲ್ಲಿ ಸೇರಿದೆ. ಏಕೆಂದರೆ, ನೀರು ಯಾವಾಗಲೂ ಇರುತ್ತದೆ. ಇಲ್ಲಿ ಹಿಂದೆ, ಬಂದವರು ಉಳಿಯುವುದಕ್ಕೆ ಜಾಗ ಇರಲಿಲ್ಲ. ಅದರ ಬಗ್ಗೆ ಟಾಜ್‌ಗ್ರೂಪ್‌ನವರಿಗೆ ಕೊಟ್ಟಿತ್ತು. ಆದರೆ, ಅವರು ಬೇಡವೆಂದು ಬಿಟ್ಟಮೇಲೆ, ಇಲಾಖೆಯವರೇ ವಹಿಸಿಕೊಂಡು, ಅದರ ದುರಸ್ತಿ ಕಾರ್ಯ ನಡೆಸುತ್ತಾ ಇದ್ದಾರೆ. ಅದನ್ನು ಪಕ್ಕಾ ಮಾಡಬೇಕೆಂಬ ದೃಷ್ಟಿಯಿಂದ ಅದರ ಸುತ್ತಮುತ್ತ ಇರತಕ್ಕಂಥ ಗಿಡಮರಗಳನ್ನು ಕಡಿದು, ಕಡಿದು ಹಾಕಿರುವುದರಿಂದ, ಅಲ್ಲಿರತಕ್ಕ ಪ್ರದೇಶವನ್ನು ಹಸಿರು ಪ್ರದೇಶ ಮಾಡುವುದಕ್ಕೋಸ್ಕರ ಕಳೆದ ಎರಡು ಮೂರು ವರ್ಷಗಳಿಂದ ಕಾರ್ಯಕ್ರಮ ಮಾಡಲಾಗಿದೆ. ಗಿಡ ಹಾಕತಕ್ಕಂತಾದ್ದು, ಸೌಂದರ್ಯವಾಗಿ ಆ ಪ್ರದೇಶವನ್ನು ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗ್ಗೆ ಸ್ವಲ್ಪದಿವಸದ ಹಿಂದೆ ಮೀಟಿಂಗ್ ಕೂಡ ಮಾಡಿದ್ದಾರೆ, ಈ ಜೋಗ್ ಜಲಪಾತ ನೋಡಲು ಬಂದ ಜನ, ಗೋಕರ್ಣಕ್ಕೂ ಹೋಗಿ ಬರಲಿ, ಅದಕ್ಕೆ ಅನುಕೂಲವಾಗುವ ರೀತಿಯಲ್ಲಿ ಈ ಹೆದ್ದಾರಿಯನ್ನು ಚೆನ್ನಾಗಿ ಅಭಿವೃದ್ಧಿಪಡಿಸಬೇಕು ಇಲ್ಲಿ ಜೋಗ್‌ಜಲಪಾತವನ್ನು ನೋಡಿ, ಗೋಕರ್ಣಕ್ಕೆ ಹೋಗಿ, ಸಮುದ್ರ ಸ್ನಾನ ಮಾಡಿ, ಪೂಜೆ ಮಾಡಿಸಿಕೊಂಡು, ವಾಪಸ್ ಬಂದರೆ, ನೋಡಿದಂಥ ಮನುಷ್ಯನಿಗೆ ಆಗುವಷ್ಟು ಆನಂದ ಬೇರೆ ಯಾರಿಗೆ ಆಗುತ್ತದೆ? ಇದರ ಬಗ್ಗೆ ವ್ಯಾಖ್ಯಾನ ಮಾಡಿ ಹೇಳುವುದನ್ನು ಬಿಟ್ಟು, ನೀವು ಏನು ಮಾಡಿದ್ದೀರಿ, ಹೀಗೆ ಮಾಡಿ ಎಂದು ಹೇಳುತ್ತಿದ್ದೀರಿ. ನೀವು ಮಲೆನಾಡಿನಿಂದ ಬಂದವರು. ನೀವು ನಮ್ಮ ಬಗ್ಗೆ ಈ ರೀತಿ ಮಾತನಾಡುತ್ತಿದ್ದೀರಿ. ವೈಯಕ್ತಿಕವಾಗಿ ತಮಗೆ ಸರಿ ಎಂದು ಕಂಡರೆ ಕಾಗೋಡು ತಿಮ್ಮಪ್ಪನವರು ಹೇಳಿದ್ದು ಸರಿ ಎಂದು ಹೇಳಿ. ಇಲ್ಲದಿದ್ದರೆ ನೀವು ಅಲ್ಲೇ ನನ್ನನ್ನು ಯಾವ ಭಾಷೆಯಲ್ಲಿ ಬೇಕಾದರೂ ಜರಿದು ಬನ್ನಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ನನಗೇನು ಆಶ್ಚರ್ಯ ಅಂದರೆ ಮಾನ್ಯ ಕರ್ಕಿಯವರು ವಾಸ ಮಾಡತಕ್ಕಂಥಾದ್ದು ಹೊನ್ನಾವರ. ಹೊನ್ನಾವರಕ್ಕೂ ಜೋಗಕ್ಕೂ ಬಹಳ ಹತ್ತಿರ, ನನಗೆ ಬಹಳ ಆಶ್ಚರ್ಯವಾಗುತ್ತದೆ. ಇನ್ನಾರೋ ಬೀದರ್, ಗುಲ್ಬರ್ಗದಿಂದ ಬಂದಿರತಕ್ಕಂಥವರು ಜೋಗ್ ನೋಡಿಲ್ಲ ಅಂದರೆ ಅದು ಒಂದು ಏನ್ನೋ ಇರಬಹುದು. ಮಾನ್ಯ ಕರ್ಕಿಯವರು ಜೋಗದ ಬಗ್ಗೆ ಈ ರೀತಿ ಮಾತನಾಡುತ್ತಾರೆ ಅಂದರೆ ನಿಜವಾಗಿಯೂ ನನಗೆ ಆಶ್ಚರ್ಯವಾಗುತ್ತದೆ.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ನಾನು ಆ ಹಾದಿಯಲ್ಲಿ ಪ್ರತಿ ಶನಿವಾರ ಹೋಗುತ್ತೇನೆ. ಶುಕ್ರವಾರ ರಾತ್ರಿ ಹೋಗಿ ಶನಿವಾರ ಬೆಳಿಗ್ಗೆ ಅಲ್ಲಿರುತ್ತೇನೆ. ಆ ಜೋಗ್ ಮುಖಾಂತರವೇ ನಾನು ಹಾದು ಹೋಗುತ್ತೇನೆ. ಮೀಟಿಂಗ್ ಇದ್ದಾಗ, ಅಧಿವೇಶನ ಇದ್ದಾಗ ಪ್ರತಿ ವಾರ ನಾನು ಆ ಜೋಗಕ್ಕೆ ಹೋಗಿಯೇ ಹೋಗುತ್ತೇನೆ. ಅದಕ್ಕಾಗಿಯೇ ನಾನು ಹೇಳಿದೆ. ನನಗೆ ಫಸ್ಟ್ ಹ್ಯಾಂಡ್ ಇನ್‌ಫರ್‌ಮೇಷನ್ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಇವರು ಹೋಗುವ ದಾರಿ ಅದು ಅಲ್ಲ. ನಾವು ಅದನ್ನು ಬಾಂಬೇ ಪ್ರದೇಶ ಎಂದು ಹೇಳುತ್ತೇವೆ ಅದೇ ನಮ್ಮ ಗಡಿ. ಇವರು ಹೋಗುವಾಗ ಬಹುಶಃ ಹೊನ್ನಾವರ ರಸ್ತೆಯಲ್ಲಿ ಹೋಗಿಬಿಡುತ್ತಾರೆ. ಆ ಹೊನ್ನಾವರ ರಸ್ತೆಯಲ್ಲಿ ಹೋಗಬೇಕಾದರೆ ಜೋಗ ಎಡಭಾಗದಲ್ಲಿರುತ್ತದೆ. ಆ ರಸ್ತೆಯಲ್ಲಿ ಹೋಗಬೇಕಾದರೆ ಅದು ಕಾಣುವುದಿಲ್ಲ. ಬಾಂಬೇ ಐ.ಬಿ.ಗೆ ಹೋಗಿ ನಿಂತುಕೊಂಡರೆ ಕಾಣುತ್ತದೆ. ರಸ್ತೆಯಲ್ಲಿ ಹೋದರೆ ಕಾಣುವುದಿಲ್ಲ.

ಶ್ರೀ ಹೆಚ್. ಶಿವಪ್ಪ : ಅಲ್ಲಿ ಹೋಗುವಾಗ ಕಣ್ಣು ಮುಚ್ಚಿದ್ದರೆ.

ಶ್ರೀ ಕಾಗೋಡು ತಿಮ್ಮಪ್ಪ : ಆ ಘಟ್ಟ ಇಳಿದು ಹೋಗಬೇಕಾಗುತ್ತದೆ. ಆ ಘಟ್ಟ ಇಳಿದು ಹೋಗುವಾಗ ಸ್ವಲ್ಪ ತಲೆ ತಿರುಗುತ್ತಾ ಇರುತ್ತದೆ. ನೇರವಾಗಿಹೋಗುವಾಗ ಸ್ವಲ್ಪ ನಿದ್ದೆ ಮಾಡಲು ಅವಕಾಶ ಆಗುತ್ತದೆ. ಆಗ ನಿದ್ದೆ ಹೋಗಿದ್ದರೂ ಹೋಗಿರಬಹುದು.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ಬಹಳ ಲಘುವಾಗಿ ಚರ್ಚೆ ಆಯಿತು. ಮೈಸೂರು ಬಂಗಲೆ ಎಂದು ಹೇಳತಕ್ಕಂಥ ಬಂಗಲೆ ಇದೆ, ಅಲ್ಲಿ ಮುಂಬೈ ಬಂಗಲೆ ಮೈಸೂರು ಬಂಗಲೆ ಎಂದು ಇತ್ತು. ಮೇಲಕ್ಕೆ ಬಸ್ಸು ಹೋಗಿ ಎಡಕ್ಕೆ ತಿರುಗಿದರೆ ಗುಡ್ಡ ಹತ್ತಿ ಇಳಿದರೆ ಬಾಂಬೆ ಬಂಗಲೆ ಬರುತ್ತದೆ. ಮೈಸೂರು ಬಂಗಲೆ ಎಂದು ಇದೆ. ಅಲ್ಲಿಂದಲೇ ಜೋಗ ಜಲಪಾತ ಕಾಣತಕ್ಕಂಥಾದ್ದು. ನಾನು ಅನೇಕ ಸಾರಿ ನೋಡಿದ್ದೇನೆ. ಪ್ರತಿವಾರ ಅಲ್ಲಿಗೆ ಹೋಗಿಯೇ ಹೋಗುತ್ತೇನೆ. ನಾನು ಬಸ್ಸಿನಲ್ಲಿ ಅಲ್ಲಿಗೆ ಹೋಗುವಷ್ಟರಲ್ಲಿ ಬೆಳಗಾಗಿರುತ್ತದೆ. ಆರೂವರೆ ಇಲ್ಲ ಆರೂಮುಕ್ಕಾಲು ಗಂಟೆ ಆಗಿರುತ್ತದೆ. ಆ ಸಮಯದಲ್ಲಿ ನಾನು ಪ್ರತಿ ಸಲ ಜೋಗವನ್ನು ವೀಕ್ಷಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಜುಲೈ ತಿಂಗಳಿಂದ ಅಲ್ಲಿ ಪ್ರಾರಂಭವಾಗಿರಬೇಕು. ಜೂನ್ ತಿಂಗಳಲ್ಲಿ ಕೂಡ ನೀರು ಇರಲಿಲ್ಲ. ಆಗಸ್ಟ್ ಸೆಪ್ಟೆಂಬರ್ ಅಲ್ಲಿಯವರೆಗೂ ಜೋಗದ ಜಲಪಾತ ಚೆನ್ನಾಗಿ ಕಾಣುತ್ತದೆ. ತಾವು ಹೋಗಿ ನೋಡಿ ಬೇಕಾದರೆ, ತಾವು ಒಂದು ವರ್ಷಕ್ಕೆ ಅಥವಾ 4-5 ವರ್ಷಕ್ಕೆ ಒಮ್ಮೆ ಹೋಗಿ ನೋಡುವವರು ಆದರೆ

ನಾನು ಪ್ರತಿ ವಾರಕ್ಕೆ ಒಮ್ಮೆ ಹೋಗಿ ನೋಡುವವನು. ಅದನ್ನು ನೋಡಿ ನನಗೆ ದುಃಖವಾಗುತ್ತದೆ. ಜೋಗ ಎಂತಾದ್ದು ಇತ್ತು ಹೇಗೆ ಆಗಿದೆ ಎಂದು ನೋಡಿ ದುಃಖವಾಗುತ್ತದೆ. ಆ ದುಃಖದಿಂದ ನಾನು ಹೇಳುತ್ತಿದ್ದೇನೆ. ಜೋಗ ಜಲಪಾತದ ಸೌಂದರ್ಯ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು ರಾಜ ರಾಜನಾಗಿ ಕಾಣುವುದಿಲ್ಲ. ರೋರಲ್ ಅದು ರೋರ್ ಮಾಡುವುದಿಲ್ಲ. ರಾಕೇಟ್ ಬಾಣ ಬಿರುಸಿನಿಂದ ಕಾಣುವುದಿಲ್ಲ. ಹಿಂದೆ ಇದ್ದಂತಹ ಸೌಂದರ್ಯ ಈಗ ಇಲ್ಲ. ನಾನು ನಾಳೆ ಬೆಳಿಗ್ಗೆ ಹೋಗುತ್ತಿದ್ದೇನೆ ಅಲ್ಲಿ. ಪ್ರತಿ ವಾರ ನಾನು ಅಲ್ಲಿಂದ ಹೋಗುತ್ತಿದ್ದೇನೆ. ಅಲ್ಲಿಗೆ ಹೋಗುವಷ್ಟರಲ್ಲಿ ಬೆಳಗಾಗಿರುತ್ತದೆ ಅದನ್ನು ನೋಡಲು ಎದ್ದು ಕುಳಿತು ನೋಡೇ ನಾನು ಹೋಗುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಆರ್ಗ್ಯುಮೆಂಟ್‌ಗೋಸ್ಕರ ನಿಮ್ಮದೇ ಸರಿ ಎಂದು ತಿಳಿದುಕೊಳ್ಳಿ. ವರ್ಷದಲ್ಲಿ ತಾವು ಹೇಳುವ ಪ್ರಕಾರ 4 ತಿಂಗಳು ನೀರು ಇರುತ್ತದೆ? ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುವಷ್ಟು ದೊಡ್ಡ ಜಲಪಾತ ಇಡೀ ರಾಷ್ಟ್ರದಲ್ಲಿ ಎಲ್ಲೂ ಅಷ್ಟು ಎತ್ತರದಿಂದ ಬೀಳತಕ್ಕಂಥ ಜಲಪಾತ ಎಲ್ಲೂ ಇಲ್ಲ. ವರ್ಷದ 4 ತಿಂಗಳಲ್ಲಿ ಆದರೂ ಕೂಡ ನಮ್ಮ ಮಕ್ಕಳೋ ವಿದ್ಯಾರ್ಥಿಗಳು, ವಿಚಾರವಂತರೂ ಅಥವಾ ಸೌಂದರ್ಯೋಪಾಸಕರು, ನೋಡಬೇಕು ಎನ್ನತಕ್ಕಂಥ ಅಪೇಕ್ಷೆ ಬಂದಾಗ ನೋಡುವುದಕ್ಕೆ 4 ತಿಂಗಳಾದರೂ ಅವಕಾಶ ಸಿಗುತ್ತದೆಯಲ್ಲಾ. ಈಗ ಉದಾಹರಣೆಗೆ ನಾನು ತಮಗೆ ಹೇಳುತ್ತೇನೆ. ಈಗ ನಮ್ಮ ಮಕ್ಕಳಿಗೆ ಹುಲಿ ನೋಡುವುದಕ್ಕೆ ಎಲ್ಲಿ ಸಿಗುತ್ತದೆ? ಜಿಂಕೆ ನೋಡುವುದಕ್ಕೆ ಎಲ್ಲಿ ಸಿಗುತ್ತದೆ? ಕಾಡಾನೆಗಳು ನೋಡುವುದಕ್ಕೆ ಎಲ್ಲಿ ಸಿಗುತ್ತದೆ? ಎಲ್ಲಾ ಪುಸ್ತಕದಲ್ಲಿ ನೋಡಬೇಕು. ಅದಕ್ಕೆ ಆ ಮಕ್ಕಳಿಗೆ ಎಲ್ಲಾದರೂ ಒಂದು ಕಡೆ ಅಂತಾದ್ದು ನೋಡುವುದಕ್ಕೆ ಸಿಗುತ್ತದೆ ಅಂದರೆ ಅವರಿಗೆ ಆಗುವಂತಹ ಆನಂದ ಬೇರೆ ರೂಪದಲ್ಲಿ ಇಲ್ಲ. ಅದಕೋಸ್ಕರ ನಾನು ಆಗಲೇ ಹೇಳಿದ್ದೇನೆ. ನೀರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಪ್ರವಾಸಿಗರಿಗೋಸ್ಕರವಾಗಿ ಶನಿವಾರ ಮತ್ತು ಭಾನುವಾರ 3 ಗಂಟೆಗಳ ಕಾಲ ಜಲಪಾತದಲ್ಲಿ ನೀರನ್ನು ಬಿಟ್ಟು ಅದಕ್ಕೆ ನಿಮ್ಮ ಫ್ಲಡ್ ಲೈಟ್‌ಗಳನ್ನು ಹಾಕಿ ಪ್ರವಾಸಿಗರನ್ನು ಆಕರ್ಷಣೆ ಮಾಡುವ ದೃಷ್ಟಿಯಿಂದ ಈಗಾಗಲೇ ಒಂದು ಕಾರ್ಯಕ್ರಮ ಈಗಾಗಲೇ ಜಾರಿಗೆ ಬಂದಿದೆ.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ನೀರು ಇಲ್ಲ. ಇನ್ನು ಶನಿವಾರ ಮತ್ತು ಭಾನುವಾರ ನೀರು ಎಲ್ಲಿಂದ ಬಿಡುತ್ತಾರೆ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ತಪ್ಪು ತಿಳಿದುಕೊಳ್ಳಬಾರದು. ಶರಾವತಿ ಅಣೆಕಟ್ಟು ಯೋಜನೆಯನ್ನು ಮಾಡುವಂತಹ ಕಾಲದಲ್ಲಿ ಕೆಲವು ಭಾಗದ ನೀರನ್ನು ಇದಕ್ಕೋಸ್ಕರ ಮೀಸಲಾಗಿಟ್ಟಿದೆ. ನಾವು ಇದನ್ನೆಲ್ಲಾ ಚರ್ಚೆಮಾಡಿ ಲಾಭ ಮಾಡತಕ್ಕಂಥಾದ್ದೇ ಒಂದು ಉದ್ದೇಶ ಅಲ್ಲ. ಅಲ್ಲಿ ಅಣೆಕಟ್ಟನ್ನು ಕಟ್ಟಿ ಅರಣ್ಯ ಪ್ರದೇಶವನ್ನು ಮುಳುಗಡೆ ಮಾಡಿಸಿದ್ದೇವೆ. ಆದರೆ ಈ ಅಣೆಕಟ್ಟೆನಿಂದ ಈ ಭಾಗದಲ್ಲಿ ಇದ್ದಂತಹ ಸೌಂದರ್ಯ ಉಳಿಯಬೇಕು, ನಮಗೆ ಲಾಭ ಮಾಡುವುದೇ ಮುಖ್ಯವಾದ ಗುರಿಯಲ್ಲ. ನೈಸರ್ಗಿಕವಾಗಿ ಬಂದಂತಹ ಸೌಂದರ್ಯವನ್ನು ಉಳಿಸಬೇಕು ಎನ್ನುವಂತಹ ಜವಾಬ್ದಾರಿ ನಮ್ಮ ಮೇಲೆ ಇದೆ ಎನ್ನುವ ಕಾರಣಕ್ಕಾಗಿ ನಾವು ಆ ಕಾಲದಲ್ಲಿ ಲೆಕ್ಕ ಹಾಕಿದೆವು. ಸುಮಾರು 3 ಕೋಟಿ ರೂಪಾಯಿಗಳಷ್ಟು ನಷ್ಟ ಆಗಬಹುದು ಎಂದು. ಆದರೂ ಚಿಂತೆ ಇಲ್ಲ ಇದು ಹಣದ ದೃಷ್ಟಿಯಿಂದ ಅಲ್ಲ

ಸೌಂದರ್ಯವನ್ನು ನೋಡಲು ಅವಕಾಶ ಆಗಬೇಕು ಇದ್ದಂತಹ ನೈಸರ್ಗಿಕ ಸಂಪತ್ತು ಹಾಳಾಗಬಾರದು ಎನ್ನುವ ಕಾರಣಕ್ಕಾಗಿ ನಮ್ಮ ಪರಂಪರೆಯನ್ನು ನಮ್ಮ ನೈಸರ್ಗಿಕ ಸಂಪತ್ತನ್ನು ನೋಡಲು ಒಂದು ಅವಕಾಶ ಕಲ್ಪಿಸುವ ದೃಷ್ಟಿಯಿಂದ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ಪ್ರಾರಂಭ ಆಗಿದೆ. ಹೋದ ವರ್ಷ ತೀರಾ ಮಳೆ ಬಾರದೇ ಇದ್ದುದ್ದರ ಕಾರಣಕ್ಕಾಗಿ ಸ್ವಲ್ಪ ನಿಲ್ಲಿಸಿದೆಯೇ ವಿನಃ ಈ ವರ್ಷ ಅದನ್ನು ಪ್ರಾರಂಭ ಮಾಡುತ್ತೇವೆ.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ತಮ್ಮ ಕಳಕಳಿಯನ್ನು ನಾನು ಒಪ್ಪುತ್ತೇನೆ. ಆದರೆ ವಾರಕ್ಕೆ ಎರಡೇ ದಿನ ಪ್ರವಾಸಿಗರು ಬರಬೇಕು ಎಂದು ಆಯಿತು ಅಲ್ಲಿ. ಶನಿವಾರ ಮತ್ತು ಭಾನುವಾರ ಮಾತ್ರ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಏನಾಗಿದೆ ಅಂದರೆ ಇವರು ಗೋಕರ್ಣ ಮತ್ತು ಜೋಗ ಫಾಲ್ಸ್ ಇಷ್ಟೇ ನೋಡುವುದು ಎಂದು ಆಯಿತು.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ....

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆಂದರೆ ತಾವು ಅವಕಾಶ ಕೊಡಲಿಲ್ಲ, ಇರಲಿ ಸಂತೋಷ. ಈಗ ನಾವು ಒಂದು ಕೆಲಸ ಮಾಡೋಣ ಸದನದ ಸಮಿತಿ ಮಾಡಿ, ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಮಾನ್ಯ ಕರ್ಕಿಯವರನ್ನು ಇನ್ನೊಂದು ನಾಲ್ಕು ಜನರನ್ನು ಅಲ್ಲಿಗೆ ಕಳುಹಿಸಿಕೊಡೋಣ. ಅವರು ಹೋಗಿ ನೋಡಿಕೊಂಡು ಬರಲಿ.

ಅಧ್ಯಕ್ಷರು : ಸದನ ಮುಗಿಯುವ ವೇಳೆಗೆ ಒಂದು ಅಧ್ಯಯನ ಸಮಿತಿ ಎಂದು ಮಾಡಿ ಗಲಾಟೆ ಮಾಡುವವರನ್ನೆಲ್ಲಾ ಕಳುಹಿಸಿ ಬಿಡೋಣ. ನಿಮ್ಮ ಕೆಲಸ ಸುಲಭವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮ ಸಲಹೆಯನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂದರೆ ಅವರು ಅಧ್ಯಕ್ಷರಾಗಿ ಹೋಗಬೇಕೆನ್ನುವುದು ಅವರ ಇಚ್ಛೆ.

ಅಧ್ಯಕ್ಷರು : 4 ಜನ ಮಾತ್ರ ಗಲಾಟೆ ಮಾಡುವವರು ಇನ್ನುಳಿದವರನ್ನು ನಾನು ಹೇಗೋ ಮ್ಯಾನೇಜ್ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಮಾನ್ಯ ಅಧ್ಯಕ್ಷರೇ......

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಅಧ್ಯಕ್ಷರೇ, ಈ ಸದನದ ಮುಖಾಂತರ ಜೋಗ್‌ಫಾಲ್ಸ್‌ಗೆ ಒಂದು ಟ್ರಿಪ್ ಇಟ್ಟುಬಿಡುವುದು ಒಳ್ಳೆಯದು.

ಅಧ್ಯಕ್ಷರು : ಬರೀ ಜೋಗ್‌ಫಾಲ್ಸ್‌ಗೆ ಅಲ್ಲ ಈ ಸದನದ ಮುಖಾಂತರ ಬಸ್ಸು ಎಲ್ಲಿಗೆ ಹೋಗುತ್ತದೆ? ಸದನದಲ್ಲಿ ಬಸ್ಸು ಹೋಗುವುದಿಲ್ಲ. ನಮ್ಮ ಸದಸ್ಯರು ಹೋಗುವುದಕ್ಕೆ ಅಪೇಕ್ಷೆಪಟ್ಟರೆ

ಎಲ್ಲಾ ಜಲಾಶಯಗಳು ತುಂಬಿದ್ದಾವೆ, ನಮ್ಮ ಸದಸ್ಯರು ಹೋಗಿ ನೋಡಿಕೊಂಡು ಬರಬಹುದು. ನಮ್ಮ ಸದಸ್ಯರಿಗೆ ಆಸಕ್ತಿ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ನಮ್ಮ ಇಲಾಖೆಯಿಂದ ಒಳ್ಳೆಯ ಬಸ್ಸುಗಳನ್ನು ತರಿಸಿದ್ದೇವೆ. ತಾವು ಹೋಗುವುದಾದರೆ ಹೇಳಿ ನಾನು ಆರೇಂಜ್ ಮಾಡಿ ಕೊಡುತ್ತೇನೆ.

ಅಧ್ಯಕ್ಷರು : ಸದಸ್ಯರೆಲ್ಲರೂ ಬರುತ್ತಾರೆ ಅಂದರೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ತಾವು ಏನೇನು ವ್ಯವಸ್ಥೆ ಮ್ಮಾಡುತ್ತೀರಿ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಏನು ಬೇಕು ತಮಗೆ?

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ವ್ಯವಸ್ಥೆಗಳು ಬೇಕಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಊಟ, ವಸತಿ ವ್ಯವಸ್ಥೆ ಮಾಡುತ್ತೇವೆ ಇನ್ನೇನು ಬೇಕು?

ಅಧ್ಯಕ್ಷರು : ವಾಟಾಳರೇ, ನಿಮಗೆ ಇಂತಹ ದುಸ್ಥಿತಿ ಬರುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ. ನನ್ನ ಪರಮ ಶತ್ರುಗಳಿಗೂ ಕೂಡ ಇಂತಹ ಕಷ್ಟ ಬರಬಾರದು. ದಯಮಾಡಿ ಬೇಡಿ ನಾನು ತಮ್ಮ ಹಿತಚಿಂತಕ.

ಶ್ರೀ ವಾಟಾಳ್ ನಾಗರಾಜ್ : ತಾವು ನಮ್ಮ ರಕ್ಷಣೆಗೆ ಬರದೆ ಇದ್ದರೆ ಹೇಗೆ? ಇತ್ತೀಚೆಗೆ ನಮ್ಮ ರಕ್ಷಣೆಗೆ ತಾವು ಬರುತ್ತಿಲ್ಲ.

ಅಧ್ಯಕ್ಷರು : ನಿನ್ನೆ ಇಡೀ ದಿವಸ ಪ್ರೊಸೀಡಿಂಗ್ ನೋಡಿ, ಅವರನ್ನು ತೆಗೆದು ಮೈಮೇಲೆ ಹಾಕಿಕೊಂಡಿದ್ದೀರಿ, ನಾನೇನು ಮಾಡಲಿ ಹೇಳಿ.

ಡಾ|| ಎಂ.ಪಿ. ಕರ್ಕಿ : ಅಧ್ಯಕ್ಷರೆ, ಜೋಗ ಜಲಪಾತದ ಬಗ್ಗೆ ನಾನು ಕಂಡಂತಹ ವಿಷಯಗಳನ್ನು ಹೇಳಿದ್ದೇನೆ. ಏಕೆಂದರೆ ಜೋಗ ನಮ್ಮ ಕ್ಷೇತ್ರಕ್ಕೂ ತೀರ ಹತ್ತಿರ ಇದೆ. ಅದು ಬೆಳಗಬೇಕು, ದೊಡ್ಡದಾಗಬೇಕು ಎನ್ನುವುದು ನನ್ನ ಇಚ್ಛೆ. ಆದರೆ ಜಲಾಪಾತವಿಲ್ಲದೆ ಬರೀ ಕಲ್ಲುಬಂಡೆ ಇರುವ ದೃಶ್ಯವನ್ನು ನೋಡಿ ನನಗೆ ಬೇಸರವಾಗಿ ಹೇಳಿದೆ. ಆದರೆ ನೀರು ಬಿಟ್ಟರೆ ಸಂತೋಷ. ಆದರೆ ಶನಿವಾರ ಮತ್ತು ಭಾನುವಾರ ಎಂದು ಪ್ರಚಾರ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಬೇರೆ ದಿವಸ ಬಂದಂತಹ ಜನ ಬರೀ ಕಲ್ಲುಬಂಡೆಗೆ ತಾವು ಪ್ರಚಾರ ಮಾಡುತ್ತಿದ್ದಾರೆ ಎಂಬ ಭಾವನೆಯಿಂದ ಬರುತ್ತಾರೆ. ಈ ಡಿಪಾರ್ಟ್‌ಮೆಂಟ್‌ನವರು ಸುಳ್ಳು ಪ್ರಚಾರ ಮಾಡುತ್ತಾರೆ ಎನ್ನುವಂತಹ ಒಂದು ನಿರ್ಣಯಕ್ಕೆ ಬಂದು, ನಮ್ಮ ಯಾವ ಮಾತನ್ನು ನಂಬದೆ ಇರತಕ್ಕಂಥ ಪರಿಸ್ಥಿಗೆ ಬರಬಹುದು.

ಅಧ್ಯಕ್ಷರು : ವಾಟರ್ ಸ್ಪೋರ್ಟ್ಸ್‌ಗೆ ಎಂದು ಯಾರಿಗೋ ಅವಕಾಶ ಕೊಟ್ಟಿದ್ದೀರಿ, ಅವರು ಇದುವರೆವಿಗೂ ಏನೂ ಮಾಡಿಲ್ಲವೆಂದು ಅವತ್ತು ಯಾರೋ ಗಲಾಟೆ ಮಾಡಿದರಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ : ಬ್ಯಾಕ್ ವಾಟರ್‌ನಲ್ಲಿ, ಅಲ್ಲಿ ಒಂದು ಅಡ್ವೆನ್ಚರಿಸ್ಟ್ ಮಾಡಬೇಕೆಂದು ಹೇಳಿ, ಅಂದರೆ ಲಿಂಗನಮಕ್ಕಿಯ ಬ್ಯಾಕ್‌ವಾಟರ್ ಅಂಚಿನಲ್ಲಿ ಅಡ್ವೆನ್ಚರಿಸ್ಟ್ ಮಾಡಬೇಕೆಂದು ಬೆಂಗಳೂರಿನ ಒಬ್ಬರು ಇದ್ದಾರೆ, ಅವರು ನಿಮ್ಮ ಇಲಾಖೆಯಿಂದ ಹಣವನ್ನು ತೆಗೆದುಕೊಂಡಿದ್ದಾರೆ, ಅದು ಸಾಕಷ್ಟು ಮಿಸ್‌ಯೂಸ್ ಆಗಿದೆ, ಅದಕ್ಕೆ ನಾನು ಪತ್ರವನ್ನೂ ಕೂಡ ಬರೆದಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅದು ನನ್ನ ಗಮನಕ್ಕೆ ಬಂದಿದೆ. ಬ್ಯಾಕ್ ವಾಟರ್‌ನಲ್ಲಿ ಮಕ್ಕಳಿಗೆ ವ್ಯವಸ್ಥಿತವಾಗಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈಗ ಅವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕೆಲವು ಪತ್ರಿಕೆಗಳನ್ನು ಬರೆಸಿಕೊಂಡ ರೀತಿಯಲ್ಲಿ ಅವರು ಇಲ್ಲ. ಏನ್‌ಜಿಓಸ್ ಎಂದು ಕೆಲವರು ಕೇಂದ್ರಸರ್ಕಾರದ ಮತ್ತು ಅಂತರಾಷ್ಟ್ರೀಯ ಮಟ್ಟದ ಲೆಟರ್‌ಹೆಡ್ ಇಟ್ಟುಕೊಂಡಿರುತ್ತಾರೆ. ಇವರೆಲ್ಲಾ ನಾಮಕಾವಸ್ಥೆಯ ಗುಂಪಿಗೆ ಸೇರಿದವರು. ಆದರೆ ಟೋಟಲಿ ನಾನು ಇದರಲ್ಲಿ ಎಲ್ಲರೂ ಸೇರಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಏನು ನಿರೀಕ್ಷೆ ಮಾಡಿದ್ದೇವೆ, ಅಂದರೆ ಯಾವ ಕೆಲಸವನ್ನು ಮಾಡಬೇಕು ಅದನ್ನು ಬಿಟ್ಟು ಬೇರೆ ಬೇರೆ ಕೆಲಸವನ್ನು ಮಾಡುವುದಕ್ಕೆ ಹೋಗಿ ಅಲ್ಲಿ ಸ್ಥಳೀಯವಾಗಿ ತುಂಬಾ ಜನರನ್ನು ಮೈಮೇಲೆ ಹಾಕಿಕೊಂಡಿದ್ದಾರೆ. ನನಗೆ ಇದು ಒಳ್ಳೆಯ ಆಕ್ಟಿವಿಟೀಸ್ ಅಂದುಕೊಂಡಿದ್ದೆ, ಇವರೆಲ್ಲಾ ಮಧ್ಯದಲ್ಲಿ ಗಲಾಟೆ ಮಾಡಿಕೊಂಡಿರುವುದು ನನಗೆ ಗೊತ್ತಿರಲಿಲ್ಲ, ನಂತರ ನಾನು ನೋಡಿದಾಗ, ಇವರು ತೆಗೆದುಕೊಂಡಿರುವ ಹಣವನ್ನು ಯಾವುದಕ್ಕೆ ಖರ್ಚು ಮಾಡಬೇಕಾಗಿತ್ತೋ ಅದಕ್ಕೆ ಖರ್ಚು ಮಾಡುತ್ತಿರಲಿಲ್ಲ. ಉದಾಹರಣೆಗೆ, ನಾನು ಅಲ್ಲಿ ಹೋಗಿ ನೋಡಿದಾಗ ಅದು ಬಹಳ ಡೀಪ್ ವಾಟರ್, ಅಲ್ಲೆಲ್ಲಾ ಈ ದೋಣಿಯನ್ನು ಅಭ್ಯಾಸ ಮಾಡಬೇಕಾದರೆ ಪಕ್ಕದಲ್ಲಿ ಪ್ಲಾಟ್‌ಫಾರಂಗಳು ಮತ್ತು ಸೇಫ್ಟಿ ಮೇಜರ್ಸ್ ಇವುಗಳೆಲ್ಲಾ ಇರಬೇಕಾಗುತ್ತದೆ. ಆದರೆ ಇಲ್ಲಿ ಅದೇನು ಇಲ್ಲ, ಯಥಾಪ್ರಕಾರ ಗುಡ್ಡೆ ಇತ್ತು, ಮುಳುಗಡೆಯಾಗಿದೆ, ನೀರು ಇಳಿದ ಹಾಗೆ ಇವರು ಹೋಗುತ್ತಾರೆ, ಅಲ್ಲಿ ಇಳಿಯುವುದಿಲ್ಲ, ಹತ್ತುವುದಿಲ್ಲ, ಅಲ್ಲಿ ಎಂಥದ್ದೂ ಸಹ ಮಾಡುವುದಿಲ್ಲ. ಅಲ್ಲಿ ಜಮೀನನ್ನು 5 ವರ್ಷಕ್ಕೆ ಲೀಸ್ ಕೊಟ್ಟಿದ್ದಾರೆ, ಅದು ಸಾಕಷ್ಟು ಸ್ಥಳೀಯವಾಗಿ ಇಲ್ಲ, ನಿಮಗೆ ಬೇರೆ ಕಡೆ ಮಾಡಿ ಎಂದು ಹೇಳಿದೆ, ಅಲ್ಲಿ ನೀವು ಕೊಟ್ಟಿರತಕ್ಕಂಥ ಹಣಕ್ಕಾಗಿಯಾದರು ನೀವು ಹೋಗಿ ನೋಡಬೇಕು. ಅವರ ಚಹರೆ ಮತ್ತು ಓಡಾಟ ನಡೆದಾಟವನ್ನೂ ಸ್ವಲ್ಪ ಗಮನಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಆಗುಂಬೆ, ಕೊಡಚಾದ್ರಿ ತಪ್ಪಲು ಇವು ನನ್ನ ಕ್ಷೇತ್ರಕ್ಕೆ ಸೇರಿದೆ. ಆ ಭಾಗದಲ್ಲಿ ಏನಾಗಿದೆ ಎಂದರೆ ಇಲ್ಲಿರುವ ಇಲಾಖೆಗಳಲ್ಲಿ ಹೊಸಬರು ಬಂದುಬಿಟ್ಟಿದ್ದಾರೆ. ಇಲಾಖೆಯಿಂದ ಸಬ್ಸಿಡಿ ಕೊಡುತ್ತಾರೆ, ಇಂಟರೆಸ್ಟ್ ಸಬ್ಸಿಡಿ ಕೊಡುತ್ತಾರೆ ಎಂದು ನನ್ನ ಕ್ಷೇತ್ರದ ಕೊಡಚಾದ್ರಿಯ ಹತ್ತಿರ ಮಸಾಜ್ ಮಾಡುವುದಕ್ಕೆ ಮೊನ್ನೆ ನನ್ನ ಹತ್ತಿರ ಯಾರೋ ಒಬ್ಬರು ಕಾಗದ ಕೇಳುವುದಕ್ಕೆ ಬಂದಿದ್ದರು, ಅಂದರೆ ನಮ್ಮ ಮುಖ್ಯಮಂತ್ರಿಯವರು ಹೋಗುತ್ತಾರಲ್ಲಾ 'ಜಿಂದಾಲ್' ಆ ಟೈಪಿನ ಹೋಟೇಲ್ ಮಾಡುತ್ತೇವೆ, ಗಿಡಮೂಲಿಕೆಯ ರೀತಿ ಊಟ ಹಾಕುತ್ತೇವೆ, ಒಂದಿಪ್ಪತ್ತು ರೂಮು ಕಟ್ಟಿ 5 ಎಕರೆ ಗಿಡಮೂಲಿಕೆಗಳನ್ನು ಬೆಳಸುತ್ತೇವೆ. ನಮಗೆ ಜಾಗಬೇಕೆಂದು ಕೇಳುವುದಕ್ಕೆ ಬಂದಿದ್ದರು.

ಅಧ್ಯಕ್ಷರು : ನಿಮ್ಮ ಶಿವಮೊಗ್ಗ ಬಾರ್ಡರ್‌ನಲ್ಲಿ ಅಂದರೆ ವೆಸ್ಟರ್ನ್‌ಘಾಟ್‌ನವರು ಎಲ್ಲೂ ಬಂದರೂ ಮಸಾಜ್... ನಿಮ್ಮ ಮಸಾಜ್ ಮಾಡಿ ಕೇಳಿ ಸಾಕಾಗಿಬಿಟ್ಟಿದೆ.

ಶ್ರೀ ಅರಗಜ್ಞಾನೇಂದ್ರ : ಆದರೆ ಈ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಯಾರಾದರೂ ಬಂದು ಕಟ್ಟಿ ಮಾಡಲಿ ಅಪ್ರಾಮಾಣಿಕರೆಲ್ಲಾ ಇದನ್ನು ಮಿಸ್‌ಯೂಸ್ ಮಾಡಿಕೊಳ್ಳುತ್ತಿದ್ದಾರೆ. ದಯಮಾಡಿ ಈ ಇಲಾಖೆಯವರು ಸ್ವಲ್ಪ ಗಮನಹರಿಸದಿದ್ದರೆ ನಮ್ಮ ಪ್ರಕೃತಿ ದತ್ತವಾದಂತಹ ತಪ್ಪಲಿನಲ್ಲಿ ಏನೇನೋ ವ್ಯವಹಾರ ಮತ್ತು ದಂಧೆ ನಡೆಯುತ್ತದೆ.

ಅಧ್ಯಕ್ಷರು : ಮೊದಲು ಎಲ್ಲರೂ ಮಾತನಾಡಲಿ, ನಂತರ ನೀವು ಉತ್ತರವನ್ನು ಕೊಡಿ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಆಗುಂಬೆಯಲ್ಲಿ ಒಂದು ದೊಡ್ಡ ಕಮಿಟಿಯನ್ನು ಮಾಡಿ ರೆಸಾರ್ಟ್ ಮಾಡುತ್ತೇವೆ ಎಂದು, ಅಂದರೆ ಕಾಡಿನ ನಡುವೆ ಮಾಡುತ್ತಿದ್ದಾರೆ, ಆದರೆ ಅಲ್ಲಿ ಕಾಡನ್ನು ಮತ್ತು ಕಾಡು ಪ್ರಾಣಿಗಳನ್ನು ರಕ್ಷಣೆ ಮಾಡಬೇಕಾಗಿದೆ. ಅಂತಹ ಕಡೆ ರೆಸಾರ್ಟ್ ಮಾಡುತ್ತೇವೆ ಎಂದು ಹೇಳಿ ಈಗಾಗಲೇ ನಿಮ್ಮ ಇಲಾಖೆಯಿಂದ ಮಂಜೂರಾತಿ ಕೊಟ್ಟಿದ್ದು ಆಗಿದೆ, ಅಡ್ವೆರ್ಟೈಸ್‌ಮೆಂಟ್‌ಗಳು ಬರುತ್ತಿದೆ, ಬಹಳ ದೊಡ್ಡ ಮಟ್ಟದಲ್ಲಿ ಕರ್ನಾಟಕ ರಾಜ್ಯದಾದ್ಯಂತ ಇದು ಪ್ರವಾಸೋದ್ಯಮದ ತಾಣ ಎಂದು ಹೇಳಿ ಪ್ರಚಾರವನ್ನು ಮಾಡುತ್ತಾ ಇದ್ದಾರೆ. ಇದು ಯಾರ್‍ಯಾರೋ ಹಣ ಮಾಡುವುದು, ಏನೇನು ಆಗಿ ನಮ್ಮ ಕಾಡುಗಳೆಲ್ಲಾ ನಾಶವಾಗಬಾರದು ಮತ್ತು ಅದು ಬಹಳ ಸೂಕ್ಷ್ಮವಾದ ಅರಣ್ಯ ಪ್ರದೇಶ. ಮಾನ್ಯ ಅರಣ್ಯ ಮಂತ್ರಿಗಳು ಅಲ್ಲಿನ ಚಲನವಲನಗಳ ಕಡೆ ನಿಗಾ ತೆಗೆದುಕೊಳ್ಳದೆ ಹೋದರೆ ಅಲ್ಲಿ ಯಾರ್‍ಯಾರೋ ಏನೇನು ದಂದೆಗಳಿಗೆ ಬಳಸುತ್ತಾರೆ. ಆ ರೀತಿ ಆಗದೆ ಹಾಗೆ ಆಗಬೇಕೆಂಬುದು ನನ್ನ ವಿನಂತಿ.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಯಾವುದಕ್ಕೆ ಪ್ರಾಧಾನ್ಯ ಕೊಡಬೇಕು ಅದಕ್ಕೆ ಕೊಡುತ್ತಿಲ್ಲವೆಂದು ನಾನು ಹೇಳುತ್ತೇನೆ. ಸಬ್ಸಿಡಿ ಕೊಡುತ್ತಾರೆಂದು ಯಾರು ಆಸೆ ಇಟ್ಟುಕೊಂಡು ಬರುವುದಿಲ್ಲ, ಯಾರು ಹಣ ಮಾಡಬೇಕೋ ಯಾರು ಸರ್ಕಾರದ ಗುತ್ತಿಗೆ ಹಿಡಿಯಬೇಕೋ ಅಂಥವರು ಮಾತ್ರ ಬರುತ್ತಾರೆ. ಜನರಿಗೆ ವ್ಯವಸ್ಥಿತವಾಗಿ ಕೆಲಸ ಮಾಡಬೇಕು, ಮತ್ತು ಅನುಕೂಲತೆ ಮಾಡಿಕೊಡಬೇಕೆಂದು ಯಾರು ಅಲ್ಲಿಗೆ ಬರುವುದಿಲ್ಲ. ಅಲ್ಲಿಗೆ ಯಾರಾದರೂ ಬರಬೇಕಾದರೆ, ಪ್ರವಾಸಿ ಕೇಂದ್ರ ಬಹಳ ಆಕರ್ಷಣೀಯವಾಗಿರಬೇಕು. ಆಕರ್ಷಣೀಯವೆಂದರೆ ಹೋಟಲ್ ಅಲ್ಲ. That is the last part. that is the least importance. ಅದಕ್ಕಿರತಕ್ಕಂಥ ಆಕರ್ಷಣೀಯವಾದಂಥ ವ್ಯವಸ್ಥೆ ಎಂದರೆ ನೀರು, ವಿದ್ಯುತ್ ಈ ರೀತಿಯ ಸವಲತ್ತುಗಳನ್ನು ಮಾಡಿಕೊಡಬೇಕೇ ಹೊರತಾಗಿ ಈ ಸಬ್ಸಿಡಿ ಕೊಡುವಂತಹ ಯೋಜನೆಯನ್ನು ಏನು ಹಾಕಿಕೊಂಡಿದ್ದೀರಿ, ಈ ಒಂದು ಯಾವುದೂ ವಿಚಾರವಿಲ್ಲದಂತಹ ವ್ಯವಸ್ಥೆಯನ್ನು ನೋಡಿ ಈ ಬೇಡಿಕೆ ತಿರಸ್ಕಾರಕ್ಕೆ ಯೋಗ್ಯವಾದುದೆಂದು ನನಗೆ ಅನ್ನಿಸುತ್ತದೆ; ಇದನ್ನು ನಾನು ಮೊದಲೇ ಹೇಳಿದ್ದೇನೆ. ಇಷ್ಟು ಹೇಳಿ ತಮಗೆ ವಂದಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೆ, ತಾವು 10 ನಿಮಿಷದಲ್ಲಿ ಮಾತನಾಡಿ ಮುಗಿಸಿ, ಏಕೆಂದರೆ ಸೋಮವಾರ ರಿಪ್ಲೈ ಇರುತ್ತದೆ ;

ಶ್ರೀ ವಾಟಾಳ್ ನಾಗರಾಜ್ : ಸೋಮವಾರ ಮಾತನಾಡುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಸೋಮವಾರ ಬೆಳಿಗ್ಗೆ 10-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ 1-09-97ರ ಸೋಮವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).